ವಿಶ್ವವಾಣಿ
ವಿಶ್ವಾಸವೇ ವಿಶ್ವ

ಇಂದು ಭಾರತ-ಪಾಕಿಸ್ತಾನ ಹೈ ವೋಲ್ಟೇಜ್ ಕದನ

ಸಾಂಪ್ರದಾಯಿಕ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಹೈವೋಲ್ಟೇಜ್ ಪಂದ್ಯಕ್ಕೆ ಭಾನುವಾರ ದುಬೈ ಕ್ರಿಕೆಟ್ ಅಂಗಳ ಸಾಕ್ಷಿಯಾಗಲಿದೆ. ನ್ಯೂಜಿಲೆಂಡ್ ವಿರುದ್ಧ ಈಗಾಗಲೇ ತನ್ನ ಮೊದಲನೇ ಪಂದ್ಯದಲ್ಲಿ ಸೋಲು ಅನುಭವಿಸಿದ್ದ ಪಾಕಿಸ್ತಾನ ತಂಡ, ನಾಕ್‌ಔಟ್ ಹಂತವನ್ನು ಜೀವಂತವಾಗಿರಿಸಿಕೊಳ್ಳಬೇಕೆಂದರೆ, ಭಾರತದ ಎದುರು ಗೆಲ್ಲಲೇಬೇಕಾಗಿದೆ. ಈ ಹಿನ್ನೆಲೆಯಲ್ಲಿ ಇದು ಪಾಕ್ ಪಾಲಿಗೆ ಮಾಡು ಇಲ್ಲವೆ ಮಡಿ ಪಂದ್ಯವಾಗಿದೆ.

ಸೊಂಪಾದ ಪುಟಗಳು



ಬೇರೆಯವರಿಗೆ ಸಾಧ್ಯವಾಗದಿರುವುದು ಅವರಿಗೆ ಹೇಗೆ ಸಾಧ್ಯವಾಗುತ್ತದೆ?
ಇದೇ ಅಂತರಂಗ ಸುದ್ದಿ ವಿಶ್ವೇಶ್ವರ ಭಟ್ 6



ಬಹುಮುಖಿ ಪ್ರತಿಭಾಸಂಪನ್ನ ಡಾ.ಕುಮಾರ್ ವಿಶ್ವಾಸ್
ವಿದ್ಯಮಾನ ವಿನಾಯಕ ವೆಂ.ಭಟ್ಟ ಅಂಬ್ಲಿಹೊಂಡ 7

ದಾರಿದೀಪೋಕ್ತಿ

ಬೇರೆಯವರನ್ನು ನಂಬುವುದು ಮತ್ತು ಬೇರೆಯವರಿಂದ ನಿರೀಕ್ಷಿಸುವುದು ತಪ್ಪಲ್ಲ. ಆದರೆ ಯಾರನ್ನು ನಂಬುತ್ತೀರಿ ಮತ್ತು ಯಾರಿಂದ ನಿರೀಕ್ಷಿಸುತ್ತೀರಿ ಎಂಬುದು ಬಹಳ ಮುಖ್ಯ. ಈ ಎರಡು ವಿಷಯಗಳಲ್ಲಿ ಸರಿಯಾಗಿ ಖಾತ್ರಿಪಡಿಸಿಕೊಳ್ಳದೇ ಮುಂದುವರಿಯಬಾರದು.

ವಕ್ರತುಂಡೋಕ್ತಿ



ಸೂರ್ಯೋದಯದ ದೃಶ್ಯ ಸುಂದರವಾಗಿರುವುದಿಲ್ಲ. ಅದರಲ್ಲೂ ಹಾಸಿಗೆಯಿಂದ ಎದ್ದು ನೋಡುವಷ್ಟು ಸುಂದರವಾಗಿರುವುದಿಲ್ಲ.

ಕಾಲುವೆ ಸುರಂಗ ಕುಸಿತ: 6 ಕಾರ್ಮಿಕರು ಸಿಲುಕಿರುವ ಶಂಕೆ

ಹೈದರಾಬಾದ್: ತೆಲಂಗಾಣದ ನಾಗರಕರ್ನೂಲ್ ಜಿಲ್ಲೆಯ ಶ್ರೀಶೈಲಂ ಎಡದಂಡೆ ಕಾಲುವೆಯ ನಿರ್ಮಾಣ ಹಂತದ ಸುರಂಗದ ಮೇಲ್ಭಾಗ ಕುಸಿದಿದ್ದು, ಕನಿಷ್ಠ ಆರು ಕಾರ್ಮಿಕರು ಸಿಲುಕಿರುವ ಸಾಧ್ಯತೆ ಇದೆ. ಕಾರ್ಮಿಕರು ಕೆಲಸದ ನಿಮಿತ್ತ ಸುರಂಗದೊಳಗೆ ಹೋಗಿದ್ದಾಗ 12ರಿಂದ 13 ಕಿ.ಮೀ ಅಂತರದಲ್ಲಿ ಸುರಂಗದ ಮೇಲ್ಭಾಗ ಕುಸಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆ ಸಂಬಂಧ ಸಿಎಂ ಎ.ರೇವಂತ್ ರೆಡ್ಡಿ ಅವರು ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ಆದೇಶಿಸಿದ್ದಾರೆ.

ಮಾತಂದ್ರೆ ಮಾತು

ರಾಷ್ಟ್ರೀಯ ಶಿಕ್ಷಣ ನೀತಿ-2020 (ಎನ್‌ಇಪಿ) ವಿದ್ಯಾರ್ಥಿಗಳ ಹಿತಕ್ಕೂ ಅಲ್ಲ, ಶಿಕ್ಷಣಕ್ಕೂ ಅಲ್ಲ. ಬದಲಾಗಿ ದೇಶದಲ್ಲಿ ಹಿಂದಿ ಭಾಷೆಯನ್ನು ಹೇರುವುದಕ್ಕಾಗಿ ತರಲಾದ ನೀತಿಯಾಗಿದೆ. ಕೇಂದ್ರ ಸರಕಾರ ತಮಿಳು ಜನರನ್ನು ಪ್ರಚೋದಿಸಬಾರದು. ಜೇನುಗೂಡಿಗೆ ಕಲ್ಲೆಸೆಯಬೇಡಿ. ದ್ರಾವಿಡ ಮುನ್ನೇತ್ರ ಕಳಗಂ(ಡಿಎಂಕೆ) ಪಕ್ಷ ಮತ್ತು ನಾನು ಇಲ್ಲಿ ಇರುವವರೆಗೂ ನೀವು ಇಲ್ಲಿಗೆ ಪ್ರವೇಶಿಸಲು ಸಾಧ್ಯವಿಲ್ಲ.

- ಎಂ.ಕೆ.ಸ್ಟಾಲಿನ್ ಮುಖ್ಯಮಂತ್ರಿ

ಫನ್‌ತರಂಗ

- ರಘುಪತಿ ಶೃಂಗೇರಿ -



ಕೈಟ್ ಸಮಾವೇಶದಲ್ಲಿ ಒಂದು ರಾಜ್ಯ, ಹಲವು ಜಗತ್ತು ಅನಾವರಣ | ಸುಮಾರು 500ಕ್ಕೂ ಹೆಚ್ಚು ಉದ್ಯಮಿಗಳು ಭಾಗಿ

ವಿಶ್ವಕ್ಕೆ ರಾಜ್ಯ ಪ್ರವಾಸೋದ್ಯಮದ ವಿಶ್ವ ದರ್ಶನ



ತಲೆಯಲ್ಲಿ ಚಿಂತೆ ತುಂಬಿಕೊಂಡಿದ್ದಾಗ ಯಾರೂ ಪ್ರವಾಸ ಮಾಡುವುದಿಲ್ಲ. ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಬಡವರ, ಮಧ್ಯಮ ವರ್ಗದ ಆರ್ಥಿಕ ಚಿಂತೆ ಕಡಿಮೆಯಾಗಿದೆ. ಸರಕಾರದ ಶಕ್ತಿ ಯೋಜನೆಯಿಂದ ಉಚಿತ ಪ್ರವಾಸವೂ ಸಾಧ್ಯವಾಗಿರುವುದರಿಂದ ರಾಜ್ಯ ಪ್ರವಾಸೋದ್ಯಮ ಬಹುದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ.

- ಎಚ್.ಕೆ.ಪಾಟೀಲ್
ಪ್ರವಾಸೋದ್ಯಮ ಸಚಿವ

ಕರ್ನಾಟಕದಲ್ಲಿ ಹತ್ತಾರು ಜಗತ್ತುಗಳಿವೆ. ಈ ಜಗತ್ತನ್ನು ವಿಶ್ವಕ್ಕೆ ಪರಿಚಯಿಸುವ ದೃಷ್ಟಿಯಿಂದ ರಾಜ್ಯ ಸರಕಾರ 'ಕೈಟ್' (ಕರ್ನಾಟಕ ಇಂಟರ್‌ನ್ಯಾಷನಲ್ ಎಕ್ಸ್‌ಪೋ) ಸಮಾವೇಶ ಹಮ್ಮಿಕೊಳ್ಳಲಾಗುತ್ತಿದೆ. ಈ ಮೂಲಕ ಕರ್ನಾಟಕ ಪ್ರವಾಸೋದ್ಯಮವನ್ನು ಮತ್ತೊಂದು ಸ್ತರಕ್ಕೆ ತೆಗೆದುಕೊಂಡು ಹೋಗುವ ಪ್ರಯತ್ನ ಮಾಡುತ್ತೇವೆ ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಫೆ.26ರಿಂದ ಬೆಂಗಳೂರಿನಲ್ಲಿ ನಡೆಯಲಿರುವ ಕರ್ನಾಟಕ ಇಂಟರ್‌ನ್ಯಾಷನಲ್ ಎಕ್ಸ್‌ಪೋ 2025 ಸಮಾವೇಶದ ಹಿನ್ನೆಲೆಯಲ್ಲಿ 'ವಿಶ್ವವಾಣಿ'ಗೆ ನೀಡಿರುವ ವಿಶೇಷ ಸಂದರ್ಶನದಲ್ಲಿ ಕೈಟ್ ಎಕ್ಸ್‌ಪೋ ಸೇರಿದಂತೆ ಕರ್ನಾಟಕದಲ್ಲಿರುವ ಪ್ರವಾಸೋದ್ಯಮಕ್ಕೆ ಒತ್ತು, ಮೂಲಸೌಕರ್ಯ ವೃದ್ಧಿಗೆ ಕ್ರಮ, ಅಂತಾರಾಷ್ಟ್ರೀಯ ಪ್ರವಾಸಿಗರನ್ನು ರಾಜ್ಯದತ್ತ ಸೆಳೆಯಲು ಸರಕಾರದ ಕ್ರಮ ಸೇರಿದಂತೆ ಹಲವು ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ಸಂದರ್ಶನದ ಪೂರ್ಣಪಾಠ ಇಲ್ಲಿದೆ.

ಪ್ರಮುಖಾಂಶ

- ಗ್ಯಾರಂಟಿ ಯೋಜನೆಗಳಿಂದ ಪ್ರವಾಸಿ ತಾಣಗಳಿಗೆ ಬರುವ ಪ್ರವಾಸಿಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ
- 25 ಸಾವಿರಕ್ಕೂ ಹೆಚ್ಚು ಸ್ಮಾರಕಗಳನ್ನು ಉಳಿಸಿ-ಬೆಳೆಸಲು ಖಾಸಗಿ ಸಹಭಾಗಿತ್ವದಲ್ಲಿ 'ಸ್ಮಾರಕ ದತ್ತು ಕಾರ್ಯಕ್ರಮ'
- ರಾಜ್ಯದ ಕಲೆ, ಸಂಸ್ಕೃತಿಯನ್ನು ಪೋಷಿಸುವ ರೀತಿಯ ಪ್ರವಾಸೋದ್ಯಮವನ್ನು ಮಾತ್ರ ಸರಕಾರ ಪ್ರೋತ್ಸಾಹಿಸುತ್ತದೆ
- ಕೈಟ್ ಸಮಾವೇಶದಲ್ಲಿ 350ಕ್ಕೂ ಹೆಚ್ಚು ಅಂತಾರಾಜ್ಯ, ನೂರಾರು ಅಂತಾರಾಷ್ಟ್ರೀಯ ಪ್ರವಾಸೋದ್ಯಮಿಗಳು ಭಾಗಿ
- ಕೇಂದ್ರ ಸರಕಾರದಿಂದಲೂ ರಾಜ್ಯದ ಪ್ರವಾಸಿ ತಾಣಗಳ ಅಭಿವೃದ್ಧಿಗೆ ವಿವಿಧ ಯೋಜನೆಗಳಿಗೆ ಅನುದಾನ ಲಭಿಸುತ್ತಿದೆ

● ಕೈಟ್ ಎಕ್ಸ್‌ಪೋ ಉದ್ದೇಶವೇನು?

ರಾಜ್ಯ ಸರಕಾರ ಹಮ್ಮಿಕೊಂಡಿರುವ ಅಂತಾರಾಷ್ಟ್ರೀಯ ಎಕ್ಸ್‌ಪೋದ ಪ್ರಮುಖ ಉದ್ದೇಶ ಕರ್ನಾಟಕದ ಪ್ರವಾಸೋದ್ಯಮದ ತಾಕತ್ತು, ಹಿರಿಮೆ-ಗರಿಮೆಯನ್ನು ಇಡೀ ವಿಶ್ವಕ್ಕೆ ಪರಿಚಯಿಸಬೇಕು ಎನ್ನುವುದಾಗಿದೆ. ಪ್ರವಾಸೋದ್ಯಮ ಕ್ಷೇತ್ರದಲ್ಲಿರುವ ಪ್ರಮುಖ ಉದ್ಯಮಿಗಳನ್ನು ಒಂದೆಡೆ ಸೇರಿಸಿ, ಚರ್ಚಿಸಬೇಕು, ಬಿ2ಬಿ ಸಭೆಗಳು ನಡೆಸಿ, ಇದರಿಂದ ಕರ್ನಾಟಕದ ಪ್ರವಾಸೋದ್ಯಮಕ್ಕೆ ಅನುಕೂಲ ಮಾಡುವ ಜತೆಜತೆಗೆ ಹೆಚ್ಚು ಪ್ರವಾಸಿಗರನ್ನು ರಾಜ್ಯಕ್ಕೆ ಯಾವ ರೀತಿ ಸೆಳೆಯಬಹುದು ಎನ್ನುವ ಬಗ್ಗೆ ಚರ್ಚಿಸುವ ಉದ್ದೇಶ ಹೊಂದಿದ್ದೇವೆ.

ಫೆ.26ರಿಂದ ಎರಡು ದಿನ ಎಕ್ಸ್‌ಪೋ

ಬೆಂಗಳೂರಿನಲ್ಲಿ ಫೆ.26ರಿಂದ 28ರವರೆಗೆ ನಡೆಯಲಿರುವ ಕೈಟ್ 2025ರ ಸಮಾವೇಶದಲ್ಲಿ ಸುಮಾರು 750ಕ್ಕೂ ಹೆಚ್ಚು ಉದ್ಯಮಿಗಳು, ನೂರಕ್ಕೂ ಹೆಚ್ಚು ಪ್ರದರ್ಶಕರು ಭಾಗವಹಿಸಲಿದ್ದಾರೆ. ಈಗಾಗಲೇ ಆನ್‌ಲೈನ್‌ನಲ್ಲಿ 10 ಸಾವಿರಕ್ಕೂ ಹೆಚ್ಚು ಮಂದಿ ನೋಂದಣಿ ಮಾಡಿಕೊಂಡಿದ್ದಾರೆ.

ಪೂರ್ಣ ಸಂದರ್ಶನ 5

ಮತ್ತೆ ಪಂಚಾಯತ್‌ರಾಜ್ ವಿವಿ ತಿದ್ದುಪಡಿ ಕಾಯಿದೆ, ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ ವಾಪಸ್

ಗವರ್ನರ್ vs ಗವರ್ನಮೆಂಟ್

ಬೆಂಗಳೂರು: ರಾಜ್ಯ ಸರಕಾರ ಕಳುಹಿಸಿದ್ದ ಮೂರು ಮಸೂದೆಗಳಿಗೆ ರಾಜ್ಯಪಾಲರು ಸಹಿ ಹಾಕದೆ ವಾಪಸ್ ಕಳಿಸಿದ್ದು, ರಾಜಭವನ ಮತ್ತು ಸರಕಾರದ ನಡುವೆ ಮತ್ತಷ್ಟು ಸಂಘರ್ಷ ನಡೆಯುವ ಸೂಚನೆಗಳು ಗೋಚರವಾಗಿವೆ.

ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆ-2024, ಬಿಡಿಎ ಮಾದರಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ ರಚನೆ ತಿದ್ದುಪಡಿ ಮಸೂದೆ ಮತ್ತು ಸಹಕಾರ ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ರಕ್ಷಣೆ ವಿಧೇಯಕವನ್ನು ವಾಪಸ್ ಕಳುಹಿಸಿದ್ದಾರೆ.

ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆಯನ್ನು ಬೆಳಗಾವಿಯಲ್ಲಿ ನಡೆದಿದ್ದ ರಾಜ್ಯ ವಿಧಾನಸಭೆಯ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲಾಗಿತ್ತು. ಈ ಮಸೂದೆ ಪ್ರಕಾರ ವಿಶ್ವವಿದ್ಯಾಲಯಗಳಿಗೆ ರಾಜ್ಯಪಾಲರ ಬದಲು ಮುಖ್ಯಮಂತ್ರಿಗಳು ಕುಲಾಧಿಪತಿಗಳಾಗಲಿದ್ದಾರೆ. ವಿಶ್ವವಿದ್ಯಾಲಯದ ಎಲ್ಲ ನೇಮಕಾತಿ, ಆಡಳಿತಾತ್ಮಕ ಅಧಿಕಾರ ಮುಖ್ಯಮಂತ್ರಿಗಳಿಗೆ ಇರಲಿದೆ. ಈ ಮೂಲಕ ರಾಜ್ಯಪಾಲರ ಅಧಿಕಾರವನ್ನು ಮೊಟಕುಗೊಳಿಸಲಾಗಿತ್ತು. ಇದನ್ನು ವಾಪಸ್ ಕಳಿಸಿರುವ ರಾಜ್ಯಪಾಲರು, ಈ ತಿದ್ದುಪಡಿ ದಾರಿ ತಪ್ಪಿಸುವಂತಿದೆ ಎಂದು ಟಿಪ್ಪಣಿ ಬರೆದಿದ್ದಾರೆ.

ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಗಳ ಹಾವಳಿಯನ್ನು ತಡೆಗಟ್ಟುವ ರಾಜ್ಯ ಸರಕಾರದ ಸುಗ್ರೀವಾಜ್ಞೆಗೆ ಅಂಕಿತ ಹಾಕದೆ ಹಲವು ಸ್ಪಷ್ಟನೆ ಕೇಳಿದ್ದಾರೆ. ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಗಳ ಹಾವಳಿಯನ್ನು ತಡೆಗಟ್ಟುವ ರಾಜ್ಯ ಸರಕಾರದ ಸುಗ್ರೀವಾಜ್ಞೆಗೆ ಅಂಕಿತ ಹಾಕದೆ ಹಲವು ಸ್ಪಷ್ಟನೆ ಕೇಳಿ ರಾಜ್ಯಪಾಲರು ಈ ಹಿಂದೆ ವಾಪಸ್ ಕಳುಹಿಸಿದ್ದರು. ಸುಗ್ರೀವಾಜ್ಞೆಯಲ್ಲಿ ಸಾಲ ಪಡೆದವರ ರಕ್ಷಣೆಗೆ ಮಾತ್ರವೇ ಗಮನ ಹರಿಸಲಾಗಿದೆ. ಸಹಜ ನ್ಯಾಯದ ಅಡಿಯಲ್ಲಿ ಸಾಲ ಕೊಟ್ಟವರಿಗೆ ರಕ್ಷಣೆ ಕಾಣಿಸುತ್ತಿಲ್ಲ. ಸುದೀರ್ಘ ಅವಧಿಯಲ್ಲಿ ಇದು ಮಾರಕವಾಗಲಿದೆ. ಮೈಕ್ರೋ ಫೈನಾನ್ಸ್ 3 ಲಕ್ಷಕ್ಕಿಂತ ಜಾಸ್ತಿ ಸಾಲ ಕೊಡುವುದಿಲ್ಲ. ನೀವು ಐದು ಲಕ್ಷ ದಂಡ ಹೇಗೆ ಹಾಕುತ್ತೀರಾ? ಎಂದು ಸರಕಾರವನ್ನು ಪ್ರಶ್ನೆ ಮಾಡಿದ್ದರು.

ಮುಡಾ ವಿಧೇಯಕವೂ ವಾಪಸ್: ಮೈಸೂರು ಅಭಿವೃದ್ಧಿ ಪ್ರಾಧಿಕಾರ ರಚನೆಗಾಗಿ ಸರಕಾರ ರೂಪಿಸಿದ್ದ ವಿಧೇಯಕವನ್ನೂ ರಾಜ್ಯಪಾಲರು ಕೆಲವು ಸ್ಪಷ್ಟನೆ ಬಯಸಿ ಸರಕಾರಕ್ಕೆ ಫೆ.13 ರಂದು ಹಿಂತಿರುಗಿಸಿದ್ದಾರೆ. → 4

ಯಾವ್ಯಾವ ಮಸೂದೆಗಳು ವಾಪಸ್

- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿವಿ ತಿದ್ದುಪಡಿ ಮಸೂದೆ
- ಬಿಡಿಎ ಮಾದರಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ ರಚನೆ ತಿದ್ದುಪಡಿ ಮಸೂದೆ
- ಸಹಕಾರ ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ರಕ್ಷಣೆ ವಿಧೇಯಕಕ್ಕೆ ಸ್ಪಷ್ಟನೆ ಕೋರಿಕೆ

ತಿಕ್ಕಾಟ ಹೊಸದಲ್ಲ

ಈ ಹಿಂದೆ ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ ಸೇರಿದಂತೆ ಕೆಲವು ರಾಜ್ಯಗಳು ಮಾತ್ರ ಅಲ್ಲಿನ ಸರಕಾರ ಹಾಗೂ ರಾಜಭವನದ ನಡುವೆ ಕಿತ್ತಾಟ ನಡೆಯುತ್ತಲೇ ಇತ್ತು. ಅದರಲ್ಲೂ ಹಾಲಿ ಉಪರಾಷ್ಟ್ರಪತಿಯೂ ಆಗಿರುವ ಜಗದೀಪ್ ಧನ್‌ಕರ್, ತಮಿಳುನಾಡಿನ ರವಿ, ಕೇರಳದ ಆರೀಫ್ ಮೊಹಮ್ಮದ್ ಖಾನ್ ಸೇರಿದಂತೆ ಕೆಲವು ರಾಜ್ಯಪಾಲರಂತೂ ತಾವು ಕಾರ್ಯಾಂಗದ ಮುಖ್ಯಸ್ಥರೆಂಬುದನ್ನು ಮರೆತು ಪಕ್ಷದ ಮುಖವಾಣಿಯಂತೆ ವರ್ತನೆ ಮಾಡಿರುವ ನಿದರ್ಶನವೂ ಇದೆ. ಅದರಲ್ಲೂ ತಮಿಳುನಾಡಿನ ರಾಜ್ಯಪಾಲ ಆರ್.ಎನ್.ರವಿ ಅವರು ಸರಕಾರ ಕಳುಹಿಸಿದ್ದ ಅನೇಕ ಮಸೂದೆಗಳನ್ನು ಸಹಿ ಹಾಕಲು ನಿರಾಕರಿಸಿ ಹಿಂತಿರುಗಿಸಿದ್ದರು. ಕೊನೆಗೆ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಸರಕಾರ ಸುಪ್ರೀಂಕೋರ್ಟ್ ಕದ ತಟ್ಟಿತ್ತು. ವಾದ ಆಲಿಸಿದ್ದ ನ್ಯಾಯಾಲಯ ಬೆಂಕಿಯ ಜತೆ ಸರಸವಾಡಬೇಡಿ ಎಂದು ಪರೋಕ್ಷವಾಗಿ ಸಾಲಿಸಿಟರ್ ಜನರಲ್ ಮೂಲಕ ಎಚ್ಚರಿಕೆ ಕೊಟ್ಟಿತ್ತು.

ಶಕ್ತಿಕಾಂತ ದಾಸ್ ಪಿಎಂ ಪ್ರಧಾನ ಕಾರ್ಯದರ್ಶಿ



ದೆಹಲಿ: ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಜಿ ಗವರ್ನರ್ ಶಕ್ತಿಕಾಂತ ದಾಸ್ ಅವರನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ 2ನೇ ಪ್ರಧಾನ ಕಾರ್ಯದರ್ಶಿಯನ್ನಾಗಿ ಕೇಂದ್ರ ಸರಕಾರ ನೇಮಕ ಮಾಡಿದೆ. ಆರ್‌ಬಿಐನ 25ನೇ ಗವರ್ನರ್ ಆಗಿದ್ದ ಶಕ್ತಿಕಾಂತ ದಾಸ್ ಅವರು ಡಿ.10ರಂದು ನಿವೃತ್ತರಾಗಿದ್ದರು. ಅವರ ಸ್ಥಾನಕ್ಕೆ ಸಂಜಯ್ ಮಲ್ಹೋತ್ರಾ ಅವರನ್ನು ಸರಕಾರ ನೇಮಕ ಮಾಡಿದೆ. ಇದೀಗ ಶಕ್ತಿಕಾಂತ ದಾಸ್ ಅವರನ್ನು ಪ್ರಧಾನಿ ಅವರ ಪ್ರಧಾನ ಕಾರ್ಯದರ್ಶಿ-2 ಹುದ್ದೆಗೆ ನೇಮಿಸಿ ಸರಕಾರ ಆದೇಶ ಹೊರಡಿಸಿದೆ.

ಸಂತೋಷ್ ಬಂಧನ: ಕೇರಳದಲ್ಲಿ ನಕ್ಸಲ್ ಅಂತ್ಯ

ಕೊಚ್ಚಿ: ಕೇರಳದಲ್ಲಿನ ಕಟ್ಟಕಡೆಯ ನಕ್ಸಲ್ ಎಂದೇ ಗುರುತಿಸಲಾಗಿದ್ದ ಸಂತೋಷ್‌ನನ್ನು ತಮಿಳುನಾಡಿನ ಭಯೋತ್ಪಾದನಾ ನಿಗ್ರಹ ದಳ ಶುಕ್ರವಾರ ಬಂಧಿಸಿದ್ದು, ಆ ಮೂಲಕ ಕೇರಳದಲ್ಲೂ ನಕ್ಸಲ್‌ವಾದ ಅಂತ್ಯಗೊಂಡಂತಾಗಿದೆ. ಸಂತೋಷ್‌ನನ್ನು ತಮಿಳುನಾಡು ಪೊಲೀಸರ ವಶದಿಂದ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡ ಕೇರಳ ಪೊಲೀಸರು, ಶನಿವಾರ ಎರ್ನಾಕುಲಂ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯಕ್ಕೆ ಹಾಜರುಪಡಿಸಿದರು.

ಪ್ರತಾಪ ಸಿಂಹ ವಿರುದ್ಧ ಎಫ್‌ಐಆರ್



ಮೈಸೂರು: 'ಮುಸ್ಲಿಂ ಸಮುದಾಯದ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ' ಎಂದು ಆರೋಪಿಸಿ ಮಾಜಿ ಸಂಸದ ಪ್ರತಾಪ ಸಿಂಹ ವಿರುದ್ಧ ನಗರ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಸೈಯದ್ ಅಬ್ರಾರ್ ಉದಯಗಿರಿ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ. 'ಪ್ರತಾಪ ಸಿಂಹ ಅವರು ಮುಸ್ಲಿಂ ಸಮುದಾಯ ಜನಸಂಖ್ಯೆ ಜಾಸ್ತಿ ಮಾಡಿಕೊಂಡು, ಹೆಚ್ಚು ಮಕ್ಕಳು ಹುಟ್ಟಿಸುತ್ತಿದ್ದಾರೆ ಎಂದು ಮಾಧ್ಯಮಕ್ಕೆ ಹೇಳಿಕೆ ನೀಡಿದ್ದು, ಮುಸ್ಲಿಂ ಸಮುದಾಯದ ಜನರನ್ನು ನಿಂದಿಸುವ ರೀತಿಯಲ್ಲಿ ಪ್ರಚೋದನಾಕಾರಿಯಾಗಿ ಮಾತನಾಡಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ವಿಜಯನಗರ ಜಿಲ್ಲೆ ಕೊಟ್ಟೂರಿನ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿಯ ರಥೋತ್ಸವ ಶನಿವಾರ ಸಂಜೆ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಕರೋನಾದಂಥ ಮತ್ತೊಂದು ವೈರಸ್ ಪತ್ತೆ

ಬಾವಲಿ ಮೂಲಕ ಮನುಷ್ಯನ ದೇಹ ಪ್ರವೇಶಿಸಿದ ಅಪಾಯಕಾರಿ ವೈರಸ್

ಬೆಂಗಳೂರು: ಕರೋನಾ ವೈರಸ್ ಹಾದಿಯಲ್ಲೇ ಸಾಂಕ್ರಾಮಿಕ ರೋಗವನ್ನು ಹರಡುವಂಥ ಹೊಸ ಬಗೆಯ ವೈರಸ್ ಒಂದು ಬಾವಲಿಯ ಮೂಲಕ ಮನುಷ್ಯನ ದೇಹ ಪ್ರವೇಶಿಸಿದೆ ಎಂದು ಚೀನಿ ಸಂಶೋಧಕರು ಅಧ್ಯಯನದ ಮೂಲಕ ಹೇಳಿದ್ದಾರೆ. ಈ ಹೊಸ ಬಗೆಯ ವೈರಸ್‌ಗೆ ಚೀನಿ ಸಂಶೋಧಕರು HKU5& CoV-2 ಎಂದು ನಾಮಕರಣ ಮಾಡಿದ್ದಾರೆ. ಈ ಹೊಸ ಬಗೆಯ ಅಪಾಯಕಾರಿ ವೈರಸ್ ಕರೋನಾ ವೈರಸ್‌ನಂತೆ ಮಾನವನ ಜೀವಕೋಶದ ಪ್ರೋಟಿನ್‌ಗಳನ್ನು ಹಾನಿ ಮಾಡಿ ಒಬ್ಬರಿಂದ ಮತ್ತೊಬ್ಬರಿಗೆ ಗಾಳಿಯ ಮೂಲಕ ರೋಗ ಹರಡಬಹುದು ಎಂದು ಹೇಳಿದ್ದಾರೆ. ಅದಾಗ್ಯೂ monoclonal antibodies ಎಂಬ ಪ್ರತಿಕಾಯಗಳು ಬಾವಲಿ ಮೂಲಕ ಹೊರ ಬಂದಿರುವ ವೈರಸ್ ಅನ್ನು ನಾಶಪಡಿಸಬಹುದು ಎಂಬ ಸತ್ಯವನ್ನು ಚೀನಿ ಸಂಶೋಧಕರು ಕಂಡುಕೊಂಡಿದ್ದಾರೆ.

ಚೀನಿ ಸಂಶೋಧಕರ ವರದಿಯು ಹೊಸ ವೈರಸ್ ಬಗ್ಗೆ ಉತ್ಪ್ರೇಕ್ಷೆಯನ್ನು ಹೊರಹಾಕಿದೆ. ಅದಾಗ್ಯೂ ಕೋವಿಡ್-19 ನಂತರ ಜನರಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿದೆ. ಹೀಗಾಗಿ ಹೊಸ ವೈರಸ್ ಯಾವುದೇ ಹಾನಿ ಮಾಡದು.

ಡಾ.ಮೈಕೆಲ್ ಓಸ್ಟರ್‌ಹೋಮ್
ಸಾಂಕ್ರಾಮಿಕ ರೋಗ ತಜ್ಞ, ಮಿನ್ನೇಸೋಟ ವಿವಿ ಅಮೆರಿಕಡ

ಒಂದು ವಾರದಲ್ಲಿ 6 ಲಕ್ಷ ಪ್ರಯಾಣಿಕರಿಂದ ಮೆಟ್ರೋಗೆ ಗುಡ್ ಬೈ

ಮೆಟ್ರೋಗೆ ಪಾಠ ಕಲಿಸಿದ ನಮ್ಮ ಬೆಂಗಳೂರು ಜನತೆ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಪ್ರಯಾಣ ದರ ಹೆಚ್ಚಳದಿಂದ ನಮ್ಮ ಮೆಟ್ರೋ ಪ್ರಯಾಣಿಕರ ಸಂಖ್ಯೆಯು ತೀವ್ರವಾಗಿ ಇಳಿಕೆಯಾಗಿದ್ದು, ಸುಮಾರು ಆರು ಲಕ್ಷಕ್ಕೂ ಅಧಿಕ ಪ್ರಯಾಣಿಕರು ಪರ್ಯಾಯ ಸಾರಿಗೆ ಬಳಕೆ ಮಾಡುತ್ತಿದ್ದಾರೆ.

ಫೆ.9 ರಂದು ಜಾರಿಗೆ ಬರುವಂತೆ ಮೆಟ್ರೋ ಪ್ರಯಾಣ ದರ ಹೆಚ್ಚಳ ಮಾಡಲಾಗಿತ್ತು. ಇದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿತ್ತು. ನಂತರ ಕೆಲವು ಸ್ಟೇಷನ್‌ಗಳ ನಡುವಿನ ಪ್ರಯಾಣ ದರವನ್ನು ತುಸು ಇಳಿಕೆ ಮಾಡಲಾಯಿತು. ಆದರೂ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿಲ್ಲ ಎಂಬುದು ತಿಳಿದುಬಂದಿದೆ.

ವಾರದ ದಿನಗಳಲ್ಲಿ ಜನ ಸಂಖ್ಯೆ ಕಡಿಮೆ: ದರ ಪರಿಷ್ಕರಣೆಯ ನಂತರ ಸುಮಾರು 6.26 ಲಕ್ಷ ಪ್ರಯಾಣಿಕರು ಮೆಟ್ರೋ ಸಂಚಾರ ತ್ಯಜಿಸಿದ್ದು, ಪರ್ಯಾಯ ಸಾರಿಗೆಗಳತ್ತ ಮುಖ ಮಾಡಿದ್ದು, ವಾರದ ದಿನಗಳಲ್ಲಿ ಪ್ರಯಾಣಿಸುವವರ ಸಂಖ್ಯೆಯಲ್ಲಿ ಗಮನಾರ್ಹ ಕುಸಿತ ಕಂಡಿದೆ. ಅಂಕಿಅಂಶಗಳ ಪ್ರಕಾರ, ಪರಿಷ್ಕೃತ ದರಗಳು ಜಾರಿಗೆ ಬಂದ ನಂತರದ ಮೊದಲ ವಾರ, ಫೆಬ್ರವರಿ 10 ರಿಂದ 14 ರವರೆಗಿನ ಸರಾಸರಿ ಪ್ರಯಾಣಿಕರ ಸಂಖ್ಯೆ 7.72 ಲಕ್ಷ. ಇದು ಅದಕ್ಕಿಂತ ಹಿಂದಿನ ಕೆಲಸದ ವಾರದಲ್ಲಿ (ಫೆಬ್ರವರಿ 4-8) ದಾಖಲಾದ 8.62 ಲಕ್ಷ ಪ್ರಯಾಣಿಕರಿಗಿಂತ ತೀವ್ರ ಕುಸಿತವಾಗಿದೆ. ಫೆಬ್ರವರಿ 15 ರ ಶನಿವಾರ 6.9 ಲಕ್ಷ ಮಂದಿ ಮೆಟ್ರೋ ಬಳಕೆ ಮಾಡಿದ್ದರು. ಫೆಬ್ರವರಿ 8 ರಂದು 8.07 ಲಕ್ಷ ಪ್ರಯಾಣಿಸಿದ್ದರು. ಭಾನುವಾರದ ಪ್ರಯಾಣಿಕರ ಸಂಖ್ಯೆಯೂ ಗಮನಾರ್ಹವಾಗಿ ಕುಸಿದಿದೆ. ಫೆಬ್ರವರಿ 2 ರಂದು 6.2 ಲಕ್ಷ ಮಂದಿ ಪ್ರಯಾಣಿಸಿದ್ದರೆ 16 ರಂದು ಕೇವಲ 5.3 ಲಕ್ಷ ಮಂದಿ ಪ್ರಯಾಣಿಸಿದ್ದಾರೆ.

ಮೆಟ್ರೋ ಭೋಗಿಗಳಲ್ಲಿ ಕೆಲವೇ ಜನರು ಪ್ರಯಾಣಿಸುತ್ತಿರುವುದು.

- ಪರ್ಯಾಯ ಸಾರಿಗೆಗಳತ್ತ ಮುಖ ಮಾಡಿದ ಸಿಲಿಕಾನ್ ಸಿಟಿ ಮಂದಿ
- ವಾರದ ದಿನಗಳಲ್ಲಿ ಪ್ರಯಾಣಿಸುವವರ ಸಂಖ್ಯೆಯಲ್ಲಿ ಭಾರೀ ಕುಸಿತ
- ಮೆಟ್ರೋ ದರ ತುಸು ಇಳಿಸಿದರೂ ತಣ್ಣಗಾಗದ ಜನರ ಆಕ್ರೋಶ

ಚಾಮುಂಡಿ ಬೆಟ್ಟದ ಬೆಂಕಿ ನಂದಿಸಿದ ಅರಣ್ಯ ಸಿಬ್ಬಂದಿ

ಮೈಸೂರು: ಚಾಮುಂಡಿ ಬೆಟ್ಟದಲ್ಲಿ ಕಿಡಿಗೇಡಿಗಳ ಕೃತ್ಯದಿಂದ ಹೊತ್ತಿಕೊಂಡಿದ್ದ ಬೆಂಕಿ ನಂದಿಸುವಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಯಶಸ್ಸು ಕಂಡಿದ್ದಾರೆ. ಘಟನೆ ಕುರಿತು ಸ್ಪಷ್ಟನೆ ನೀಡಿರುವ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಸವರಾಜು, ಶುಕ್ರವಾರ ಮಧ್ಯಾಹ್ನ 12:30ರ ಸುಮಾರಿಗೆ ಚಾಮುಂಡಿಬೆಟ್ಟದ ಎರಡು ಕಡೆ ಏಕಕಾಲಕ್ಕೆ ಬೆಂಕಿ ಕಾಣಿಸಿಕೊಂಡಿತು. ಆ ವೇಳೆ ಗಾಳಿಯ ವೇಗ ಹೆಚ್ಚಾಗಿದ್ದರಿಂದ ಬೆಂಕಿ ವೇಗವಾಗಿ ಹಬ್ಬಿತು. ಬೆಂಕಿ ಬಿದ್ದ ಸ್ಥಳಕ್ಕೆ ಅರಣ್ಯ ಇಲಾಖೆ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ತಲುಪುವುದು ಕಷ್ಟಕರವಾಗಿತ್ತು. ಈ ನಡುವೆಯೂ ಸತತ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ಸಂಪೂರ್ಣವಾಗಿ ನಂದಿಸಲಾಗಿದೆ ಎಂದರು.

ಗಡಿಯಲ್ಲಿ ಉದ್ವಿಗ್ನ ವಾತಾವರಣ, ಮಹಾರಾಷ್ಟ್ರ ಬಸ್ ಸಂಚಾರ ರದ್ದು

ಕಂಡಕ್ಟರ್ ವಿರುದ್ಧ ಪೋಕ್ಸೋ

ಬೆಳಗಾವಿ: ಕನ್ನಡ ಬರುವುದಿಲ್ಲ ಎಂದಿದ್ದಕ್ಕೆ ಹಲ್ಲೆಗೊಳಗಾಗಿದ್ದ ಕೆಎಸ್‌ಆರ್‌ಟಿಸಿ ಬಸ್ ನಿರ್ವಾಹಕ ಮಹದೇವ ಹುಕ್ಕೇರಿ ವಿರುದ್ಧ ಪೋಕ್ಸೋ ಪ್ರಕರಣ ದಾಖಲಾಗಿದೆ. ಕಂಡಕ್ಟರ್ ಮಹಾದೇವ ಅವರು ಬಸ್‌ನಲ್ಲೇ ಕೆಟ್ಟ ದೃಷ್ಟಿಯಿಂದ ನೋಡಿ ಬಾಲಕಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದಾರೆ ಎಂದು ಆರೋಪಿಸಿ ಮಾರಿಹಾಳ ಪೊಲೀಸ್ ಠಾಣೆಯಲ್ಲಿ ಶನಿವಾರ ಬೆಳಗ್ಗೆ 2.30ರ ವೇಳೆ ಬಾಲಕಿ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ. ಕನ್ನಡ ಮಾತನಾಡಿ ಎಂದಿದ್ದಕ್ಕೆ ನನ್ನ ಮೇಲೆ ಹಲ್ಲೆಯಾಗಿದೆ ಎಂದು ಮಹಾದೇವ್ ಸಲ್ಲಿಸಿರುವ ದೂರಿಗೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಪೊಲೀಸರು ಶುಕ್ರವಾರ ತಡರಾತ್ರಿ ಬಂಧಿಸಿದ್ದಾರೆ.

ಪೊಲೀಸ್ ಠಾಣೆಗೆ ಮುತ್ತಿಗೆ: ಬಸ್ ನಿರ್ವಾಹಕ ಮಹಾದೇವ ಹುಕ್ಕೇರಿ ವಿರುದ್ಧ ಯುವತಿ ಪೋಕ್ಸೊ ಪ್ರಕರಣ ದಾಖಲಿಸಿರುವುದನ್ನು ಖಂಡಿಸಿ ಬೆಳಗಾವಿಯ ಕೋಟೆ ಬಳಿಯ ಅಶೋಕ ವೃತ್ತದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ.ನಾರಾಯಣಗೌಡ ಬಣ) ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದ್ದಾರೆ. ಪೊಲೀಸರ ನಡೆಗೆ ಕನ್ನಡಪರ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿದ್ದು, ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಪೊಲೀಸರ ವಿರುದ್ಧವೇ ಘೋಷಣೆ ಕೂಗಿದ್ದಾರೆ. ಮತ್ತೊಂದೆಡೆ ಎಂಇಎಸ್ ಪ್ರತಿಕೃತಿಗೆ ಬೆಂಕಿ ಹಚ್ಚಿ, ರಾಜ್ಯ ಹೆದ್ದಾರಿ ತಡೆದ ಕರವೇ ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಬಸ್ ಸಂಚಾರ ಸ್ಥಗಿತ: ಬೆಳಗಾವಿ ಗಡಿಯಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿರುವ ಹಿನ್ನೆಲೆಯಲ್ಲಿ ಮಹಾರಾಷ್ಟ್ರದಿಂದ ರಾಜ್ಯಕ್ಕೆ ಬರುವ ಸಾರಿಗೆ ಬಸ್ ಸಂಚಾರವನ್ನು ಮಹಾರಾಷ್ಟ್ರ ಸರಕಾರ ಸ್ಥಗಿತಗೊಳಿಸಿದೆ. ಹೀಗಾಗಿ ಬೆಳಗಾವಿ ಗಡಿವರೆಗೂ ಮಾತ್ರ ಮಹಾರಾಷ್ಟ್ರ ಸಾರಿಗೆ ಬಸ್‌ಗಳು ಬರುತ್ತಿವೆ. ಆದರೆ ಕರ್ನಾಟಕದಿಂದ ಎಂದಿನಂತೆ ಮಹಾರಾಷ್ಟ್ರದ ವಿವಿಧ ಕಡೆಗೆ ರಾಜ್ಯದ ಸಾರಿಗೆ ಬಸ್‌ಗಳು ಸಂಚಾರ ಮಾಡುತ್ತಿವೆ.

ಮಹಾರಾಷ್ಟ್ರ ಬಸ್ ಚಾಲಕನ ಮುಖಕ್ಕೆ ಮಸಿ

ಬಸ್ ನಿರ್ವಾಹಕನ ಮೇಲೆ ಹಲ್ಲೆ ನಡೆಸಿದ ಘಟನೆ ಖಂಡಿಸಿ ನವ ನಿರ್ಮಾಣ ಸೇನೆ ಕಾರ್ಯಕರ್ತರು ಶುಕ್ರವಾರ ರಾತ್ರಿ ಚಿತ್ರದುರ್ಗ ಸಮೀಪದ ರಾಷ್ಟ್ರೀಯ ಹೆದ್ದಾರಿ- 48ರ ಗುಯಿಲಾಳ ಟೋಲ್‌ನಲ್ಲಿ ಮಹಾರಾಷ್ಟ್ರ ಬಸ್ ತಡೆದು ಚಾಲಕನಿಗೆ ಮಸಿ ಬಳಿದಿದ್ದಾರೆ. ಘಟನೆ ಸಂಬಂಧ ಐಮಂಗಲ ಠಾಣೆ ಪೊಲೀಸರು ಶನಿವಾರ 10 ಮಂದಿ ಕಾರ್ಯಕರ್ತರನ್ನು ಬಂಧಿಸಿದ್ದಾರೆ.

ಮರಾಠಿ ಮಾತನಾಡುವಂತೆ ಒತ್ತಾಯಿಸಿ ಕಂಡಕ್ಟರ್ ಮೇಲೆ ಪುಂಡರು ಹಲ್ಲೆ ನಡೆಸಿದ್ದರು. ಅವರ ವಿರುದ್ಧ ಪ್ರಕರಣ ದಾಖಲಾಗುತ್ತಿದ್ದಂತೆ ಯುವತಿ ಕಡೆಯಿಂದ ಪೋಕ್ಸೋ ಕೇಸ್ ಕೊಡಿಸಿ, ಪ್ರಕರಣದಿಂದ ತಪ್ಪಿಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಇದು ಸುಳ್ಳು ದೂರು ಎಂಬುದು ಎಲ್ಲರಿಗೂ ಗೊತ್ತು. ಹೀಗಾಗಿ ಯಾವುದೇ ಕಾರಣಕ್ಕೂ ನಾನು ನಮ್ಮ ಸಿಬ್ಬಂದಿಯನ್ನು ಬಿಟ್ಟುಕೊಡಲ್ಲ.

- ರಾಮಲಿಂಗಾ ರೆಡ್ಡಿ ಸಾರಿಗೆ ಸಚಿವ

ಸಮಾಚಾರ ಸಣ್ಣದಲ್ಲ

ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ದಾವಣಗೆರೆ: ಪ್ರಸಕ್ತ ಸಾಲಿನಲ್ಲಿ ಡಾ.ಬಾಬು ಜಗಜೀವನರಾಂರವರ 118 ನೇ ಹಾಗೂ ಡಾ.ಬಿ.ಆರ್ ಅಂಬೇಡ್ಕರ್ ರವರ 134 ನೇ ಜನ್ಮ ದಿನಾಚರಣೆ ಅಂಗವಾಗಿ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ, ಶ್ರಮಿಸಿ ಗಣನೀಯ ಸೇವೆ ಸಲ್ಲಿಸಿದವರು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಫೆಬ್ರವರಿ 27 ಕೊನೆಯ ದಿನವಾಗಿರುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ನಾಗರಾಜ ತಿಳಿಸಿದ್ದಾರೆ.

ಪಡಿತರ ತಾರತಮ್ಯ: ಆಕ್ರೋಶ

ಚಳ್ಳಕೆರೆ: ಪಡಿತರ ಚೀಟಿ ಮಾಲೀಕರ ತಾರತಮ್ಯ ಸರಿಪಡಿಸುವಂತೆ ಹಲವು ಬಾರಿ ಆಹಾರ ಸರಬರಾಜು ಅಧಿಕಾರಿಗಳ ಗಮನಕ್ಕೆ ತಂದರು ಕ್ಯಾರೆ ಎನ್ನದ ಅಧಿಕಾರಿಗಳು ಮಾಲೀಕರ ಜತೆ ಶಾಮಿಲಾಗಿದ್ದಾರೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ. ತಾಲೂಕು ನಾಯಕನಹಟ್ಟಿ ಸಮೀಪಿರುವ ಓಬಯ್ಯನಹಟ್ಟಿ ಗ್ರಾಮದಲ್ಲಿ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಫಲಾನುಭವಿಗಳಿಗೆ ಮೂರು ತಿಂಗಳ ಆದರೂ ರೇಷನ್ ನೀಡದೆ ಮುಂದಿನ ತಿಂಗಳು ಕೊಡುತ್ತೇವೆ ಎಂದು ಆಹಾರ ವಿತರಿಸುವ ಮಾಲೀಕ ಹೇಳುತ್ತಿದ್ದಾರೆ, ಇಲ್ಲಿನ ಜನರು ಕೆಲಸಕ್ಕೆ ಹೋಗದೆ ಕಾಯುವ ಸ್ಥಿತಿ ಆಗಿದೆ, ಹಿಂದಿನ ತಿಂಗಳು ಪಡಿತರ ನೀಡದೇ ಇರುವವರಿಗೆ ಮೊದಲು ನೀಡಿ ನಂತರ ಈ ತಿಂಗಳ ಪಡಿತರ ನೀಡಬೇಕು ಎಂದು ಪಲಾನುಭವಿಗಳು ಆಕ್ರೋಶ ವ್ಯಕ್ತಪಡಿಸಿದರು. ಹಲವು ಬಾರಿ ಆಹಾರ ಸರಬರಾಜು ಅಧಿಕಾರಿಗಳ ಗಮನಕ್ಕೆ ತಂದರು ಮೌನವಾಗಿದ್ದಾರೆ.

ಕೌಶಲ್ಯಾಭಿವೃದ್ಧಿ ತರಬೇತಿ ಆಹ್ವಾನ

ದಾವಣಗೆರೆ: ಪ್ರವಾಸೋದ್ಯಮ ಇಲಾಖೆವತಿಯಿಂದ ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯಡಿ ಪ. ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ ಆತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ಅರ್ಹ ಅಭ್ಯರ್ಥಿ ಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಸಹಾಯಕ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ಉಪವಿಭಾಗಾಧಿಕಾರಿಗಳ ಕಚೇರಿ ಆವರಣ ದಾವಣಗೆರೆ, ಇಲ್ಲಿ ಅರ್ಜಿ ಪಡೆದು ಅಗತ್ಯ ದಾಖಲೆ ಗಳೊಂದಿಗೆ ದ್ವಿಪ್ರತಿಯಲ್ಲಿ ಫೆಬ್ರವರಿ 25 ರೊಳಗೆ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ದೂ.ಸಂ:08192-230123 ಗೆ ಸಂಪರ್ಕಿಸಲು ಸಹಾಯಕ ನಿರ್ದೇಶಕರಾದ ಕಾವ್ಯ ತಿಳಿಸಿದ್ದಾರೆ.

ಕುರಿ : ಮೇಕೆ ಸಾಕಾಣಿಕೆ ತರಬೇತಿ ಫೆ. 24 ರಂದು

ದಾವಣಗೆರೆ: ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಫೆಬ್ರವರಿ 24 ಮತ್ತು 25 ರಂದು ಆಯೋಜಿಸಲಾಗಿದೆ. ಆಸಕ್ತ ರೈತರು ಆಧಾರ್ ಕಾರ್ಡ್ ಜೆರಾಕ್ಸ್, 2 ಪಾಸ್ ಪೋರ್ಟ್ ಸೈಜ್ ಪೋಟೋ ಮತ್ತು ಪ. ಜಾತಿ ಮತ್ತು ಪ. ಪಂಗಡದವರು ಜಾತಿ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯೊಂದಿಗೆ ಹಾಜರಾಗಬೇಕು. ತರಬೇತಿ ಕಾರ್ಯಕ್ರಮಕ್ಕೆ ಯಾವುದೇ ಪ್ರೋತ್ಸಾಹ ಧನ ಮತ್ತು ಭತ್ಯೆಗಳನ್ನು ನೀಡಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರ, ದಾವಣಗೆರೆ ಕಚೇರಿ ದೂ.ಸಂ: 08192-233787 ಸಂಪರ್ಕಿಸಿ ಮಾಹಿತಿ ಪಡೆದು ಕೊಳ್ಳಬಹುದು ಎಂದು ಮುಖ್ಯಪಶುವೈದ್ಯಾಧಿಕಾರಿ ತಿಳಿಸಿದ್ದಾರೆ.

ವೈಯಕ್ತಿಕ ಕಡತಗಳ ಸಂರಕ್ಷಣೆ

ದಾವಣಗೆರೆ: ನ್ಯಾಯಾಲಯದ ಪ್ರಕರಣಗಳಲ್ಲಿ ಭಾಗಿಯಾಗಿರುವ ಮಾಜಿ ವಾಯುಸೇನಾ ಯೋಧರ ವೈಯಕ್ತಿಕ ಕಡತಗಳನ್ನು ಹೊರತುಪಡಿಸಿ, ಬಾಕಿ ಮಾಜಿ ವಾಯುಸೇನಾ ಯೋಧರ ವೈಯಕ್ತಿಕ ಕಡತಗಳನ್ನು 25 ವರ್ಷಗಳ ಬದಲಾಗಿ ಕೇವಲ 5 ವರ್ಷಗಳು ಮಾತ್ರ ಸಂರಕ್ಷಿಸಲಾಗುವುದು. ತಮ್ಮ ವೈಯಕ್ತಿಕ ಕಡತಗಳ ಅವಶ್ಯಕತೆಯಿದ್ದರೆ ಜುಲೈ 10 ರೊಳಗಾಗಿ ವಾಯುಪಡೆ ದಾಖಲಾತಿ ಕಚೇರಿ ನವದೆಹಲಿ ದೂ.ಸಂ: 011-25687194, 5760, ಫ್ಯಾಕ್ಸ್ ಸಂ:011-25696552 ನ್ನು ಸಂಪರ್ಕಿಸಿ ದಾಖಲೆ ಪಡೆದುಕೊಳ್ಳುವಂತೆ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪನಿರ್ದೇಶಕ ಡಾ.ಸಿ.ಎ ಹಿರೇಮಠ ತಿಳಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ ನಿಖಿಲ್ ಕುಮಾರಸ್ವಾಮಿ } ರಾಜ್ಯಾಧ್ಯಕ್ಷ
ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರೇ ಜೆಡಿಎಸ್ ರಾಜ್ಯಾಧ್ಯಕ್ಷರಾಗಿ ಮುಂದುವರಿಯಲಿದ್ದಾರೆ. ಸದ್ಯಕ್ಕೆ ಜೆಡಿಎಸ್ ನೂತನ ರಾಜ್ಯಾಧ್ಯಕ್ಷರ ವಿಚಾರ ಅಪ್ರಸ್ತುತ. ಕಾಂಗ್ರೆಸ್ ಸರಕಾರದಲ್ಲಿ ಸಿಎಂ, ಡಿಸಿಎಂ ಸಚಿವರ ನಡುವೆ ಸಮನ್ವಯ ಇಲ್ಲ. ಅವರ ಒಳಜಗಳದಿಂದಲೇ ಚುನಾವಣೆ ಮುಂದೂಡುತ್ತಿರಬಹುದು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಬೇಸರ

ಮನೆ ಮದ್ದು ಮರೆತಿರುವುದು ವಿಪರ್ಯಾಸ

ದಾವಣಗೆರೆ: ಆಧುನಿಕತೆಯ ಭರಾಟೆಯಲ್ಲಿ ಹಿಂದಿನ ಕಾಲದಿಂದ ಬಂದಿದ್ದ ಮನೆ ಮದ್ದು ಮರೆತಿರುವುದು ವಿಪರ್ಯಾಸವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಬೇಸರ ವ್ಯಕ್ತಪಡಿಸಿದರು.

ಜಿಲ್ಲಾ ಆಯುಷ್ ಇಲಾಖೆ ವತಿಯಿಂದ ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ವಕೀಲರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ಶನಿವಾರ ಏರ್ಪಡಿಸಿದ್ದ ಆಯುಷ್ ಆರೋಗ್ಯ ತಪಾಸಣೆ ಮತ್ತು ಔಷಧ ವಿತರಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಗರದ ವಕೀಲರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ ಆಯುಷ್ ಆರೋಗ್ಯ ತಪಾಸಣೆ ಮತ್ತು ಔಷಧ ವಿತರಣಾ ಶಿಬಿರವನ್ನು ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಉದ್ಘಾಟಿಸಿದರು.

ಇತ್ತೀಚಿನ ದಿನಗಳಲ್ಲಿ ನಿಯಮಿತ ಆಹಾರ ಸೇವಿಸದ ಕಾರಣ ಶರೀರ ಸಮತೋಲನದಲ್ಲಿಲ್ಲ. ತಿಂಗಳಿಗೊಮ್ಮೆ ಯಾದರೂ ಮಧುಮೇಹ ಹಾಗೂ ರಕ್ತದೊತ್ತಡವನ್ನು ಪರೀಕ್ಷಿಸಿಕೊಳ್ಳಬೇಕು. ನಿತ್ಯವೂ ಒತ್ತಡದಲ್ಲಿ ಕಾರ್ಯನಿರ್ವಹಿಸುವ ವಕೀಲರು ಮತ್ತು ನ್ಯಾಯಾಂಗ ಸಿಬ್ಬಂದಿಗಳು ದಿನದ ಒಂದು ಗಂಟೆಯಾದರೂ ಯೋಗ ಮತ್ತು ಧ್ಯಾನಕ್ಕೆ ಮೀಸಲಿಟ್ಟು ಆರೋಗ್ಯ ಸುಧಾರಿಸಿಕೊಳ್ಳಬೇಕು ಎಂದರು.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಮಂಜಪ್ಪ ಹನುಮಂತಪ್ಪ ಅಣ್ಣಯ್ಯ ಮಾತನಾಡಿ, 15 ಸಾವಿರ ವರ್ಷಗಳ ಹಿಂದೆ ಭೂಮಿಗೆ ಮನುಷ್ಯ ಬಂದಾಗ ಆರೋಗ್ಯ ಕಾಪಾಡುವ ಶಕ್ತಿ ಇತ್ತು. ಆದರೆ, ವಿಷಪೂರಿತ ಆಹಾರ ಸೇವನೆಯಿಂದ ಆ ಶಕ್ತಿ ನಮ್ಮಲ್ಲಿ ಉಳಿದಿಲ್ಲ. ಜೀವವನ್ನು ನಿಯಂತ್ರಣದಲ್ಲಿಡುವ ಶಕ್ತಿ ಇಲ್ಲದಿರಬಹುದು. ಆದರೆ, ಜೀವನ ರೂಪಿಸಿಕೊಳ್ಳುವ ಶಕ್ತಿ ನಮಗಿದೆ. ಇದಾಗಬೇಕಾದರೆ ಸರಿಯಾಗಿ ಊಟ ಮಾಡಿ, ಕುಟುಂಬದವರ ಜತೆಗೆ ಉತ್ತಮ ಬಾಂಧವ್ಯದಿಂದ ಇದ್ದು, ಚೆನ್ನಾಗಿ ನಿದ್ದೆ ಮಾಡಿ ಉತ್ತಮ ಆರೋಗ್ಯ ಹೊಂದಬೇಕು ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಎಚ್. ಅರುಣಕುಮಾರ್ ಮಾತನಾಡಿ, ಇಡೀ ಸಮಾಜದ ಆರೋಗ್ಯ ನಿಂತಿರುವುದೇ ವಕೀಲರ ಮೇಲೆ. ಹಾಗಾಗಿ ವಕೀಲರ ಆರೋಗ್ಯ ಚೆನ್ನಾಗಿರಲಿ ಎಂದು ಆಯುಷ್ ಇಲಾಖೆಯವರು ವಕೀಲರಿರುವ ಕಡೆಗೇ ಬಂದು ತಪಾಸಣೆ ಮಾಡುತ್ತಿರುವುದು ಶ್ಲಾಘನೀಯ. ಜಿಲ್ಲಾಸ್ಪತ್ರೆ ಸೇರಿ ಬೇರೆ ಸರಕಾರಿ ಆಸ್ಪತ್ರೆಗಳಲ್ಲಿ ಔಷಧಕ್ಕೆ ಬೇರೆ ಕಡೆ ಚೀಟಿ ಬರೆಯುವುದು ಸರ್ವೇ ಸಾಮಾನ್ಯ. ಆದರೆ, ಆಯುಷ್ ಆಸ್ಪತ್ರೆಯಲ್ಲಿ ಒಂದೇ ಒಂದು ಚೀಟಿ ಹೊರಕ್ಕೆ ಬರೆದುಕೊಡದ ಹೆಗ್ಗಳಿಕೆ ಇದೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಆರ್. ಎನ್.ಪ್ರವೀಣ್‌ಕುಮಾರ್, ಎಸ್‌ಟಿಎಫ್‌ಸಿ ನ್ಯಾಯಾಧೀಶ ಶ್ರೀರಾಮ ನಾರಾಯಣ ಹೆಗಡೆ, ನ್ಯಾಯಾಧೀಶರಾದ ಶಿವಪ್ಪ ಗಂಗಪ್ಪ ಸಲಗರೆ ಉಪಸ್ಥಿತರಿದ್ದರು.

> ಕೋವಿಡ್ ವೇಳೆ ಗಿಡಮೂಲಿಕೆಯ ಮಹತ್ವವನ್ನು ಇಡೀ ಜಗತ್ತಿಗೆ ಸಾರಿದ್ದೇವೆ. ಅಲ್ಲದೇ, ಯೋಗ ಮತ್ತು ಆಯುರ್ವೇದವನ್ನು ಪರಿಚಯಿಸಿದ್ದೇ ನಮ್ಮ ಋಷಿಮುನಿಗಳು. ಯಾವುದೇ ಕಾಯಿಲೆ ಉಪಶಮನಕ್ಕೆ ಆಯುಷ್ ಪದ್ಧತಿಯೇ ಪರಿಹಾರವಾಗಿದೆ. ಪರಿಸರದ ಮೂಲಕ ಬಂದ ಆರೋಗ್ಯ ಪದ್ಧತಿಯನ್ನು ನಾವೆಲ್ಲರೂ ರೂಢಿಸಿಕೊಳ್ಳಬೇಕು.
> -ಮಹಾವೀರ ಮ. ಕರೆಣ್ಣವರ, ಹಿರಿಯ ಸಿವಿಲ್ ನ್ಯಾಯಾಧೀಶ

ಮಾದಕ ವಸ್ತುಗಳ ಮಾರಾಟ ತಡೆಗೆ ಕ್ರಮ

ದಾವಣಗೆರೆ: ಮಾನವ ಸಂಪನ್ಮೂಲ ವಿನಾಶಕಾರಿಯಾದ ಮಾದಕ ವಸ್ತುಗಳ ಕಳ್ಳಸಾಗಣೆ ಮತ್ತು ಮಾರಾಟವನ್ನು ಕಟ್ಟುನಿಟ್ಟಾಗಿ ತಡೆಗಟ್ಟಲು ಕಠಿಣ ಕ್ರಮಕ್ಕೆ ಮುಂದಾಗಲಾಗಿದೆ ಎಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ.ತಿಳಿಸಿದರು.

ಅವರು ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿ ಸಭಾಂಗಣದಲ್ಲಿ ನಡೆದ ಮಾದಕ ದ್ರವ್ಯಗಳ ತಡೆ ಸಮನ್ವಯ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಾದಕ ವಸ್ತುಗಳಾದ ಗಾಂಜಾ, ಅಫೀಮು, ಬ್ರೌನ್ ಶುಗರ್ ಸೇರಿದಂತೆ ಮಾದಕ ದ್ರವ್ಯಗಳ ಮಾರಾಟ ಕಾನೂನು ಬಾಹಿರವಾದ ಕೃತ್ಯವಾಗಿದೆ. ಹೆಚ್ಚಾಗಿ ಕಾಲೇಜು ವಿದ್ಯಾರ್ಥಿಗಳನ್ನು ಗುರಿಯಾಗಿಸಿ ಮಾರಾಟ ಮಾಡುವುದನ್ನು ಕಾಣಬಹುದಾಗಿದೆ ಎಂದರು.

ರೈಲ್ವೆ ಸ್ಟೇಷನ್ ನಲ್ಲಿ ನಿಗಾವಹಿಸಿ: ಬಿಹಾರ, ಒರಿಸ್ಸಾ, ಉತ್ತರ ಪ್ರದೇಶದ ಕಡೆಯಿಂದ ದಾವಣಗೆರೆಗೆ ಮಾದಕ ವಸ್ತುಗಳ ಸಾಗಣೆಯಾಗುತ್ತಿದೆ ಎಂಬ ಮಾಹಿತಿ ಇದ್ದು ರೈಲ್ವೆ ನಿಲ್ದಾಣಗಳಲ್ಲಿ ಅನುಮಾನಾಸ್ಪದ ವ್ಯಕ್ತಿಗಳ ತಪಾಸಣೆ ಮಾಡಬೇಕೆಂದು ರೈಲ್ವೆ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶಾಲಾ, ಕಾಲೇಜು ವಲಯಗಳಲ್ಲಿ ಕ್ರಮ: ಶಾಲಾ, ಕಾಲೇಜು, ಹಾಸ್ಟೆಲ್ ಗಳ ಸುತ್ತಮುತ್ತಲಿನ ಪ್ರದೇಶದಲ್ಲಿ ಯಾವುದೇ ಅಂಗಡಿ ಮುಂಗಟ್ಟುಗಳಲ್ಲಿ ಮಾದಕ ವಸ್ತುಗಳ ಮಾರಾಟವಾಗುತ್ತಿದ್ದಲ್ಲಿ ಆಯಾ ಶಾಲೆ, ಕಾಲೇಜಿನವರೇ ಕ್ರಮ ಕೈಗೊಳ್ಳಬಹುದು. ಕ್ರಮ ಕೈಗೊಳ್ಳಲು ಆಗದಿದ್ದಲ್ಲಿ ಪೊಲೀಸ್ ಇಲಾಖೆ ಅಥವಾ ಜಿಲ್ಲಾಧಿಕಾರಿಗಳ ಕಚೇರಿಗೆ ಮಾಹಿತಿ ನೀಡಿದಲ್ಲಿ ಅಂತಹವರ ಮಾಹಿತಿಯನ್ನು ಗೋಪ್ಯವಾಗಿಡಲಾಗುತ್ತದೆ ಎಂದರು.

ಮೆಡಿಕಲ್ ಶಾಪ್ ಪರಿಶೀಲಿಸಲು ಸೂಚನೆ: ಜಿಲ್ಲಾ ಔಷಧ ನಿಯಂತ್ರಕ ಅಧಿಕಾರಿಗಳು ಮೆಡಿಕಲ್ ಶಾಪ್‌ಗಳಲ್ಲಿ ನಿಯಮಬದ್ಧವಾಗಿ ಔಷಧಗಳನ್ನು ಮಾರಾಟ ಮಾಡಬೇಕು. ವೈದ್ಯರ ಸಲಹೆ ಇಲ್ಲದೇ ಸ್ಟಿರಾಯ್ಡ್ ಇರುವ ಔಷಧಗಳನ್ನು ವಿತರಣೆ ಮಾಡಬಾರದು. ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ಜರುಗಿಸಲು ಸೂಚನೆ ನೀಡಿದರು.

ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಉಮಾ ಪ್ರಶಾಂತ್ ಮಾತನಾಡಿ, ಮಾದಕ ವಸ್ತುಗಳಿಂದ ಯುವ ಜನಾಂಗದ ಭವಿಷ್ಯ ಹಾಳಾಗುತ್ತಿದೆ. ಇದನ್ನು ತಡೆಯಲು ಎಲ್ಲರೂ ಮುಂದೆ ಬರಬೇಕಾಗಿದೆ ಎಂದರು. ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿಜಯ ಕುಮಾರ್ ಎಂ.ಸಂತೋಷ್, ಮಂಜುನಾಥ್, ಸಂತೋಷ್ ಪಾಟೀಲ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

> **40 ಪ್ರಕರಣಗಳು ದಾಖಲು**
> ಜನವರಿ ತಿಂಗಳಲ್ಲಿ 40 ಪ್ರಕರಣಗಳು ವರದಿಯಾಗಿವೆ. ಇದರಲ್ಲಿ 14 ಪ್ರಕರಣಗಳು ಆಜಾದ್ ನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿವೆ. 5 ವಿದ್ಯಾನಗರ, 8 ಸಿಇಎನ್ ಠಾಣೆಯಿಂದ, 5 ಹರಿಹರ ನಗರ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣಗಳು ದಾಖಲಾಗಿವೆ.

ಮೈಕ್ರೋ ಫೈನಾನ್ಸ್, ಎನ್‌ಬಿಎಫ್‌ಸಿ, ಲೇವಾದೇವಿದಾರರೊಂದಿಗೆ ಸಭೆ- ಡಿಸಿ ಸೂಚನೆ

ಸಾಲ ಕಟ್ಟಿಕೊಳ್ಳಲು ಬಲವಂತ ಮಾಡಿದರೆ ಕ್ರಮ

ದಾವಣಗೆರೆ: ಆರ್ಥಿಕಾಭಿವೃದ್ಧಿಗೆ ಮೈಕ್ರೋ ಫೈನಾನ್ಸ್, ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಮತ್ತು ಲೇವಾದೇವಿ, ಗಿರಿವಿದಾರರ ಕೊಡುಗೆ ಇದ್ದು ನಿಯಮಬದ್ಧವಾಗಿ ವ್ಯವಹಾರ ಮಾಡಿ, ಸಾಲಕಟ್ಟಿಸಿಕೊಳ್ಳುವಾಗ ಬಲವಂತದ ಕ್ರಮಕ್ಕೆ ಮುಂದಾಗದೇ ನಿಯಮಬದ್ಧವಾಗಿ ವ್ಯವಹರಿಸಬೇಕೆಂದು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಸೂಚನೆ ನೀಡಿದರು.

ಪೊಲೀಸ್ ಅಧೀಕ್ಷಕರ ಕಚೇರಿಯಲ್ಲಿ ನಡೆದ ಮೈಕ್ರೋ ಫೈನಾನ್ಸ್, ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಮತ್ತು ಲೇವಾದೇವಿ ಹಾಗೂ ಗಿರಿವಿದಾರರೊಂದಿಗೆ ನಡೆದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಫೈನಾನ್ಸ್ ಮತ್ತು ಎನ್ ಬಿಎಫ್‌ಸಿ ಹಣಕಾಸು ಸಂಸ್ಥೆಯವರು ಗ್ರಾಮಾಂತರ ಪ್ರದೇಶ ಸೇರಿದಂತೆ ನಗರ ಪ್ರದೇಶದಲ್ಲಿ ಸಾಲವನ್ನು ನೀಡಿವೆ. ಆದರೆ ಸಾಲ ವಸೂಲಾತಿಯಲ್ಲಿ ನಿಯಮ ಮೀರಿ ಘಾಸಿಯಾಗುವಂತೆ ವಸೂಲಾತಿ ಮಾಡಿದ್ದರಿಂದ ಆತ್ಮಹತ್ಯೆ ಪ್ರಕರಣಗಳು ರಾಜ್ಯದಲ್ಲಿ ಕಂಡು ಬಂದಿದ್ದರಿಂದ ಅಮಾನವೀಯ ಕ್ರಮಗಳ ನಿಯಂತ್ರಣಕ್ಕಾಗಿ ಸರಕಾರ ಸುಗ್ರೀವಾಜ್ಞೆಯನ್ನು ಜಾರಿಗೊಳಿಸಿದೆ.

ಕಾಯ್ದೆಯನ್ವಯ ಎಲ್ಲಾ ಹಣಕಾಸು ಸಂಸ್ಥೆಯವರು ಮಾರ್ಚ್ 12 ರೊಳಗಾಗಿ ಆಯಾ ಜಿಲ್ಲಾಧಿಕಾರಿಗಳಿಂದ ನೊಂದಣಿ ಮಾಡಿಸಿಕೊಂಡು ನಿಯಮಬದ್ಧವಾಗಿ ವ್ಯವಹಾರ ಮಾಡಲು ಆದೇಶ ಮಾಡಲಾಗಿದೆ. ಈ ಸುಗ್ರೀವಾಜ್ಞೆ ಎಲ್ಲಾ ಫೈನಾನ್ಸ್ ಸಂಸ್ಥೆಯವರಿಗೆ ಮಾಹಿತಿ ಇದ್ದು ನೊಂದಣಿಗೆ ಮುಂದಾಗಬೇಕೆಂದು ಸೂಚನೆ ನೀಡಿದರು.

ಪೊಲೀಸ್ ಅಧೀಕ್ಷಕರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಮಾತನಾಡಿದರು.

ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಉಮಾ ಪ್ರಶಾಂತ್ ಮಾತನಾಡಿ, ಸುಗ್ರೀವಾಜ್ಞೆಯಲ್ಲಿ ಬಹಳ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರಲಾಗಿದೆ. ನಿಯಮ ಮೀರಿ ವಸೂಲಾತಿ ಕ್ರಮ ಕೈಗೊಳ್ಳುವಂತಿಲ್ಲ, ಹೊಸ ಕಾನೂನಿನ ಅವಕಾಶಗಳ ದುರ್ಬಳಕೆ ಮಾಡಿಕೊಂಡಲ್ಲಿ ಫೈನಾನ್ಸ್ ಸಂಸ್ಥೆಯವರು ಹತ್ತಿರದ ಠಾಣೆಗೆ ಮಾಹಿತಿ ನೀಡಬಹುದಾಗಿದೆ ಎಂದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿಜಯಕುಮಾರ್ ಎಂ.ಸಂತೋಷ್, ಮಂಜುನಾಥ್ ಹಾಗೂ ಫೈನಾನ್ಸ್ ಸಂಸ್ಥೆಯವರು ಉಪಸ್ಥಿತರಿದ್ದರು.

> ಸಾಲಗಾರರಿಗೆ ಕಿರುಕುಳ, ಮಾನಸಿಕ ಒತ್ತಡ ನೀಡಿದಲ್ಲಿ ಪೊಲೀಸ್ ಉಪ ಅಧೀಕ್ಷಕರ ಮೂಲಕ ಸುಮೋಟೋ ಪ್ರಕರಣ ದಾಖಲಿಸುವ ಅಧಿಕಾರ ಕಾಯ್ದೆಯಲ್ಲಿದೆ. ತಪ್ಪಿತಸ್ಥರೆಂದು ಕಂಡುಬಂದಲ್ಲಿ 10 ವರ್ಷಗಳವರೆಗೆ ಜೈಲು ಶಿಕ್ಷೆ ಹಾಗೂ ದಂಡವಿರುತ್ತದೆ. ಒಂದು ವೇಳೆ ಸಾಲ ವಸೂಲಾತಿಯಾಗುತ್ತಿಲ್ಲವೆಂದರೆ ಅದನ್ನು ಸಂಸ್ಥೆಯ ಕಾನೂನು ಚೌಕಟ್ಟಿನಲ್ಲಿ ವಸೂಲಾತಿಗೆ ಕ್ರಮ ವಹಿಸಬೇಕು, ಮಾನಸಿಕ, ದೈಹಿಕ ಹಿಂಸೆಗೆ ಅವಕಾಶವಿಲ್ಲ.
> -ಜಿ.ಎಂ.ಗಂಗಾಧರಸ್ವಾಮಿ,ಜಿಲ್ಲಾಧಿಕಾರಿ

ಇ ಖಾತಾ ಅಭಿಯಾನ ಬಳಸಿಕೊಳ್ಳಿ

ಹಿರಿಯೂರಿನ ವೇದಾವತಿ ನಗರದಲ್ಲಿ ನಡೆದ ಇ ಖಾತಾ ಅಭಿಯಾನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಿ ಸುಧಾಕರ್ ಚಾಲನೆ ನೀಡಿದರು.

ಹಿರಿಯೂರು: ಬಡವರು ಮಧ್ಯಮ ವರ್ಗದವರು ವಿಶೇಷ ಇ ಖಾತಾ ಅಭಿಯಾನದ ಸದುಪಯೋಗ ಪಡೆದುಕೊಳ್ಳಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಿ ಸುಧಾಕರ್ ಅವರು ಹೇಳಿದರು.

ಹಿರಿಯೂರಿನ ವೇದಾವತಿ ನಗರದಲ್ಲಿ ಶನಿವಾರ ನಡೆದ ಇ ಖಾತಾ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಸಿಎಂ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ದಿಟ್ಟ ನಿಲುವನ್ನು ತೆಗೆದುಕೊಂಡು ರಾಜ್ಯ ಬಡವರಿಗೆ ಮಧ್ಯಮ ವರ್ಗದವರ ಜನರಿಗೆ ವಿಶೇಷವಾಗಿ ಇ ಖಾತಾ ಅಭಿಯಾನ ಆರಂಭ ಮಾಡಿದ್ದು ಇದರ ಸದುಪಯೋಗ ಪಡೆದು ಕೊಳ್ಳಬೇಕು.2008 ರಲ್ಲಿ ನಾನು ಕ್ಷೇತ್ರದಲ್ಲಿ ಚುನಾವಣೆಗೆ ಬಂದಾಗಿನಿಂದ ಅನಧಿಕೃತ ನಿರ್ಮಾಣ ಮಾಡಿರುವ ಮನೆಗಳಿಗೆ ಶಾಶ್ವತವಾಗಿ ಪರಿಹಾರ ನೀಡುವ ಭರವಸೆ ನೀಡುತ್ತಾ ಬಂದಿದ್ದೇನೆ ಆದರೆ ಅನಧಿಕೃತವಾಗಿ ಲೇ ಔಟ್, ಕಂದಾಯ ಇಲಾಖೆಯ ಜಾಗದಲ್ಲಿ ಇದುವರೆಗೂ ಮನೆ ನಿರ್ಮಾಣ ಮಾಡಿರುವ ಕುಟುಂಬಗಳನ್ನು ಒಕ್ಕಲು ಎಬ್ಬಿಸದಂತೆ ಅಧಿಕಾರಿಗಳಿಗೆ ತಾಕೀತು ಮಾಡಿದ್ದೇನೆ ಎಂದರು.

ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷ ಅಜಯ್ ಕುಮಾರ್ ಉಪಾಧ್ಯಕ್ಷೆ ಅಂಬಿಕಾ, ಸ್ಥಾಯಿ ಸಮಿತಿ ಅಧ್ಯಕ್ಷ ಅನಿಲ್ ಕುಮಾರ್, ನಗರಸಭೆ ಸದಸ್ಯರುಗಳಾದ ಗುಂಡೇಶ್ ಕುಮಾರ್,ಬಾಲಕೃಷ್ಣ, ಈರಲಿಂಗೇಗೌಡ, ಪಾಂಡುರಂಗ, ಶಿವಕುಮಾರ್, ಪೌರಾಯುಕ್ತ ಎಂ ವಾಸಿಂ,ನಗರಸಭೆ ಸಿಬ್ಬಂದಿಗಳು ಸೇರಿದಂತೆ ಇತರರಿದ್ದರು.

ನಾಗರಾಜ್ ಭರತನಾಟ್ಯ ಸೇವೆ ಮೆಚ್ಚುಗಾರ್ಹ

ಪಟ್ಟಣದ ಅಶೋಕ ರಂಗಮಂದಿರದಲ್ಲಿ ಕನಕಪ್ರಿಯ ನಾಟ್ಯಕಲಾ ಸೇವಾ ಟ್ರಸ್ಟ್ ಕೊಂಡ್ಲಹಳ್ಳಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ನಾಟ್ಯೋಲ್ಲಾಸ ಭರತನಾಟ್ಯ ಕಾರ್ಯಕ್ರಮದಲ್ಲಿ ಅಭಿನಂದಿಸಿದರು.

ಹೊಸದುರ್ಗ: ಗ್ರಾಮೀಣ ಪ್ರದೇಶದ ಮಕ್ಕಳಿಗೆ ಅತೀ ಕಡಿಮೆ ದುಡ್ಡಿಗೆ ಭರತನಾಟ್ಯ ನೃತ್ಯವನ್ನು ಅತ್ಯುತ್ತಮವಾಗಿ ಕಲಿಸುತ್ತಿರುವ ಭರತನಾಟ್ಯ ನೃತ್ಯದಲ್ಲಿ ಪ್ರಾವೀಣ್ಯತೆ ಹೊಂದಿರುವ ಕೊಂಡ್ಲಹಳ್ಳಿ ನಾಗರಾಜ್ ಅವರ ಸೇವೆ ಪ್ರಶಂಸನೀಯ ಎಂದು ಸಾಣೆಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ಅಶೋಕ ರಂಗಮಂದಿರದಲ್ಲಿ ಕನಕಪ್ರಿಯ ನಾಟ್ಯಕಲಾ ಸೇವಾ ಟ್ರಸ್ಟ್ ಕೊಂಡ್ಲಹಳ್ಳಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ನಾಟ್ಯೋಲ್ಲಾಸ ಭರತನಾಟ್ಯ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರಿಗೂ ಸಾಹಿತ್ಯ, ಸಂಗೀತ, ಕಲೆಯ ಬಗ್ಗೆ ಜ್ಞಾನ ಇರಬೇಕು. ಇವುಗಳ ಬಗ್ಗೆ ಒಲವು ಇಲ್ಲದಿದ್ದರೆ ಬಾಲ ಹಾಗೂ ಕೊಂಬು ಇಲ್ಲದ ಪಶುವಿನಂತೆ ಆಗುತ್ತದೆ. ಹಾಗಾಗಿ ಬಾಲ್ಯದಲ್ಲಿಯೇ ಮಕ್ಕಳು ಭರತನಾಟ್ಯ ಕಲಿಯುವಂತೆ ಪೋಷಕರು ತಮ್ಮ ಮಕ್ಕಳಿಗೆ ಉತ್ತೇಜನ ನೀಡಬೇಕೆಂದರು.

ಭಗೀರಥ ಗುರುಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ, ಕುಂಚಿಟಿಗ ಮಹಾಸಂಸ್ಥಾನದ ಶಾಂತವೀರ ಸ್ವಾಮೀಜಿ, ಕನಕ ಗುರುಪೀಠದ ಈಶ್ವರಾನಂದಪುರಿ ಸ್ವಾಮೀಜಿ ನೇತೃತ್ವ ವಹಿಸಿ ಮಾತನಾಡಿದರು. ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ಹೆಚ್.ಬಿಲ್ಲಪ್ಪ ಕಾರ್ಯಕ್ರಮ ಉದ್ಘಾಟಿಸಿದರು. ಕನಕಪ್ರಿಯ ನಾಟ್ಯಕಲಾ ಕೇಂದ್ರದ ಮಕ್ಕಳು ಭರತನಾಟ್ಯ ನೃತ್ಯ ಅಭಿನಯಿಸಿದರು.

ಸಮಾರಂಭದಲ್ಲಿ ನಿಜಲಿಂಗಪ್ಪ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕೆ.ಎಸ್.ಕಲ್ಮಠ್, ಭರತನಾಟ್ಯ ವಿದ್ವಾನ್ ಕೆ.ನಾಗರಾಜ್, ಡಾ.ಹನುಮಂತಪ್ಪ, ಕನಕ ವಿದ್ಯಾಸಂಸ್ಥೆ ಅಧ್ಯಕ್ಷ ಡಾ.ಎಂ.ಹೆಚ್.ಕೃಷ್ಣಮೂರ್ತಿ, ಭರತನಾಟ್ಯ ಕಲಾವಿದೆ ನಿಸರ್ಗ ಸಂಜಯ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ಪಿ.ಓಂಕಾರಪ್ಪ, ಪುರಸಭೆ ಸದಸ್ಯೆ ಡಾ.ಸ್ವಾತಿಪ್ರದೀಪ್, ನಿವೃತ್ತ ಮುಖ್ಯಶಿಕ್ಷಕಿ ಡಿ.ವಿ.ನಾಗಮಣಿ, ಶ್ರೀಕೃಷ್ಣ ಕಲಾಕುಂಜ ನಿರ್ದೇಶಕ ಜಿ.ಪವನ ಕುಮಾರ್, ರಂಗನಟ ರಾಜಗೋಪಾಲ್, ಡಾ. ಸುನಿಲ್ ಮನೋಹರ್ ಸೇರಿ ಇನ್ನಿತರ ಗಣ್ಯರು ಹಾಜರಿದ್ದರು.

ರಸ್ತೆ ವಿಸ್ತರಣೆಗೆ 5 ಕೋಟಿ ರು.ಬಿಡುಗಡೆ

ನಾಯಕನಹಟ್ಟಿ: ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಪೆಟ್ರೋ ಲ್ ಬಂಕ್ ಮುಂಭಾಗ ರಸ್ತೆ ಹದೆಗೆಟ್ಟಿದ್ದು ಆ ರಸ್ತೆಗೆ ದುರಸ್ಥೆ ಮಾಡುವುದರ ಮೂಲಕ ವಾಹನ ಸವಾರರಿಗೆ ಓಡ ಾಡುವುದಕ್ಕೆ ಅನುಕೂಲವನ್ನು ಮಾಡಿಕೊಟ್ಟಿದ್ದೇವೆ ಎಂದು ಮೊಳಕಾಲ್ಮೂರು ವಿಧಾನ ಸಭಾ ಕ್ಷೇತ್ರದ ಶಾಸಕ ಎನ್.ವೈ. ಗೋಪಾಲಕೃಷ್ಣ ಹೇಳಿದರು.

ಪಟ್ಟಣದ ವಾಲ್ಮೀಕಿ ವೃತ್ತದಲ್ಲಿ ಶನಿವಾರ ನಾಯಕನಹಟ್ಟಿ ಜಗಳೂರು ಮುಖ್ಯ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ಮತ್ತು ಇ-ಖಾತಾ ಅಭಿಯಾನ ಚಾಲನೆ ನೀಡಿ ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಮಲ್ಲೂರಹಳ್ಳಿಗೆ ಹೋಗುವ ರಸ್ತೆ ಅಗಲಿಕರಣಕ್ಕೆ 5 ಕೋಟಿ ರು.ಹಣ ಬಿಡುಗಡೆ ಮಾಡಿದ್ದೆವೆ, ಹಾಗೂ ಗುದ್ದಲಿ ಪೂಜೆ ನೇರವೇರಿಸಿದ್ದೇನೆ ಮತ್ತು ನಾಯಕನಹಟ್ಟಿ ಪಟ್ಟಣಕ್ಕೆ 4 ಬೋರ್‌ವೆಲ್‌ಗಳು ಕೊರಿಸಿದ್ದೇವೆ ಎಂದರು.

ಜಗಳೂರು ಮುಖ್ಯ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ಮತ್ತು ಇ-ಖಾತಾ ಅಭಿಯಾನಕ್ಕೆ ಶಾಸಕ ಎನ್.ವೈ.ಗೋಪಾಲಕೃಷ್ಣ ಚಾಲನೆ ನೀಡಿದರು.

ದೂರದಿಂದ ಬರುವಂತ ಹಳ್ಳಿಯ ಜನರಿಗೆ ಅನುಕೂಲವಾಗಲಿ ಎಂಬ ದೃಷ್ಠಿಯಿಂದ ವಾಲ್ಮೀಕಿ ಭವನದ ಹತ್ತಿರ ಒಂದು ಬೋರ್ ವೆಲ್, ಒಂದು ಹೈಮಾಸ್ಕ್ ದೀಪ ಅಳವಡಿಸಲಾಗುವುದು ಎಂದು ಸಾರ್ವಜನಿಕರ ಮುಂದೆ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಉಪಸ್ಥಿತರಾದ ನಾಯಕನಹಟ್ಟಿ ಪಂಚಾಯಿತಿಯ ಅಧ್ಯಕ್ಷೆ ಮಂಜುಳ ಶ್ರೀಕಾಂತ್, ಉಪಾಧ್ಯಕ್ಷೆ ಸರ್ವಮಂಗಳ ಉಮಾಪತಿ, ಪ.ಪಂ. ಮುಖ್ಯಾಧಿಕಾರಿ ಓ.ಶ್ರೀನಿವಾಸ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷ ಜೆ.ಆರ್. ರವಿಕುಮಾರ್, ಮಾಜಿ ಗ್ರಾ.ಪಂ.ಸದಸ್ಯ ಆರ್.ಶ್ರೀಕಾಂತ್, ಪ್ರಕಾಶ್, ವಾಸೀಂ ಅಹಮದ್,ಶ್ರೀನಿವಾಸ್ ಇದ್ದರು.

ರೆಡ್‌ಕ್ರಾಸ್ ಸಂಸ್ಥೆಯ ಸಲಹಾ ಸಮಿತಿ ರಚನೆ

ದಾವಣಗೆರೆ: ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ದಾವಣಗೆರೆ ಜಿಲ್ಲಾ ಘಟಕದ ದಿನನಿತ್ಯ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸಲು ಮುಂದಿನ ಆರು ತಿಂಗಳಿಗೆ ಅಥವಾ ಹೊಸ ಕಾರ್ಯಕಾರಿ ಸಮಿತಿ ರಚನೆ ಆಗವವರೆಗೂ ರಚನೆಗೆ ಅಗತ್ಯ ಎಲ್ಲಾ ಉಪಕ್ರ ಮಗಳನ್ನು ಕೈಗೊಳ್ಳಲು ಸಲಹಾ ಸಮಿತಿ ರಚಿಸಿ ಜಿಲ್ಲಾಧಿಕಾರಿ ಹಾಗೂ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಅಧ್ಯಕ್ಷ ಗಂಗಾಧರಸ್ವಾಮಿ.ಜಿ.ಎಂ ಆದೇಶಿಸಿದ್ದಾರೆ. ನೇಮಿಸಲಾದ ಸದಸ್ಯರ ಹೆಸರು ಮತ್ತು ಹುದ್ದೆ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ರಾಘವನ್, ಜಿಲ್ಲಾ ಅಂಗ ವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಡಾ.ಕೆ.ಕೆ ಪ್ರಕಾಶ್, ಸಹಕಾರ ಸಂಘಗಳಪನಿಭರ್ಂದಕ ಮಧು ಶ್ರೀನಿವಾಸ್, ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಫೆಥಾಲಜಿಸ್ಟ್ ಡಾ.ಡಿ.ಹೆಚ್ ಗೀತಾ, ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಜನಾರೋಗ್ಯ ಪ್ರಯೋಗ ಶಾಲೆಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಕರಿಬಸವ ರಾಜು.ಬಿ.ಎನ್ ಅವರನ್ನು ನೇಮಿಸಲಾಗಿದೆ.

ದಾವಣಗೆರೆಯಲ್ಲಿ ಶೀಘ್ರ ವೃತ್ತಿಪರ ತರಬೇತಿ

ದಾವಣಗೆರೆ: ಜಿಲ್ಲೆಯ ವಿದ್ಯಾರ್ಥಿಗಳಿಗಾಗಿ ಉದ್ಯೋಗಾವಕಾಶ ಕೇಂದ್ರೀತ ವೃತ್ತಿಪರ ತರಬೇತಿ ಹಾಗೂ ನಾಗರಿಕ ಸೇವೆಗಳಾದ ಐಎಎಸ್ ಹಾಗೂ ಕೆಎಎಸ್ ಜೊತೆಗೆ ಸರಕಾರಿ ಉದ್ಯೋಗದ ಪರೀಕ್ಷೆಗಳ ತರಬೇತಿ ಕೇಂದ್ರ ಪ್ರಾರಂಭಿಸುವ ಕುರಿತು ದಾವಣಗೆರೆ ಜಿಲ್ಲಾಧಿಕಾರಿಗಳಾದ ಜಿ.ಎಂ ಗಂಗಾಧರಸ್ವಾಮಿ ಹಾಗೂ ದಾವಣಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ್ ಅವರೊಂದಿಗೆ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಮಹತ್ವದ ಚರ್ಚೆ ನಡೆಸಿದ್ದಾರೆ. ತಮ್ಮ ಗೃಹಕಚೇರಿಯಲ್ಲಿ ಈ ಬಗ್ಗೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಂಸದರು ಎಸ್‌ಎಸ್ ಕೇರ್ ಟ್ರಸ್ಟ್ ಮೂಲಕ ಈ ಯೋಜನೆಗಳ ಕಾರ್ಯಗತಗೊಳಿಸುವ ಕುರಿತು ಅಂತಿಮ ಹಂತದ ರೂಪುರೇಷೆಗಳ ಸಿದ್ಧತೆ ಕೈಗೊಂಡಿದ್ದಾರೆ. ಈ ಯೋಜನೆಗಳನ್ನು ದಾವಣಗೆರೆ ವಿಶ್ವವಿದ್ಯಾಲಯ ಹಾಗೂ ಜಿಲ್ಲಾಡಳಿತದ ಸಹಯೋಗದಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ. ಇದರಿಂದ ಶೀಘ್ರದಲ್ಲೇ ದಾವಣಗೆರೆ ಜಿಲ್ಲೆಯ ವಿದ್ಯಾರ್ಥಿಗಳಿಗೆ ಮಹತ್ವಾಕಾಂಕ್ಷೆಯ ಎರಡು ಉಚಿತ ಯೋಜನೆಗಳು ಲಭ್ಯವಾಗಲಿವೆ ಎಂದು ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಬಿ ಖಾತಾ ಅಭಿಯಾನಕ್ಕೆ ಚಾಲನೆ

ಹರಿಹರ: ಬಿ ಖಾತಾ ಅಭಿಯಾನದ ಚಾಲನೆಗೆ ಆಗಮಿಸಿದ ಶಾಸಕ ಬಿಪಿ ಹರೀಶ್ ಮುಂದೆ ನಗರಸಭಾ ಅಧಿಕಾರಿಗಳ ಕಾರ್ಯ ವೈಖರಿಗಳ ಬಗ್ಗೆ ಸದಸ್ಯರ ಮತ್ತು ಸಾರ್ವಜನಿಕರ ದೂರುಗಳ ಸುರಿಮಳೆ ಬಂದವು.

ನಗರಸಭಾ ಸಭಾಂಗಣದಲ್ಲಿ ನಡೆದ ಬಿ ಖಾತಾ ಅಭಿಯಾನಕ್ಕೆ ಶಾಸಕ ಬಿ.ಪಿ ಹರೀಶ್ ಅವರು ಚಾಲನೆ ನೀಡುತ್ತಿದಂತೆ ನಗರಸಭಾ ಸದಸ್ಯರು ಮತ್ತು ಸಾರ್ವಜನಿಕರು ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಅವರು ಖಾತಾ ಉತ್ತಾರ ಮಾಡಿಕೊಡುವ ಬಗ್ಗೆ ಇವರ ಕಚೇರಿಗೆ ಕೇಳಲು ಹೋದರೆ ದುರ್ವರ್ತನೆ ಇಂದ ಮಾತನಾಡುತ್ತಾರೆ ಎಂದು ಶಾಸಕರು ಎದುರು ದೂರಿದರು.

ಸದಸ್ಯ ಶಂಕರಖಟಾವ್ಕಾರ್ ಮಾತನಾಡಿ, ಸರಕಾರ ಜಾರಿಗೆ ತಂದಿರುವ ಬಿ ಖಾತಾ ಯೋಜನೆಯ ಕಾರ್ಯಕ್ರಮವನ್ನು ನಗರದ ಜನವರಿ ಹೆಚ್ಚು ಪ್ರಚಾರ ಪಡಿಸಿ ಬಹಿರಂಗ ಸಭೆಯನ್ನು ಆಯೋಜನೆ ಮಾಡಬೇಕಿತ್ತು. ಕೌನ್ಸಿಲ್ ಸಭಾಂಗಣದಲ್ಲಿ ಮಾಡುತ್ತಿರುವುದು ಖಂಡನೀಯ ಮತ್ತು ಕರ್ತವ್ಯ ಲೋಪವಾಗಿದೆ ಎಂದು ದೂರಿದರು.

ನಗರಸಭಾ ಸಭಾಂಗಣದಲ್ಲಿ ನಡೆದ ಬಿ ಖಾತಾ ಅಭಿಯಾನಕ್ಕೆ ಶಾಸಕ ಬಿ.ಪಿ ಹರೀಶ್ ಅವರು ಚಾಲನೆ ನೀಡಿದರು.

ಕಸ ತುಂಬು ವಾಹನದಲ್ಲಿ ಮತ್ತು ಪತ್ರಿಕೆಗಳಲ್ಲಿ ಪಾಂಪ್ಲೆಂಟ್ ಮೂಲಕ ಸಾರ್ವಜನಿಕರಿಗೆ ತಿಳಿಸಬೇಕು ತಮ್ಮ ಖಾತೆಗಳನ್ನು ಮಾಡಿಸಲು ಜಾಗೃತಿ ಮೂಡಿಸಬೇಕು ಎಂದು ಸಲಹೆ ನೀಡಿದರು.

ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಮಾತನಾಡಿ, ಬಹುದಿನಗಳಿಂದ ಜನರ ಬೇಡಿಕೆಯಾಗಿದ್ದ ಬಿ ಖಾತ ಉತಾರ ನೀಡುವ ಯೋಜನೆಗೆ ಸಿಎಂ ಸಿದ್ದರಾಮಯ್ಯನವರು ಚಾಲನೆ ಇಡುವ ಮೂಲಕ ಸರಕಾರಕ್ಕೆ ಮತ್ತು ನಗರಸಭೆಗೆ ಆದಾಯ ವೃದ್ಧಿಸುವ ಮಹತ್ವದ ಕಾರ್ಯವಾಗಿದೆ ಎಂದರು.

ಈ ವೇಳೆ ಉಪಾಧ್ಯಕ್ಷ ಎಂ.ಜಂಬಣ್ಣ. ಸದಸ್ಯರಾದ ಆರ್.ಸಿ ಜಾವೀದ್, ಪಿ.ಎನ್ ವಿರೂಪಾಕ್ಷಿ, ಆಟೋ ಹನುಮಂತಪ್ಪ, ಬಾಬುಲಾಲು, ಸುಮಿತ್ರಾ, ಮರಿದೇವ್, ಸೈಯದ್ ಅಲೀಮ್, ಕೆಬಿ ರಾಜಶೇಖರ್ ಸಂತೋಷ್ ದೊಡ್ಡಮ್ನಿ ಇತರರಿದ್ದರು.

> ಬಿ ಖಾತ ಉತಾರ ಮಾಡಿಕೊಡಲು ಮೂರು ತಿಂಗಳ ಸಮಯವಿದ್ದು ಜನರಿಂದ ಸರಿಯಾದ ದಾಖಲೆ ಪಡೆದು ನಿಯಮಾವಳಿ ಪ್ರಕಾರ ಎಷ್ಟು ಕಂದಾಯ ಕಟ್ಟಬೇಕು ಅಷ್ಟನ್ನು ಮಾತ್ರ ಕಟ್ಟಿಕೊಂಡು ಅವರಿಗೆ ಉತಾರ ನೀಡಬೇಕು.
> -ಬಿಪಿ ಹರೀಶ್,ಶಾಸಕ

ನಾಳೆ ತ್ರಿಮೂರ್ತಿ ಶಿವ ಜಯಂತಿ ಕಾರ್ಯಕ್ರಮ

ಹೊಳಲ್ಕೆರೆ : ಮಹಾಶಿವರಾತ್ರಿ ಹಬ್ಬದ ಹಿನ್ನೆಲೆಯಲ್ಲಿ ಹೊಳಲ್ಕೆರೆ ಪಟ್ಟಣದ ಪ್ರಜಾಪೀತ ಬ್ರಹ್ಮಕುಮಾರಿ ಈಶ್ವರಿ ವಿಶ್ವ ವಿದ್ಯಾನಿಲಯದಲ್ಲಿ 89ನೇ ವಿಶ್ವ ಸದ್ಭಾವನಾ ತ್ರಿಮೂರ್ತಿ ಶಿವ ಜಯಂತಿ ಕಾರ್ಯಕ್ರಮ ಹಾಗೂ ಪುಷ್ಪ ಮಂಟದಲ್ಲಿ ಜಲದಾರೆ ದ್ವಾದಶ ಜ್ಯೋರ್ತಿಲಿಂಗ ದರ್ಶನ ಆಯೋಜಿಸಿದೆ ಎಂದು ಪ್ರಜಾಪೀತ ಬ್ರಹ್ಮಕುಮಾರಿ ಈಶ್ವರಿ ವಿಶ್ವ ವಿದ್ಯಾನಿಲಯದ ಸಂಚಾಲಕರಾದ ಬಿ.ಕೆ.ಸುಮಿತ್ರಕ್ಕ ತಿಳಿಸಿ ದ್ದಾರೆ. ಪಟ್ಟಣದ ಪ್ರಜಾಪೀತ ಈಶ್ವರಿ ವಿ.ವಿಯಲ್ಲಿ ಶಿವರಾತ್ರಿ ಹಬ್ಬದ ಅಂಗವಾಗಿ ಹಮ್ಮಿಕೊಂಡಿರುವ ವಿವಿಧ ಕಾರ್ಯ ಕ್ರಮಗಳ ಜತೆ ಜ್ಯೋರ್ತಿಲಿಂಗ ದರ್ಶನ ಕುರಿತು ಪತ್ರಿಕಾ ಗೋಷ್ಠಿ ನಡೆಸಿ ಮಾತನಾಡಿದರು. 180 ದೇಶಗಳಲ್ಲಿ ಕಾರ್ಯ ನಿರ್ವಹಿಸುವ ಈಶ್ವರಿ ವಿವಿ ಈ ಸಾರಿ 89 ವರ್ಷದ ಮಹಾ ಶಿವರಾತ್ರಿ ಹಬ್ಬವನ್ನು ಅಚರಣೆ ಕೈಗೊಂಡಿದ್ದು, ಫೆ 24 ರಂದು ಮುಂಜಾನೆ ಧ್ವಜಾರೋಹಣ, ಪಟ್ಟಣದ ರಾಜ ಬೀದಿಗಳಲ್ಲಿ ಜ್ಯೋರ್ತಿಲಿಂಗ ಮೆರವಣಿಗೆ, ಶಿವ ಮಂಟಪದ ದ್ವಾದಶ ಜ್ಯೋರ್ತಿಲಿಂಗಗಳ ಪ್ರದರ್ಶನ ಉದ್ಘಾಟನೆ ನಡೆಸಲಿದೆ. ಶಿವ ಧ್ವಜಾರೋಹಣ ಹಾಗೂ ಈಶ್ವರೀಯ ಸನ್ಮಾನವನ್ನು ಸಂಸದ ರಾದ ಗೋವಿಂದ ಎಂ. ಕಾರಜೋಳ ನಡೆಸಲಿದ್ದಾರೆ. ಶಾಸಕ ಡಾ.ಎಂ.ಚಂದ್ರಪ್ಪ ವೇದಿಕೆ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಈಶ್ವರಿ ವಿವಿ ಪ್ರಮುಖ ಜಯಣ್ಣ, ತಾ.ಪಂ.ಮಾಜಿ ಅಧ್ಯಕ್ಷ ಎಸ್.ಆರ್. ಮೋಹನ್ ನಾಗರಾಜ್, ನಿಂಗಪ್ಪ ಪತ್ರಿಕಾ ಗೋಷ್ಠಿಯಲ್ಲಿದ್ದರು.

ಸಮಾಚಾರ ಸಣ್ಣದಲ್ಲ

ಕವಿರತ್ನ ಕಾಳಿದಾಸ ಯಕ್ಷಗಾನ ಪ್ರದರ್ಶನ

ಸಾಗರ: ಶ್ರೀ ಗುರುಪ್ರಸಾದಿತ ಯಕ್ಷಗಾನ ಮಂಡಳಿ ಸಾಲಿಗ್ರಾಮದವರಿಂದ ಕವಿರತ್ನ ಕಾಳಿದಾಸ ಮತ್ತು ಭಕ್ತ ಪ್ರಹ್ಲಾದ ಎನ್ನುವ ಪೌರಾಣಿಕ ಪ್ರಸಂಗದ ಯಕ್ಷಗಾನ ಪ್ರದರ್ಶನ ಹೆಗ್ಗೋಡಿನ ರಾಧಾಕೃಷ್ಣ ನಾಯಕ್‌ರವರ ಹರಕೆ ಬಯಲಾಟವಾಗಿ ಗುರುವಾರ ರಾತ್ರಿ ಹೆಗ್ಗೋಡು ಸಂತೆ ಮೈದಾನದಲ್ಲಿ ಜರುಗಿತು. ಉತ್ತಮ ಹಿಮ್ಮೇಳ ಮತ್ತು ಮುಮ್ಮೇಳ ಒಳಗೊಂಡ ಮೇಳದ ಈ ಪ್ರದರ್ಶನ ಸೇರಿದ್ದ ಅಪಾರ ಕಲಾಭಿಮಾನಿಗಳ ಮೆಚ್ಚುಗೆಗೆ ಪಾತ್ರವಾಯಿತು. ಕಾಳಿದಾಸ ಪ್ರಸಂಗದ ಹಿಮ್ಮೇಳದಲ್ಲಿ ಸುಜನ್ ಗಣೇಶ್ ಹೆಗಡೆ ಭಾಗವತಿಕೆಗೆ ಶಶಿಕುಮಾರ್ ಆಚಾರಿ ಮದ್ದಲೆ, ರೋಹಿತ್, ನಿನಾದ ಚೆಂಡೆ ಸಾಥ್ ನೀಡಿದ್ದರು. ರಾಜನ ಪಾತ್ರದಲ್ಲಿ ಪ್ರಣವ ಭಟ್, ಮಂತ್ರಿ, ಚಂದ್ರಶೇಖರ್ ಶೆಟ್ಟಿ ಅರಳಸುರಳಿ, ಕಲಾಧರನಾಗಿ ಈಶ್ವರ ನಾಯಕ್‌ಮಂಕಿ, ಕಾಳನಾಗಿ ಕ್ಯಾದಗಿ ಮಹಾಬಲೇಶ್ವರ ಭಟ್, ವಿದ್ಯಾಧರೆಯಾಗಿ ಸೌರಭ ಮತ್ತು ದಿನಕರ್, ಜಯಂತ್, ದರ್ಶನ ಗೌಡ, ಯುವರಾಜ್ ಪಾತ್ರ ನಿರ್ವಹಿಸಿದರು. ನಂತರ ನಡೆದ ಭಕ್ತ ಪ್ರಹ್ಲಾದ ಪ್ರಸಂಗದಲ್ಲಿ ಭಾಗವತರಾಗಿ ಚಂದ್ರಕಾಂತ್, ಎ.ಜಿ. ಹೆಗಡೆ ಮದ್ದಲೆ ಮತ್ತು ಗುರುದತ್ತ ಚೆಂಡೆ ಹಾಗೂ ಮುಮ್ಮೇಳದಲ್ಲಿ ಪ್ರಸನ್ನ ಶೆಟ್ಟಿಗಾರ, ಶಶಿಕಾಂತ್ ಶೆಟ್ಟಿ, ರತ್ನಾಕರ್ ಸರಳಗಿ, ಪ್ರವೀಣ್ ಗಾಣಿಗ, ಮತ್ತಿತರರು ಇದ್ದರು.

ಸಾರ್ವಜನಿಕರ ಕೆಲಸ ವಿಳಂಬ ಮಾಡದಿರಿ

ಸೊರಬ: ಅಧಿಕಾರಿಗಳು ಸಾರ್ವಜನಿಕರನ್ನು ನಿತ್ಯ ಅಲೆದಾಡಿಸದೆ ಅವರ ಕೆಲಸ ಕಾರ್ಯಗಳನ್ನು ಯಾವುದೇ ವಿಳಂಬ ಮಾಡದೆ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿಕೊಡಬೇಕು ಎಂದು ಲೋಕಾಯುಕ್ತ ಇನ್‌ಸ್ಪೆಕ್ಟರ್ ಸುರೇಶ್ ಎಚ್.ಎಸ್. ಸೂಚಿಸಿದರು. ತಾಲೂಕು ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಕರೆಯಲಾಗಿದ್ದ ಸಾರ್ವಜನಿಕರ ಕುಂದು ಕೊರತೆಗಳ ಅಹವಾಲು ಸ್ವೀಕರಿಸಿ ಅವರು ಮಾತನಾಡಿದರು. ತಾಲೂಕಿನ ಕೋರಕೋಡು ಪ್ರಾಥಮಿಕ ಶಾಲೆಯ ಜಾಗ ಒತ್ತುವರಿ ಆಗಿದ್ದು ಅದನ್ನು ತೆರವುಗೊಳಿಸಿ ಕೊಡಲು ಮನವಿ ಸಲ್ಲಿಸಿದರು,ಕೊಡಕಣಿ ಸದಾಶಿವ ಎಂಬುವರು ಜನನ ಮತ್ತು ಮರಣ ದಾಖಲೆಗಳನ್ನು ಪಡೆದು ಕೊಳ್ಳಲು ತುಂಬಾ ತೊಂದರೆ ಉಂಟಾಗುತ್ತಿದೆ ಅದರ ವೆಚ್ಚವು ದುಬಾರಿಯಾಗಿದ್ದು ಜನ ಸಾಮಾನ್ಯರು ಇದನ್ನು ಪಡೆದು ಸಾಧ್ಯವಾಗದ ಸ್ಥಿತಿ ಉಂಟಾಗಿದೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಚಂದ್ರಿಬಾಯಿ, ಜಯಂತ ಕೆ.ಸಿ, ತಹಸೀಲ್ದಾರ್ ಮಂಜುಳಾ ಹೆಗಡಾಳ್, ಇಒ.ಡಾ. ಪ್ರದೀಪ್ ಕುಮಾರ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಕೆ.ಜಿ,ಕುಮಾರ್, ಎಪಿಎಂಸಿ ಅಧಿಕಾರಿ ಆಶಾ, ಮಂಜುನಾಥ್, ನಿರ್ಮಲಾ, ಅಶ್ವಿನಿ ಭಂಡಾರಿ, ನಟೇಶ್, ಯೋಗರಾಜ್, ಅನವಟ್ಟಿ ಪಪಂ ಮುಖ್ಯಾಧಿಕಾರಿ ಸಂತೋಷ್, ಲಕ್ಷ್ಮಿ ನಾರಾಯಣ ಉಪಸ್ಥಿತರಿದ್ದರು.

ಫಲಾನುಭವಿಗಳ ಸಮ್ಮುಖದಲ್ಲಿ ಲಾಟರಿ ಮೂಲಕ ಮನೆಯ ಕೀ ಹಸ್ತಾಂತರ | ವಿಧಾನ ಪರಿಷತ್ ಸದಸ್ಯೆ ಬಿಲ್ಕಿಷ್ ಬಾನು ಮಾಹಿತಿ

ಫೆ.25 ರಂದು ಆಶ್ರಯ ಮನೆಗಳ ಹಂಚಿಕೆ

ಶಿವಮೊಗ್ಗ: ಗೋವಿಂದಾ ಪುರ ಆಶ್ರಯ ಮನೆಗಳನ್ನು ಲಾಟರಿ ಮೂಲಕ ಫಲಾನುಭವಿಗಳಿಗೆ ಫೆ.25 ರಂದು ವಸತಿ ಸಚಿವ ಜಮೀರ್ ಅಹ್ಮದ್ ಹಂಚಲಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯೆ ಬಿಲ್ಕಿಷ್ ಬಾನು ತಿಳಿಸಿದರು.

ಪತ್ರಿಕಾಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11.00 ಗಂಟೆಗೆ ಗೋವಿಂದಾ ಪುರದಲ್ಲಿ ಎರಡನೇ ಹಂತದ 625 ಆಶ್ರಯ ಮನೆಗಳನ್ನು ಫಲಾನುಭವಿಗಳ ಸಮ್ಮುಖದಲ್ಲಿ ಲಾಟರಿ ಮೂಲಕ ಮನೆಯ ಕೀ ಯನ್ನು ಹಸ್ತಾಂತರಿಸಲಾಗುತ್ತದೆ ಎಂದರು.

ಆಶ್ರಯ ಸಮಿತಿ ತೀರ್ಮಾನದಂತೆ ತಾತ್ಕಾಲಿಕವಾಗಿ ನೀರಿನ ಸೌಲಭ್ಯ, ವಿದ್ಯುತ್ ಸೇರಿದಂತೆ ಇನ್ನಿತರೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದರು. ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್ ಮಧು ಬಂಗಾರಪ್ಪ ಆಗಮಿಸಲಿದ್ದಾರೆ. ಶಿವಮೊಗ್ಗ ನಗರ ಶಾಸಕ ಎಸ್.ಎನ್.ಚನ್ನಬಸಪ್ಪ, ಶಿವಮೊಗ್ಗ ಗ್ರಾಮಾಂತರ ಶಾಸಕಿ ಶಾರದಾ ಪೂರ್ಯಾ ನಾಯ್ಕ್ ಪಾಲ್ಗೊಳ್ಳಲಿದ್ದಾರೆ ಎಂದರು.

ಮಾ. 3 ರಂದು ಅದ್ದೂರಿಯಾಗಿ ಹಂಚುವ ಯೋಜನೆ ಇತ್ತು ಆದರೆ ಫಲಾನುಭವಿಗಳ ಒತ್ತಡದ ಮೇರೆಗೆ ಫೆ.25 ರಂದು ಲಾಟರಿ ಮೂಲಕ 625 ಮನೆಗಳನ್ನು ಹಂಚಲು ಬಹಳ ಸಂತೋಷವಾಗುತ್ತಿದೆ. 2017 ರಂದು ನಮ್ಮ ಸರಕಾರದಿಂದ ಈ ಯೋಜನೆಯನ್ನು ಜಾರಿಗೆ ತರಲಾಯಿತು. ಇದು ನಮ್ಮ ಸರಕಾರದ ಹೋರಾಟದ ಫಲ ಎಂದು ಹೇಳಬಹುದು.

ಪತ್ರಿಕಾಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ವಿಧಾನ ಪರಿಷತ್ ಸದಸ್ಯೆ ಬಿಲ್ಕಿಷ್ ಬಾನು ಮಾತನಾಡಿದರು.

ಆ ವೇಳೆ ಇನ್ನಷ್ಟು ಮನೆಗಳನ್ನು ಹಂಚಬೇಕೆಂಬ ಬೇಡಿಕೆಯನ್ನು ಇದೆ. ಸಚಿವರು ಇನ್ನಷ್ಟು ಮನೆಗಳನ್ನು ಹಂಚುತ್ತಾರೆಂಬ ನಂಬಿಕೆ ಇದೆ ಎಂದರು.

3000 ಮನೆಗಳನ್ನು ಕಟ್ಟಬೇಕು ಎಂದು ಇತ್ತು. ಸುಮಾರು 600 ಮನೆ ಹಿಂದೆ ನೀಡಲಾಗಿತ್ತು, ಈಗ 625 ಮನೆ ನೀಡಲಾಗುತ್ತಿದೆ. ಜನರಿಗೆ ಬೇಕಾದ ಅಗತ್ಯ ಸೌಲಭ್ಯಗಳಾದ ಬಸ್ಸಿನ ಸೌಲಭ್ಯ, ಆಸ್ಪತ್ರೆ ಸೌಲಭ್ಯ, ಶಾಲೆಯ ಸೌಲಭ್ಯ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಲಾಗುತ್ತದೆ ಎಂದರು.

ಸಮಿತಿ ವತಿಯಿಂದ ಹೋಗಿ ಸ್ಥಳದ ಪರಿಸ್ಥಿತಿಯ ತನಿಖೆ ಮಾಡಲಾಗಿದೆ. ಆಗುವ ಕೆಲಸವನ್ನು ವೇಗವಾಗಿ ಮಾಡಲು ಕಾರ್ಪೋರೇಶನ್ ಗೆ ತಿಳಿಸಲಾಗಿದೆ. ಶಾಸಕರೂ ಸಹ 2–3 ಬಾರಿ ಸದನದಲ್ಲಿ ಚರ್ಚಿಸಿ ವೇಗವಾಗಿ ಆಗುವಂತೆ ಮಾಡಿದ್ದಾರೆ. ಅವರು ಕಂಡ ಕನಸು ನನಸು ಆಗುವ ಸಂದರ್ಭ ಇದಾಗಿದ್ದು, ಹಬ್ಬದ ರೀತಿ ಆಚರಿಸಲಾಗುವುದು ಎಂದರು.

ಗುತ್ತಿಗೆ ದಾರರು ಬೇಗ ಮನೆಯನ್ನು ಪೂರ್ಣ ಗೊಳಿಸಿಕೊಡಬೇಕೆಂಬುದು ನಮ್ಮ ಕೋರಿಕೆ. 2013 ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು 3000 ಮನೆಗಳನ್ನು ಕಟ್ಟಲು ಆದೇಶಿಸಿದ್ದರು. ಆದರೆ ಮಧ್ಯದಲ್ಲಿ ಬಂದ ಸರಕಾರಗಳು ಇದರ ಬಗ್ಗೆ ಹೆಚ್ಚಿನ ಗಮನ ವಹಿಸಲಿಲ್ಲ. ಬರಿ ಮನೆ ಕೊಡುವುದಷ್ಟೇ ಅಲ್ಲದೆ ಅದಕ್ಕೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವಂತೆ ಕೋರಿದ್ದೇವೆ.

ಕುಟುಂಬದೊಂದಿಗೆ ಫಲಾನುಭವಿಗಳು ಈ ಕಾರ್ಯಕ್ರಮಕ್ಕೆ ಭಾಗವಹಿಸಬೇಕು. ಫಲಾನುಭವಿ ಗಳಿಗೆ ಅಂದು ಕಾರ್ಯಕ್ರಮಕ್ಕೆ ಆಗಮಿಸಲು ಕಾರ್ಪೋರೇಶನ್ ವತಿಯಿಂದ ಬಸ್ಸಿನ ವ್ಯವಸ್ಥೆ ಮಾಡಲಾಗಿದೆ ಎಂದರು. ಬೀಗದ ಕೀಯೊಂದಿಗೆ ಸಂಬಂಧಪಟ್ಟ ದಾಖಲೆಗಳನ್ನು ಅಂದು ನೀಡಲಾಗುವುದು. ನೀರಿನ ವ್ಯವಸ್ಥೆಯನ್ನು ಈಗ ತಾತ್ಕಾಲಿಕವಾಗಿ ಮಾಡಿದ್ದೇವೆ. ಜೂನ್ ತಿಂಗಳಲ್ಲಿ ಅದರ ಕಾಮಗಾರಿಯನ್ನು ಪೂರ್ಣ ಗೊಳಿಸುತ್ತೇವೆ ಎಂದರು.

ಎಚ್.ಸಿ.ಯೋಗೀಶ್ ಮಾತನಾಡಿ, ಮನೆಕಟ್ಟಿ ನೋಡು ಮದುವೆ ಮಾಡಿ ನೋಡು ಎನ್ನುವಂತೆ ಜಿ+20 ಮಾದರಿಯಲ್ಲಿ ಮಾಡಲಾಗಿದೆ. ಬೊಮ್ಮನ ಕಟ್ಟೆಯಲ್ಲಿ ಸಹ ನಮ್ಮ ಸರಕಾರದಿಂದ ಮನೆಗಳನ್ನು ನೀಡಿದ್ದೇವೆ. ಮತ್ತೊಮ್ಮೆ ಸಿದ್ದರಾಮಯ್ಯರವರು ಅಧಿಕಾರಕ್ಕೆ ಬಂದಾಗ ಮನೆಯನ್ನು ನೀಡುತ್ತಿದ್ದಾರೆ. ಫಲಾನುಭವಿಗಳಿಗೆ ಮನೆಯನ್ನು ಕೊಡುವ ಸುವರ್ಣ ಅವಕಾಶ ನಮಗೆ ದೊರೆತಿದೆ ಎಂದರು.

ಫಲಾನುಭವಿಗಳಿಗೆ ಮಹಾನಗರ ಪಾಲಿಕೆಯಿಂದ ಬಸ್ಸಿನ ವ್ಯವಸ್ಥೆಯನ್ನು ಮಾಡಿದ್ದೇವೆ. ಮನೆಗಳ ಸಂಖ್ಯೆಯನ್ನು ಲಾಟರಿ ಮುಖಾಂತರ ಎತ್ತುವ ಉದ್ದೇಶವಿದೆ. ಫಲಾನುಭವಿಗಳ ನಡುವೆ ಫಸ್ಟ್ ಫ್ಲೋರ್ 2 ಫ್ಲೋರ್ ಮನೆ ಬೇಕೆಂಬ ಗೊಂದಲ ಸೃಷ್ಟಿಯಾಗಬಾರದೆಂದು ಲಾಟರಿ ಮೂಲಕ ಎತ್ತುವ ಉದ್ದೇಶ ಇದೆ ಎಂದರು.

3 ಕಿಮೀ ಕಾಮಗಾರಿ ಮುಗಿದ ನಂತರ ನೀರಿನ ವ್ಯವಸ್ಥೆ ಆಗುತ್ತದೆ. ಫಲಾನುಭವಿಗಳು ಕುಟುಂಬ ಸಮೇತರಾಗಿ ಆಗಮಿಸಬೇಕು. ಊಟದ ವ್ಯವಸ್ಥೆಯನ್ನು ಕೂಡಾ ಕಾರ್ಪೋರೇಶನ್ ವತಿಯಿಂದ ಮಾಡಲಾಗಿದೆ. ಸರಕಾರಿ ಬಸ್ಸಿನ ವ್ಯವಸ್ಥೆಗೆ ಮನವಿ ಮಾಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕಲೀಮ್ ಪಾಷಾ, ಶಿವಕುಮಾರ್, ಲಕ್ಷ್ಮಣ್, ಮುಹಿ ಪಾಷಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> ಫೆ.25 ರ ಮಂಗಳವಾರದಂದು ವಸತಿ ಸಚಿವ ಜಮೀರ್ ಅಹಮ್ಮದ್ ಅವರು ಶಿವಮೊಗ್ಗ ಆಗಮಿಸಲಿದ್ದಾರೆ. ಆಶ್ರಯ ಮನೆಗಳ ಇನ್ನುಳಿದ ವ್ಯವಸ್ಥೆಯನ್ನು ವೇಗವಾಗಿ ಮಾಡಲಾಗುವುದು. ಇದಕ್ಕೆ ಬೇಕಾದ ಹಣವನ್ನು ಸರಕಾರದಿಂದ ಬಿಡುಗಡೆ ಮಾಡುವ ಕೆಲಸ ಆಗಲಿ, ಗೋಪಿಶೆಟ್ಟಿಕೊಪ್ಪದಲ್ಲಿ ಮನೆ ನಿರ್ಮಾಣವಾಗಬೇಕು. ಮನೆ ಮಾತ್ರವಲ್ಲದೆ ಅಗತ್ಯ ಸೌಲಭ್ಯಗಳನ್ನು ನೀಡಬೇಕು.
> -ಆರ್.ಪ್ರಸನ್ನ ಕುಮಾರ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ

ಅತಿಥಿ ಶಿಕ್ಷಕರಿಗೆ ಬಾಕಿ ವೇತನ ಬಿಡುಗಡೆ

ಶಿವಮೊಗ್ಗ: ಅತಿಥಿ ಶಿಕ್ಷಕರಿಗೆ ಕಳೆದ ಕೆಲವು ತಿಂಗಳಿನಿಂದ ಸಂಬಳ ಬಾಕಿ ಇದ್ದದ್ದನ್ನು ಬಿಡುಗಡೆ ಮಾಡಿದ್ದೇವೆ. ಅವರಿಗೆ ನಾವು ಕೊಡುವುದೇ ಕಡಿಮೆ ಸಂಬಳ ನಿಲ್ಲಿಸುವ ಪ್ರಶ್ನೆ ಇಲ್ಲ ತಾಂತ್ರಿಕ ಸಮಸ್ಯೆಯಿಂದ ಸ್ವಲ್ಪ ತೊಂದರೆಯಾಗಿತ್ತು ಎಲ್ಲಾ ಅತಿಥಿ ಶಿಕ್ಷಕರಿಗೂ ಬಾಕಿ ಇರುವ ವೇತನ ಬಿಡುಗಡೆ ಮಾಡುತ್ತೇವೆ . ಯಾವುದೇ ಗ್ಯಾರೆಂಟಿಯನ್ನು ನಿಲ್ಲಿಸುವುದಿಲ್ಲ ಬಾಕಿ ಇದ್ದ ಎಲ್ಲಾ ಗ್ಯಾರಂಟಿಗಳನ್ನು ನೀಡುತ್ತೇವೆ. ತಾಂತ್ರಿಕ ತೊಂದರೆಯಿಂದ ಸ್ವಲ್ಪ ವಿಳಂಬವಾಗಿದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಕ್ಕಳಿಗೆ ಕೌಶಲ ಬರಿತ ಶಿಕ್ಷಣ ನೀಡಲು ಒತ್ತು ನೀಡುತ್ತಿದ್ದೇವೆ. ಕಲಿಕೆಗೆ ಪೂರಕವಾದ ಹೊಸ ವಿಧಾನಗಳನ್ನು ಕೂಡ ಅಳವಡಿಸಿ ಮಕ್ಕಳಲ್ಲಿ ಆಸಕ್ತಿಯನ್ನು ಹೆಚ್ಚಿಸುತಿದ್ದೇವೆ ಎಂದರು. ಬಜೆಟ್ ನಲ್ಲಿ ನನ್ನ ಇಲಾಖೆಗೆ ಹೆಚ್ಚಿನ ಅನುದಾನ ಕೇಳಿದ್ದೇನೆ. ಪ್ರಮುಖವಾಗಿ ನೂತನ ಕ್ಲಾಸ್ ರೂಮ್ಗಳು ಮತ್ತು ಶಿಕ್ಷಕರ ನೇಮಕಾತಿಯ ಅಗತ್ಯವಿದೆ ಈ ಬಗ್ಗೆಯೂ ಮುಖ್ಯಮಂತ್ರಿಗಳಿಗೆ ಬೇಡಿಕೆ ಇಟ್ಟಿದ್ದೇನೆ ಕಲ್ಯಾಣ ಕರ್ನಾಟಕದ ನೇಮಕಾತಿಯಲ್ಲಿ ಶೇ. 80ರಷ್ಟು ನೇಮಕ ಮಾಡಲು ಅನುಮತಿ ಸಿಕ್ಕಿದೆ ಎಂದರು. ಕಳೆದ ಸಾಲಿನಲ್ಲಿ ಸುಮಾರು 1500 ಕೋಟಿಗಳಷ್ಟು ಶಿಕ್ಷಣ ಇಲಾಖೆಗೆ ಅನುದಾನ ಬಂದಿದೆ ಎಂದರು. ಗ್ರೇಸ್ ಮಾರ್ಕ್ ವಿಚಾರಕ್ಕೆ ಸಂಬಂಧಿಸಿದಂತೆ 2023ರ ಪಾಲಿಸಿಯನ್ನೇ ಅನುಸರಿಸಲಾಗುವುದು ಎಂದು ಅವರು ಚಿಕ್ಕಿ ಬದಲು ಬಾಳೆಹಣ್ಣು ನೀಡಲು ತೀರ್ಮಾನಿಸಲಾಗಿದೆ ಎಂದರು

> ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ ಶಾಶ್ವತ ವಿದ್ಯುತ್ ಮತ್ತು ನೀರನ್ನು ಒದಗಿಸಲು ಕೂಡ ಕ್ರಮ ಕೈಗೊಂಡಿದ್ದು ಹೆಚ್ಚುವರಿ ಅನುದಾನ ನೀಡಲು ಸಚಿವರಿಗೆ ಬೇಡಿಕೆ ಇಡಲಾಗುವುದು.
> - ಮಧು ಬಂಗಾರಪ್ಪ, ಸಚಿವ

ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಸರಕಾರ ಅನುಮತಿ ನೀಡಬೇಕು ಎಂಬ ಬೇಡಿಕೆಗೆ ಪ್ರತಿಕ್ರಿಯಿಸಿದ ಅವರು ಈ ವಿಚಾರ ಕೋರ್ಟ್ ನಲ್ಲಿದೆ ನಾನೇನು ಹೇಳುವುದಿಲ್ಲ ಎಂದರು.

ಆಶ್ರಯ ಮನೆಗಳು ಶಿವಮೊಗ್ಗದಲ್ಲಿ ಫೆಬ್ರವರಿ 25ರಂದು ಲಾಟರಿ ಮೂಲಕ ವಿತರಿಸಲಾಗುವುದು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಈ ಕಾರ್ಯಕ್ರಮಕ್ಕೆ ಬರಲಿದ್ದಾರೆ. ಸ್ಥಳೀಯ ಶಾಸಕರು ಹಾಗೂ ಜನಪ್ರತಿನಿಧಿಗಳು ಕೂಡ ಭಾಗವಹಿಸಲಿದ್ದಾರೆ ಎಂದರು.

ಅತಿಥಿ ಶಿಕ್ಷಕರಿಗೆ ಮತ್ತು ಅಡಿಗೆಯವರಿಗೆ ಕೂಡ ಸಂಬಳ ಹೆಚ್ಚಳಕ್ಕೆ ಮುಖ್ಯಮಂತ್ರಿಗಳು ಒಪ್ಪಿದ್ದಾರೆ ಎಂದ ಅವರು ಶಿವಮೊಗ್ಗ ಜಿಲ್ಲಾ ಉಸ್ತುವಾರಿಯಾಗಿ ನಾನು ಜಿಲ್ಲೆಯ ಅಭಿವೃದ್ಧಿಗೆ ಬಜೆಟ್ ನಲ್ಲಿ ಕೆಲವು ಬೇಡಿಕೆ ಇಟ್ಟಿದ್ದೇನೆ ಇನ್ನೊಂದು ಸುತ್ತಿನ ಮಾತುಕತೆ ಮುಖ್ಯಮಂತ್ರಿಗಳ ಜೊತೆಗೆ ನಡೆಯಲಿದೆ ಬೇಡಿಕೆಯನ್ನು ಅವರು ಈಡೇರಿಸುತ್ತಾರೆ ಎಂಬ ಭರವಸೆ ಇದೆ ಎಂದರು.

ಆರೋಗ್ಯದ ಬಗ್ಗೆ ಜಾಗೃತಿ ಅಗತ್ಯ

ಶಿವಮೊಗ್ಗ: ಇಂದು ಆರೋಗ್ಯವೆ ಭಾಗ್ಯ. ಪ್ರತಿನಿತ್ಯದ ಜಂಜಾಟದಿಂದ, ಆಹಾರದ ವ್ಯತ್ಯಾಸದಿಂದಾಗಿ ಮಧ್ಯವಯಸ್ಕರಿಗೆ ಹಲವಾರು ತೊಂದರೆ ಉಂಟಾ ಗುತ್ತಿದ್ದು, ಅದರ ನಿವಾರಣೆಗೆ ಆಗಿಂದಾಗೆ ವೈದ್ಯರಲ್ಲಿ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ರೋಗ ಉಲ್ಬಣ ಆಗುವ ಮುಂಚಿತವಾಗಿ ಪರಿಹಾರ ಕಂಡು ಕೊಳ್ಳಬೇಕು ಎಂದು ರೋಟರಿ ಕ್ಲಬ್ ಶಿವಮೊಗ್ಗ ಜ್ಯೂಬಿಲಿ ಅಧ್ಯಕ್ಷರಾದ ರೊ. ರೂಪ ಪುಣ್ಯಕೋಟಿ ಹೇಳಿದರು.

ಕೃತ್ವಿ ಆಯುರ್ವೇದ ಮೊದಲನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ಉಚಿತ ಸಂಧಿ ಮತ್ತು ಮೂಳೆ ನೋವುಗಳ ತಪಾಸಣೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಾಯಿಲೆ ಬರುವುದನ್ನು ತಡೆಗಟ್ಟಲು ಅನುಕೂಲವಾಗುವಂತೆ ರೋಟರಿ ಹಲವಾರು ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದು, ಈ ಬಾರಿ ಮೂಳೆ ಸಾಂಧ್ರತೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಎಲ್ಲರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ ಎಂದರು. ಡಾ. ಪ್ರಕೃತಿ ಮಂಚಾಲೆ ಮಾತನಾಡಿ, ನಮ್ಮ ಕೃತ್ವಿ ಆಯುರ್ವೇದ ಪ್ರಾರಂಭವಾಗಿ ಒಂದು ವರ್ಷವಾ ಯಿತು. ಈ ಸಂದರ್ಭದಲ್ಲಿ ನಾಗರೀಕರಿಗೆ ಅನುಕೂಲ ವಾಗುವಂತಹ ಕಾರ್ಯಕ್ರಮ ಹಮ್ಮಿಕೊಳ್ಳಲು ತೀರ್ಮಾನಿಸಿ, ಗುಫಿಕ್ ಬಯೋ ಸೈನ್ಸ್ ರವರ ಪ್ರಯೋಜಕತ್ವದಲ್ಲಿ ಉಚಿತವಾಗಿ ಬಿ.ಎಂ.ಡಿ.ಪರೀಕ್ಷೆ ಮೂಲಕ ಮಂಡಿ, ಭುಜ, ಕೈ–ಕಾಲು, ಕುತ್ತಿಗೆ, ಕೀಲು ನೋವುಗಳ ತಪಾಸಣೆ ಮಾಡ ಲಾಗುತ್ತಿದೆ ಎಂದರು. ತಾಂತ್ರಿಕ ಯುಗದಲ್ಲಿ ಮನುಷ್ಯ ಚಟುವಟಿಕೆಯಿಂದ ದೂರವಾಗುತ್ತಿದ್ದು, ಪೌಷ್ಟಿಕ ಆಹಾರ ಉಪಯೋಗಿಸ ದಿರುವುದು, ಎಲ್ಲಾ ಕೆಲಸಗಳಿಗೂ ಯಂತ್ರಗಳನ್ನು ಉಪಯೋಗಿಸುತ್ತಿ ರುವುದರಿಂದ ದೇಹ ದಂಡಿಸುವುದು ಕಡಿಮೆಯಾಗಿ, ಹಲವಾರು ಕೀಲು ನೋವುಗಳು ಚಿಕ್ಕ ವಯಸ್ಸಿನಲ್ಲೆ ಬರುತ್ತಿದೆ.ಕಾರ್ಯಕ್ರಮದಲ್ಲಿ ಸುಶ್ಮಿತ ಪ್ರಾರ್ಥನೆ ನೆರವೇರಿಸಿಕೊಟ್ಟರು. ಶ್ರೀಕಾಂತ್, ಭಾರದ್ವಾಜ್, ಸತ್ಯನಾರಾಯಣ, ರೇಣುಕಾರಾಧ್ಯ, ವಾಗೇಶ್, ವೆಂಕಟೇಶ್ ನಾಯಕ್, ಪದ್ಮಾವತಿ ಮುಂತಾದವರು ಇದ್ದರು.

ಕೃತ್ವಿ ಆಯುರ್ವೇದ ಮೊದಲನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ಉಚಿತ ಸಂಧಿ ಮತ್ತು ಮೂಳೆ ನೋವುಗಳ ತಪಾಸಣೆ ಶಿಬಿರ ನಡೆಯಿತು.

ಸಮಾಚಾರ ಸಣ್ಣದಲ್ಲ

ಫೈನಾನ್ಸ್ ಕಿರುಕುಳ: ಇಬ್ಬರು ಆತ್ಮಹತ್ಯೆ

ತುಮಕೂರು: ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ ಜಿಲ್ಲೆಯಲ್ಲಿ ಇಬ್ಬರು ಆತ್ಮಹತ್ಯೆಗೆ ಶರಣಾಗಿರುವ ಘಟನೆ ನಡೆದಿದೆ. ನಗರದಲ್ಲಿ ಆಟೋ ಚಾಲಕ ಹಾಗೂ ಕುಣಿಗಲ್ ನ ಒಬ್ಬ ಮಹಿಳೆ ಒಂದೇ ದಿನ ಇಬ್ಬರು ಆತ್ಮಹತ್ಯೆಗೆ ಶರಣಾಗಿದ್ದಾರೆ. ನಗರದ ಬಟವಾಡಿಯ ಮಹಾಲಕ್ಷ್ಮೀ ನಗರದ ನಿವಾಸಿ ಅಂಜನಮೂರ್ತಿ (35) ಫೈನಾನ್ಸ್ ಕಿರುಕುಳದ ಕುರಿತು ವಿಡಿಯೊ ಮಾಡಿಟ್ಟು ಆತ್ಮಹತ್ಯೆಗೆ ಶರಣಾಗಿದ್ದಾರೆ. ಹಣ ನೀಡುವಂತೆ ಫೈನಾನ್ಸ್ ಸಿಬ್ಬಂದಿ ಕಿರುಕುಳ ನೀಡುತ್ತಿದ್ದಾರೆ. ನನ್ನ ಕುಟುಂಬಕ್ಕೆ ರಕ್ಷಣೆ ನೀಡುವಂತೆ ವಿಡಿಯೊದಲ್ಲಿ ಮನವಿ ಮಾಡಿದ್ದಾನೆ. ತುಮಕೂರಿನ ಕ್ಯಾತ್ಸಂದ್ರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅದೇ ರೀತಿ ಕುಣಿಗಲ್ ತಾಲೂಕಿನ ಕೊಂತಿಪುರದ ಅಜೀಜ್ ಉನಿಸಾ ಎಂಬವರು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಇಬ್ಬರು ಹೆಣ್ಣುಮಕ್ಕಳ ಮದುವೆಗೆ ಅಜೀಜಾ ಅವರು 12 ಲಕ್ಷ ರು. ಸಾಲವನ್ನು ಬೇರೆ ಬೇರೆ ಫೈನಾನ್ಸ್‌ಗಳಿಂದ ತೆಗೆದಿದ್ದರು. ಆಶೀರ್ವಾದ, ಸೂರ್ಯೋದಯ ಬಜಾಜ್ ಸೇರಿದಂತೆ ವಿವಿಧ ಫೈನಾನ್ಸ್‌ಗಳಿಂದ ಉನ್ನಿಸಾ ಸಾಲವನ್ನು ಪಡೆದಿದ್ದರು. ಕಳೆದ ಕೆಲವು ತಿಂಗಳಿಂದ ಸಾಲ ಮರುಪಾವತಿ ಮಾಡಿರಲಿಲ್ಲ. ಮನೆಗೆ ಬಂದು ಹಣ ಕಟ್ಟುವಂತೆ ನಿಂದಿಸಿರುವ ಆರೋಪ ಕೇಳಿ ಬಂದಿದೆ. ಹಾಗಾಗಿ ಮಹಿಳೆ ಆತ್ಮಹತ್ಯೆಗೆ ಶರಣಾಗಿದ್ದಾರೆ ಎನ್ನಲಾಗಿದೆ.

ಉದಯಗಿರಿ ಗಲಭೆಗೆ ಕಾಂಗ್ರೆಸ್ ಕುಮ್ಮಕ್ಕು

ಮೈಸೂರು: ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟಕ್ಕೆ ಕಾಂಗ್ರೆಸ್ ಕುಮ್ಮಕ್ಕು ಕಾರಣ ಎಂದು ಶ್ರೀರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಆರೋಪಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉದಯಗಿರಿ ಗಲಭೆಗೆ ಕಾಂಗ್ರೆಸ್ ಕುಮ್ಮಕ್ಕು ಕಾರಣ. ಇದೊಂದು ವ್ಯವಸ್ಥಿತ ಷಡ್ಯಂತ್ರವಾಗಿದೆ. ಮುಸ್ಲಿಮರು ಸೆಕ್ಸ್ ಸ್ಕ್ಯಾಂಡಲ್, ಡ್ರಗ್ ಮಾಫಿಯಾ, ಗಾಂಜಾ, ಗ್ಯಾಸ್ ರಿಫಿಲ್ಲಿಂಗ್ ನಂತಹ ಕಾನೂನು ಬಾಹಿರ ಚಟುವಟಿಕೆಗಳನ್ನು ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಗಲಭೆಗೆ ಪ್ರಚೋದನೆ ನೀಡಿದ ಮೌಲ್ವಿಯನ್ನು ಮೊದಲು ಗಡಿಪಾರು ಮಾಡಬೇಕು.ಅದನ್ನು ಬಿಟ್ಟು ನಮ್ಮರನ್ನು ಗಡಿಪಾರು ಮಾಡಿದರೆ ನಾವು ಸಹಿಸುವುದಿಲ್ಲ. ಈ ಗೂಂಡಾ ಪ್ರವೃತ್ತಿಯ ಕಿಡಿಗೇಡಿಗಳ ಪ್ರೋತ್ಸಾಹಕ್ಕೆ ಕಾಂಗ್ರೆಸ್ ಕಾರಣವಾಗಿದೆ. ಶ್ರೀರಾಮಸೇನೆ ಸಂಘಟನೆ ಇದನ್ನು ಖಂಡಿಸುತ್ತದೆ ಎಂದರು.

ಕೆಎಎಸ್ ಪರೀಕ್ಷೆ ಅನ್ಯಾಯ ಸರಿಪಡಿಸಿ

ತುಮಕೂರು: ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಕೆಎಎಸ್ ಪರೀಕ್ಷೆಯನ್ನು ಕನ್ನಡ ಮಾಧ್ಯಮದಲ್ಲಿ ಬರೆದ ಗ್ರಾಮೀಣ ಭಾಗದ

ಅಭ್ಯರ್ಥಿಗಳಿಗೆ ಆಗಿರುವ ಅನ್ಯಾಯ ಸರಿಪಡಿಸುವಂತೆ ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. ಅನುವಾದದಲ್ಲಿ ತಜ್ಞರಾದವರು ಹಾಗೂ ಕನ್ನಡ ಭಾಷೆಯಲ್ಲಿ ಪ್ರಾವೀಣ್ಯ ಹೊಂದಿದ ತಜ್ಞರ ಸಮಿತಿ ರಚಿಸಿ ಗ್ರಾಮೀಣ ವಿದ್ಯಾರ್ಥಿಗಳ ಹಿತ ರಕ್ಷಿಸಬೇಕು. ಪ್ರಶ್ನೆಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡುವಾಗ ಆಗಿರುವ ತಪ್ಪಿನಿಂದ ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆದಿರುವ ಗ್ರಾಮೀಣ ಭಾಗದ ಅಭ್ಯರ್ಥಿಗಳಿಗೆ ಆಗಿರುವ ತೊಂದರೆಯನ್ನು ಬಗೆಹರಿಸುವಂತೆ ಸ್ವಾಮೀಜಿ ಕೋರಿದ್ದಾರೆ. ಪ್ರಶ್ನೆಪತ್ರಿಕೆಗಳಲ್ಲಿ ಅನೇಕ ದೋಷಗಳು ಉಂಟಾಗಿವೆ. ಪ್ರಶ್ನೆಗಳು ಅರ್ಥವಾಗದೆ ಅನುತ್ತೀರ್ಣರಾಗಿ ಭವಿಷ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ. ಇಂತಹ ಪರಿಸ್ಥಿತಿ ಮುಂದುವರಿದರೆ ಗ್ರಾಮೀಣ ಮಕ್ಕಳ ಭವಿಷ್ಯ ಹಾಳಾಗಲಿದೆ.ಮುಂದಿನ ದಿನಗಳಲ್ಲಿ ಇಂತಹವರಿಗೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು ಎಂದು ಸಿದ್ದಲಿಂಗ ಸ್ವಾಮೀಜಿ ಮನವಿ ಮಾಡಿದ್ದಾರೆ

ದೂರಿತ್ತ ಕಂಡಕ್ಟರ್ ಮೇಲೆ ಪೋಕ್ಸೊ ಕೇಸ್

ಹಲ್ಲೆ ನಡೆಸಿದ್ದ ಮೂವರ ಪುಂಡರ ಬಂಧನ | ಕನ್ನಡ ಪರ ಸಂಘಟನೆಗಳಿಂದ ವ್ಯಾಪಕ ಪ್ರತಿಭಟನೆ

ಬೆಳಗಾವಿ: ಮರಾಠಿ ಭಾಷೆ ಬರುವುದಿಲ್ಲ ಕನ್ನಡ ಮಾತನಾಡಿ ಎಂದಿದ್ದಕ್ಕೆ ಸರಕಾರಿ ಬಸ್ ನಿರ್ವಾಹಕನ ಮೇಲೆ ಹಲ್ಲೆ ಪ್ರಕರಣ ತಿರುವು ಪಡೆದುಕೊಂಡಿದೆ. ತನಗೆ ಲೈಂಗಿಕ ಕಿರುಕುಳ ನೀಡಿದ್ದಾನೆ ಎಂದು ಆರೋಪಿಸಿ ನಿರ್ವಾಹಕ ಮಹಾದೇವ ಹುಕ್ಕೇರಿ ವಿರುದ್ಧ ಯುವತಿ ಮಾರಿಹಾಳ ಪೊಲೀಸ್ ಠಾಣೆಯಲ್ಲಿ ಶನಿವಾರ ಪೋಕ್ಸೊ ಪ್ರಕರಣ ದಾಖಲಿಸಿದ್ದಾಳೆ.

ಟಿಕೆಟ್ ವಿಚಾರವಾಗಿ ಪ್ರಾರಂಭವಾದ ಗಲಾಟೆ ಭಾಷೆ ವಿಚಾರಕ್ಕೆ ತಿರುಗಿ ಮರಾಠಿ ಭಾಷಿಕ ಯುವಕರು ಬಸ್ ಚಾಲಕ ಹಾಗೂ ನಿರ್ವಾಹಕನ ಮೇಲೆ ಹಲ್ಲೆ ಘಟನೆಗೆ ರಾಜ್ಯಾದ್ಯಂತ ತೀವ್ರ ವಿರೋಧ ವ್ಯಕ್ತವಾಗಿತ್ತು. ಈ ಪ್ರಕರಣದ ದಿಕ್ಕು ತಪ್ಪಿಸುವ ಉದ್ದೇಶದಿಂದ ಹಲ್ಲೆ ನಡೆಸಿದ ಆರೋಪಿಗಳು ಯುವತಿಯಿಂದ ಪೋಕ್ಸೊ ಪ್ರಕರಣ ದಾಖಲಿಸಿದ್ದಾರೆ ಎಂದು ಆರೋಪ ವ್ಯಕ್ತವಾಗಿದೆ.

ಕಂಡಕ್ಟರ್ ಹಲ್ಲೆ ಖಂಡಿಸಿ ಬೆಳಗಾವಿಯಲ್ಲಿ ಶನಿವಾರ ಕನ್ನಡಪರ ಸಂಘಟನೆ ಸದಸ್ಯರು ಪ್ರತಿಭಟನೆ ನಡೆಸಿ ಆಕ್ರೋಶ ಹೊರಹಾಕಿದರು. ಕನ್ನಡಿಗರ ಮೇಲೆ ಹಲ್ಲೆ ನಡೆಸಿದ ಪುಂಡರು ಪೋಕ್ಸೊ ಪ್ರಕರಣ ದಾಖಲಿಸಿ ದಿಕ್ಕು ತಪ್ಪಿಸುವ ಪ್ರಯತ್ನ ನಡೆಸಿದ್ದಾರೆ. ಈ ಕುರಿತು ಜಿಲ್ಲೆಯ ಯಾವೊಬ್ಬ ರಾಜಕಾರಣಿ ತುಟಿ ಬಿಚ್ಚದೆ ಇರುವುದು ಶೋಚನೀಯವಾಗಿದ್ದು, ಹಲ್ಲೆ ನಡೆಸಿದ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಹೋರಾಟಗಾರರು ಆಗ್ರಹಿಸಿದರು.

ಹಲ್ಲೆ ನಡೆಸಿದ್ದ ಪುಂಡರ ಬಂಧನ: ಬಸ್ ಚಾಲಕ ಹಾಗೂ ನಿರ್ವಾಹಕನ ಮೇಲೆ ಹಲ್ಲೆ ಘಟನೆಗೆ ಸಂಬಂಧಿಸಿದಂತೆ ಮಹಾದೇವ ಹುಕ್ಕೇರಿ ಮಾರಿಹಾಳ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಆರೋಪಿಗಳಿಗೆ ಶೋಧ ನಡೆಸಿದ್ದ ಪೊಲೀಸರು ಮೂವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಹಲ್ಲೆ ನಡೆಸಿದ ತುಮರಿ ದತ್ತು ಚಂದಗಡಕರ್ (33), ರಾಹುಲ್ ರಾಜು ನಾಯ್ಡು (28), ಬಾಳು ಸುರೇಶ್ ಗೊಂಜೇಕರ್ (28) ಅವರನ್ನು ಹಿಂಡಲಗಾ ಜೈಲಿಗೆ ರವಾನಿಸಲಾಗಿದೆ.

ಪ್ರಕರಣದ ಸತ್ಯಾಸತ್ಯತೆ ಅರಿಯಿರಿ -ಎಂಇಎಸ್: ಕಂಡಕ್ಟರ್ ಮೇಲಿನ ಹಲ್ಲೆ ಖಂಡನೀಯ. ಆದರೆ ಪ್ರಕರಣದ ಸತ್ಯಾಸತ್ಯತೆ ಅರಿಯಬೇಕು. ಬಸ್ ನಲ್ಲಿ ಪ್ರಯಾಣಿಸುತ್ತಿದ್ದ ಯುವತಿಗೆ ಲೈಂಗಿಕ ಕಿರುಕುಳವಾಗಿದೆ ಈ ವಿಚಾರ ಮುಚ್ಚಿ ಭಾಷೆಯ ಕಿಚ್ಚು ಹಚ್ಚುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಎಂಇಎಸ್ ಆರೋಪಿಸಿದೆ.

ಇನ್ಸ್‌ಪೆಕ್ಟರ್ ವಿರುದ್ಧ ಕರ್ತವ್ಯಲೋಪ ಆರೋಪ

ಭಾಷೆ ವಿಚಾರಕ್ಕೆ ಮರಾಠಿ ಪುಂಡರಿಂದ ಹಲ್ಲೆಗೊಳಗಾದ ಬಸ್ ಕಂಡಕ್ಟರ್ ಮಹಾದೇವ ಹುಕ್ಕೇರಿ ಹತ್ತಿರದ ಮಾರಿಹಾಳ ಪೊಲೀಸ್ ಠಾಣೆಗೆ ತೆರಳಿದ್ದಾರೆ.ದೂರು ದಾಖಲಿಸಲು ಮುಂದಾದ ನಿರ್ವಾಹಕನಿಗೆ ಮಾರಿಹಾಳ ಇನ್ಸ್‌ಪೆಕ್ಟರ್ ಜೋರುಧ್ವನಿಯಲ್ಲಿ ಬೈದು ಕಳುಹಿಸಿದ್ದಾರೆ. ಈ ಸಂದರ್ಭದಲ್ಲಿ ಘಟನೆ ಮಾಹಿತಿ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದರೆ ಘಟನೆ ಈ ಮಟ್ಟಿಗೆ ಬೆಳೆಯುತ್ತಿರಲಿಲ್ಲ ಎಂಬುದು ಹಿರಿಯ ಪೊಲೀಸ್ ಅಧಿಕಾರಿಗಳಿಗೂ ಮನದಟ್ಟಾಗಿದೆ. ಕರ್ತವ್ಯಲೋಪ ಆರೋಪದ ಹಿನ್ನೆಲೆಯಲ್ಲಿ ಮಾರಿಹಾಳ ಠಾಣೆ ಇನ್ಸ್‌ಪೆಕ್ಟರ್ ಕಲ್ಯಾಣಶೆಟ್ಟಿ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿ ರೋಹನ್ ಜಗದೀಶ್ ಅವರು ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ಅವರಿಗೆ ವರದಿ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಬಸ್ ಕಂಡಕ್ಟರ್ ಮೇಲಿನ ಹಲ್ಲೆ ಘಟನೆ ಖಂಡಿಸಿ ಕರವೇ ಜಿಲ್ಲಾಧ್ಯಕ್ಷ ದೀಪಕ್ ಗುಡಗನಟ್ಟಿ ನೇತೃತ್ವದಲ್ಲಿ ಮಾರಿಹಾಳ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದರು.

ಬಸ್ ನಿರ್ವಾಹಕ ಮತ್ತು ಚಾಲಕನ ಮೇಲೆ ಹಲ್ಲೆ ನಡೆಸಿದ್ದ ಆರೋಪದ ಮೇಲೆ ಮೂವರನ್ನು ಬೆಳಗಾವಿ ಪೊಲೀಸರು ಬಂಧಿಸಿರುವುದು.

ಮಹಾರಾಷ್ಟ್ರದಲ್ಲಿ ಶಿವಸೇನೆ ಪುಂಡಾಟ

ಬೆಳಗಾವಿಯಲ್ಲಿ ಬಸ್ ಚಾಲಕ ಹಾಗೂ ನಿರ್ವಾಹಕನ ಮೇಲೆ ಹಲ್ಲೆ ಪ್ರಕರಣ ಸದ್ಯ ಮಹಾರಾಷ್ಟ್ರ ಹಾಗೂ ಕರ್ನಾಟಕ ನಡುವಣ ಘರ್ಷಣೆಗೆ ವೇದಿಕೆಯಾಗಿದೆ. ಹಲ್ಲೆ ಖಂಡಿಸಿ ಶನಿವಾರ ಚಿತ್ರದುರ್ಗದಲ್ಲಿ ಕನ್ನಡ ಸಂಘಟನೆ ಸದಸ್ಯರು ಮಹಾರಾಷ್ಟ್ರ ಬಸ್ ಹಾಗೂ ಚಾಲಕನಿಗೆ ಮಸಿ ಬಳಿದು ಆಕ್ರೋಶ ವ್ಯಕ್ತಪಡಿಸಿದರು. ಅತ್ತ, ಕೊಲ್ಹಾಪುರದಲ್ಲಿ ಶಿವಸೇನೆ ಉದ್ಧವ್ ಠಾಕ್ರೆ ಬಣದ ಕಾರ್ಯಕರ್ತರು ಕರ್ನಾಟಕ ರಸ್ತೆ ಸಾರಿಗೆ ಬಸ್ ಗೆ ಕೇಸರಿಧ್ವಜ ಕಟ್ಟಿ ಮಸಿ ಬಳಿದು ಉದ್ಧಟತನ ಮೆರೆದಿದ್ದಾರೆ. ಈ ಸಂದರ್ಭದಲ್ಲಿ ಕರವೇ ಕಾರ್ಯಕರ್ತರ ವಿರುದ್ಧ ಶಿವಸೇನೆ ಪುಂಡರು ಆಕ್ರೋಶ ಹೊರಹಾಕಿದ್ದಾರೆ. ಗಡಿಭಾಗದಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾದ ಹಿನ್ನೆಲೆಯಲ್ಲಿ ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ತೆರಳಬೇಕಿದ್ದ ಸರಕಾರಿ ಬಸ್ ಗಳನ್ನು ನಿಪ್ಪಾಣಿಯಲ್ಲಿ ತಡೆಹಿಡಿಯುವ ಮೂಲಕ ಬೆಳಗಾವಿ ಜಿಲ್ಲಾಡಳಿತ ಮುನ್ನೆಚ್ಚರಿಕೆ ವಹಿಸಿದೆ.

ಮಹಾರಾಷ್ಟ್ರ ಏಕೀಕರಣ ಸಮಿತಿ ಯುವಘಟಕದ ಅಧ್ಯಕ್ಷ ಶುಭಂ ಶೆಳಕೆ ಘಟನೆ ಕುರಿತು ಮಾತನಾಡಿದ್ದಾರೆ. ಹಲ್ಲೆ ಪ್ರಕರಣವನ್ನು ಭಾಷಾ ವಿವಾದಕ್ಕೆ ಎಳೆಯಲಾಗುತ್ತಿದೆ. ಕರ್ನಾಟಕ ಹಾಗೂ ಮಹಾರಾಷ್ಟ್ರ ಮಧ್ಯೆ ಜಗಳ ಹಚ್ಚುವ ಕೆಲಸ ಮಾಡಲಾಗುತ್ತಿದೆ. ಭಾಷೆ ವಿಷಯಕ್ಕೆ ಹಲ್ಲೆ ನಡೆದಿದ್ದರೆ ಪೋಕ್ಸೊ ಪ್ರಕರಣ ಏಕೆ ದಾಖಲಾಗುತ್ತಿತ್ತು. ಸಂಪೂರ್ಣ ಘಟನೆ ಅರಿಯದೆ ಮರಾಠಿ ಭಾಷಿಕರನ್ನು ದೂರುವುದು ಸರಿಯಲ್ಲ ಎಂದು ಹೇಳಿಕೆ ನೀಡಿದ್ದಾರೆ.

ನನ್ನ ಮಗಳ ಸಮಾನಳಾದ ಯುವತಿಗೆ ಲೈಂಗಿಕ ಕಿರುಕುಳ ನೀಡಲು ಹೇಗೆ ಸಾಧ್ಯ. ಭಾಷೆ ವಿಚಾರಕ್ಕೆ ಮನಬಂದಂತೆ ಹಲ್ಲೆ ನಡೆಸಿದ್ದಲ್ಲದೆ ಈ ರೀತಿ ಸುಳ್ಳು ಆರೋಪ ಹೊರಿಸಿ ಪ್ರಕರಣ ದಾಖಲಿಸಿದ್ದು ತುಂಬಾ ನೋವು ತರಿಸಿದೆ. ಆರೋಪಿಗಳ ವಿರುದ್ಧ ಕ್ರಮ ಕೈಗೊಂಡು ನನಗೆ ನ್ಯಾಯ ಒದಗಿಸಬೇಕು ಎಂಬುದಷ್ಟೇ ನನ್ನ ಮನವಿ.

- ಮಹಾದೇವ ಹುಕ್ಕೇರಿ ಹಲ್ಲೆಗೊಳಗಾದ ಕಂಡಕ್ಟರ್

ಕಂಡಕ್ಟರ್ ಮೇಲಿನ ಹಲ್ಲೆ ಘಟನೆಗೆ ಸಂಬಂಧಿಸಿದಂತೆ ಅವರ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿದೆ. ಈ ಕುರಿತು ಪೂರ್ಣ ಮಾಹಿತಿ ಪಡೆದುಕೊಂಡು ಪ್ರಕರಣದ ಸತ್ಯಾಸತ್ಯತೆ ಬಯಲಿಗೆಳೆಯುತ್ತೇವೆ. ಘಟನೆ ನಡೆದ ಸಂದರ್ಭದಲ್ಲಿ ಬಸ್ ನಲ್ಲಿದ್ದ ಪ್ರಯಾಣಿಕರ ಹೇಳಿಕೆ ಪಡೆಯುತ್ತೇವೆ. ಗಡಿಭಾಗದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

- ಯಡಾ ಮಾರ್ಟಿನ್ ಮಾರ್ಬನ್ಯಾಂಗ್
ನಗರ ಪೊಲೀಸ್ ಆಯುಕ್ತರು ಬೆಳಗಾವಿ

ಬೆಳಗಾವಿಯಲ್ಲಿ ಪೊಲೀಸರು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಂಡಿದ್ದಾರೆ. ಪೋಕ್ಸೊ ಕೇಸ್ ಹಾಕಿರುವ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರಿಂದ ಏನಾದರೂ ನ್ಯೂನತೆ ಇದ್ದರೆ ಮೇಲಿನ ಅಧಿಕಾರಿಗಳು ನೋಡುತ್ತಾರೆ. ಪೋಕ್ಸೊ ಕೇಸ್ ಹಾಕಿರುವ ಮಾಹಿತಿ ಅಧಿಕಾರಿಗಳಿಂದ ಪಡೆದು ಪ್ರತಿಕ್ರಿಯೆ ನೀಡುತ್ತೇನೆ.

- ಪರಮೇಶ್ವರ್ ಗೃಹ ಸಚಿವ

ಮಹಾರಾಷ್ಟ್ರ ಬಸ್ ಚಾಲಕನ ಮುಖಕ್ಕೆ ಮಸಿ

ಚಿತ್ರದುರ್ಗ: ಬೆಳಗಾವಿಯಲ್ಲಿ ಕರ್ನಾಟಕ ಸಾರಿಗೆ ಸಂಸ್ಥೆಯ ನಿರ್ವಾಹಕರ ಮೇಲೆ ಹಲ್ಲೆ ಮಾಡಿರುವ ಮಹಾರಾಷ್ಟ್ರ ಏಕೀರಣ ಸಮಿತಿಯ ಪುಂಡರ ಪುಂಡಾಟ ಖಂಡಿಸಿ ಶನಿವಾರ ಕರ್ನಾಟಕ ನವನಿರ್ಮಾಣ ಸೇನೆ ಚಿತ್ರದುರ್ಗ ಜಿಲ್ಲಾ ಘಟಕದ ಪದಾಧಿಕಾರಿಗಳು ರಾಷ್ಟ್ರೀಯ ಹೆದ್ದಾರಿಯ ಐಮಂ ಗಲ್ ಟೋಲ್ ಬಳಿ ಬೆಂಗಳೂರು ಮುಂಬೈ ಮಹಾರಾಷ್ಟ್ರ ಸಾರಿಗೆ ವಾಹನಕ್ಕೆ ಮಸಿ ಬಳಿದು ಪ್ರತಿಭಟಿಸಿದರು. ಮಹಾರಾಷ್ಟ್ರಕ್ಕೆ ಸೇರಿದ ಬಸ್‌ನ ಮೇಲೆ ಕಪ್ಪು ಮಸಿ ಬಳಿದು, ಚಾಲಕನಿಗೆ ಕೂಡ ಮಸಿ ಬಳಿದು ಪ್ರತಿಭಟನೆ ನಡೆಸಿ ಆಕ್ರೋಶ ಹೊರ ಹಾಕಿದ್ದಾರೆ.

ಗವರ್ನರ್ vs ಗವರ್ನಮೆಂಟ್

← ಮೊದಲಪುಟದಿಂದ

'ಮುಡಾಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ, ಇ.ಡಿ, ಏಕವ್ಯಕ್ತಿ ಆಯೋಗದ ತನಿಖೆಗಳು ನಡೆಯುತ್ತಿದ್ದು, ಪ್ರಕರಣಗಳು ಕೋರ್ಟ್‌ನಲ್ಲಿವೆ. ಇಂತಹ ಪರಿಸ್ಥಿತಿಯಲ್ಲಿ ಸಂಸ್ಥೆಗೆ ಹೊಸ ಸ್ವರೂಪ ಕೊಡಲು ಸರಿಯೇ?,' ಎಂದು ರಾಜ್ಯಪಾಲರು ಪ್ರಶ್ನಿಸಿದ್ದಾರೆ. 'ಎಲ್ಲ ತನಿಖೆಗಳು ಮುಕ್ತಾಯವಾದ ಬಳಿಕ ಈ ಪ್ರಾಧಿಕಾರ ರಚನೆ ಸೂಕ್ತವಲ್ಲವೇ? ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾಯಿದೆಯನ್ನು ಕಳೆದ ಮಾರ್ಚ್‌ನಲ್ಲೇ ರೂಪಿಸಲಾಗಿದ್ದು, ಮೈಸೂರು ನಗರ ವ್ಯಾಪ್ತಿಯಲ್ಲೆ ಈ ಕ್ಷೇತ್ರ ಬರುವುದರಿಂದ ಮುಡಾ ವಿಧೇಯಕ 2024 ಅದರ ವ್ಯಾಪ್ತಿಗೆ ಬರುವುದಿಲ್ಲವೇ ಎಂಬ ಪ್ರಶ್ನೆಗೂ ಸಮಜಾಯಿಷಿ ನೀಡಬೇಕು ಎಂದು ಪತ್ರದಲ್ಲಿ ಬಯಸಿದ್ದಾರೆ.

ರಾಜ್ಯಪಾಲರ ಅಧಿಕಾರಕ್ಕೆ ಕತ್ತರಿ: ಸಾಮಾನ್ಯವಾಗಿ ಪ್ರತಿಯೊಂದು ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೆ ರಾಜ್ಯಪಾಲರೇ ಕುಲಾಧಿಪತಿಗಳಾಗಿ ಕಾರ್ಯನಿರ್ವಹಿಸುತ್ತಿತ್ತಾರೆ. ಉಪಕುಲಪತಿಗಳ ನೇಮಕಾತಿ, ಸಿಂಡಿಕೇಟ್ ಸದಸ್ಯರ ನೇಮಕಾತಿ, ವಿವಿಗಳಲ್ಲಿ ಕಾಮಗಾರಿ ನಿರ್ವಹಣೆ ಸೇರಿದಂತೆ ಕೆಲವು ಆಡಳಿತಾತ್ಮಕ ನಿರ್ಧಾರಗಳನ್ನು ರಾಜ್ಯಪಾಲರೇ ನಿರ್ವಹಿಸುತ್ತಾರೆ. ಆದರೆ ತಿದ್ದುಪಡಿ ಮಸೂದೆ ಪ್ರಕಾರ, ರಾಜ್ಯಪಾಲರು ವಿಶ್ವವಿದ್ಯಾಲಯಗಳ ಘಟಿಕೋತ್ಸವದ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಿಗೆ ಭಾಗವಹಿಸುವುದು ಮಾತ್ರ ಆಗಲಿದೆ. ಇದರಿಂದ ಕೆಂಡಾಮಂಡಲವಾಗಿರುವ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರು ಸರಕಾರ ಕಳುಹಿಸಿದ್ದ ಮೂರು ಮಸೂದೆಗಳನ್ನು ಹಿಂತಿರುಗಿಸಿದ್ದಾರೆ.

ರಾಜ್ಯದಲ್ಲಿ ಮಾದರಿ ನಿದರ್ಶನಗಳು

ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ರಾಜ್ಯಪಾಲರು ಇತರರಿಗೆ ಮಾದರಿಯಾಗುವಂತಹ ಆಡಳಿತ ನಡೆಸಿರುವ ನಿದರ್ಶನಗಳು ಸಾಕಷ್ಟಿವೆ. ರಾಜ್ಯದಲ್ಲಿ ಬಿ.ಎಸ್.ಯಡಿಯೂರಪ್ಪ ಸಿಎಂ ಆಗಿದ್ದ ವೇಳೆ ಹಂಸರಾಜ್ ಭಾರದ್ವಾಜ್ ನಡವಳಿಕೆ ಬಗ್ಗೆ ಸಾರ್ವಜನಿಕ ವಲಯದಲ್ಲೂ ಟೀಕೆ ವ್ಯಕ್ತವಾಗಿತ್ತು. ವಾಜುಭಾಯಿ ವಾಲಾ, ಕೆ.ರೋಸಯ್ಯ, ರಾಮೇಶ್ವರ್ ಠಾಕೂರ್, ಟಿ.ಎನ್.ಚತುರ್ವೇದಿ, ರಮಾದೇವಿ, ಖುರ್ಷಿದ್ ಆಲಂಖಾನ್ ಸೇರಿದಂತೆ ಅನೇಕರು ವಿವಾದವಿಲ್ಲದೆ ತಮ್ಮ ಅವಧಿ ಮುಗಿಸಿದ್ದರು.

ಕೊಲೆಗೈದು ಕುಂಭಮೇಳದಲ್ಲಿ ಪಾಪ ಪರಿಹಾರಕ್ಕೆ ಸ್ನಾನ

ಕಲಬುರಗಿ: ಕೊಲೆ ಮಾಡಿದ ಆರೋಪಿಯೊಬ್ಬ ತನ್ನ ಪಾಪ ಪರಿಹಾರ ಮಾಡಿಕೊಳ್ಳಲು ಕುಂಭಮೇಳದಲ್ಲಿ ಪುಣ್ಯ ಸ್ನಾನ ಮಾಡಿದ್ದಾನೆ ಎನ್ನುವ ಮಾಹಿತಿಯೊಂದು ಬೆಳಕಿಗೆ ಬಂದಿದೆ. ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಖಜೂರಿ ಗ್ರಾಮದ ರಾಹುಲ್ ಎಂಬ ಯುವಕನನ್ನು ಕೊಲೆ ಮಾಡಿದ ಆರೋಪಿಯಾಗಿರುವ ಪೃಥ್ವಿರಾಜ್ ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಕುಂಭಮೇಳ ದಲ್ಲಿ ಸ್ನಾನ ಮಾಡಿ ಅಲ್ಲಿಂದ ಬೇರೆಡೆಗೆ ಪರಾರಿಯಾಗಿದ್ದಾನೆ ಮಾಹಿತಿ ತಿಳಿದುಬಂದಿದೆ. ಜಿಲ್ಲೆಯ ಆಳಂದ ತಾಲೂಕಿನ ಖಜೂರಿ ಗ್ರಾಮದ ರಾಹುಲ್ ಎಂಬ ಯುವಕ ಕಳೆದ ಜ.30 ರಂದು ತನ್ನ ಮನೆಯಿಂದ ರಾತ್ರಿ 8-30ಕ್ಕೆ ಹೊರ ಹೋಗಿದ್ದ, ಮನೆಯಿಂದ ಕಾಣೆಯಾಗಿದ್ದ ರಾಹುಲ್, ಮಹಾರಾಷ್ಟ್ರದ ಸಾಂಗ್ಲಿಯ ಬೆಣ್ಣೆತೋರಾದಲ್ಲಿ ಶವವಾಗಿ ಪತ್ತೆಯಾಗಿದನು. ಖಜೂರಿ ಗ್ರಾಮದಲ್ಲಿಯೇ ರಾಹುಲ್ ನನ್ನು ಕೊಲೆ ಮಾಡಿ ಬಳಿಕ ಕಲ್ಲು ಕಟ್ಟಿ ಶವ ಮೇಲೆ ಬರದಂತೆ ಹಂತಕರು ನದಿಗೆ ಮೃತದೇಹ ಬಿಸಾಡಿದ್ದರು. ಕೊಲೆಗೈದ ಐವರ ಆರೋಪಿಗಳ ಪೈಕಿ ಈಗಾಗಲೇ, ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಕೊಲೆಯ ಮುಖ್ಯ ಆರೋಪಿ ಪ್ರಥ್ವಿರಾಜ್ ಪರಾರಿಯಾಗಿದ್ದು, ಆತನಿಗಾಗಿ ಪೊಲೀಸರು ತೀವ್ರ ಶೋಧ ನಡೆಸಿದ್ದಾರೆ.

ಚಾಮುಂಡಿ ಬೆಟ್ಟದ ಬೆಂಕಿ ನಂದಿಸಿದ ಅರಣ್ಯ ಸಿಬ್ಬಂದಿ

ಕಿಡಿಗೇಡಿಗಳ ಬಂಧನಕ್ಕೆ ಆಗ್ರಹಿಸಿ ಕರ್ನಾಟಕ ಸೇನಾ ಪಡೆ ಪ್ರತಿಭಟನೆ

ಮೈಸೂರು: ಚಾಮುಂಡಿ ಬೆಟ್ಟದಲ್ಲಿ ಕಿಡಿಗೇಡಿಗಳ ಕೃತ್ಯದಿಂದ ಹೊತ್ತಿಕೊಂಡಿದ್ದ ಬೆಂಕಿ ನಂದಿಸುವಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಯಶಸ್ಸು ಕಂಡಿದ್ದಾರೆ.

ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಅಗ್ನಿಶಾಮಕ ಸಿಬ್ಬಂದಿಗಳಿಂದ ಇಡೀ ರಾತ್ರಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಮಾತ್ರವಲ್ಲ, ಬೆಳಗಿನ ಜಾವ ಹೆಚ್ಚಿನ ಪ್ರಮಾಣದ ಇಬ್ಬನಿ ಸುರಿದ ಪರಿಣಾಮ ತಹಬದಿಗೆ ಬಂದಿತು. ಚಾಮುಂಡಿಬೆಟ್ಟದ ಬೆಂಕಿ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಸ್ಥಳದಲ್ಲೇ ಎರಡು ಅಗ್ನಿಶಾಮಕ ದಳದ ಸಿಬ್ಬಂದಿಯನ್ನು ಕೆಲಸಕ್ಕೆ ನಿಯೋಜನೆ ಮಾಡಲಾಗಿದೆ.

ಡಿಸಿಎಫ್ ಸ್ಪಷ್ಟನೆ: ಘಟನೆ ಕುರಿತು ಸ್ಪಷ್ಟನೆ ನೀಡಿರುವ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಸವರಾಜು, ಶುಕ್ರವಾರ ಮಧ್ಯಾಹ್ನ 12:30ರ ಸುಮಾರಿಗೆ ಚಾಮುಂಡಿಬೆಟ್ಟದ ಎರಡು ಕಡೆ ಏಕಕಾಲಕ್ಕೆ ಬೆಂಕಿ ಕಾಣಿಸಿಕೊಂಡಿತು. ಆ ವೇಳೆ ಗಾಳಿಯ ವೇಗ ಹೆಚ್ಚಾಗಿದ್ದರಿಂದ ಬೆಂಕಿ ವೇಗವಾಗಿ ಹಬ್ಬಿತು. ಬೆಂಕಿ ಬಿದ್ದ ಸ್ಥಳಕ್ಕೆ ಅರಣ್ಯ ಇಲಾಖೆ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿಗಳು ತಲುಪುವುದು ಕಷ್ಟಕರವಾಗಿತ್ತು. ಇದರ ನಡುವೆಯೂ ಸತತ ಕಾರ್ಯಾಚರಣೆ ನಡೆಸಿ ಕಳೆದ ರಾತ್ರಿ 1:30ರ ಸುಮಾರಿಗೆ ಬೆಂಕಿಯನ್ನು ಸಂಪೂರ್ಣವಾಗಿ ನಂದಿಸಲಾಗಿದೆ ಎಂದರು.

ಪ್ರತಿಭಟನೆ: ಮೈಸೂರಿನ ಚಾಮುಂಡಿಬೆಟ್ಟಕ್ಕೆ ಬೆಂಕಿ ಹಚ್ಚಿದ ಕಿಡಿಗೇಡಿಗಳನ್ನು ಬಂಧಿಸುವಂತೆ ಆಗ್ರಹಿಸಿ ಕರ್ನಾಟಕ ಸೇನಾ ಪಡೆ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಯಿತು. ಬೆಂಕಿ ಹಚ್ಚಿರುವ ಕಿಡಿಗೇಡಿಗಳನ್ನು ಶೀಘ್ರ ಬಂಧಿಸುವಂತೆ ಆಗ್ರಹಿಸಿದ ಪ್ರತಿಭಟನಾಕಾರರು ಕಾಡು ಉಳಿಸಿ, ನಾಡು ಬೆಳೆಸಿ ಎಂದು ಘೋಷಣೆ ಕೂಗಿ ಚಾಮುಂಡಿಬೆಟ್ಟದ ರಕ್ಷಣೆಗೆ ಸೂಕ್ತ ಕ್ರಮಕೈಗೊಳ್ಳುವಂತೆ ಒತ್ತಾಯಿಸಿದರು.

ಕಿಡಿಗೇಡಿಗಳ ಪತ್ತೆಗೆ ಟವರ್ ಲೋಕೆಷನ್ ಮಾಹಿತಿ ಸಂಗ್ರಹಿಸುತ್ತಿದ್ದೇವೆ. ದನ ಮೇಯಿಸುವವರ ಮೇಲೆ ಕೆಲವು ಅನುಮಾನಗಳಿವೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ.

- ಬಸವರಾಜು ಡಿಸಿಎಫ್

ಅರಣ್ಯ ಇಲಾಖೆ ಸಿಬ್ಬಂದಿ, ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸುತ್ತಿರುವುದು.

ಚಿರತೆ ಕುಟುಂಬ ಪಾರು

ಚಾಮುಂಡಿ ಬೆಟ್ಟಕ್ಕೆ ಬೆಂಕಿ ಬಿದ್ದ ವೇಳೆ ಚಿರತೆ ಕುಟುಂಬವೊಂದು ಪ್ರಾಣಾಪಾಯದಿಂದ ಪಾರಾಗಿದೆ. ಬೆಂಕಿಯ ಕೆನ್ನಾಲಿಗೆಯಿಂದ ಪಾರಾದ ಎರಡು ಚಿರತೆ ಹಾಗೂ ಎರಡು ಮರಿಗಳು ಅರಣ್ಯ ಇಲಾಖೆ ಅಧಿಕಾರಿಗಳ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಬೆಂಕಿ ಬಿದ್ದ ಸ್ಥಳದಿಂದ ಮತ್ತೊಂದು ಸುರಕ್ಷಿತ ಸ್ಥಳಕ್ಕೆ ಚಿರತೆ ಹಾಗೂ ಮರಿಗಳು ತೆರಳಿವೆ ಎಂದು ಮೈಸೂರು ವಲಯದ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಸವರಾಜು ಮಾಹಿತಿ ನೀಡಿದರು.

ದನಗಾಹಿಗಳ ಮೇಲೆ ಶಂಕೆ

ದನಗಾಹಿಗಳು ಬೆಂಕಿ ಹಚ್ಚಿರುವ ಶಂಕೆ ವ್ಯಕ್ತವಾಗಿದೆ. ಹಾಗಾಗಿ ಪ್ರತಿನಿತ್ಯ ಈ ಭಾಗದಲ್ಲಿ ಜಾನುವಾರುಗಳನ್ನು ಮೇಯಿಸಲು ಬರುತ್ತಿದ್ದವರನ್ನು ಪತ್ತೆ ಹಚ್ಚುವ ಕೆಲಸ ನಡೆಯುತ್ತಿದೆ. ಆ ಭಾಗದಲ್ಲಿ ಹೆಚ್ಚು ಸಂಚರಿಸುತ್ತಿದ್ದವರ ಬಗ್ಗೆಯೂ ಮಾಹಿತಿ ಕಲೆ ಹಾಕಲಾಗುತ್ತಿದೆ. ಯಾರೋ ಕಿಡಿಗೇಡಿಗಳು ಬೆಟ್ಟದ ಒಣಹುಲ್ಲಿಗೆ ಬೆಂಕಿ ಇಟ್ಟಿರುವ ಪರಿಣಾಮ ಬೆಂಕಿ ಆವರಿಸಿಕೊಂಡಿದೆ.

ಕರ್ನಾಟಕ ಸರಕಾರ

(ಲೋಕೋಪಯೋಗಿ, ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ

ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ ಜಿಲ್ಲೆಃ ಕಲಬುರಗಿ.

ಸಂ:ಕಾನಿಇಂ/ಲೋಇ./ಸೇವಿ/ತಾಶಾ-1/2024-25/2988 ದಿನಾಂಕ : 20-02-2025

:: ಅಲ್ಪಾವಧಿ ಇ-ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::

1) ಕಾಮಗಾರಿಯ ವಿವರ: 1. ಚಿಂಚೋಳಿ ತಾಲೂಕಿನ 02 ರಸ್ತೆ ಕಾಮಗಾರಿಗಳ ಇಂಡೆಂಟ್ ಸಂ.: **19667, 19685** 2. ಸೇಡಂ ತಾಲೂಕಿನ 06 ರಸ್ತೆ ಕಾಮಗಾರಿಗಳ ಇಂಡೆಂಟ್ ಸಂ, : **19702** (ಪ್ರ-2.ಎ), **19699, 19755, 19675** (ಎಸ್.ಟಿ), **18827** (ಪ್ರ-1), **19367,** 3. ಚಿತ್ತಾಪೂರ ತಾಲೂಕಿನ 05 ರಸ್ತೆ ಕಾಮಗಾರಿ ಇಂಡೆಂಟ್ ಸಂ : **19124** (ಎಸ್.ಸಿ), **19224, 19225, 19273, 19272,** 2) ಲೆಕ್ಕ ಶೀರ್ಷಿಕೆ: **2024-25ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಕಾಮಗಾರಿಗಳು,** 3) ಟೆಂಡರಿಗಿಟ್ಟ ಮೊತ್ತ: **ಕನಿಷ್ಠ ರೂ. 50.00 ಲಕ್ಷಗಳು, ಗರಿಷ್ಠ ರೂ. 200.00 ಲಕ್ಷಗಳು,** 4) ಗುತ್ತಿಗೆದಾರರ ಅರ್ಹತೆ: 1ನೇ ದರ್ಜೆ & ಮೇಲ್ಪಟ್ಟು, 5) ಪೂರ್ವಭಾವಿ ಸಭೆ ದಿನಾಂಕ : **06-03-2025 ಬೆಳಿಗ್ಗೆ 11:30 ಗಂಟೆವರೆಗೆ,** 6) ಟೆಂಡರ್ ಸ್ಪಷ್ಟೀಕರಣ ಪಡೆಯುವ ದಿನಾಂಕ: **12-03-2025 ಸಾಯಂಕಾಲ 17:30 ಗಂಟೆಯವರೆಗೆ** 7) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ-ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 8) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **15-03-2025 ರ ಸಾಯಂಕಾಲ 16:00 ಗಂಟೆಯವರೆಗೆ.** 9) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **17-03-2025 ರ ಸಾಯಂಕಾಲ 16:30 ಗಂಟೆಯವರೆಗೆ.** 10) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **19-03-2025 ರ ಸಾಯಂಕಾಲ 16:30 ಗಂಟೆಯವರೆಗೆ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in, 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ: ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.kppp.karnataka.gov.in ಮಾಡಲಾಗುವುದು.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಪ್ರಕ್ರಿಯೆಯ ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರ್
ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ

ವಾ.ಸಾ.ಸಂ.ಇ/ಕಲಬುರಗಿ/992/ಕೆ.ಎಸ್.ಎಂ.ಸಿ.&ಎ/2024-25

ರನ್ನ ಉತ್ಸವಕ್ಕೆ ಸಂಭ್ರಮದ ಚಾಲನೆ

ರನ್ನ ಬೆಳಗಲಿಯಲ್ಲಿ ಮೆರವಣಿಗೆ ಉದ್ಘಾಟಿಸಿದ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ

ಬಾಗಲಕೋಟೆ: ರನ್ನ ವೈಭವದ ಜಾನಪದ ವಾಹಿನಿಯ ಕಲಾತಂಡಗಳ ಅದ್ದೂರಿ ಮೆರವಣಿಗೆಗೆ ರನ್ನ ಬೆಳಗಲಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಚಾಲನೆ ನೀಡಿದರು.

ರನ್ನಬೆಳಗಲಿಯ ಲಕ್ಷ್ಮೀ ದೇವಸ್ಥಾನದಿಂದ ಕವಿ ಚಕ್ರವರ್ತಿ ರನ್ನವೇದಿಕೆ ವರೆಗೆ ಹೊರಟ ಜಾನಪದ ತಂಡಗಳ ಮೆರವಣಿಗೆ ಅದ್ದೂರಿ ಚಾಲನೆ ದೊರೆಯಿತು.

ಮೆರವಣಿಗೆಯಲ್ಲಿ ಜನಪದ ಕೋಲಾಟ, ಡೊಳ್ಳಿನವಾದ್ಯ, ಶಹನಾಯಿ, ಸಂಬಾಳ, ಝಾಂಜ್ ಮೇಳ, ಪುರವಂತಿಕೆ, ವೀರಗಾಸೆ, ಪೂಜಾ ಕುಣಿತ, ಹಲಗೆ ವಾದ್ಯ, ಕರಡಿ ಮಜಲು, ಕಣಿವಾದನ, ಸಂಬಾಳ ವಾದನ, ಸುತ್ತಿಗೆ ಕುಣಿತ, ತಾಸೆ ವಾದನ ಸೇರಿದಂತೆ 30 ವಿವಿಧ ಕಲಾತಂಡದವರು ಪಾಲ್ಗೊಂಡಿದ್ದರು.

ಬಾಗಲಕೋಟೆಯ ರನ್ನ ಬೆಳಗಲಿಯಲ್ಲಿ ರನ್ನ ಉತ್ಸವಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಉದ್ಘಾಟಿಸಿದರು.

ರನ್ನ ಉತ್ಸವದಲ್ಲಿ ಜಾನಪದ ಕಲಾತಂಡಗಳು ಭಾಗಿ.

ಸಾವಿರಕ್ಕೂ ಹೆಚ್ಚು ಮಹಿಳೆಯರು ಇಳಕಲ್ ಸೀರೆಯಲ್ಲಿ ಪೂರ್ಣಕುಂಭ ಹೊತ್ತು ಭಾಗಿಯಾಗಿದ್ದು ಮೆರವಣಿಗೆಗೆ ಇನ್ನಷ್ಟು ಕಳೆ ತಂದಿತು. ರನ್ನ ಬೆಳಗಲಿ, ಸುತ್ತಮುತ್ತಲಿನ ಗ್ರಾಮಸ್ಥರು ರನ್ನನ ಉತ್ಸವದ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು.

ಮುಧೋಳದಲ್ಲಿಂದು ರನ್ನ ವೈಭವ: ಮುಧೋಳದಲ್ಲಿ ಎರಡನೇ ದಿನದ ರನ್ನ ಉತ್ಸವಕ್ಕೆ ಫೆ.23ರಂದು ಬೆಳಗ್ಗೆ 10 ಗಂಟೆಗೆ ಜನಪದ ವಾಹಿನಿ ಕಲಾ ತಂಡಗಳ ಮೆರವಣಿಗೆಗೆ ಸಚಿವ ಆರ್.ಬಿ.ತಿಮ್ಮಾಪುರ ಚಾಲನೆ ನೀಡಲಿದ್ದಾರೆ. ನಂತರದ ಮುಧೋಳದ ರನ್ನ ಭವನದ ಅಜಿತಸೇನಾಚಾರ್ಯರ ವೇದಿಕೆಯಲ್ಲಿ ಅಜಿತನಾಥ ಪುರಾಣದ ಚಾರಿತ್ರಿಕ ಅಂಶಗಳು, ರನ್ನ ರಸಾಯಣ ಕುರಿತು ವಿಚಾರಗೋಷ್ಠಿಗಳು ನಡೆಯಲಿವೆ. ಅಂಬೇಡ್ಕರ ಭವನದ ಕೆ.ಪಿ.ನಾಡಗೌಡರ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಮಧ್ಯಾಹ್ನ ಜರುಗಲಿವೆ. ಸಂಜೆ 4 ಗಂಟೆಗೆ ರನ್ನ ಕ್ರೀಡಾಂಗಣದ ಚಾವುಂಡರಾಯ ಮುಖ್ಯ ವೇದಿಕೆಯಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿಯವರಉಪಸ್ಥಿತಿ, ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಅಧ್ಯಕ್ಷತೆಯಲ್ಲಿ ಸಾಧಕರಿಗೆ ಸನ್ಮಾನ ನಡೆಯಲಿದೆ.

ರನ್ನ ಉತ್ಸವದ ಅಂಗವಾಗಿ ನಡೆದ ಮೆರವಣಿಗೆಯಲ್ಲಿ ಪೂರ್ಣಕುಂಭ ಹೊತ್ತ ಮಹಿಳೆಯರು ಪಾಲ್ಗೊಂಡಿದ್ದರು.

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ಡಿಕೆಶಿ ಅವರ ಹೇಳಿಕೆಗಳಿಂದ ಜನರು ರೊಚ್ಚಿಗೆದ್ದಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಹಿಮಾಲಯದ ಶಿಖರದಂತೆ ನಗರದ ಅಭಿವೃದ್ಧಿಯನ್ನು ಬ್ರ್ಯಾಂಡ್ ಮಾಡುತ್ತೇವೆ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದರು. ಈಗ ಅವರೇ ಬೆಂಗಳೂರನ್ನು ಉದ್ಧಾರ ಮಾಡಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಇದರ ವಿರುದ್ಧ ಹೋರಾಟ ರೂಪಿಸಲು ಸಭೆ ನಡೆಸಲಾಗಿದೆ.

ಕೃಷ್ಣ, ಬೆಂಗಳೂರು

ಬ್ರ್ಯಾಂಡ್ ಬೆಂಗಳೂರು ಈಗ ಶೇ.60 ಬೆಂಗಳೂರು ಆಗಿರಬಹುದೇ..?

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ದಾವಣಗೆರೆ**

ಸಮಸ್ಯೆಯೇನು..?

- ದಾವಣಗೆರೆ ಮಹಾನಗರ ಪಾಲಿಕೆ ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್‌ನಲ್ಲಿರುವ ಉದ್ಯಾನವದಲ್ಲಿ ಮೂಲಸೌಲಭ್ಯ ಕೊರತೆ.
- **ಪರಿಹಾರ:** ದಾವಣಗೆರೆ ಮಹಾನಗರ ಪಾಲಿಕೆ ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್‌ನಲ್ಲಿರುವ ಉದ್ಯಾನವನಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಚರಂಡಿ ಸ್ವಚ್ಛತೆಗೊಳಿಸಲಾಗಿದ್ದು, ವಿದ್ಯುದ್ದೀಪಗಳ ದುರಸ್ತಿಗೆ ಕ್ರಮವಹಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಹೃದಯಾಘಾತಕ್ಕೆ ಇಬ್ಬರ ಬಲಿ

ತುಮಕೂರು/ಕಲಬುರಗಿ: 10ನೇ ತರಗತಿ ವಿದ್ಯಾರ್ಥಿಯೊಬ್ಬ ಹೃದಯಾಘಾತಕ್ಕೆ ಬಲಿಯಾದ ಘಟನೆ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನ ಭೈರಾಪುರ ಗ್ರಾಮದಲ್ಲಿ ನಡೆದಿದೆ. ರಾಹುಲ್ (16) ಮೃತ ವಿದ್ಯಾರ್ಥಿ. ಭೈರಾಪುರದ ಜಯರಾಂರ ಪುತ್ರ ರಾಹುಲ್ ಚಿಕ್ಕನಾಯಕನಹಳ್ಳಿಯ ಜಿಎಚ್‌ಎಸ್‌ಲ್ಲಿ ಹತ್ತನೇ ತರಗತಿ ಓದುತ್ತಿದ್ದ. ಶುಕ್ರವಾರ ಶಾಲೆಗೆ ಹೋಗಿ ಮನೆಗೆ ವಾಪಸಾಗಿದ್ದ ರಾಹುಲ್‌ಗೆ ರಾತ್ರಿ 9:30ರ ವೇಳೆಗೆ ಎದೆನೋವು ಕಾಣಿಸಿಕೊಂಡಿದೆ. ಕೂಡಲೇ ಆತನನ್ನು ಹುಳಿಯಾರಿನ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ. ಆದರೆ ಚಿಕಿತ್ಸೆ ಫಲಕಾರಿ ಯಾಗದೆ ಆಸ್ಪತ್ರೆಯಲ್ಲೇ ರಾಹುಲ್ ಕೊನೆಯುಸಿ ರೆಳೆದಿದ್ದಾನೆ. ಮಗನನ್ನು ಕಳೆದುಕೊಂಡ ಪೋಷಕರ ಆಕ್ರಂದನ ಮುಗಿಲುಮುಟ್ಟಿದೆ. ಹುಳಿಯಾರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅದೇ ರೀತಿ ಎಂಜಿನಿಯರಿಂಗ್ ವಿದ್ಯಾರ್ಥಿಯೊಬ್ಬ ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ಕಲಬುರಗಿ ನಗರದಲ್ಲಿ ಶನಿವಾರ ನಡದಿದೆ. ನಗರದ ಪಿಡಿಎ ಎಂಜಿನಿಯರಿಂಗ್ ಕಾಲೇಜಿನಲ್ಲಿ 4ನೇ ಸೆಮಿಸ್ಟರ್ ಓದುತ್ತಿದ್ದ ಕಲಬುರಗಿಯ ಗಂಗಾನಗರ ನಿವಾಸಿ ರವಿಕುಮಾರ್ (19) ಮೃತ ದುರ್ದೈವ ವಿದ್ಯಾರ್ಥಿಯಾಗಿದ್ದಾನೆ. ಶನಿವಾರ ಬೆಳಗ್ಗೆ ಮನೆಯಲ್ಲಿಯೇ ಹೃದಯಾಘಾತದಿಂದ ಕುಸಿದು ಬಿದ್ದು ರವಿಕುಮಾರ್ ಸಾವನ್ನಪ್ಪಿದ್ದಾನೆ ಎಂದು ತಿಳಿದು ಬಂದಿದೆ.

ರಾಜ್ಯಾಧ್ಯಕ್ಷರ ವಿಚಾರ ಅಪ್ರಸ್ತುತ

ತುಮಕೂರು: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರೇ ಜೆಡಿಎಸ್ ರಾಜ್ಯಾಧ್ಯಕ್ಷರಾಗಿ ಮುಂದುವರಿಯಲಿದ್ದಾರೆ. ಸದ್ಯಕ್ಕೆ ಜೆಡಿಎಸ್ ನೂತನ ರಾಜ್ಯಾಧ್ಯಕ್ಷರ ವಿಚಾರ ಅಪ್ರಸ್ತುತ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಸರಕಾರದಲ್ಲಿ ಸಿಎಂ, ಡಿಸಿಎಂ ಸಚಿವರ ನಡುವೆ ಸಮನ್ವಯ ಇಲ್ಲ. ಅವರ ಒಳಜಗಳದಿಂದಲೇ ಚುನಾವಣೆ ಮುಂದೂಡುತ್ತಿರ ಬಹುದು. ಮೇ ತಿಂಗಳೊಳಗೆ ಬಿಬಿಎಂಪಿ, ಜಿಪಂ, ತಾಪಂ ಚುನಾವಣೆ ಆಗಬೇಕು ಎಂದು ನ್ಯಾಯಾಲಯ ಹೇಳಿದೆ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಸರಕಾರಕ್ಕೆ ಜನ ಉತ್ತರ ಕೊಡುತ್ತಾರೆ ಎಂದರು. ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವರಾದ ಮೇಲೆ ಕೆಲಸ ಮಾಡುತ್ತಿಲ್ಲ ಅನ್ನೋದಿದೆ. ವಯಸ್ಸಿಗೆ ಮೀರಿ ಕೆಲಸ ಮಾಡುತ್ತಿದ್ದಾರೆ. ಜೆಡಿಎಸ್ ರಾಜ್ಯಾಧ್ಯಕ್ಷರ ವಿಚಾರ ಸದ್ಯಕ್ಕೆ ಅಪಪ್ರಸ್ತುತ. ಸದ್ಯಕ್ಕೆ ಜೆಡಿಎಸ್ ಅಧ್ಯಕ್ಷರಾಗಿ ಎಚ್.ಡಿ.ಕುಮಾರಸ್ವಾಮಿ ಅವರೇ ಮುಂದುವರಿಯುತ್ತಾರೆ ಎಂದರು. ಜೆಡಿಎಸ್ ಕಾರ್ಯಕರ್ತರ ಪಕ್ಷವಾಗಿದೆ. ಜೆಡಿಎಸ್ ಪಕ್ಷವನ್ನು ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ. ಒಂದಿಬ್ಬರು ಪಕ್ಷ ತೊರೆದ ತಕ್ಷಣ ಯಾವುದೇ ನಷ್ಟವಿಲ್ಲ. ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಸದೃಢವಾಗಿ ಪಕ್ಷವನ್ನು ಸಂಘಟಿಸಲಾಗುವುದು ಎಂದರು.

ವಿರಾಮ
ಪ್ರತಿ ಭಾನುವಾರ

ಕರ್ನಾಟಕ ಇಂಟರ್‌ನ್ಯಾಷನಲ್ ಎಕ್ಸ್‌ಪೋ-ಕೈಟ್ ಸಮಾವೇಶದ ಮೂಲಕ ಪ್ರವಾಸೋದ್ಯಮಕ್ಕೆ ಒತ್ತು

ಕರ್ನಾಟಕದ ಇತಿಹಾಸ, ಸಂಸ್ಕೃತಿ ವಿಶ್ವಕ್ಕೆ ಪಸರಿಸಲು ಕ್ರಮ

ಕರ್ನಾಟಕ ಕೇವಲ ಐಷಾರಾಮಿ ಪ್ರವಾಸಕ್ಕೆ ಸೀಮಿತವಾಗಿರದೆ, ಕರ್ನಾಟಕದ ಇತಿಹಾಸ, ಸಂಸ್ಕೃತಿ, ಜ್ಞಾನವನ್ನು ವಿಶ್ವಕ್ಕೆ ಪಸರಿಸುವ ನಿಟ್ಟಿನಲ್ಲಿ ನಮ್ಮ ಸರಕಾರ ಕಾರ್ಯನಿರ್ವಹಿಸಲಿದೆ. ಈ ನಿಟ್ಟಿನಲ್ಲಿ ನಮ್ಮ ಸರಕಾರ ಕೈಟ್ ಸಮಾವೇಶದ ಮೂಲಕ ವಿಶ್ವಕ್ಕೆ ಕರ್ನಾಟಕದ ಹಿರಿಮೆಯನ್ನು ತಿಳಿಸುವ ಕೆಲಸವನ್ನು ಮಾಡಲಿದೆ ಎಂದು ಪ್ರವಾಸೋದ್ಯಮ, ಕಾನೂನು ಮತ್ತು ಸಂಸ್ಕೃತಿ ಸಚಿವ ಎಚ್.ಕೆ. ಪಾಟೀಲ್ ಹೇಳಿದ್ದಾರೆ. ಕರ್ನಾಟಕ ಇಂಟರ್‌ನ್ಯಾಷನಲ್ ಎಕ್ಸ್‌ಪೋ 2025 ಸಮಾವೇಶದ ಹಿನ್ನೆಲೆಯಲ್ಲಿ 'ವಿಶ್ವವಾಣಿ'ಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಕೈಟ್ ಎಕ್ಸ್‌ಪೋ ಸೇರಿದಂತೆ ಕರ್ನಾಟಕದಲ್ಲಿರುವ ಪ್ರವಾಸೋದ್ಯಮಕ್ಕೆ ಒತ್ತು, ಮೂಲಸೌಕರ್ಯ ವೃದ್ಧಿಗೆ ಕ್ರಮ, ಅಂತಾರಾಷ್ಟ್ರೀಯ ಪ್ರವಾಸಿಗರನ್ನು ರಾಜ್ಯದತ್ತ ಸೆಳೆಯಲು ಸರಕಾರ ಕೈಗೊಂಡ ಕ್ರಮ ಸೇರಿದಂತೆ ಹಲವು ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ಸಂದರ್ಶನದ ಪೂರ್ಣಪಾಠ ಇಲ್ಲಿದೆ.

ವಿಶ್ವವಾಣಿ ಸಂದರ್ಶನ
ರಂಜಿತ್ ಎಚ್. ಅಶ್ವತ್ಥ

- **ಎರಡನೇ ಕೈಟ್ ಎಕ್ಸ್‌ಪೋದ ವಿಶೇಷ ಏನು?**

ಫೆ. 26ರಿಂದ 28ರವರೆಗೆ ನಡೆಯಲಿರುವ ಕೈಟ್ ಎಕ್ಸ್‌ಪೋದಲ್ಲಿ ಭಾಗವಹಿಸಲು 350ಕ್ಕೂ ಹೆಚ್ಚು ಪ್ರವಾಸೋದ್ಯಮ ಕ್ಷೇತ್ರದ ಪ್ರಮುಖ ಉದ್ಯಮಿಗಳು ಬರುತ್ತಿದ್ದಾರೆ. ಇದರೊಂದಿಗೆ ನೂರಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಉದ್ಯಮಿಗಳು ಪಾಲ್ಗೊಳ್ಳುತ್ತಿದ್ದಾರೆ. ಸಮಾವೇಶದಲ್ಲಿ ಭಾಗವಹಿಸುತ್ತಿರುವವರ ಮೂಲಕ ಕರ್ನಾಟಕಕ್ಕೆ ಪ್ರವಾಸಿಗರನ್ನು ಆಕರ್ಷಿಸುವ ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ರಾಜ್ಯದಲ್ಲಿರುವ ಅನೇಕ 'ಅನ್ ಎಕ್ಸ್‌ಪ್ಲೋರ್ಡ್' ಸ್ಥಳಗಳನ್ನು ವಿಶ್ವದ ಮುಂದೆ ಪರಿಚಯಿಸುವ ನಿಟ್ಟಿನಲ್ಲಿ ಈ ಸಮಾವೇಶ ಕೆಲಸ ಮಾಡಲಿದೆ.

- **ಈ ಎಕ್ಸ್‌ಪೋದ ಉದ್ದೇಶವೇನು?**

ಪ್ರವಾಸಿಗರನ್ನು ಕರ್ನಾಟಕದತ್ತ ಸೆಳೆಯುವುದೇ ಈ ಎಕ್ಸ್‌ಪೋದ ಮುಖ್ಯ ಉದ್ದೇಶ. ಕರ್ನಾಟಕದಲ್ಲಿರುವ ಪ್ರವಾಸೋದ್ಯಮದ ತಾಕತ್ತು, ಹಿರಿಮೆ- ಗರಿಮೆಯನ್ನು ಇಡೀ ವಿಶ್ವಕ್ಕೆ ಪರಿಚಯಿಸಬೇಕು ಎನ್ನುವುದು ನಮ್ಮ ಗುರಿ. ಇದರೊಂದಿಗೆ ಪ್ರವಾಸೋದ್ಯಮ ಕ್ಷೇತ್ರದ ಪಾಲುದಾರರಾದ ಹೋಟೆಲ್ ಉದ್ಯಮಿಗಳನ್ನು, ಟ್ರಾವೆಲ್ ಏಜೆನ್ಸಿ, ಗೈಡ್ ಸೇರಿದಂತೆ ಕ್ಷೇತ್ರಕ್ಕೆ ಸಂಬಂಧಿಸಿದ ಹಾಗೂ ಉತ್ತೇಜಿಸುವ ಎಲ್ಲರನ್ನೂ ಒಂದೆಡೆ ಸೇರಿಸಿ, ಚರ್ಚಿಸಬೇಕು, ಬಿ2ಬಿ ಸಭೆಗಳನ್ನು ನಡೆಸಬೇಕು. ಈ ಮೂಲಕ ಪ್ರವಾಸಿಗರಿಗೆ ಅನುಕೂಲ ಮಾಡುವುದು ನಮ್ಮ ಉದ್ದೇಶವಾಗಿದೆ.

ಈ ಸಮಾವೇಶದಲ್ಲಿ ರಾಜ್ಯಕ್ಕೆ ಹೆಚ್ಚುವರಿ ಪ್ರವಾಸಿಗರನ್ನು ಯಾವ ರೀತಿ ಸೆಳೆಯಬಹುದು ಎನ್ನುವ ಬಗ್ಗೆ ಚರ್ಚಿಸಲಾಗುವುದು. ಹಾಗೇ ನೋಡಿದರೆ, ಕರ್ನಾಟಕದಲ್ಲಿ ಪ್ರವಾಸಿಗರನ್ನು ಆಕರ್ಷಿಸಬಲ್ಲ ಸಾವಿರಾರು ಸ್ಥಳಗಳಿವೆ.

ಜಗತ್ತಿನ ಹಲವು ದೇಶಗಳಲ್ಲಿ ಇಲ್ಲದ ಪ್ರವಾಸಿ ಪ್ರಪಂಚ ನಮ್ಮ ರಾಜ್ಯದಲ್ಲಿದೆ. ಯುನೆಸ್ಕೋ ಮನ್ನಣೆ ಪಡೆದಿರುವ ಹಲವು ಸ್ಥಳಗಳಿವೆ. ಈ ಎಲ್ಲವೂ ಕರ್ನಾಟಕದಲ್ಲಿದೆ ಎನ್ನುವುದು ನಮ್ಮ ಹೆಮ್ಮೆ. ಕರ್ನಾಟಕ ಯಾವುದೋ ಒಂದು ರೀತಿಯ ಪ್ರವಾಸೋದ್ಯಮವಿಲ್ಲ. ಒಂದೆಡೆ ರಾಜರು ಆಳ್ವಿಕೆ ನಡೆಸಿರುವ ಐತಿಹಾಸಿಕ ಪ್ರವಾಸೋದ್ಯಮವಿದ್ದರೆ, ಇನ್ನೊಂದೆಡೆ ಕಲೆ, ಸಂಸ್ಕೃತಿಯನ್ನು ವಿಶ್ವಕ್ಕೆ ತಿಳಿಸುವ ಹಲವಾರು ಸ್ಮಾರಕಗಳಿವೆ. ಮತ್ತೊಂದೆಡೆ ಸಹ್ಯಾದ್ರಿ, ಬೆಟ್ಟ, ಕಪ್ಪತ್ತಗುಡ್ಡ, 320 ಕಿ.ಮೀ.ನಲ್ಲಿ ಚಾಚಿರುವ ಸಮುದ್ರ, ಧಾರ್ಮಿಕ, ಆಧ್ಯಾತ್ಮಿಕ ಕೇಂದ್ರಗಳು ನಮ್ಮ ರಾಜ್ಯದ ಸಂಪತ್ತು.

ಯಲ್ಲಮ್ಮನ ಗುಡ್ಡ, ಹುಲಿಗೆಮ್ಮ, ದತ್ತಾತ್ರೇಯ, ಅಂಜನಾದ್ರಿ, ಬಸನಬಾಗೇವಾಡಿ ಸೇರಿದಂತೆ ರಾಜ್ಯಕ್ಕೆ ಹೆಮ್ಮೆ ಮೂಡಿಸಿದ ಕ್ಷೇತ್ರಗಳು ನಮ್ಮಲ್ಲಿವೆ. ಇವುಗ ಳೊಂದಿಗೆ ನಮ್ಮ ಸಂಸ್ಕೃತಿಯನ್ನು ಅರ್ಥೈಸಿಕೊಳ್ಳುವವರಿಗೆ, ಒಂದು ಶ್ರೇಷ್ಠ ಪ್ರವಾಸಿ ತಾಣ. ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ (ಕಲ್ಯಾಣ ಕರ್ನಾಟಕ), ಮೈಸೂರು, ಕರಾವಳಿ ಹೀಗೆ ಒಂದು ಪ್ರದೇಶದಲ್ಲಿ ಒಂದೊಂದು ಸಂಸ್ಕೃತಿ ಯೇ ಭಿನ್ನ. ಕರ್ನಾಟಕದ ಆಹಾರ ಪದ್ಧತಿಯೂ ಒಂದು ಸ್ಥಳದಿಂದ ಇನ್ನೊಂದು ಕಡೆ ಭಿನ್ನವಾಗಿದೆ. ಈ ಎಲ್ಲವನ್ನು ವಿಶ್ವಕ್ಕೆ ಪರಿಚಯಿಸಿ, ಆಕರ್ಷಣೆ ಮಾಡಿ ಕರೆತರುವ ಉದ್ದೇಶ ಈ ಸಮಾವೇಶದ್ದಾಗಿದೆ.

> ಕರ್ನಾಟಕದಲ್ಲಿ ಕೇವಲ ಐಷಾರಾಮಿ ಅಥವಾ ಮನೋರಂಜನೆಗೆ ಸೀಮಿತಗೊಂಡಿರುವ ಪ್ರವಾಸವಲ್ಲ. ಕರ್ನಾಟಕದ ಪ್ರವಾಸ ಚಿಂತನೆ ಜ್ಞಾನವನ್ನು ತಂದುಕೊಡುವ ಪ್ರವಾಸವಾಗಿರಬೇಕು. ನಮ್ಮ ಇತಿಹಾಸ, ಸಂಸ್ಕೃತಿ ಅರಿಯುವಂತೆ ಮಾಡಬೇಕು.
>
> -ಎಚ್.ಕೆ.ಪಾಟೀಲ್, ಪ್ರವಾಸೋದ್ಯಮ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ



- **ದೇಶಿಯ ಪ್ರವಾಸಿಗರಿಗೆ ಹೋಲಿಸಿದರೆ, ಅಂತಾರಾಷ್ಟ್ರೀಯ ಪ್ರವಾಸಿಗರನ್ನು ಸೆಳೆಯುವಲ್ಲಿ ರಾಜ್ಯ ಹಿಂದೆ ಉಳಿದಿದೆಯೇ?**

ನೀವು ಹೇಳಿದಂತೆ ದೇಶಿ ಪ್ರವಾಸಿಗರ ಭೇಟಿಯಲ್ಲಿ ಟಾಪ್ 5ನೇ ಸ್ಥಾನದಲ್ಲಿ ಕರ್ನಾಟಕವಿದೆ. ಆದರೆ ಅಂತಾರಾಷ್ಟ್ರೀಯ ಪ್ರವಾಸಿಗರ ಸಂಖ್ಯೆಯಲ್ಲಿ ನಿರೀಕ್ಷಿತ ಸಂಖ್ಯೆಯಲ್ಲಿಲ್ಲ. ಅದಕ್ಕೆ ಹಲವು ಕಾರಣಗಳಿರಬಹುದು. ಪ್ರಮುಖವಾಗಿ, ಕರ್ನಾಟಕದ ಪ್ರವಾಸಿತಾಣಗಳ ಸುತ್ತ ಮುತ್ತ ವಿಮಾನ ನಿಲ್ದಾಣಗಳು ನಿರೀಕ್ಷಿತ ಪ್ರಮಾಣದಲ್ಲಿಲ್ಲ. ಹಂಪಿ, ಗೋಕರ್ಣಕ್ಕೆ ಹೋಗಬೇಕು ಎಂದರೆ ಹುಬ್ಬಳ್ಳಿಗೆ ವಿಮಾನ ನಿಲ್ದಾಣಕ್ಕೆ ಬರಬೇಕು. ಬಾದಾಮಿ, ಐಹೊಳೆ ಸೇರಿದಂತೆ ಹಲವು ಪ್ರವಾಸಿ ಕ್ಷೇತ್ರಕ್ಕೆ ಹೋಗಲು ವಿಮಾನ ನಿಲ್ದಾಣಗಳಿಂದ 150ರಿಂದ 200 ಕಿಮೀ ವರೆಗೆ ರಸ್ತೆ ಪ್ರಯಾಣ ಮಾಡಬೇಕು. ಈ ಕಾರಣಕ್ಕೆ ಅಂತಾರಾಷ್ಟ್ರೀಯ ಪ್ರವಾಸಿಗರ ಸಂಖ್ಯೆ ಕಡಿಮೆಯಿರಬಹುದು.

ಆದ್ದರಿಂದ ಅಂತಾರಾಷ್ಟ್ರೀಯ ಹಾಗೂ ದೇಶಿ ಪ್ರವಾಸಿಗರನ್ನು ಸೆಳೆಯುವ ಉದ್ದೇಶದಿಂದ ನಮ್ಮ ಸರಕಾರ ಸೀ ಪ್ಲೇನ್‌ಗಳ ಬಗ್ಗೆ ಚಿಂತನೆ ನಡೆಸುತ್ತಿದ್ದೇವೆ. ಅಂದರೆ ನೀರಿನ ಮೇಲೆ ವಿಮಾನಗಳನ್ನು ಇಳಿಸಲು ಚಿಂತನೆ ನಡೆಸಿದ್ದೇವೆ. ಆಲಮಟ್ಟಿ, ಕಮಲಾಪುರ ಕೆರೆ, ಡಂಬಳ ಹಾಗೂ ಲಕ್ಕುಂಡಿಯ ಕೆರೆಗಳಲ್ಲಿ ಸೀ ಪ್ಲೇನ್ ವ್ಯವಸ್ಥೆಗೆ ಚಿಂತನೆ ನಡೆಸಿದ್ದೇವೆ. ಈ ದಿಸೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದೇವೆ. ಇದರೊಂದಿಗೆ ವಿದೇಶಿ ಪ್ರವಾಸಿಗರಿಗೆಂದು 'ಗೋಲ್ಡನ್ ಚಾರಿಯಟ್' ಎನ್ನುವ ರೈಲು ಪ್ರವಾಸ ಆರಂಭಿಸಿದ್ದೇವೆ. ಇದು ಆರ್ಥಿಕವಾಗಿ ಹೊರೆಯಾದರೂ, ಕರ್ನಾಟಕದ ಅದ್ಭುತ ದರ್ಶನ ಮಾಡಲು ಸಹಾಯವಾಗುತ್ತದೆ. ಇದರಿಂದ ವಿದೇಶಿ ಪ್ರವಾಸಿಗರಿಗೆ ಅನೂಕಲವಾಗುತ್ತದೆ.

- **ಗ್ಯಾರಂಟಿ ಯೋಜನೆಯಿಂದ ಪ್ರವಾಸೋದ್ಯಮಕ್ಕೆ ಅನುಕೂಲವಾಗಿದೆಯೇ ಅನಾನುಕೂಲವಾಗಿದೆಯೇ?**

ಪ್ರವಾಸ ಮಾಡುವುದು ಚಿಂತೆ ಮಾಡುವ ಸಮಯದಲ್ಲಿ ಅಲ್ಲ. ಗ್ಯಾರಂಟಿ ಯೋಜನೆಗಳ ಜಾರಿ ಯಿಂದ ಆರ್ಥಿಕ ಚಿಂತನೆ ಕಡಿಮೆಯಾಗಿದೆ. ಇದರಿಂದಾಗಿ ಗ್ಯಾರಂಟಿ ಯೋಜನೆಯ ಮೂಲಕ ಬಡವರ ಬದುಕಲ್ಲಿ ಬದಲಾವಣೆ ಬಂದಿದೆ. ಶಕ್ತಿ ಯೋಜನೆಯಿಂದ ಉಚಿತವಾಗಿ ಪ್ರವಾಸ ಮಾಡಲು ಸಾಧ್ಯ ಎನ್ನುವ ಕಾರಣಕ್ಕೆ ಪ್ರವಾಸೋದ್ಯಮಕ್ಕೆ ಹೆಚ್ಚು ಅನುಕೂಲವಾ ಗಲಿದೆ. ಈ ಮೂಲಕ ದೇಶಿಯ ಪ್ರವಾಸೋದ್ಯಮ ಬಹುದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತದೆ.

- **ಮೂಲಸೌಕರ್ಯ ಅಭಿವೃದ್ಧಿಗೆ ಯೋಜನೆಗಳೇನು?**

ಪ್ರವಾಸೋದ್ಯಮ ಇಲಾಖೆಗೆ ಎಷ್ಟೇ ಅನುದಾನ ನೀಡಿದರೂ ಕಡಿಮೆಯಾಗುತ್ತದೆ. ಆದರೆ ಅನುದಾನ ನೀಡದಿದ್ದರೂ ನಡೆಯುವ ಇಲಾಖೆ ಇದಾಗಿದೆ. ಆದರೆ ಪ್ರವಾಸಿತಾಣಗಳಲ್ಲಿ ಮೂಲಸೌಕರ್ಯ ಯೋಜನೆಗಳನ್ನು ಹೆಚ್ಚಿಸಲು ಅನುದಾನ ಕೇಳುತ್ತಿದ್ದೇವೆ. ಮುಂದಿನ ದಿನದಲ್ಲಿ ಅನುದಾನ ದೊರಕುತ್ತದೆ ಎನ್ನುವ ವಿಶ್ವಾಸ ನನಗಿದೆ.

- **ಕೇಂದ್ರದ ಪ್ರಸಾದಂ ಸೇರಿದಂತೆ ಹಲವು ಯೋಜನೆಗಳ ಅನುಷ್ಠಾನ ಹೇಗಿದೆ?**

ಕಳೆದ ಎರಡು ತಿಂಗಳಲ್ಲಿ ಕೇಂದ್ರ ಸರಕಾರ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಒಟ್ಟಾರೆ ಮೂಲಸೌಕರ್ಯ ಸೃಷ್ಟಿಸಲು ಅನುದಾನ ನೀಡಿದ್ದಾರೆ. ಕೇಂದ್ರ ಸರಕಾರವೂ ಪ್ರವಾಸೋದ್ಯಮದ ಬೆಳವಣಿಗೆ ಕೇಂದ್ರ ಸರಕಾರ ಅನುದಾನ ನೀಡುತ್ತಿದೆ.

- **ನಿಮ್ಮ ನೆಚ್ಚಿನ ಪ್ರವಾಸಿ ಸ್ಥಳ ಯಾವುದು?**

ಕರ್ನಾಟಕವೇ ನನ್ನ ನೆಚ್ಚಿನ ತಾಣ. ಅದಕ್ಕಿಂತ ದೊಡ್ಡ ಪ್ರವಾಸಿ ತಾಣವಿದೆ ಎಂದು ಅನಿಸಿಲ್ಲ. ಅನೇಕರಿಗೆ ಗೋವಾ ಪ್ರವಾಸೋದ್ಯಮದ ಬಗ್ಗೆ ಹೇಳುತ್ತಾರೆ. ಆದರೆ ಅಲ್ಲಿ ಕ್ಯಾಸಿನೋ ಆಡಲು ಹೋಗುತ್ತಾರೆ. ಆದರೆ ಕರ್ನಾಟಕದಲ್ಲಿ ನಮ್ಮ ಸಂಸ್ಕೃತಿಗೆ ಸೀಮಿತಗೊಳಿಸಿ ಪ್ರವಾಸೋದ್ಯಮಕ್ಕೆ ಅವಕಾಶನೀಡುತ್ತೇವೆ.

ಖಾಸಗಿ ಪಾಲುದಾರಿಕೆಯ ಕಾರ್ಯ ಹೇಗಿದೆ?

ಪ್ರವಾಸೋದ್ಯಮ ಕ್ಷೇತ್ರದಲ್ಲಿ ಖಾಸಗಿಯವರು ಆಸಕ್ತಿ ವಹಿಸುತ್ತಿದ್ದಾರೆ. ಖಾಸಗಿ ಕ್ಷೇತ್ರದಿಂದ ನಮ್ಮ ಇತಿಹಾಸ, ಸಂಸ್ಕೃತಿ, ಕಲೆಯನ್ನು ಪ್ರೋತ್ಸಾಹಿಸುವುದಕ್ಕೆ ಕೇಳಿದ್ದು, ಅನೇಕರು ಸಹಾಯ ಮಾಡಲು ಒಪ್ಪಿದ್ದಾರೆ. ಕರ್ನಾಟಕದಲ್ಲಿ ಸುಮಾರು 25ಸಾವಿರ ಸ್ಮಾರಕಗಳಿವೆ. ಈ ಪೈಕಿ ಸುಮಾರು ಐದು ಸಾವಿರ ದೊಡ್ಡ ದೇವಾಲಯಗಳಿವೆ. ಆ ಸ್ಮಾರಕಗಳನ್ನು ಉಳಿಸಿ, ಬೆಳೆಸಲು ಖಾಸಗಿ ಸಹಭಾಗಿತ್ವ ಅತ್ಯಗತ್ಯ. ಈ ಕಾರಣಕ್ಕಾಗಿಯೇ ಖಾಸಗಿಯವರಿಗೆ ಸ್ಮಾರಕಗಳನ್ನು ದತ್ತು ಪಡೆಯಲು ಅವಕಾಶ ನೀಡುತ್ತಿದ್ದೇವೆ. ಇದು ದೊಡ್ಡ ಚಳವಳಿಯಾಗಿ ಬೆಳೆಯಬೇಕು. ಇದರಿಂದ ನಮ್ಮ ಸ್ಮಾರಕಗಳು ಮೂಲಸ್ವರೂಪಕ್ಕೆ ಬಂದರೆ ರಾಷ್ಟ್ರದಲ್ಲಿಯೇ ಕರ್ನಾಟಕ ಅದ್ಭುತವಾಗಿರುವ ಪ್ರವಾಸಿ ಕೇಂದ್ರವಾಗಲಿದೆ. ಆದ್ದರಿಂದ 'ಒಂದು ರಾಜ್ಯ ಹಲವು ಜಗತ್ತು' ಎಂದು ಕರೆಯುತ್ತೇನೆ. ಇದನ್ನು ಬೆಳೆಸಲು ಇನ್ನಷ್ಟು ಖಾಸಗಿ ಪಾಲುದಾರಿಕೆ ಅಗತ್ಯ.

ಬಿಜೆಪಿ ಬಣದಾಟ: ಕುತೂಹಲ ಮೂಡಿಸಿದ ವರಿಷ್ಠರ ನಿರ್ಧಾರ

ಬೆಂಗಳೂರು: ರಾಜ್ಯ ಬಿಜೆಪಿಯಲ್ಲಿರುವ ಬಣ ಬಡಿದಾಟ ಮುಂದುವರಿದಿದ್ದು, ರಾಜ್ಯಾಧ್ಯಕ್ಷರ ಬದಲಾವಣೆಗೆ ಭಿನ್ನರು ಪಟ್ಟು ಹಿಡಿದಿರುವ ಮಧ್ಯೆಯೇ ಪ್ರಮುಖ ನಾಯಕರ ಆರೋಪ ಪ್ರತ್ಯಾರೋಪ ಮುಂದುವರಿದಿದೆ.

ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನೇತೃತ್ವದಲ್ಲಿ ಸರಣಿ ಹೋರಾಟ ಮಾಡಲು ಭಿನ್ನರ ಬಣ ಮುಂದಾಗಿದ್ದು, ಬಿಜೆಪಿ ಉಳಿಯಬೇಕೆಂಬ ನಮ್ಮ ನಿಲುವಿನಲ್ಲಿ ಬದಲಾವಣೆ ಇಲ್ಲ. ನಮ್ಮ ಹೋರಾಟ ಯಾವುದೇ ಒಂದು ಕುಟುಂಬ ಇಲ್ಲವೇ ವ್ಯಕ್ತಿಯ ವಿರುದ್ಧವಿಲ್ಲ. ಕಾರ್ಯಕರ್ತರ ಭಾವನೆಗಳನ್ನು ನಾವು ವ್ಯಕ್ತಪಡಿಸಿದ್ದೇವೆ. ಇದರಲ್ಲಿ ತಪ್ಪೇನಿದೆ ಎಂದು ಕುಮಾರ್ ಬಂಗಾರಪ್ಪ ಹೇಳಿದ್ದಾರೆ. ಇದಕ್ಕೆ ಪ್ರತ್ಯುತ್ತರ ನೀಡಿರುವ ಛಲವಾದಿ ನಾರಾಯಣ ಸ್ವಾಮಿ, ರಾಜ್ಯಾಧ್ಯಕ್ಷರ ಬದಲಾವಣೆಯನ್ನು ಆ ಬಣದವರು ಹೇಳಿದರೆ ಆಗುವುದಿಲ್ಲ, ಹೈಕಮಾಂಡ್ ನಾಯಕರು ಹೇಳಬೇಕು ಎಂದಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆಯಲಿದೆ ಎನ್ನುವ ಚರ್ಚೆ ಬಿಜೆಪಿ ಪಾಳೆಯದಲ್ಲಿ ನಡೆಯುತ್ತಿದೆ. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ರಮೇಶ್ ಜಾರಕಿಹೊಳಿ ಮತ್ತು ಬಸನಗೌಡ ಪಾಟೀಲ್ ಯತ್ನಾಳ್ ಅವರಿರುವ ಬಣದಲ್ಲಿ ಮಹತ್ವದ ಸಭೆಗಳು ನಡೆದಿವೆ. ಈಗ ಉದಯಗಿರಿ ಠಾಣೆ ಗಲಭೆ ಪ್ರಕರಣ ಖಂಡಿಸಿ ಪ್ರತಿಭಟನೆ ನಡೆಸಲು ಫೆ.24ರಂದು ಮೈಸೂರಿಗೆ ಹೋಗುತ್ತಿದ್ದಾರೆ.

> ರಾಜ್ಯಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದರೆ ಯಾರು ಬೇಕಾದರೂ ಸ್ಪರ್ಧೆ ಮಾಡಲಿ. ಎಲ್ಲಿ ಚುನಾವಣೆ ಆಗುತ್ತದೆ. ಒಂದು ಚುನಾವಣೆ ಆದರೆ ಯಾರು ಬೇಕಾದರೂ ಸ್ಪರ್ಧೆ ಮಾಡಬಹುದು. ಆದರಿಲ್ಲಿ ಚುನಾವಣೆ ಆಗುವುದಿಲ್ಲ. ಚುನಾವಣೆ ಆದರೆ ಸ್ಪರ್ಧೆ ಮಾಡುತ್ತೀವಿ ಎಂದು ಅವರು ಯಾಕೆ ಹೇಳಿದರು ಅವರೇ ಹೇಳಬೇಕು. ನಿನ್ನೆ ಇಲ್ಲ ಅಂದರು, ಇವತ್ತು ಸ್ಪರ್ಧೆ ಮಾಡುತ್ತೀವಿ ಎಂದು ಹೇಳೋಕೆ ಯಾರು ಪ್ರಚೋದನೆ ಮಾಡಿದ್ದಾರೆ ?
>
> ಛಲವಾದಿ ನಾರಾಯಣ ಸ್ವಾಮಿ, ಪರಿಷತ್ ಪ್ರತಿಪಕ್ಷದ ನಾಯಕ

ಇದಾದ ನಂತರ ಹಲವು ವಿಚಾರಗಳನ್ನು ಮುಂದಿಟ್ಟುಕೊಂಡು ಭಿನ್ನರು ಭಿನ್ನವಾದ ಹೋರಾಟ ನಡೆಸಲು ಸಿದ್ಧತೆ ಮಾಡಿಕೊಂಡಿದ್ದಾರೆ.

ಇದೇ ತಿಂಗಳ ಅಂತ್ಯಕ್ಕೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಸ್ಥಾನಕ್ಕೆ ಚುನಾವಣೆ ಪ್ರಕ್ರಿಯೆ ನಡೆಯಲಿದೆ. ಇದರ ಭಾಗವಾಗಿ ಶೇ.50ರಷ್ಟು ರಾಜ್ಯಗಳಲ್ಲಿ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಪೂರ್ಣವಾಗಬೇಕು. ಹಲವು ರಾಜ್ಯಗಳಲ್ಲಿ ಜಿಲ್ಲಾ ಹಾಗೂ ರಾಜ್ಯಾಧ್ಯಕ್ಷರ ಪಟ್ಟಿ ಪ್ರಕಟವಾಗಲಿದೆ. ಅಲ್ಲಿಯವರೆಗೆ ರಾಜ್ಯ ಘಟಕದಲ್ಲಿನ ಗೊಂದಲ ಮುಂದುವರಿಯುವ ಸಾಧ್ಯತೆ ಇದೆ.

ಪಕ್ಷ ಉಳಿಯಬೇಕೆಂಬ ನಿಲುವಿನಲ್ಲಿ ಬದಲಾವಣೆ ಇಲ್ಲ

ನಾವು ಈಗಲೂ ವಿಚಲಿತರಾಗಿಲ್ಲ. ನಮ್ಮ ಹೋರಾಟ ಯಾವುದೇ ವ್ಯಕ್ತಿ ವಿರುದ್ಧವಲ್ಲ. ಪಕ್ಷ ಉಳಿಯಬೇಕೆಂಬ ನಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಮಾಜಿ ಸಚಿವ ಕುಮಾರ್ ಬಂಗಾರಪ್ಪ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿ ಉಳಿಯಬೇಕೆಂಬ ನಮ್ಮ ನಿಲುವಿನಲ್ಲಿ ಬದಲಾವಣೆ ಇಲ್ಲ. ನಮ್ಮ ಹೋರಾಟ ಯಾವುದೇ ಒಂದು ಕುಟುಂಬ ಇಲ್ಲವೇ ವ್ಯಕ್ತಿಯ ವಿರುದ್ಧವಿಲ್ಲ. ಕಾರ್ಯಕರ್ತರ ಭಾವನೆಗಳನ್ನು ನಾವು ವ್ಯಕ್ತಪಡಿಸಿದ್ದೇವೆ. ನಮ್ಮ ನಾಯಕರಾದ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ಶೋಕಾಸ್ ನೋಟಿಸ್ ಕೊಟ್ಟಿರುವುದು ನಮ್ಮ ಹೋರಾಟಕ್ಕೆ ಹಿನ್ನಡೆಯಲ್ಲ. ಕೆಲವು ಹೇಳಿಕೆಗಳ ಬಗ್ಗೆ ವರಿಷ್ಠರು ಸ್ಪಷ್ಟನೆ ಕೇಳಿರಬಹುದು. ಇದನ್ನು ಹಿನ್ನಡೆ, ಮುನ್ನಡೆ ಎಂದು ವ್ಯಾಖ್ಯಾನಿಸುವುದು ಸರಿಯಲ್ಲ ಎಂದರು.

ವಕ್ಫ್ ವಿರುದ್ಧ ಹೋರಾಟದಲ್ಲಿ ನಮಗೆ ಜಯ ಸಿಕ್ಕಿದೆ. ರಾಜ್ಯಾದ್ಯಂತ ನಾವು ನಡೆಸಿದ ಅಭಿಯಾನ ಮತ್ತು ಸಂಗ್ರಹಿಸಿಕೊಟ್ಟ ವರದಿಗೆ ಕೇಂದ್ರ ವರಿಷ್ಠರು ಶಭಾಷ್‌ಗಿರಿ ನೀಡಿದ್ದಾರೆ. ಶೋಕಾಸ್ ನೋಟಿಸ್ ಕೊಟ್ಟಿದ್ದೇ ಮಹಾಪರಾಧ ಎಂದು ಕೆಲವರು ಬಿಂಬಿಸುವ ಪ್ರಯತ್ನ ಮಾಡಿದ್ದಾರೆ. ಇದು ಹಿನ್ನಡೆಯಂತೂ ಅಲ್ಲ. ಶೋಕಾಸ್ ನೋಟಿಟ್‌ಗೆ ಉತ್ತರ ಕೊಡಲು ಯತ್ನಾಳ್ ಅವರು ಸಮರ್ಥರಿದ್ದಾರೆ. ನಾವು ಭಿನ್ನಮತೀಯರೂ ಅಲ್ಲ ಇಲ್ಲವೇ ಪಕ್ಷ ವಿರೋಧಿ ಚಟುವಟಿಕೆಯನ್ನು ನಡೆಸುತ್ತಿಲ್ಲ. ನಾವು ಯಾವುದೇ ಕಾರಣಕ್ಕೂ ನಾವು ತೆಗೆದುಕೊಂಡ ನಿರ್ಧಾರದಿಂದ ಹಿಂದೆ ಸರಿದಿಲ್ಲ. ರಾಜ್ಯಾಧ್ಯಕ್ಷರ ಚುನಾವಣೆ ಸಂಬಂಧ ಇನ್ನೂ ಶಿವರಾಜ್ ಸಿಂಗ್ ಚೌವ್ಹಾಣ್ ಬಂದಿಲ್ಲ. ಚುನಾವಣೆ ದಿನಾಂಕ ಕೂಡ ಇನ್ನೂ ನಿಗದಿಯಾಗಿಲ್ಲ. ನಾಮಪತ್ರ ಸಲ್ಲಿಕೆ ಕೂಡ ಮಾಡಬೇಕು. ಕೇಂದ್ರದ ವರಿಷ್ಠರು ಕೂಡ ದೆಹಲಿ ಚುನಾವಣೆ ಬಳಿಕ ಇದನ್ನು ತೆಗೆದುಕೊಳ್ಳುವ ಹೇಳಿದ್ದಾರೆ. ರಾಜ್ಯಕ್ಕೆ ನೂರಕ್ಕೆ ನೂರರಷ್ಟು ಬದಲಾವಣೆ ಆಗುವುದು ನಿಶ್ಚಿತ ಎಂದರು.

ಸಿಎಂ ಸಹಿಯನ್ನೇ ನಕಲು ಮಾಡ್ತಿದ್ದ ಆರೋಪಿ ಬಂಧನ

ಸರಕಾರಿ ಕೆಲಸ ಕೊಡಿಸುವುದಾಗಿ ವಂಚನೆ

ಮಂಡ್ಯ: ಸಿಎಂ ಸಿದ್ದರಾಮಯ್ಯ ಸೇರಿದಂತೆ ಸರಕಾರಿ ಅಧಿಕಾರಿಗಳ ಸಹಿಯನ್ನೇ ನಕಲು ಮಾಡಿ, ಖೋಟಾ ಸರಕಾರಿ ನೇಮಕಾತಿ ಆದೇಶ ಸೃಷ್ಟಿಸಿ 35 ರಿಂದ 40 ಜನರಿಗೆ ವಂಚಿಸಿದ ಆರೋಪಿಯನ್ನು ಬಂಧಿಸಲಾಗಿದೆ ಎಂದು ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಆರೋಪಿ ಎಚ್.ಸಿ. ವೆಂಕಟೇಶ್ ಮಂಡ್ಯದ ಗಾಂಧಿನಗರದ ನೇತ್ರಾವತಿ ಹಾಗೂ ಕಲ್ಲಹಳ್ಳಿಯ ಮಲ್ಲೇಶ್‌ಗೆ 31 ಲಕ್ಷ ರು. ವಂಚಿಸಿದ್ದಾನೆ. ನೇತ್ರಾವತಿಯ ಇಬ್ಬರು ಪುತ್ರರಿಗೆ ತಾವರೆಗೆರೆಯ ಎಚ್.ಸಿ.ವೆಂಕಟೇಶ್ ಪರಿಚಯವಾಗಿದ್ದ. ತಾನು ಬೆಂಗಳೂರಿನ ವಿಧಾನಸೌಧದಲ್ಲಿ ಕೆಲಸ ಮಾಡುತ್ತಿರುವುದಾಗಿ ಉನ್ನತ ಸರಕಾರಿ ಅಧಿಕಾರಿಗಳು ಪರಿಚಯವಿದ್ದಾರೆ. ನಾನು ನಿಮ್ಮ ಮಗನಿಗೆ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಕೆಲಸ ಕೊಡಿಸುತ್ತೇನೆ ಎಂದು ನೇತ್ರಾವತಿಗೆ ನಂಬಿಸಿದ್ದ. ಮಗನಿಗೆ ಉದ್ಯೋಗ ಸಿಗುವುದೆಂಬ ಆಸೆಗೆ ವೆಂಕಟೇಶ್ ವಿವಿಧ ಬ್ಯಾಂಕ್ ಖಾತೆಗಳಿಗೆ ತಮ್ಮ ಮತ್ತು ಸ್ನೇಹಿತರ ಖಾತೆಯಿಂದ 9.24 ಲಕ್ಷ ರು.ಗಳನ್ನು ನೇತ್ರಾವತಿ ವರ್ಗಾಯಿಸಿದ್ದರು. ಅದಲ್ಲದೆ ಕಚೇರಿ ಖರ್ಚಿಗೆಂದು ವೆಂಕಟೇಶ್ ತನ್ನ ಮನೆಯಲ್ಲೇ 3 ಲಕ್ಷ ರು. ಪಡೆದಿದ್ದ ಎಂದು ಬಾಲದಂಡಿ ವಿವರಿಸಿದರು.

ಸುಳ್ಳುದಾಖಲೆ ಸೃಷ್ಟಿ: ನಂತರ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಹುದ್ದೆಗೆ ಸ್ಥಳ ನಿಯೋಜಿಸಿದ ಆದೇಶದ ಪ್ರತಿಯನ್ನು ಸರಕಾರಿ ಅಧಿಕಾರಿಗಳ ಫೋರ್ಜರಿ ಸಹಿಮಾಡಿ ಸುಳ್ಳು ನೇಮಕಾತಿ ದಾಖಲಾತಿಯನ್ನು ಸೃಷ್ಟಿಸಿ ಮೋಸಮಾಡಿದ್ದ. ವೆಂಕಟೇಶ್ ಸರಕಾರದ ಅಧೀನ ಕಾರ್ಯದರ್ಶಿಯ ಸಹಿ, ಸ್ಥಳ ನಿಯೋಜನೆ ಸಂಬಂಧ ಅಧಿಕೃತ ಆದೇಶ ಪ್ರತಿ, ಜಿಲ್ಲಾಧಿಕಾರಿಗಳ ಪರವಾಗಿ ಎಂದು ಸಹಿ ಇರುವ ಕಂದಾಯ ಇಲಾಖೆಯ ಪತ್ರ, ಹಿರಿಯ ಲೆಕ್ಕಾಧಿಕಾರಿಗಳ ಸಹಿ ಇರುವ ಪತ್ರ, ಸಿಎಂ ಸಿದ್ದರಾಮಯ್ಯ ಸಹಿ ಇರುವ ಟಿಪ್ಪಣಿ, ಮಹಾನಿರ್ದೇಶಕರ ಪರವಾಗಿ ಎಂದು ಸಹಿ ಇರುವ ಪತ್ರಗಳನ್ನು ಮೊಬೈಲ್‌ಗೆ ಕಳುಹಿಸಿದ್ದ. ಬಳಿಕ ಒಂದು ತಿಂಗಳಾದರೂ ವೆಂಕಟೇಶ್ ಡ್ಯೂಟಿ ರಿಪೋರ್ಟ್ ಮಾಡಿಸದಿದ್ದರಿಂದ, ನೇತ್ರಾವತಿಯ ಮಗ ಮಂಡ್ಯ ಜಿಲ್ಲಾಧಿಕಾರಿ ಕಚೇರಿಯಲ್ಲಿ ವಿಚಾರಿಸಿದಾಗ ದಾಖಲೆಗಳು ಸುಳ್ಳು ಎಂದು ಗೊತ್ತಾಗಿದೆ. ಆರೋಪಿಯನ್ನು ಬಂಧಿಸಲಾಗಿದೆ ಎಂದರು.

ನಕಲಿ ದಾಖಲೆ ಸೃಷ್ಟಿಸಿ ಮೂವರಿಂದ 45 ಲಕ್ಷ ವಂಚನೆ

ನಕಲಿ ದಾಖಲೆ ಸೃಷ್ಟಿಸಿ ಮೂವರಿಂದ 45 ಲಕ್ಷ ಪಡೆದು ವಂಚಿಸಿದ್ದ ಆರೋಪಿಯ ಬಳಿಯಿದ್ದ ಓಕಳಿಇ, ಅಬಕಾರಿ, ವಾಣಿಜ್ಯ ತೆರಿಗೆ, ನಗರಾಭಿವೃದ್ಧಿ ಇಲಾಖೆ, ಮಂಡ್ಯ ಡಿಸಿ ಕಚೇರಿಯಲ್ಲಿ ವಿವಿಧ ಹುದ್ದೆಗಳಿಗೆ ನೇಮಿಸಿ, ಸ್ಥಳ ನಿಯೋಜಿಸಿ ಆದೇಶ ಹೊರಡಿಸಿರುವ ನಕಲಿ ನೇಮಕಾತಿ ಪತ್ರಗಳು, ದಾಖಲೆಗಳು, ಹಾಜರಾತಿ ಪುಸ್ತಕ, ಸರಕಾರದ ಲೋಗೋ, ನಕಲಿ ಐಡಿ ಕಾರ್ಡ್, ಟ್ಯಾಗ್, ಕರ್ನಾಟಕ ಸರಕಾರದ ಸಚಿವಾಲಯ, ವಿಧಾನಸೌಧದ ಮುಖ್ಯ ಕಾರ್ಯದರ್ಶಿ ಕಾರ್ಯಾಲಯ ಎಂದಿರುವ ಆರೋಪಿಯ ಚಿತ್ರ , ಹೆಸರಿರುವ ಐಡಿ ಕಾರ್ಡ್, ಸರಕಾರದ ಲೋಗೋ, ಕರ್ನಾಟಕ ಸರಕಾರದ ಸಚಿವಾಲಯ ವಿಧಾನಸೌಧ ಎಂದಿರುವ ಐಡಿ ಹೋಲ್ಡಿಂಗ್ ಟ್ಯಾಗ್, ಹಲವು ನಕಲಿ ದಾಖಲೆಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಬಣ ರಾಜಕೀಯಕ್ಕೆ ಹೆಬ್ಬಾರ್ ಬೇಸರ

ಶಿರಸಿ: ಬಿಜೆಪಿಯಲ್ಲಿ ಎಷ್ಟು ಬಣ ಆಗಿದೆ ಎಂದು ಗೊತ್ತಾಗುತ್ತಿಲ್ಲ. ನಾನು ಬಣಗಳನ್ನು ಲೆಕ್ಕ ಮಾಡುತ್ತಿದ್ದೇನೆ. ಬಿಜೆಪಿ ವ್ಯವಸ್ಥೆಯಿಂದ ಬೇಸತ್ತು ನಾನು ಪಕ್ಷದಿದ ದೂರ ಉಳಿದಿದ್ದೇನೆ ಎಂದು ಭಿನ್ನಮತೀಯ ಶಾಸಕ ಶಿವರಾಮ್ ಹೆಬ್ಬಾರ್ ಬೇಸರ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಯಾರ್‍ಯಾರ ನಿಲುವು ಸರಿ, ಯಾರ್‍ಯಾರ ನಿಲುವು ತಪ್ಪು ಎನ್ನುವುದು ಇನ್ನು ಸ್ವಲ್ಪ ದಿನದಲ್ಲಿ ಗೊತ್ತಾಗುತ್ತದೆ. ನಾನು ಮತ್ತು ಸೋಮಶೇಖರ್ ನಿರ್ಣಯ ತೆಗೆದುಕೊಂಡಾಗ ತಪ್ಪು ಎಂದು ವಿಜಯೇಂದ್ರ ಹಾಗೂ ಯತ್ನಾಳ್ ಸಹ ಹೇಳಿದ್ದರು. ಯಾರ್‍ಯಾರು ನಾವು ತಪ್ಪು ಎಂದು ಹೇಳಿದವರೇ ತಪ್ಪು ಮಾಡುತ್ತಿದ್ದಾರೆ ಎಂದು ಬಿಜೆಪಿಯ ಬಣ ರಾಜಕೀಯದ ಬಗ್ಗೆ ಕಿಡಿಕಾರಿದರು.

ಯಾವುದೇ ವಿವಾದಕ್ಕೆ ಬೀಳಬಾರದು ಎಂದು ನಾನು ಸುಮ್ಮನಿದ್ದೇನೆ. ಯಾವಾಗ ವಿವಾದದಲ್ಲಿ ಬೀಳಬೇಕು ಎನಿಸುತ್ತದೆಯೋ ಅಂದು ನಾನು ಪ್ರತಿಕ್ರಿಯಿಸುತ್ತೇನೆ ಎಂದು ಶಿವರಾಮ್ ಹೆಬ್ಬಾರ್ ಎಚ್ಚರಿಕೆ ಕೊಟ್ಟರು.

ವರಿಷ್ಠರಿಂದ ಸೂಕ್ತ ನಿರ್ಧಾರ: ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ

ಸಿಎಂ ರೇಸ್‌ನಲ್ಲಿ ಡಿಸಿಎಂ ಡಿಕೆಶಿ ಇದ್ದಾರೆ

ಹುಬ್ಬಳ್ಳಿ: ಮುಖ್ಯಮಂತ್ರಿ ಹುದ್ದೆಯ ರೇಸ್‌ನಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಈಗಲ್ಲ ಮೊದಲಿನಿಂದಲೂ ಇದ್ದಾರೆ. ಈ ಬಗ್ಗೆ ಕಾಂಗ್ರೆಸ್ ವರಿಷ್ಠರು ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತಾರೆ. ಆ ಸಮಯಕ್ಕಾಗಿ ಕಾಯಬೇಕು ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಆಗುತ್ತದೆ. ಈ ಬಗ್ಗೆ ಎಐಸಿಸಿ ಅಧ್ಯಕ್ಷ ಖರ್ಗೆ ಅವರೇ ಹೇಳಿದ್ದಾರೆ. ದೇಶದ ನಾನಾ ರಾಜ್ಯಗಳ ಪಿಸಿಸಿ ಅಧ್ಯಕ್ಷರ ಬದಲಾವಣೆಯಾಗಿದೆ. ಈಗ ತಕ್ಷಣ ಮಾಡಲು ಆಗದಿರಬಹುದು. ಆದರೆ ಆಗುವುದು ನಿಶ್ಚಿತ. ಹೈಕಮಾಂಡ್ ಯಾವಾಗ ನಿರ್ಧರಿಸುತ್ತದೆ ಎಂಬುದನ್ನು ಕಾದು ನೋಡೋಣ ಎಂದು ಸ್ಪಷ್ಟಪಡಿಸಿದರು.

ಸಂಪುಟ ಪುನರ್‌ರಚನೆ ವರಿಷ್ಠರ ನಿರ್ಧಾರ

ಬಜೆಟ್ ನಂತರ ಸಿಎಂ ಬದಲಾವಣೆ ವಿಚಾರವಾಗಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸತೀಶ ಜಾರಕಿಹೊಳಿ, ಸಂಪುಟ ಪುನರ್ ರಚನೆ ನನ್ನ ವ್ಯಾಪ್ತಿಗೆ ಬರಲ್ಲ . ಸಂಪುಟದಲ್ಲಿ ನಾನು ಒಬ್ಬ ಮಂತ್ರಿ ಅಷ್ಟೇ. ಆ ಬಗ್ಗೆ ಚರ್ಚೆ ನಡೆಸುವ ಅಧಿಕಾರ ನಮಗಿಲ್ಲ. ಏನೇ ಇದ್ದರೂ ವರಿಷ್ಠರೇ ಚರ್ಚಿಸಬೇಕು.ಈಗಾಗಲೇ ಸಚಿವರ ಕಾರ್ಯ ವೈಖರಿ ಬಗ್ಗೆ ವರದಿ ಪಡೆದಿದ್ದಾರೆ. ಯಾವ ಸಚಿವರನ್ನು ತೆಗೆದುಕೊಳ್ಳಬೇಕು. ಕೈಬಿಡಬೇಕು ಎಂಬ ಬಗ್ಗೆ ಹಿರಿಯ ನಾಯಕರೇ ನಿರ್ಧಾರ ಕೈಗೊಳ್ಳುತ್ತಾರೆ. ಪ್ರೋಗ್ರೆಸ್ ರಿಪೋರ್ಟ್ ಅನ್ನು ವರಿಷ್ಠರೇ ನೋಡಿ ತೀರ್ಮಾನಿಸಬೇಕು ಎಂದರು.

> ರಾಜ್ಯ ಸರಕಾರ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಿಲ್ಲ. ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಿಗೆ ಹಣ ನೀಡುವುದು ಒಂದೆರಡು ತಿಂಗಳು ವಿಳಂಬವಾಗಿರಬಹುದು. ಮುಂದಿನ ದಿನಗಳಲ್ಲಿ ಎರಡೂ ತಿಂಗಳ ಹಣವನ್ನು ಸೇರಿಸಿ ಕೊಡಬಹುದು. ಸರಕಾರದ ಮಟ್ಟದಲ್ಲಿ ಹಣ ನೀಡುವುದು ವಿಳಂಬವಾಗುವುದು ಸಹಜ. ಆದರೂ ಹಣ ಕೊಡುವುದನ್ನು ನಿಲ್ಲಿಸಿಲ್ಲ.
>
> -ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ನಾನು ಆಕಾಂಕ್ಷಿ ಅಲ್ಲ

ಮುಖ್ಯಮಂತ್ರಿ ರೇಸ್‌ನಲ್ಲಿ ಡಿ.ಕೆ. ಶಿವಕುಮಾರ್ ಮೊದಲಿನಿಂದಲೂ ಇದ್ದಾರೆ. ಸಿಎಂ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಹೈಕಮಾಂಡ್ ತೀರ್ಮಾನ ಕೈಗೊಳ್ಳುತ್ತದೆ. ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ನಾನು ಆಕಾಂಕ್ಷಿ ಅಲ್ಲ. ಸಮಯ ಬಂದಾಗ ಮುಂದಿನ ತೀರ್ಮಾನ ಕೈಗೊಳ್ಳುತ್ತೇನೆ ಎಂದು ಸಚಿವರು ನುಡಿದರು.

ಕಿಮೋಥೆರಪಿ ಕೇಂದ್ರ ಉದ್ಘಾಟನೆಯಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ

ಎಲ್ಲ ಜಿಲ್ಲೆಗಳಲ್ಲಿ ಕಿಮೋಥೆರಪಿ ಕೇಂದ್ರ ಆರಂಭ

ವಿಜಯಪುರ: ರಾಜ್ಯದ ಪ್ರತಿ ಜಿಲ್ಲಾ ಆಸ್ಪತ್ರೆಯಲ್ಲಿ ಡೇ-ಕೇರ್ ಕಿಮೋಥೆರಪಿ ಕೇಂದ್ರವನ್ನು ಆರಂಭಿಸಲಾಗುತ್ತಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ವಿಜಯಪುರ ಜಿಲ್ಲಾ ಆಸ್ಪತ್ರೆಯಲ್ಲಿ ಶನಿವಾರ ಕಿಮೋಥೆರಪಿ ಕೇಂದ್ರವನ್ನು ಉದ್ಘಾಟಿಸಿದ ಅವರು ಮಾತನಾಡಿ, ಈಗಾಗಲೇ ವಿಜಯಪುರ ಹಾಗೂ ರಾಯಚೂ ರಿನಲ್ಲಿ ಕೇಂದ್ರ ಸ್ಥಾಪಿಸಲಾಗಿದ್ದು, ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೇ-ಕೇರ್ ಕಿಮೋಥೆರಪಿ ಗಳನ್ನು ಸ್ಥಾಪಿಸಲಾಗುತ್ತಿದೆ ಎಂದರು.

ವಿಜಯಪುರ ಜಿಲ್ಲಾಸ್ಪತ್ರೆಯಲ್ಲಿ 10 ಹಾಸಿಗೆಯುಳ್ಳ ಕಿಮೋಥೆರಪಿ ಡೇ-ಕೇರ್ ಕೇಂದ್ರ ತೆರೆಯುವ ಮೂಲಕ ಸರಕಾರ ಅನುಕೂಲ ಕಲ್ಪಿಸಿದೆ. ಅಲ್ಲದೆ ಮೆಮೊಗ್ರಾಫಿ ಕೇಂದ್ರ ಕೂಡ ಇಲ್ಲಿ ಆರಂಭಗೊಂಡಿದ್ದು ಇದರಿಂದ ಸ್ತನ ಕ್ಯಾನ್ಸರ್ ಪ್ರಮಾಣವನ್ನು ಬಹಳಷ್ಟು ತಗ್ಗಿಸಬಹುದು. ಪ್ರಾಥಮಿಕ ಹಂತದಲ್ಲಿಯೇ ಸ್ತನ ಕ್ಯಾನ್ಸರ್ ಪತ್ತೆಹಚ್ಚಿದಲ್ಲಿ ಗುಣಪಡಿಸಬಹುದಾಗಿದ್ದು, ಈ ನಿಟ್ಟಿನಲ್ಲಿ ಅವಶ್ಯವಿರುವ ಯಂತ್ರೋಪಕರಣಗಳನ್ನು ಸಹ ಆಸ್ಪತ್ರೆಯಲ್ಲಿ ಅಳವಡಿಸಲಾಗಿದೆ. ಇದರಿಂದ ರೋಗ ಪರೀಕ್ಷಿಸಲು ಅನುಕೂಲವಾಗಲಿದೆ ಎಂದು ಆರೋಗ್ಯ ಸಚಿವರು ನುಡಿದರು.

ಈ ಸಂದರ್ಭದಲ್ಲಿ ಬೃಹತ್ ಕೈಗಾರಿಕೆ ಸಚಿವ ಡಾ.ಎಂ.ಬಿ.ಪಾಟೀಲ, ಜವಳಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ, ಕರ್ನಾಟಕ ಬಾಲವಿಕಾಸ ಅಕಾ ಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ, ವಿಡಿಎ ಅಧ್ಯಕ್ಷ ಕನ್ನಾನ್ ಮುಶ್ರೀಫ್, ಆರೋಗ್ಯ ಇಲಾಖೆಯ ನಿರ್ದೇಶಕಿ ಡಾ.ತ್ರಿವೇಣಿ ಎಂ.ಜಿ.,ಜಿಲ್ಲಾಧಿಕಾರಿ ಟಿ.ಭೂಬಾಲನ್ ಇದ್ದರು.

ವಿಜಯಪುರ ಜಿಲ್ಲಾ ಆಸ್ಪತ್ರೆಯಲ್ಲಿ ಶನಿವಾರ ಕಿಮೋಥೆರಪಿ ಕೇಂದ್ರವನ್ನು ಸಚಿವರಾದ ದಿನೇಶ್ ಗುಂಡೂರಾವ್,ಡಾ.ಎಂ.ಬಿ.ಪಾಟೀಲ, ಸಚಿವ ಶಿವಾನಂದ ಪಾಟೀಲ ಉದ್ಘಾಟಿಸಿದರು.

> ವಿಜಯಪುರದಲ್ಲಿ ಕಿಮೋಥೆರಪಿ ಕೇಂದ್ರದ ಸ್ಥಾಪನೆಗೆ ಮೊದಲು ದೂರದ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ಹೋಗುವ ಅನಿವಾರ್ಯ ಪರಿಸ್ಥಿತಿ ಇತ್ತು. ಆದರೆ, ಈಗ ಕ್ಯಾನ್ಸರ್ ರೋಗಿಗಳಿಗೆ ಸ್ಥಳೀಯವಾಗಿಯೇ ಜಿಲ್ಲಾ ಆಸ್ಪತ್ರೆಯ ಕೇಂದ್ರದಲ್ಲಿಯೇ ಎಲ್ಲ ಚಿಕಿತ್ಸೆ ಸಿಗುವುದರಿಂದ ಅನುಕೂಲವಾಗಲಿದೆ.
>
> ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಬೇರೆಯವರಿಗೆ ಸಾಧ್ಯವಾಗದಿರುವುದು ಅವರಿಗೆ ಹೇಗೆ ಸಾಧ್ಯವಾಗುತ್ತದೆ?

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಜೇಮ್ಸ್ ಕ್ಲಿಯರ್ ಬರೆದ 'ಅಟಾಮಿಕ್ ಹ್ಯಾಬಿಟ್ಸ್' ಪುಸ್ತಕ, ಕಳೆದ ಐದು ವರ್ಷಗಳಲ್ಲಿ ಜಗತ್ತಿನ ಎಲ್ಲ ದೇಶಗಳಲ್ಲಿ ಅತಿ ಹೆಚ್ಚು ಮಾರಾಟವಾದ ಪುಸ್ತಕಗಳಲ್ಲೊಂದು. ಪ್ರತಿದಿನ ನಾವು ನಮ್ಮ ಅಭ್ಯಾಸವನ್ನು ಸಣ್ಣ ಪ್ರಮಾಣದಲ್ಲಿ ಬದಲಿಸಿಕೊಂಡರೆ, ಮುಂದೊಂದು ದಿನ ಅಸಾಧಾರಣ ಬದಲಾವಣೆಗೆ ಕಾರಣವಾಗಿ, ಅಸಾಮಾನ್ಯ ಸಾಧನೆ ಮಾಡಬಹುದು ಎಂಬುದನ್ನು ಜೇಮ್ಸ್ ಕ್ಲಿಯರ್ ಆ ಕೃತಿಯಲ್ಲಿ ಹತ್ತಾರು ನಿದರ್ಶನಗಳೊಂದಿಗೆ ವಿವರಿಸಿದ್ದಾನೆ. ಜೇಮ್ಸ್ ಕ್ಲಿಯರ್ ಈ ಪುಸ್ತಕವನ್ನು ಬರೆದಾಗ ಜಪಾನಿಯರು, ''ಇದರಲ್ಲಿ ಹೊಸ ಸಂಗತಿಗಳೇನೂ ಇಲ್ಲ. ಕ್ಲಿಯರ್ ನಮ್ಮ ಕೈಜೆನ್ ತತ್ವವನ್ನು ಎಗರಿಸಿ, ತನ್ನದೇ ಭಾಷೆಯಲ್ಲಿ ಬರೆದಿದ್ದಾನೆ. ಇದು ನಮ್ಮ ಕೈಜೆನ್ ತತ್ವವಲ್ಲದೇ ಬೇರೇನೂ ಅಲ್ಲ'' ಎಂಬ ಉದ್ಗಾರ ತೆಗೆದಿದ್ದರು. ಆ ಕಾರಣದಿಂದ ಈ ಕೃತಿ ಜಪಾನಿನಲ್ಲಿ ಹೆಚ್ಚು ಮಾರಾಟವಾಗಲಿಲ್ಲ.

ಜಪಾನಿನಲ್ಲಿ ಕೈಜೆನ್ ಎಂಬ ತತ್ವವಿದೆ. ಅದನ್ನು The Japanese Method for Transforming Habits, One Small Step at a Time ಎಂದು ಸಂಕ್ಷಿಪ್ತವಾಗಿ ಹೇಳುತ್ತಾರೆ. ಜಪಾನಿ ಮೂಲದ ಟೊಯೋಟಾ ಕಂಪನಿಯ ಯಶಸ್ಸಿಗೆ ಕೈಜೆನ್ ತತ್ವವೇ ಕಾರಣ ಎಂದು ಆ ಕಂಪನಿಯು ಅಭಿಮಾನದಿಂದ ಹೇಳಿಕೊಳ್ಳುತ್ತದೆ. ಸಣ್ಣ ಸಣ್ಣ ಬದಲಾವಣೆಗಳು ಕಾಲಾಂತರದಲ್ಲಿ ಆಳವಾದ ರೂಪಾಂತರಗಳಿಗೆ ಕಾರಣವಾಗಬಹುದು. ಅಷ್ಟೇ ಅಲ್ಲ, ಕೈಜೆನ್ ತತ್ವ ತಾಳ್ಮೆ, ಸ್ಥಿರತೆ ಮತ್ತು ಸಾವಧಾನತೆಯನ್ನು ಒತ್ತಿಹೇಳುವುದರಿಂದ ವ್ಯಕ್ತಿ ಮತ್ತು ಸಂಸ್ಥೆಯ ಬೆಳವಣಿಗೆಗೆ ಈ ತತ್ವ ಸಹಾಯಕವಾಗಲಿದೆ ಎಂಬುದು ಜಪಾನಿಯರ ಜೀವನ ದರ್ಶನ.

ಕೈಜೆನ್‌ನ ಕೇಂದ್ರ ಸಿದ್ಧಾಂತವೆಂದರೆ, ಯಾವುದನ್ನೇ ಆಗಲಿ ಸಣ್ಣದಾಗಿ ಆರಂಭಿಸುವುದು. ಗಮನಾರ್ಹ ಬದಲಾವಣೆಯು ಸಣ್ಣ ಹಂತಗಳೊಂದಿಗೆ ಪ್ರಾರಂಭವಾಗಿ, ಬೃಹತ್ ರೂಪ ಪಡೆಯುತ್ತದೆ. ನಿಮ್ಮ ಜೀವನವನ್ನು ಒಂದೇ ಬಾರಿಗೆ ಕೂಲಂಕಷವಾಗಿ ಪರಿಶೀಲಿಸುವ ಬದಲು, ಒಂದು ಸಣ್ಣ ಕ್ರಿಯೆಯೊಂದಿಗೆ ಪ್ರಾರಂಭಿಸುವುದು. ಇದು ಕಾಲಕ್ರಮೇಣ ಶಾಶ್ವತ ಬದಲಾವಣೆಯನ್ನು ಸೃಷ್ಟಿಸುತ್ತದೆ. ಕೈಜೆನ್ ತತ್ವದ ಪ್ರಕಾರ ವೇಗಕ್ಕಿಂತ ಸ್ಥಿರತೆಯು ಹೆಚ್ಚು ಮುಖ್ಯ. ರಾತ್ರಿಯಲ್ಲಿ ಪ್ರಮುಖ ಬದಲಾವಣೆಯನ್ನು ಸಾಧಿಸಲು ಪ್ರಯತ್ನಿಸುವುದಕ್ಕಿಂತ, ಸಣ್ಣ, ಸ್ಥಿರವಾದ ಸುಧಾರಣೆಗಳನ್ನು ಮಾಡುವುದು ಹೆಚ್ಚು ಪರಿಣಾಮಕಾರಿ. ದೊಡ್ಡ ಗುರಿಗಳನ್ನು ಸಣ್ಣ ಹಂತಗಳಾಗಿ ಒಡೆಯಬೇಕು ಎಂದು ಈ ತತ್ವವು ಹೇಳುತ್ತದೆ. ದೊಡ್ಡ ಗುರಿಗಳನ್ನು ಸಾಧಿಸಲು ಅಗಾಧ ಶ್ರಮ, ಯೋಜನೆ ಅಗತ್ಯ. ಒಂದು ಹಂತದಲ್ಲಿ ಇದು ಅಸಾಧ್ಯ ಎಂದು ಅನಿಸಬಹುದು. ಈ ಕಾರಣಕ್ಕೆ ಕೈಚೆಲ್ಲಿಬಿಡಬಹುದು. ಮಹತ್ವಾಕಾಂಕ್ಷೆಯ ಗುರಿಗಳನ್ನು ಸಣ್ಣ, ನಿರ್ವಹಣಾ ಕ್ರಮಗಳಾಗಿ ವಿಭಜಿಸಲು ಕೈಜೆನ್ ಪ್ರೋತ್ಸಾಹಿಸುತ್ತದೆ. ಅವುಗಳನ್ನು ಸುಲಭವಾಗಿ ಸಾಧಿಸಲು ಅಣಿಗೊಳಿಸುತ್ತದೆ.

ಪರಿಪೂರ್ಣತೆ ಸಾಧಿಸುವ ಮನಸ್ಸು ಸಾಮಾನ್ಯವಾಗಿ ಹೊಸದನ್ನು ಪ್ರಾರಂಭಿಸುವುದನ್ನು ತಡೆಯುತ್ತದೆ. ಪ್ರಗತಿಯು ಪರಿಪೂರ್ಣವಾಗಿರಬೇಕಾಗಿಲ್ಲ ಎಂದು ಕೈಜೆನ್ ತತ್ವ ಹೇಳುತ್ತದೆ. ಅವು ಅಪೂರ್ಣ ಅಥವಾ ಗೊಂದಲಮಯವಾಗಿದ್ದರೂ ಸಣ್ಣ ಹೆಜ್ಜೆಗಳನ್ನು ಇಡುತ್ತಾ ನಿಶ್ಚಿತ ಗುರಿ ಸಾಧಿಸಲು ಸಹಾಯ ಮಾಡುತ್ತವೆ. ನಿರಂತರವಾಗಿ ಪುನರಾವರ್ತನೆಯಾಗುವ ಸಣ್ಣ ಕ್ರಿಯೆಗಳು ಅಭ್ಯಾಸಗಳನ್ನು ರೂಪಿಸುತ್ತವೆ. ಒಂದು ಸಣ್ಣ, ಸಕಾರಾತ್ಮಕ ಬದಲಾವಣೆಯೊಂದಿಗೆ ಪ್ರಾರಂಭಿಸುವ ಮೂಲಕ, ನಿಮ್ಮ ಗುರಿಗಳು ಮತ್ತು ಮೌಲ್ಯಗಳನ್ನು ಬೆಂಬಲಿಸುವ ಅಭ್ಯಾಸಗಳನ್ನು ನೀವು ರೂಢಿಸಿಕೊಳ್ಳುತ್ತಾ ಹೋಗಬಹುದು. ಒಂದೇ ಸಲ ಅದ್ಭುತ ಗೆಲುವು ಸಾಧಿಸಿ ಬೀಗಬೇಕಿಲ್ಲ. ಸಣ್ಣ-ಪುಟ್ಟ ಗೆಲುವುಗಳನ್ನು ಸಂಭ್ರಮಿಸುವುದನ್ನು ಕಲಿಯಬೇಕು ಎಂದು ಕೈಜೆನ್ ಹೇಳುತ್ತದೆ. ಸಣ್ಣ ಗೆಲುವುಗಳು ಮತ್ತಷ್ಟು ಗೆಲುವು ಸಾಧಿಸಲು ನಮ್ಮನ್ನು ಪ್ರೇರೇಪಿಸುತ್ತವೆ. ಚಿಕ್ಕ ಚಿಕ್ಕ ಸಂಭ್ರಮಗಳು ನಮ್ಮನ್ನು ಸದಾ ಸಂತುಷ್ಟರನ್ನಾಗಿಡುತ್ತದೆ. ಇದು ದೊಡ್ಡ ಗೆಲುವು ಸಾಧಿಸಲು ಬೇಕಾದ ಸ್ಫೂರ್ತಿಯನ್ನು ನೀಡುತ್ತದೆ.

ಪ್ರಕ್ರಿಯೆಯ ಮೇಲೆ ಕೇಂದ್ರೀಕರಿಸಿ, ಕೇವಲ ಫಲಿತಾಂಶವಲ್ಲ ಎಂಬುದು ಸಹ ಕೈಜೆನ್ ತತ್ವದ ಪ್ರಮುಖ ತಿರುಳು. ತಲುಪಬೇಕಾದ ಗಮ್ಯಸ್ಥಾನದ ಮೇಲೆ ಗಮನವನ್ನು ಕೇಂದ್ರೀಕರಿಸದೇ, ಪ್ರಯಾಣವನ್ನು ಆನಂದಿಸುವ ಮನೋಭಾವ ಮುಖ್ಯ. ಫಲಿತಾಂಶವನ್ನು ಲೆಕ್ಕಿಸದೇ ಸುಧಾರಣೆಯ ಪ್ರಕ್ರಿಯೆಯು ಸರಿಯಾಗಿದೆಯೇ ಎಂಬುದರತ್ತ ಲಕ್ಷ್ಯ ವಹಿಸಬೇಕು. ವೈಫಲ್ಯವನ್ನು ಕಲಿಕೆಯ ಅವಕಾಶವಾಗಿ ಸ್ವೀಕರಿಸಬೇಕು ಎಂಬುದೂ ಕೈಜೆನ್ ತತ್ವವೇ. ವೈಫಲ್ಯದ ಭಯಕ್ಕಿಂತ ಹೆಚ್ಚಾಗಿ, ಸೋಲು ಅಥವಾ ಹಿನ್ನಡೆಗಳಿಂದ ಕಲಿಯಲು ಮತ್ತು ಬೆಳೆಯಲು ಅವಕಾಶಗಳಾಗಿ ನೋಡುವುದನ್ನು ಕೈಜೆನ್ ತತ್ವ ಪ್ರೋತ್ಸಾಹಿಸುತ್ತದೆ.

ಅಷ್ಟಕ್ಕೂ ಕೈಜೆನ್ ಒಂದು ಜೀವನಶೈಲಿ. ಅದು ಜೀವನದ ತಪ್ಪುಗಳನ್ನು ಸರಿಪಡಿಸುವ ಅಥವಾ ಫಿಕ್ಸ್ ಮಾಡುವ ಮ್ಯಾಜಿಕ್ ಅಲ್ಲ. ಕೈಜೆನ್ ಅಂದ್ರೆ, ಜೀವನದ ಎಲ್ಲ ಕ್ಷೇತ್ರಗಳಲ್ಲಿ ನಿರಂತರ ಸುಧಾರಣೆಯ ಮನಸ್ಥಿತಿಯನ್ನು ಅಳವಡಿಸಿಕೊಳ್ಳುವುದು. ಇದು ಒಂದು ಬಾರಿಯ ಪ್ರಯತ್ನವಲ್ಲ, ಆದರೆ ಇದು ನಿರಂತರ ಕಲಿಕೆ ಮತ್ತು ಪ್ರತಿದಿನವೂ ಸ್ವಲ್ಪ ಸ್ವಲ್ಪ ಉತ್ತಮವಾಗಲು ಶ್ರಮಿಸುವ ಜೀವಮಾನದ ಬದ್ಧತೆ. ಸ್ಥಿರತೆ, ಸಾವಧಾನತೆ ಮತ್ತು ತಾಳ್ಮೆಯ ಮೇಲೆ ಕೇಂದ್ರೀಕರಿಸುವ ಮೂಲಕ, ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಸಕಾರಾತ್ಮಕ ಬದಲಾವಣೆಗಳನ್ನು ಕಾಣುವುದು ಕೈಜೆನ್ ತತ್ವದ ಪ್ರತಿಪಾದನೆ.

ಕೈಜೆನ್ ತತ್ವವು ಜಪಾನಿಯರ ಜೀವನದಲ್ಲಿ ಹಾಸುಹೊಕ್ಕಾಗಿರುವುದನ್ನು ಅಲ್ಲಿನ ಜನಜೀವನದಲ್ಲಿ ಕಾಣಬಹುದು. ಜಪಾನಿಯರು ಯಾವತ್ತೂ ಒಂದೇ ಸಲ ದಾಪುಗಾಲು ಇಡುವ ಮನೋಭಾವದವರಲ್ಲ. ಅವರು 'ಮನೆ ಗೆದ್ದು ಮಾರು ಗೆಲ್ಲು' ಎಂಬ ತತ್ವದಲ್ಲಿ ನಂಬಿಕೆಯುಳ್ಳವರು. ಅವರು ಶ್ರೀರಾಮನ ಅಳಿಲಿನಂತೆ ಬೆಟ್ಟವನ್ನಾದರೂ ಮಟ್ಟಸ ಮಾಡಬಹುದು ಎಂಬುದನ್ನು ಒಪ್ಪುವವರು. ನಿತ್ಯಜೀವನದಲ್ಲಿ ಕೈಜೆನ್ ತತ್ವವನ್ನು ಅಳವಡಿಸಿಕೊಂಡರೆ, ಯಾವ ಸಾಧನೆಯನ್ನಾದರೂ ಸಾಧ್ಯವಾಗಿಸಬಹುದು ಎಂದು ಬಲವಾಗಿ ನಂಬಿರುವವರು. ಹೀಗಾಗಿ ಅವರಿಗೆ ಬೇರೆ ಯಾರಿಗೂ ಸಾಧ್ಯವಾಗದೇ ಇರುವುದು ಸಾಧ್ಯವಾಗುತ್ತಿದೆ. ಜಪಾನಿಯರು ಎಲ್ಲವನ್ನೂ ಸಣ್ಣದಾಗಿಯೇ ನೋಡುತ್ತಾರೆ (ಅವರ ಕಣ್ಣುಗಳು ಸಣ್ಣಗಿರುವುದೂ ಇದಕ್ಕೆ ಕಾರಣವಾಗಬಹುದಾ? ಗೊತ್ತಿಲ್ಲ). ಅವರು ಸಣ್ಣದಕ್ಕೆ ಸಣ್ಣದನ್ನು ಸೇರಿಸುತ್ತಾ, ದೊಡ್ಡದು ದೊಡ್ಡವು ಮಾಡುತ್ತಾ ಹೋಗುತ್ತಾರೆ. ಸಣ್ಣದಿಂದ ದೊಡ್ಡದನ್ನು ಮಾಡುತ್ತಾರೆ.

ಅಷ್ಟಕ್ಕೂ ಕೈಜೆನ್ ಹೇಳುವುದೂ ಅದನ್ನೇ ಅಲ್ಲವೇ?

ಇದು ಗಂಟೆಗಳ ದೇಶ!

ಗೊತ್ತಾ, ಜಪಾನನ್ನು 'ಗಂಟೆಗಳ ದೇಶ' ಎಂದೂ ಕರೆಯುತ್ತಾರೆ. ಇದು ಕೇವಲ ಸಾಂಪ್ರದಾಯಿಕ ಹಾಗೂ ಧಾರ್ಮಿಕ ಆಚರಣೆಗಳ ಕಾರಣದಿಂದ ಅಲ್ಲ, ಇತಿಹಾಸ, ಕಲೆ ಮತ್ತು ಸಮಾಜಜೀವನದ ಹಲವು ಕಾರಣಗಳಿಂದ ಹಾಗೆ ಕರೆಯುತ್ತಾರೆ. ಈ ಗಂಟೆಗಳು ಜಪಾನ್ ದೇಶದ ವಿಶಿಷ್ಟ ಆಕರ್ಷಣೆ, ಜನರ ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಸಂಬಂಧವನ್ನು ಅವು ಪ್ರತಿಬಿಂಬಿಸುತ್ತವೆ. ಯಾವುದೇ ದೇಗುಲಕ್ಕೆ ಹೋದರೂ ವಿವಿಧ ಆಕಾರದ ಗಂಟೆಗಳನ್ನು ನೋಡಬಹುದು. ಕೆಲವು ಗಂಟೆಗಳಂತೂ ಆನೆ ಗಾತ್ರದ್ದು. ಕ್ಯೋಟೋದ ದೇಗುಲದಲ್ಲಿ ಸಣ್ಣ ಗಂಟೆಯಿಂದ ಹಿಡಿದು ಹತ್ತು ಮೀಟರ್ ಎತ್ತರದ ಗಂಟೆಯವರೆಗೆ ವೈವಿಧ್ಯಮಯ ಗಂಟೆಗಳನ್ನು ನೋಡಿ ಸೋಜಿಗಗೊಂಡಿದ್ದೆ. ಅಲ್ಲಿ ಗಂಟೆಗಾಗಿಯೇ ಮೀಸಲಾದ ದೇಗುಲವೂ ಇದೆ. ಅಂದರೆ ಗಂಟೆಯೇ ಆ ದೇಗುಲದ ಆರಾಧ್ಯಮೂರ್ತಿ!

ಜಪಾನಿನಲ್ಲಿ ಗಂಟೆಗಳ ಬಳಕೆಯು ಶತಮಾನಗಳ ಇತಿಹಾಸ ಹೊಂದಿದೆ. ಮೊದಲು, ಚೀನಾದಿಂದ ಬೌದ್ಧ ಧರ್ಮದೊಂದಿಗೆ ಗಂಟೆಗಳು ಜಪಾನನ್ನು ಪ್ರವೇಶಿಸಿದವು. ಆರಂಭದಲ್ಲಿ ಬೌದ್ಧ ದೇಗುಲಗಳಲ್ಲಿ ಧಾರ್ಮಿಕ ಉತ್ಸವಗಳು ಮತ್ತು ಪೂಜಾವಿಧಿಗಳ ಸಂದರ್ಭದಲ್ಲಿ ಮಾತ್ರ ಗಂಟೆಗಳನ್ನು ಬಾರಿಸಲಾಗುತ್ತಿತ್ತು. ಅವು ಮಂಗಳವನ್ನು ಸೂಚಿಸುವ ಧ್ವನಿ ಎಂಬ ಭಾವನೆ ಅವರಲ್ಲಿ ಮನೆಮಾಡಿತ್ತು.

ಗಂಟೆಗಳ ಮೂಲ ಉದ್ದೇಶ ಪೂಜೆ ಮತ್ತು ಆಚರಣೆಗೆ ಸೀಮಿತವಾಗಿದ್ದರೂ ಕಾಲಕ್ರಮೇಣ ಅವು ಜಪಾನಿನ ಸಾಂಸ್ಕೃತಿಕ ಜೀವನದ ಪ್ರಮುಖ ಅಂಗವಾಗಿ ಮಾರ್ಪಟ್ಟವು.16ನೇ

ಶತಮಾನದಲ್ಲಿ ಜಪಾನ್ ದೇಶದ ಅನೇಕ ಸ್ಥಳಗಳಲ್ಲಿ ವಿಶಿಷ್ಟ ರೀತಿಯ ದೊಡ್ಡ ಕಂಚಿನ ಗಂಟೆಗಳನ್ನು ತಯಾರಿಸಲಾಯಿತು. ಈ ಗಂಟೆಗಳು ನಗುವ ದನಿ ಅಥವಾ ವಿಶಿಷ್ಟ ನಿನಾದಗಳಿಂದ ವಿಶ್ವದ ಗಮನ ಸೆಳೆದವು.

ಜಪಾನಿನ ಬೌದ್ಧ ದೇಗುಲಗಳಲ್ಲಿ ದೊಡ್ಡ ದೊಡ್ಡ ಕಂಚಿನ ಗಂಟೆಗಳಿದ್ದು ಅವುಗಳನ್ನು 'ಕೋನೇ' ಎಂದು ಕರೆಯಲಾಗುತ್ತದೆ. ಪ್ರತಿಯೊಂದು ದೇಗುಲದ ಗಂಟೆಗಳು ವಿಭಿನ್ನ ಅರ್ಥವನ್ನು ಹೊಂದಿದ್ದು, ಅವುಗಳನ್ನು ವಿಶೇಷ ಆಚರಣೆಗಳಲ್ಲಿ ಮತ್ತು ಧಾರ್ಮಿಕ ಸಮಾರಂಭಗಳಲ್ಲಿ ಬಾರಿಸಲಾಗುತ್ತದೆ. ಹೊಸ ವರ್ಷದ ದಿನದಂದು (ಓಮಿಸೊಕಾ), ಗಂಟೆ ಬಾರಿಸುವ ವಿಶೇಷ ಆಚರಣೆ ಜಪಾನಿನ ಪ್ರಮುಖ ಆಕರ್ಷಣೆಗಳಲ್ಲೊಂದು. ಈ ಸಂದರ್ಭದಲ್ಲಿ, ದೇಶದೆಲ್ಲೆಡೆ ಇರುವ ದೇಗುಲಗಳಲ್ಲಿ 108 ಬಾರಿ ಗಂಟೆಗಳನ್ನು ಬಾರಿಸುತ್ತಾರೆ. ಇದು ಮಾನವನ ನೂರೆಂಟು ಕಾಮನೆಗಳ ಅಥವಾ ಪಾಪಗಳ ಸಂಕೇತವಾಗಿದೆ. ಪ್ರತಿ ಬಾರಿ ಗಂಟೆ ಮೊಳಗಿದಾಗ ಕೊಳೆ ಹೊರಹೋಗಿ, ಸುತ್ತಲಿನ ಪರಿಸರ ಶುದ್ಧವಾಗುತ್ತದೆ ಎಂದು ಜಪಾನಿಯರು ಪರಿಗಣಿಸುತ್ತಾರೆ.

ಚಿಯೋನ್‌ಇನ್ ಗಂಟೆ (ಕಿಯೋಟೊ) ಜಪಾನಿನ ಅತಿ ದೊಡ್ಡ ಬೌದ್ಧ ಗಂಟೆಗಳ ಪೈಕಿ ಒಂದಾಗಿದೆ. ಈ ಗಂಟೆ ಸುಮಾರು 70 ಟನ್ ತೂಕವಿದ್ದು, ಎಂಥವರನ್ನಾದರೂ ಆಕರ್ಷಿಸುತ್ತದೆ. ಹಾಗೆಯೇ ಟೊಡಾಯ್ಜಿ ಎಂಬ ದೇವಸ್ಥಾನದ ಗಂಟೆ ಬೌದ್ಧ ಧರ್ಮದ ಪ್ರಮುಖ ಸಂಕೇತವಾಗಿದೆ. ಈ ಗಂಟೆಯಿಂದ ಹೊಮ್ಮುವ ಶಬ್ದ ಶಾಂತಿಯ ಸಂಕೇತವಂತೆ. ಜಪಾನಿನ ಹಬ್ಬಗಳಲ್ಲಿ ಮತ್ತು ಮೇಳಗಳಲ್ಲಿ ಗಂಟೆಗಳ ಬಳಕೆ ವಿಶೇಷ ಅರ್ಥವನ್ನು ಹೊಂದಿದೆ. ಗಂಟೆಯಿಲ್ಲದೇ ಯಾವ ಆಚರಣೆಗಳೂ ಆರಂಭವಾಗುವುದಿಲ್ಲ. ಕೆಲವು ಗಂಟೆಗಳು ಹಬ್ಬದ ಮೆರವಣಿಗೆಗಳನ್ನು ಮುನ್ನಡೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅವು ಸಂಸ್ಕೃತಿಯ ಜೀವಂತ ಸಾಕ್ಷಿಯಾಗಿ ಕಾರ್ಯನಿರ್ವಹಿಸುತ್ತವೆ. ಗಂಟೆ ಶಬ್ದವನ್ನು ಹೊಮ್ಮಿಸಿದರೂ, ಅದರ ನಂತರ ಸೃಷ್ಟಿಯಾಗುವ ಮೌನ ವಿಶೇಷ ಅರ್ಥವನ್ನು ಹೊಂದಿದೆ. ಆ ಮೌನ ಸೃಷ್ಟಿಯಾಗಲು ಗಂಟೆಯ ಸದ್ದೇ ಕಾರಣವೆಂಬುದು ಅವರ ನಂಬಿಕೆ.

ಗಂಟೆಗಳ ಧ್ವನಿಯು ಮನಸ್ಸಿನ ಮೇಲೆ ಆಳವಾದ ಭಾವನಾತ್ಮಕ ಪ್ರಭಾವ ಬೀರುತ್ತದೆಂದು ಜಪಾನಿಯರು ಭಾವಿಸಿದ್ದಾರೆ. ಇದು ಜನರನ್ನು ಮೌನಕ್ಕೆ, ಆತ್ಮಾವಲೋಕನಕ್ಕೆ ಮತ್ತು ಆಧ್ಯಾತ್ಮಿಕತೆಯ ಕಡೆಗೆ ಪ್ರೇರೇಪಿಸುತ್ತದೆ. ಜಪಾನಿನಲ್ಲಿ ಬೌದ್ಧ ಧರ್ಮ ಮತ್ತು ಶಿಂಟೊ ಧರ್ಮದ ಪ್ರಭಾವ ಹೆಚ್ಚು. ಈ ಧರ್ಮಗಳಲ್ಲಿ ಗಂಟೆಗಳ ಮಹತ್ವ ಬಹಳ ದೊಡ್ಡದು. ಗಂಟೆಗಳ ಉದ್ದ ಶಬ್ದವನ್ನು 'ಅಂತಿಮ ಸತ್ಯ' ಅಥವಾ 'ಬೋಧಿಸತ್ವ' ಎಂಬ ರೂಪದಲ್ಲಿ ವ್ಯಾಖ್ಯಾನ ಮಾಡಲಾಗುತ್ತದೆ.

ಜಪಾನಿನಲ್ಲಿ ವ್ಯಾಪಕವಾಗಿರುವ ಝೆನ್ ನಂಬಿಕೆಯಲ್ಲೂ ಗಂಟೆಗಳಿಗೆ ಮಹತ್ವದ ಸ್ಥಾನವಿದೆ. ಗಂಟೆಗಳ ಧ್ವನಿ ಝೆನ್ ಧ್ಯಾನದ ಪ್ರಮುಖ ಭಾಗ. ಪ್ರತಿಯೊಂದು ಗಂಟೆಯ ಶಬ್ದವು ಜೀವಿಯ ಮನಸ್ಸನ್ನು ಶ್ರದ್ಧೆಯಿಂದ ತುಂಬಲು ಮತ್ತು ಪ್ರಜ್ಞಾಕೇಂದ್ರಕ್ಕೆ ಕರೆದೊಯ್ಯಲು ಪ್ರೇರಕ ಎಂಬ ನಂಬಿಕೆ ಅವರಲ್ಲಿದೆ. ಗಂಟೆಯ ಶಬ್ದವು ಸಮಯದ ಅನಿತ್ಯತೆಯನ್ನು ಮತ್ತು ಬದುಕಿನ ಸೌಂದರ್ಯವನ್ನು ನೆನಪಿಸಲು ಸಹಾಯಕವಾಗುವ ಲಕ್ಷಣಗಳೆಂದು ಝೆನ್ ತತ್ವಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಗಂಟೆಗಳ ಧ್ವನಿಯು ಕೇವಲ ಆಧ್ಯಾತ್ಮಿಕ ಮಾತ್ರ ಅಲ್ಲ, ಅದಕ್ಕೆ ವೈಜ್ಞಾನಿಕ ಅರ್ಥವೂ ಇದೆಯೆಂದು ಜಪಾನಿಯರು ಅರಿತುಕೊಂಡಿದ್ದಾರೆ. ಗಂಟೆಗಳ ಬಡಿತದ ಶಬ್ದವು ಮನಸ್ಸಿಗೆ ಶಾಂತಿಯನ್ನು ತರುವ ಕಂಪನಗಳನ್ನು ಹುಟ್ಟುಹಾಕುತ್ತವೆ. ಪ್ರಾಚೀನ ಯೋಗ ತತ್ವಗಳಲ್ಲಿ ಇದು 'ಶಬ್ದ ಚಿಕಿತ್ಸಾ' (Sound Therapy) ತಂತ್ರಜ್ಞಾನಕ್ಕೆ ಕಾರಣವಾಗಿದೆ. ಗಂಟೆಗಳ ಘೋಷವು ಗಾಳಿ, ನೀರು ಮತ್ತು ಭೂಮಿಯೊಂದಿಗೆ ಪರಸ್ಪರ ಆವರಣವನ್ನು ಉಂಟುಮಾಡುತ್ತದೆ ಎಂದು ಶಿಂಟೊ ತತ್ವವು ಹೇಳುತ್ತದೆ. ಇದು ಪ್ರಕೃತಿಯೊಂದಿಗೆ ಜೀವಿಗಳ ಒಡನಾಟವನ್ನು ಬೆಸೆಯಲು ಸಹಾಯಕವಾಗಿದೆಯಂತೆ.

ಆಧುನಿಕ ಜಪಾನಿನಲ್ಲಿ ಗಂಟೆಗಳು ಬಾಗಿಲಲ್ಲಿ ಅಥವಾ ಬಾಗಿಲು ಬಳಿಯ ಅಲಂಕಾರಿಕ ಸಾಮಗ್ರಿಯಾಗಿ, ನಗರಗಳಲ್ಲಿನ ಸಾರ್ವಜನಿಕ ಆಕರ್ಷಣೆಗಳಾಗಿ ಹಾಗೂ ಸಂಗೀತ ವಾದ್ಯೋಪಕರಣಗಳಾಗಿ ವಿವಿಧ ರೀತಿಯಲ್ಲಿ ಬಳಕೆಯಾಗಿಬಿಟ್ಟಿವೆ. ಬಹುರಾಷ್ಟ್ರೀಯ ಕಂಪನಿಗಳ ಆಧುನಿಕ ಆಫೀಸುಗಳಲ್ಲಿ ಅಥವಾ ಬೋರ್ಡ್ ರೂಮುಗಳಲ್ಲಿ ಸಹ ಗಂಟೆಗಳನ್ನು ಕಂಡರೆ ಆಶ್ಚರ್ಯಪಡಬೇಕಿಲ್ಲ. ಅಲ್ಲದೇ, ಕೆಲವು ಹೋಟೆಲ್‌ಗಳು ಮತ್ತು ಸಾರ್ವಜನಿಕ ತಾಣಗಳು ತಮ್ಮ ಆಕರ್ಷಣೆಯ ಭಾಗವಾಗಿ ಪುರಾತನ ಶೈಲಿಯ ಗಂಟೆಗಳನ್ನು ಪ್ರದರ್ಶಿಸುವುದನ್ನು ಎಲ್ಲೆಡೆ ಗಮನಿಸಬಹುದು.

ಹಿರೋಷಿಮಾದ ಶಾಂತಿ ಗಂಟೆ (Peace Bell) ಜಗತ್ತಿನಲ್ಲಿ ಪ್ರಸಿದ್ಧ. 1945ರಲ್ಲಿ ಪರಮಾಣು ಬಾಂಬ್ ದಾಳಿಯಿಂದ ಪ್ರೇರಿತವಾಗಿ ಶಾಂತಿಯನ್ನು ಪ್ರತಿನಿಧಿಸಲು ಆ ಗಂಟೆಯನ್ನು ನಿರ್ಮಿಸಲಾಯಿತು. ಇದನ್ನು ಪ್ರತಿ ವರ್ಷದ ಆಗಸ್ಟ್ 6ರಂದು ಶ್ರದ್ಧೆಯಿಂದ ಬಡಿಯಲಾಗುತ್ತದೆ. ಇದು ಜಗತ್ತಿಗೆ ಶಾಂತಿ ಮತ್ತು ಸಹಾನುಭೂತಿಯನ್ನು ಸಾರುವ ಸಂಕೇತವಾಗಿದೆ. ಜಗತ್ತಿನಲ್ಲಿ ಅತಿ ಹೆಚ್ಚು ಗಂಟೆಗಳನ್ನು ಉತ್ಪಾದಿಸುವ ಪ್ರಮುಖ ದೇಶಗಳಲ್ಲಿ ಜಪಾನ್ ಕೂಡ ಒಂದು. ಅಂದರೆ ಅವರಿಗೆ ಅದು ಮಾರಾಟದ ಸರಕೂ ಆಗಿದೆ. ಜಪಾನಿಯರು ಗಂಟೆಗಳನ್ನು ರಫ್ತು ಮಾಡಿ ಹಣವನ್ನೂ ಗಳಿಸುತ್ತಾರೆ.

ಮೂರ್ಖತನ: ಜಪಾನಿಯರ ಧೋರಣೆ

ಆಸ್ಟ್ರೇಲಿಯಾ ಕ್ರಿಕೆಟ್ ತಂಡದಲ್ಲಿ ಅಲ್ಲಿನ ಕೋಚ್ ಯಾವತ್ತೂ ಒಂದು ಮಾತು ಹೇಳುತ್ತಾನಂತೆ– No dickheads please. ಅಂದ್ರೆ ಯಾರೂ ಯಾರ ತಲೆಯನ್ನೂ ತಿನ್ನಬೇಡಿ. ಅಂದರೆ ನಿಮ್ಮ ಕೆಲಸವನ್ನು ನೀವು ನಿಯತ್ತಾಗಿ ಮಾಡುತ್ತಾ ಹೋಗಿ, ತಂಡ ಅದರ ಪಾಡಿಗೆ ಗೆಲುವು ಸಾಧಿಸುತ್ತದೆ. ಆದರೆ ಜಪಾನಿಯರು ಹೇಳುವುದು– No Idiots Please.

ಜಪಾನಿಯರಿಗೆ ವ್ಯಕ್ತಿಗಿಂತ ಸಮುದಾಯ, ಸಮಾಜ ಅಥವಾ ದೇಶ ಮುಖ್ಯ. ಅವರು ಮೂರ್ಖತನವನ್ನು ಸಹಿಸಿಕೊಳ್ಳುವುದಿಲ್ಲ. ಒಂದು ವೇಳೆ ನೀವು ಮೂರ್ಖರೇ ಆಗಿದ್ದರೂ ಪರವಾಗಿಲ್ಲ ಅಂತಾರೆ ಜಪಾನಿಯರು. ಅಷ್ಟರಮಟ್ಟಿಗೆ ಅವರು ಮೂರ್ಖರನ್ನು ಸಹಿಸಿಕೊಳ್ಳುತ್ತಾರೆ. ನಿಮ್ಮಲ್ಲಿ ಆ ಸ್ವಭಾವವಿದೆ ಎಂಬುದನ್ನು ಅರ್ಥಮಾಡಿಕೊಂಡರೆ ಸಾಕು. ಯಾವ ಕ್ಷಣದಲ್ಲಿ ನೀವು ಮೂರ್ಖರು ಎಂಬುದು ನಿಮಗೆ ಅರಿವಾಗುತ್ತದೋ, ಆಗ ನೀವು ಮೂರ್ಖರಲ್ಲ ಎಂಬುದು ಜಪಾನಿಯರ ನಂಬಿಕೆ.

ನೀವು ಮೂರ್ಖರಾದರೂ ಪರವಾಗಿಲ್ಲ, ಬೇರೆಯವರಿಗೆ ಒಳ್ಳೆಯದನ್ನು ಮಾಡಿ, ಅಪರಿಚಿತರಿಗೆ ದಯಾಳುಗಳಾಗಿ, ಹಿರಿಯರನ್ನು ಗೌರವಿಸಿ, ಬೇರೆಯವರು ಎಸೆದ ಕಸಗಳನ್ನು ಆಯ್ದು ಕಸದ ಬುಟ್ಟಿಗೆ ಹಾಕಿ, ನಿಮ್ಮಿಂದ ಬೇರೆಯವರಿಗೆ ಕಿರಿಕಿರಿಯಾಗದಂತೆ ನೋಡಿಕೊಳ್ಳಿ. ಇಷ್ಟೆಲ್ಲಾ ಮಾಡಿಯೂ ಮೂರ್ಖರಾಗಿದ್ದರೆ ಪರವಾಗಿಲ್ಲ, ಇದು ಜಪಾನಿಯರ ಧೋರಣೆ.

ಅ.ರಾ.ಮಿತ್ರ ಅಜ್ಜೇಯ 90; ಈವತ್ತು 'ಮಿತ್ರಾರ್ಜಿತ' ತುಂಬೊತ್ತು!

ಮಿತ್ರಾರ್ಜಿತ ಒಂದು ಅತ್ಯಮೂಲ್ಯ ಗ್ರಂಥ. ಇದರ ವಿವಿಧ ಭಾಗಗಳಲ್ಲಿ ಮಿತ್ರರ ಅಭಿಮಾನಿಗಳು, ಸಹೋದ್ಯೋಗಿಗಳು, ಕುಟುಂಬಸ್ಥರು, ನೆರೆಕೆರೆಯವರು, ಕನ್ನಡದ ಹಾಸ್ಯಪಟುಗಳು, ಅನಿವಾಸಿ ಕನ್ನಡಿಗರು, ಕವಿಗಳು ಪ್ರೀತಿಗೌರವದಿಂದ ಅರ್ಪಿಸಿದ ಅಕ್ಷರಗುಚ್ಛಗಳಿವೆ. ಶತಾವಧಾನಿ ಗಣೇಶ್ ಅವರು ತಮ್ಮ 'ವಿದ್ವದ್ವಿನೋದಗಗನದ ಮಿತ್ರ' ಲೇಖನದಲ್ಲಿ ಅ.ರಾ.ಮಿತ್ರ ಅವರ ವಾಗ್ಮಿತೆ, ವೈದುಷ್ಯ ಮತ್ತು ವಿನೋದಗಳನ್ನು ಗಂಗೆ-ಯಮುನೆ-ಸರಸ್ವತಿಯರಿಗೆ ಹೋಲಿಸಿರುವುದು ವಿಶೇಷ.

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅಕ್ಕಿಹೆಬ್ಬಾಳು ರಾಮಣ್ಣ ಮಿತ್ರ. ಆಕಾರದಲ್ಲಿ ಕೊಂಚ ಗಿಡ್ಡವೇ ಅಂತನಿಸುವ ವಾಮನಮೂರ್ತಿ ಆದ್ದರಿಂದ ಹೆಸರೂ ಹ್ರಸ್ವವಾಗಿ 'ಅ.ರಾ.ಮಿತ್ರ'. ವಿದ್ವತ್ತು, ವಾಗ್ಮಿತೆ, ವಿನೋದ-ವ್ಯಾಖ್ಯಾನಗಳಲ್ಲಿ ವಾಮನನಲ್ಲ ತ್ರಿವಿಕ್ರಮ. ಮಿತ್ರ ಅಂದರೆ ಸೂರ್ಯ. ಹೆತ್ತವರು ಆ ಅರ್ಥದಲ್ಲೇ ಹೆಸರಿಟ್ಟದ್ದಂತೆ. ಪಾಂಡಿತ್ಯದಲ್ಲಿ ಸೂರ್ಯನಷ್ಟೇ ಪ್ರಖರ. ಎಲ್ಲರನ್ನೂ ಸಮದೃಷ್ಟಿಯಿಂದ ಕಾಣುವ, ಎಲ್ಲರ ಬಾಳಲ್ಲೂ ಪ್ರೀತಿಭರಿತ ನಗುವಿನ ಬೆಳಕನ್ನು ನೀಡುವ ಗುಣದಿಂದಲೂ ಸೂರ್ಯನ ಹೋಲಿಕೆ. ಮಿತ್ರ ಅಂದರೆ ಸ್ನೇಹಿತ ಎಂದು ತಗೊಂಡರಂತೂ ಆಬಾಲವೃದ್ಧರಾದಿಯಾಗಿ ಎಲ್ಲರೊಡನೆ– ಮನೆಮಂದಿ, ಸಂಬಂಧಿಕರು, ಶಿಷ್ಯವೃಂದ, ಸಹೋದ್ಯೋಗಿಗಳು, ಸಾಹಿತ್ಯಾಭಿಮಾನಿಗಳು ಹಿರಿಕಿರಿಯರೆನ್ನದೆ ಪ್ರತಿಯೊಬ್ಬರೊಡನೆ– ಸ್ನೇಹಸರಸದ ಸಂವಹನ ನಡೆಸುವ ಸರಳ ಸ್ವಭಾವ. ಅಂಕಿತನಾಮವೇ ಅನ್ವರ್ಥನಾಮವೂ ಆಗಿರುವ ಅತ್ಯಾಪ್ತ ವ್ಯಕ್ತಿತ್ವ. ಜನ್ಮದಿನಾಂಕ ಪ್ರಕಾರ ನಾಡಿದ್ದು ಫೆಬ್ರವರಿ 25ಕ್ಕೆ ಬರೋಬ್ಬರಿ 90ರ ವಯಸ್ಸು. ಎರಡು ದಿನ ಮೊದಲೇ, ಅಂದರೆ ಈವತ್ತು ಬೆಂಗಳೂರಿನಲ್ಲಿ ಮಿತ್ರರ ಮಿತ್ರವರ್ಗ ಮತ್ತು ಮಿತ್ರಬಂಧುಗಳು ಸೇರಿ ಮಿತ್ರಾವರಣ– ಎಂಬೊಂದು ಸೌಹಾರ್ದ ಸನ್ಮಾನ ಸಮಾರಂಭ. 'ಮಿತ್ರಾರ್ಜಿತ' ಎಂಬ ಅತ್ಯಂತ ಸೂಕ್ತ ಹೆಸರಿನ ಅಭಿನಂದನಾ ಗ್ರಂಥದ ಸಮರ್ಪಣ. ಕಾರ್ಯಕ್ರಮ ನಡೆಯುವುದು ಭಾರತೀಯ ವಿದ್ಯಾಭವನದ ಖಿಂಚ ಸಭಾಂಗಣದಲ್ಲಿ; ಇಂಥದೊಂದು ಆತ್ಮೀಯ ಕಾರ್ಯಕ್ರಮವನ್ನು ಮಿಸ್ ಮಾಡ್ತಿದ್ದೇನಲ್ಲ, ಬೆಂಗಳೂರಲ್ಲಿರುತ್ತಿದ್ದರೆ ಖಂಡಿತ ಪಾಲ್ಗೊಳ್ಳುತ್ತಿದ್ದೆ– ಎಂಬ ಚಡಪಡಿಕೆ ಸದ್ಯಕ್ಕೆ ನನ್ನ ಮನಸ್ಸಿನಲ್ಲಿ.

ಅಭಿನಂದನಾ ಗ್ರಂಥರಚನೆಯ ಹೊಣೆ ಹೊತ್ತವರು ಅಣಕು ರಾಮನಾಥ್ ಮತ್ತು ಸೌಮ್ಯ ಮಿತ್ರ (ಅ.ರಾ.ಮಿತ್ರರ ಸುಪುತ್ರಿ). ಕಳೆದ ತಿಂಗಳು ಒಂದು ದಿನ ರಾಮನಾಥ್‌ರಿಂದ ನನಗೆ ವಾಟ್ಸ್ಯಾಪ್ ಕರೆ. ಒಂದು ಲೇಖನ ನೀವೂ ಬರೆದುಕೊಡಬೇಕು ಎಂದು ಪ್ರೀತಿಯ ಆದೇಶ. ಅ.ರಾ.ಮಿತ್ರರ ವಿದ್ವತ್ತಿನ ಲೆವೆಲ್ ಏನು, ಅವರ ಅಭಿನಂದನಾ ಗ್ರಂಥದಲ್ಲಿ ಬರೆಯಬಹುದಾದ ವಿದ್ವಜ್ಜನರ ಪಾಂಡಿತ್ಯಪ್ರತಿಭೆಗಳೇನು ಅವರೆಲ್ಲರೆದುರಿಗೆ ಪುಟಗೋಸಿ ನಾನೆಷ್ಟರವನು ಎಂದು ಒಮ್ಮೆ ಹಿಂಜರಿದೆ. ಆದರೂ ಒಪ್ಪಿಕೊಂಡೆ. ರಾಮನಾಥ್ ಕೊಟ್ಟಿದ್ದ ಗಡುವಿಗಿನ್ನೂ ಎರಡು ದಿನಗಳಿರುವಾಗಲೇ ಬರೆದು ಕಳುಹಿಸಿದೆ. 'ಅಶ್ವತ್ಥಂ ಪ್ರಾಹುರವ್ಯಯಮ್' ಎಂದು ಭಗವದ್ಗೀತೆಯ ಶ್ಲೋಕಭಾಗವೊಂದನ್ನು ಶೀರ್ಷಿಕೆಗೆ ಬಳಸಿದೆ. ನನ್ನ ಬರಹದ ಸಂಕ್ಷಿಪ್ತ ಸಂಕಲಿತ ರೂಪವನ್ನು ಇಲ್ಲಿ ನಿಮ್ಮ ಓದಿಗೆ ಒದಗಿಸುತ್ತಿದ್ದೇನೆ. ಅಂಥದೊಂದು ಶೀರ್ಷಿಕೆ ಏಕೆ ಮತ್ತು ಅ.ರಾ.ಮಿತ್ರರ ಬಗೆಗೆ ಗುರುಸಮಾನ ಪೂಜ್ಯರೆಂಬ ಗೌರವಭಾವ ನನ್ನಲ್ಲಿರುವುದಕ್ಕೆ ಕಾರಣವೇನು ಎಂದು ನಿಮಗಿದರಿಂದ ಅಂದಾಜಾಗುತ್ತದೆ.

• • •

ಅ.ರಾ.ಮಿತ್ರರನ್ನು ನಾನು ಮೊದಲ ಬಾರಿಗೆ ಭೇಟಿಯಾದದ್ದು ಅಮೆರಿಕದಲ್ಲೇ, 2004ರಲ್ಲಿ ಫ್ಲೋರಿಡಾದ ಒರ್ಲ್ಯಾಂಡೊ ನಗರದಲ್ಲಿ ನಡೆದ 'ಅಕ್ಕ' ಸಮ್ಮೇಳನದಲ್ಲಿ. ಅದಕ್ಕೆ ಮುಂಚೆ ಅವರ ಬಗ್ಗೆ ಅಲ್ಲಿಇಲ್ಲಿ ಕೇಳಿದ್ದೆ, ಓದಿದ್ದೆ. ಅವರ ಕೆಲವು ಲಲಿತಪ್ರಬಂಧಗಳನ್ನೂ, 'ಸುಧಾ'ದಲ್ಲಿ ಬರುತ್ತಿದ್ದ 'ಕುಮಾರವ್ಯಾಸ ಭಾರತ ಕಥಾಮಿತ್ರ ಸರಣಿ'ಯ ಬರಹಗಳನ್ನೂ ಓದಿದ್ದೆ. ಟಿವಿಯಲ್ಲಿ ಹರಟೆ ಕಾರ್ಯಕ್ರಮಗಳಲ್ಲಿ ನೋಡಿ ಮುಖಪರಿಚಯವೂ ಇತ್ತು. ಆದರೆ ಅಷ್ಟು ದೊಡ್ಡ ವಿದ್ವಾಂಸರನ್ನು ನೇರವಾಗಿ ಹೋಗಿ ಮಾತನಾಡಿಸಲಿಕ್ಕೆ ಸ್ವಲ್ಪ ಅಳುಕು. ಅಕ್ಕ ಸಮ್ಮೇಳನದ ವರದಿಗಾರಿಕೆಗಾಗಿ ಬೆಂಗಳೂರಿನಿಂದ ಬಂದಿದ್ದ ಪತ್ರಕರ್ತ ಸ್ನೇಹಿತ ಶ್ಯಾಮಸುಂದರ್ ಬಳಿ ನನ್ನಿಚ್ಛೆ ವ್ಯಕ್ತಪಡಿಸಿದೆ. ಪರಿಚಯ ಮಾಡಿಸುತ್ತೇನೆ ಎಂದರು. ಆ ಸಂದರ್ಭದಲ್ಲಿ ಅ.ರಾ.ಮಿತ್ರರ ಬಗ್ಗೆ ಶ್ಯಾಮಸುಂದರ್ ಮಾಡಿದ್ದ ಹೋಲಿಕೆಯೊಂದು ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ನಿಂತಿದೆ. ಶ್ಯಾಮ್ ಹೇಳಿದ್ದಿಷ್ಟೇ– ''ಅ.ರಾ.ಮಿತ್ರರೆಂದರೆ ಪ್ರಸಕ್ತ ಕನ್ನಡ ಸಾರಸ್ವತ ಉದ್ಯಾನದಲ್ಲೊಂದು ಅಶ್ವತ್ಥವೃಕ್ಷ ಇದ್ದಂತೆ. ಅವರನ್ನು ನೋಡಿದೊಡನೆ ಗೌರವಭಾವ ತನ್ನಿಂತಾನೇ ಮೂಡುತ್ತದೆ'' ಎಂದು. ಆಮೇಲೆ ಹಾಗೆಯೇ ಆಯಿತು. ಸಮ್ಮೇಳನದ ಮುಖ್ಯ ಸಭಾಂಗಣದ ಪಕ್ಕದಲ್ಲಿ ಯಾರೊಂದಿಗೋ ಹರಟೆಯಲ್ಲಿ ತೊಡಗಿದ್ದ ಮಿತ್ರರ ಬಳಿ ಸಾರಿದೆವು. ಪರಿಚಯ ತಿಳಿಸಿದೆ. ಕೈಕುಲುಕಿದ ಮಿತ್ರರ ಸ್ಪರ್ಶದಲ್ಲಿ ಏನೋಒಂದು ವಿಶೇಷ ಆತ್ಮೀಯತೆ ಅನುಭವಕ್ಕೆ ಬಂತು. ಆ ಭೇಟಿ ನಾಲ್ಕೈದು ನಿಮಿಷಗಳದಷ್ಟೇ ಆಗಿತ್ತು. ಹಾಸ್ಯ ಭಾಷಣಕ್ಕೆ ಸಮಯವಾಯ್ತೆಂದು ಆಯೋಜಕರು ಅವರನ್ನು ಕರೆದುಕೊಂಡು ಹೋದರು. ಭಾಷಣವಂತೂ ವಿದ್ವತ್ಪೂರ್ಣವೂ ಹಾಸ್ಯದ ಚಿನಕುರುಳಿಗಳಿಂದ ಕೂಡಿದ್ದೂ ಆಗಿತ್ತು.

ಸಮ್ಮೇಳನ ಮುಗಿದ ಮಾರನೆದಿನವೇ ಅಲ್ಲೇ ಪಕ್ಕದ ಟಾಂಪಾ ನಗರದಲ್ಲಿ ಅ.ರಾ.ಮಿತ್ರರೊಡನೆ ಒಂದು ಅನೌಪಚಾರಿಕ ಭೇಟಿ. ಒಂದಷ್ಟು ಸ್ನೇಹಿತರು ಸೇರಿ ಎಲ್ಲರಿಗೂ ಪಕ್ಕಾ ಕನ್ನಡದಡುಗೆಯ ಒಂದು ಫಸ್ಟ್‌ಕ್ಲಾಸ್ ಮನೆಯೂಟ, ಅಲ್ಲಿ ನಗು ಹಾಸ್ಯದ ಕಲರವ. ಅ.ರಾ.ಮಿತ್ರ ಎಂದೊಡನೆ ನನ್ನ ಮನಸ್ಸಲ್ಲಿ ಥಟ್ಟನೆ ಮೂಡುವುದು ಆ ಚಿತ್ರಣವೇ. ಅಂಥದೊಂದು ಸುಂದರ ಸಮಾವೇಶ ಸಾಧ್ಯವಾದದ್ದು ಸಮ್ಮೇಳನದ ಹೊತ್ತಿಗೇ ಭೀಕರವಾದ ಚಂಡಮಾರುತ ಅಪ್ಪಳಿಸಿದ್ದರಿಂದ. ಅದರ ಅಟಾಟೋಪದಿಂದಾಗಿ ಒರ್ಲ್ಯಾಂಡೊ ವಿಮಾನನಿಲ್ದಾಣವೂ ಸ್ಥಗಿತವಾಗಿದ್ದರಿಂದ. ವಾಷಿಂಗ್ಟನ್‌ಗೆ ಹಿಂದಿರುಗಲು ನಾನು ಟಾಂಪಾದಿಂದ ವಿಮಾನ ಹಿಡಿಯಬೇಕಿತ್ತು. ಶ್ಯಾಮ್ ಕೂಡ ನನ್ನೊಂದಿಗಿದ್ದರು. ಟಾಂಪಾದಲ್ಲಿ ಅವರ ಅಕ್ಕ-ಭಾವ ನಾಗಲಕ್ಷ್ಮಿ (ನಾಗು) ಮತ್ತು ಶಂಕರ್ ಒಂದು ಚಿಕ್ಕ ದಿನಸಿ ಅಂಗಡಿ ಮತ್ತು ಎನ್.ಎಸ್ ಫುಡ್ಸ್ ದೋಸೆ ಕ್ಯಾಂಪ್ ಎಂಬ ಸಸ್ಯಾಹಾರಿ ರೆಸ್ಟೋರೆಂಟ್ ನಡೆಸಿಕೊಂಡಿದ್ದರು. ಒರ್ಲ್ಯಾಂಡೊದಿಂದ ಟಾಂಪಾ ತಲುಪಲಿಕ್ಕೆ ನನ್ನೊಬ್ಬ ಎಂಜಿನಿಯರಿಂಗ್ ಸಹಪಾಠಿ ಸಮ್ಮೇಳನಕ್ಕೆ ಬಂದಿದ್ದವನು ಮನೆಗೆ ಹಿಂದಿರುಗುತ್ತ ನಮ್ಮನ್ನೂ ಕಾರಿನಲ್ಲಿ ಕರೆದುಕೊಂಡುಹೋಗಿದ್ದು ಸಹಾಯವಾಯ್ತು. ಟಾಂಪಾದಲ್ಲೂ ಚಂಡಮಾರುತದ ದಾಂಧಲೆ ಇತ್ತು. ಗಾಳಿಮಳೆಯಿಂದ ಕೆಲವೆಡೆ ಪವರ್‌ಕಟ್ ಆಗಿತ್ತು. ನಾಗು-ಶಂಕರ್ ಮನೆಗೆ ನಾವು ಫೋನ್ ಮಾಡಿದ್ದಾಗ ಮನೆಯಲ್ಲಿ ಕರೆಂಟ್ ಇಲ್ಲ, ನಾವೂ ನಮ್ಮ ಅಂಗಡಿಗೆ ಬಂದಿರುತ್ತೇವೆ, ಅಲ್ಲಿಗೇ ಬನ್ನಿ ಅಡುಗೆ ಮಾಡಿ ಎಲ್ಲರೂ ಊಟ ಮಾಡೋಣ ಎಂದಿದ್ದರು. ನಾವು ಅಲ್ಲಿ ತಲುಪಿದ ಸ್ವಲ್ಪ ಹೊತ್ತಿಗೇ ನಾಗು ಅವರ ಬಾಲ್ಯಸ್ನೇಹಿತೆಯೊಬ್ಬರು ಸಮ್ಮೇಳನ ಮುಗಿಸಿ ನ್ಯೂಜೆರ್ಸಿಗೆ ಸಂಜೆಯ ವಿಮಾನದಲ್ಲಿ ಪ್ರಯಾಣಿಸಬೇಕಾದವರು ಸ್ನೇಹದ ಸ್ಮರಣೆಯಿಂದ ಅಲ್ಲಿಗೆ ಬಂದರು. ಸ್ವಲ್ಪ ಹೊತ್ತಿನಲ್ಲೇ, ಅ.ರಾ.ಮಿತ್ರರನ್ನು ಕರೆದುಕೊಂಡು ಡಾ. ಯು.ಬಿ.ವಾಸುದೇವ್-ಪೊನ್ನಮ್ಮ ದಂಪತಿಯೂ ಬಂದರು. ಅಯಾಚಿತವಾಗಿ ಅಲ್ಲೊಂದು ಸ್ನೇಹಸಮಾವೇಶ ಏರ್ಪಾಡಾಯಿತು. ''ಬನ್ನಿ ಬನ್ನಿ, ಇವತ್ತು ನಮ್ಮ ದೋಸೆಕ್ಯಾಂಪ್‌ನಲ್ಲಿ ದೋಸೆ ಮಾಡಿಲ್ಲ, ಆದರೆ ಬಿಸಿಬಿಸಿ ಅನ್ನ-ಹುಳಿ ಮಾಡಿ ಬಡಿಸುತ್ತೇನೆ'' ಎಂದು ನಗುಮೊಗದ ಸ್ವಾಗತ, ನಾಗು ಅವರಿಂದ.

ಮೋಡ ಕವಿದ ವಾತಾವರಣ, ಜಿಟಿಜಿಟಿ ಮಳೆಯೂ ಸುರಿಯುತ್ತಿತ್ತು. ಬೆಳಗ್ಗೆಯಿಂದ ಏನೂ ತಿಂಡಿಯಿಲ್ಲದೆ, ನಮಗೆಲ್ಲರಿಗೂ ಅದಾಗಲೇ ಮಧ್ಯಪ್ರದೇಶದಲ್ಲಿ ಕೋಲಾಹಲ ಶುರುವಾಗಿತ್ತು. ಮಧ್ಯಾಹ್ನ ಗಂಟೆ ಒಂದೂವರೆ-ಎರಡಾಗುತ್ತ ಬಂದಿದ್ದರಿಂದ ಏಕ್‌ದಂ ಹೊಟ್ಟೆಹಸಿತಿತ್ತು. ಅನ್ನ-ಹುಳಿ ಆಗುವವರೆಗೂ ಬಾಯಾಡಿಸುವುದಕ್ಕಾಗಿ ಹಪ್ಪಳ-ಸಂಡಿಗೆ ಕರಿದು ಕೊಟ್ಟರು ನಾಗು. ಟಿವಿಯಲ್ಲಿ ಉದಯ ಚಾನೆಲ್‌ನಲ್ಲಿ ಅಣ್ಣಾವ್ರ ಬಭ್ರುವಾಹನ ಸಿನಿಮಾ ಬರುತ್ತಿತ್ತು. ಕರುಂಕುರುಂ ಸಂಡಿಗೆ ಮೆಲ್ಲುತ್ತಾ ಹರಟುತ್ತ ಸಮ್ಮೇಳನ ರಸಗಳಿಗೆಗಳ ಮೆಲುಕುಹಾಕುತ್ತ ಇದ್ದಂತೆ ಅನ್ನ-ಹುಳಿ ರೆಡಿಯಾಯ್ತು. ಅಪರೂಪಕ್ಕೆ ಇಷ್ಟೆಲ್ಲ ಆತ್ಮೀಯರು, ಅತಿಥಿಗಳು ತಮ್ಮಲ್ಲಿಗೆ ಬಂದು ಜತೆಯಾಗಿ ಊಟ ಮಾಡುವ ವಿಚಾರವೇ ನಾಗು-ಶಂಕರ್ ದಂಪತಿಗೆ ಧನ್ಯತಾಭಾವದ ಸಂತಸ ತಂದಿತ್ತು. ಹಪ್ಪಳ-ಸಂಡಿಗೆ ಟ್ರೇಗಳೆರಡೂ ಖಾಲಿಯಾಗುತ್ತ ಬಂದಿದ್ದವು. ''ಅನ್ನ-ಹುಳಿ-ಮೊಸರು ಮಾತ್ರ ಯಾಕೆ, ಮೊನ್ನೆಮೊನ್ನೆ ಭಾರತದಿಂದ ಫ್ರೆಷ್ ಆಗಿ ತರಿಸಿದ ರಾಗಿ ಹಿಟ್ಟಿದೆ, ಮುದ್ದೆ ಮಾಡಲೇ, ಇಷ್ಟವಿದೆಯೇ ಯಾರಿಗಾದ್ರೂ?'' ಅಂತ ನಾಗು ಕೇಳೋದೇ ತಡ– ಅ.ರಾ.ಮಿತ್ರ ಸೇರಿದಂತೆ ಒಕ್ಕೊರಲಿಂದ ಎಲ್ಲರ ಅಂಗೀಕಾರ ರಾಗಿಮುದ್ದೆಗೆ! ಸರಿ, ರಾಗಿ ಮುದ್ದೆಯೂ ತಯಾರಾಯ್ತು. ಹಪ್ಪಳ-ಸಂಡಿಗೆ ಕರಿಯಲು ಹೇಗೂ ಎಣ್ಣೆ ಬಿಸಿಮಾಡಿದ್ದೇ ಇದೆ, ಒಂದಿಷ್ಟು ಬಾಳಕಮೆಣ್ಸು ಕೂಡ ಕರಿದುಬಿಡು ಎಂದರು ಶಂಕರ್. ಗರಿಗರಿ ಬಾಳಕಮೆಣ್ಸು ಕರಿದು ತಟ್ಟೆಯಲ್ಲಿ ರೆಡಿಯಾಗಿ ಬಂತು. ರಾಗಿಮುದ್ದೆ ತಿನ್ನುತ್ತೇನೆಂದು ಮೊದಲು ಹೇಳಿದ್ದ ಅ.ರಾ.ಮಿತ್ರ, ತನ್ನ ಪ್ರಿಫರೆನ್ಸನ್ನು ಮುದ್ದೆಯಿಂದ ಬಾಳಕಮೆಣ್ಸಿಗೆ ಬದಲಿಸಿದರು. ಬಾಳಕಮೆಣ್ಸು ಇದ್ದರೆ ಬೇರೇನೂ ಬೇಡವಂತೆ ಅವರಿಗೆ. ಅಸಿಡಿಟಿ-ಗಿಸಿಡಿಟಿಗಳನ್ನೆಲ್ಲ ಮರೆತು ಅದನ್ನು ಸವಿಯುತ್ತಾರವರು. ಆಮೇಲೆ ಸ್ವಲ್ಪ ರಾಗಿಮುದ್ದೆ-ಹುಳಿ ಕೂಡ ತಗೊಂಡರಾದರೂ ಮಿತ್ರ ಆವತ್ತು ಪರಮಾನಂದದಿಂದ ಉಂಡದ್ದು ಬಾಳಕಮೆಣ್ಸು ಕಲೆಸಿದ ಅನ್ನ. ನಿಜಹೇಳಬೇಕೆಂದರೆ ಮೂರು ದಿನಗಳ ಅಕ್ಕ ಸಮ್ಮೇಳನದ ಊಟ-ಉಪಚಾರಗಳ ತೂಕ ಒಂದಾದರೆ ಅಷ್ಟೇ ತೂಕ ಟಾಂಪಾದಲ್ಲಿ ಆವತ್ತು ನಾವೆಲ್ಲ ಆರಾಮಾಗಿ ಹರಟುತ್ತ ಉಂಡ ಸುಗ್ರಾಸ ಭೋಜನ. ಅಮೆರಿಕದಲ್ಲಿ, ಅದೂ ಅ.ರಾ.ಮಿತ್ರರ ಜತೆಯಲ್ಲಿ ಕುಳಿತು ರಾಗಿಮುದ್ದೆ ಬಾಳಕಮೆಣ್ಸು ಅನ್ನ-ಹುಳಿ ಹಪ್ಪಳ-ಸಂಡಿಗೆ ಮೆಲ್ಲುವುದಕ್ಕೆ, ಶ್ಯಾಮಸುಂದರ್ ಹೇಳಿದ್ದ ಅಶ್ವತ್ಥವೃಕ್ಷ ಹೋಲಿಕೆಯನ್ನು ಮತ್ತೆ ನೆನಪಿಸುವುದಾದರೆ ಅಶ್ವತ್ಥಕಟ್ಟೆ ಬಳಿ ವನಭೋಜನ ಮಾಡಲಿಕ್ಕೆ, ಅದೃಷ್ಟ ಇರಬೇಕಲ್ಲವೇ!

ಅ.ರಾ.ಮಿತ್ರರೊಡನೆ ಆತ್ಮೀಯತೆ, ಒಂದು ತೆರನಾದ ಸಲುಗೆ ಬೆಳೆಯಲಿಕ್ಕೆ ಆ ಅನೌಪಚಾರಿಕ ಭೋಜನಕೂಟ ನನಗೆ ಸಹಕಾರಿಯಾಯ್ತು. ಮರುವರ್ಷ 2005ರ ಆಗಸ್ಟ್‌ನಲ್ಲಿ ಬೆಂಗಳೂರಿನಲ್ಲಿ ನನ್ನ ಮೊತ್ತಮೊದಲ ಪುಸ್ತಕ 'ವಿಚಿತ್ರಾನ್ನ' ಬಿಡುಗಡೆ. ಅದರ ವ್ಯವಸ್ಥೆಗೂ ನಾನು ಶ್ಯಾಮ್ ನೆರವು ಪಡೆದಿದ್ದೆ. ಸಮಾರಂಭದ ಅಧ್ಯಕ್ಷತೆ ವಹಿಸಲಿಕ್ಕೆ ತಕ್ಕುದಾದ ಗಣ್ಯರು ಯಾರು ಎಂಬ ಪ್ರಶ್ನೆಯೇ ಉದ್ಭವಿಸಲಿಲ್ಲ. ಅಶ್ವತ್ಥಸದೃಶ ಅ.ರಾ.ಮಿತ್ರರೇ ಡೀಫಾಲ್ಟ್ ಚಾಯ್ಸ್. ಅವರನ್ನು ಸಂಪರ್ಕಿಸಿದಾಗ ಸಂತೋಷದಿಂದ ಒಪ್ಪಿಕೊಂಡರು. ಆಗಷ್ಟೇ ಮುದ್ರಣವಾಗಿ ಬಂದಿದ್ದ ಪುಸ್ತಕದ ಒಂದು ಪ್ರತಿಯನ್ನು ಅವರಿಗೆ ತಲುಪಿಸಿದೆವು. ಸಮಾರಂಭದ ದಿನ ಸಮಯಕ್ಕೆ ಸರಿಯಾಗಿ ಬಸವನಗುಡಿಯ ವಾಡಿಯಾ ಸಭಾಂಗಣದ್ವಾರದಲ್ಲಿದ್ದರು ಅ.ರಾ.ಮಿತ್ರ! ಅವರನ್ನೆದುರುಗೊಂಡ ನನಗೆ ಅಲ್ಲಿಯೇ 'ಛಂದೋಮಿತ್ರ' ಪುಸ್ತಕದ ಪ್ರತಿಯನ್ನು ಉಡುಗೊರೆಯಾಗಿ ಕೊಟ್ಟರು. ಚಹ-ಕಾಫಿ ಲಘೂಪಹಾರದ ಬಳಿಕ ಕಾರ್ಯಕ್ರಮ ಆರಂಭ. ಪುಸ್ತಕದ ಹೆಸರೇ ವಿಚಿತ್ರಾನ್ನ, ಅದಕ್ಕೆ ತಕ್ಕುದಾಗಿ ಪುಸ್ತಕದ ಕಟ್ಟನ್ನು ಬಾಣಲೆಯಿಂದ ತೆಗೆದು ಲೋಕಾರ್ಪಣೆ! ಕನ್ನಡಸಾಹಿತ್ಯ ಸಮಾರಾಧನೆಯಲ್ಲಿ ಅಂಥದೊಂದು ಪ್ರಯೋಗ ಸಾಕಾರವಾದದ್ದು ಅ.ರಾ.ಮಿತ್ರರ ಅಮೃತಹಸ್ತದಿಂದ– ಅದೇ, ಅಶ್ವತ್ಥಸದೃಶ ಹಿರಿಜೀವದ ಸಾನ್ನಿಧ್ಯ, ಶುಭಾಶಂಸನೆಗಳಿಂದ– ಎಂದು ನನಗೆ ಯಾವತ್ತಿಗೂ ಹೆಮ್ಮೆ. ಸಭೆಯ ಅಧ್ಯಕ್ಷರಾದ್ದರಿಂದ ಮಿತ್ರರ ಭಾಷಣ ಕೊನೆಗೆ ಇದ್ದದ್ದು. ಅದಕ್ಕೆ ಮೊದಲು ಸಿ.ಆರ್.ಸಿಂಹ ಮತ್ತು ವಿಶ್ವೇಶ್ವರ ಭಟ್ಟರಿಂದ ರಸವತ್ತಾದ ಭಾಷಣಗಳು. ''ನಾನು ಭಾಷಣ ಮಾಡಲಿಕ್ಕೆಂದು ಬರೆದು ತಂದಿದ್ದ ಚೀಟಿಯನ್ನು ಕದ್ದು ಪಾಲು ಮಾಡಿಕೊಂಡು ಇವರಿಬ್ಬರೂ ಭರ್ಜರಿ ಭಾಷಣ ಹೊಡೆದಿದ್ದಾರೆ. ಈಗ ನಾನು ಹೇಳುವುದೇನೂ ಉಳಿದಿಲ್ಲ!'' ಟಿಪಿಕಲ್ ಅ.ರಾ.ಮಿತ್ರ ನಗೆಬಾಂಬ್. ಸಭೆಯಿಡೀ ಘೊಳ್ಳೆಂದು ನಗು, ಚಪ್ಪಾಳೆ. ಆಮೇಲೆ ಭಾಷಣದುದ್ದಕ್ಕೂ ನಡುನಡುವೆ ನಗೆಬಾಂಬ್‌ಗಳು ಸಿಡಿಯುತ್ತಲೇ ಇದ್ದವು. ಹಿಂದಿನ ವರ್ಷವಷ್ಟೇ ಅಕ್ಕ ಸಮ್ಮೇಳನದ ಬಳಿಕ ಟಾಂಪಾದಲ್ಲಿ ನಾವೆಲ್ಲ ಸೇರಿ ರಾಗಿಮುದ್ದೆ, ಬಾಳಕಮೆಣ್ಸು ಚಪ್ಪರಿಸಿದ್ದನ್ನು ಪ್ರಸ್ತಾವಿಸಲಿಕ್ಕೆ ಅವರು ಮರೆಯಲಿಲ್ಲ. ವಿಚಿತ್ರಾನ್ನವೆಂಬ ಈ ವಿಚಿತ್ರ ಪುಸ್ತಕವು ಅಗೆವ ಬುದ್ಧಿಗೆ ಅನಂತ ಅವಕಾಶ ಕೊಡುವಂಥದ್ದು ಎಲ್ಲರೂ ಓದಿ ಪ್ರೋತ್ಸಾಹಿಸಿ ಎಂದು ಹರಸಲಿಕ್ಕೂ ಮರೆಯಲಿಲ್ಲ. ಅವರು ಸ್ವಹಸ್ತಾಕ್ಷರದೊಡನೆ ಉಡುಗೊರೆಯಾಗಿ ಕೊಟ್ಟ ಛಂದೋಮಿತ್ರ ಪುಸ್ತಕವಂತೂ ನನ್ನದೊಂದು ಅಮೂಲ್ಯ ಆಸ್ತಿ. ಛಂದಸ್ಸಿನ ವಿಚಾರಗಳನ್ನು ತಿಳಿದುಕೊಳ್ಳಲಿಕ್ಕಷ್ಟೇ ಅಲ್ಲ, ಛಂದೋಬದ್ಧ ಹಾಸ್ಯದಿಂದ ಮನಸ್ಸನ್ನು ಉಲ್ಲಸಿತಗೊಳಿಸಲಿಕ್ಕೂ ನಾನು ಆಗೊಮ್ಮೆ ಈಗೊಮ್ಮೆ ಅದರ ಪುಟಗಳನ್ನು ತಿರುವುವುದುಂಟು. ಪದವಿನೋದ(ಪನ್) ಹುಚ್ಚು ನನಗೂ ಇರುವುದರಿಂದ ಅ.ರಾ.ಮಿತ್ರರಂಥ ಪನ್-ಡಿತರ ಮಾರ್ಗದರ್ಶನ ಪನ್-ಗುಂ ಲಂಘಯತೇ ಗಿರಿಂ ಎನ್ನುವಷ್ಟು ಬಲ ಕೊಡುತ್ತದೆನ್ನುವುದುಂಟು. ಅಂಥ ಗುರುಸಮಾನ ಮಿತ್ರರಿಗೀಗ 90ರ ಸಂಭ್ರಮ. 'ನವತಿ'(ಸುಸಂಸ್ಕೃತ 90 ನಾಟ್‌ಔಟ್) ಬಳಿಕ 'ಶತಮಾನಂ ಭವತಿ'ಯನ್ನೂ ಮಿತ್ರರು, ಅವರ ಅಭಿಮಾನಿ ಬಂಧುಮಿತ್ರರು ಸಂಭ್ರಮದಿಂದ ಎದುರುಗೊಳ್ಳುವಂತೆ ದೀರ್ಘಾಯುರಾರೋಗ್ಯ ಕರುಣಿಸಲೆಂದು ಭಗವಂತನಲ್ಲಿ ನನ್ನ ಹಾರೈಕೆ.

• • •

ಪಾಲ್ಗೊಳ್ಳಲಾಗುತ್ತಿಲ್ಲವೆಂಬ ಚಡಪಡಿಕೆ ಎಂದೆನಷ್ಟೆ? ಹಾಗಿದೆ ಕಾರ್ಯಕ್ರಮ ಸ್ವರೂಪ ಮತ್ತು ಸೂಚಿ! ಬೆಳಗ್ಗೆಯಿಂದ ಸಂಜೆಯ



ವರೆಗೂ ಭರಪೂರ ಮನೋರಂಜನೆ. ಭಾಗವಹಿಸುತ್ತಿರುವವರ ಪಟ್ಟಿಯೂ ಆಕರ್ಷಕ. ಚಂದ್ರಶೇಖರ ಕಂಬಾರರಿಂದ ಉದ್ಘಾಟನೆ, ಟಿ.ವಿ.ವೆಂಕಟಾಚಲ ಶಾಸ್ತ್ರಿ ಮತ್ತು ರಾ.ಗಣೇಶರಿಂದ ಅಭಿನಂದನಾ ಗ್ರಂಥದ ಬಿಡುಗಡೆ, ಅ.ರಾ.ಮಿತ್ರರ ವಿವಿಧ ಸಾಹಿತ್ಯಕೃತಿಗಳ ಬಗ್ಗೆ ಅವಲೋಕನ– ಸೂರ್ಯಪ್ರಕಾಶ ಪಂಡಿತ್, ಸಿ. ಸೋಮಶೇಖರ, ವೈ.ವಿ.ಗುಂಡೂರಾವ್, ಎಂ.ಎಸ್.ನರಸಿಂಹ ಮೂರ್ತಿ ಮುಂತಾದವರಿಂದ. ಎಂ.ಕೃಷ್ಣೇಗೌಡ, ಎಸ್.ಆರ್. ರಾಮಸ್ವಾಮಿ, ಎಸ್.ಆರ್.ಲೀಲಾ ಮುಂತಾದವರ ಭಾಷಣಗಳು. ನಡುವೆ ಗೀತ-ನೃತ್ಯ-ಚಿತ್ರ-ಹಾಸ್ಯ-ಗಮಕ ರುಚಿಕರ ವ್ಯಂಜನಗಳು. ಒಟ್ಟಿನಲ್ಲಿ ಹದಿನಾರಾಣೆ ಸದಭಿರುಚಿಯ ಸಾಂಸ್ಕೃತಿಕ ಉತ್ಸವ. ಮಿತ್ರರೊಡನೆ ಭೋಜನ. ನನ್ನ ಚಡಪಡಿಕೆ ಅರ್ಥವಾಗಿರಬಹುದು ರಾಮನಾಥ್‌ಗೆ. ಮುದ್ರಣಕ್ಕೆ ಸಿದ್ಧವಾದ 'ಮಿತ್ರಾರ್ಜಿತ'ದ ಮೃದುಪ್ರತಿಯನ್ನು ನನಗೆ ಓದಲಿಕ್ಕೆ ಕೊಟ್ಟರು; ಕವರ್-ಟು-ಕವರ್ ಓದಿಮುಗಿಸಿದೆ ಒಂದೇದಿನದಲ್ಲಿ!

ಮಿತ್ರಾರ್ಜಿತ ಒಂದು ಅತ್ಯಮೂಲ್ಯ ಗ್ರಂಥ. ಸಾಹಿತ್ಯ ರಶ್ಮಿ, ಉದ್ಯೋಗ ರಶ್ಮಿ, ರಾಗ ರಶ್ಮಿ, ಮೈತ್ರಿ ರಶ್ಮಿ, ವಿನೋದ ರಶ್ಮಿ, ಆಂಗ್ಲ ರಶ್ಮಿ, ವಿದೇಶ ರಶ್ಮಿ, ಕಾವ್ಯ ರಶ್ಮಿ ಎಂದು ವಿವಿಧ ಭಾಗಗಳಲ್ಲಿ ಅನುಕ್ರಮವಾಗಿ ಮಿತ್ರರ ಅಭಿಮಾನಿಗಳು, ಸಹೋದ್ಯೋಗಿಗಳು, ಕುಟುಂಬಸ್ಥರು, ನೆರೆಕೆರೆಯವರು, ಕನ್ನಡದ ಹಾಸ್ಯಪಟುಗಳು, ಆಂಗ್ಲದಲ್ಲಿ ಬರೆದವರು, ಅನಿವಾಸಿ ಕನ್ನಡಿಗರು, ಕವಿಗಳು ಪ್ರೀತಿಗೌರವದಿಂದ ಅರ್ಪಿಸಿದ ಅಕ್ಷರಗುಚ್ಛಗಳು. ಶತಾವಧಾನಿಯವರ 'ವಿದ್ವದ್ವಿನೋದಗಗನದ ಮಿತ್ರ' ಲೇಖನದಲ್ಲಿ ''ಅ.ರಾ.ಮಿತ್ರ ಅವರ ವಾಗ್ಮಿತೆ, ವೈದುಷ್ಯ ಮತ್ತು ವಿನೋದಗಳೆಂಬ ಗಂಗೆ-ಯಮುನೆ-ಸರಸ್ವತಿಯರು ಎಂಥ ರಸಪ್ರಯಾಗವನ್ನು ಸೃಷ್ಟಿಸಬಲ್ಲವು! ಅವರ ಸಾಹಿತ್ಯಕೇಂದ್ರಿತ ಭಾಷಣಗಳಲ್ಲಿ ಕಾವ್ಯದ ಕಾಶೀಪೀತಾಂಬರಕ್ಕೆ ಹಾಸ್ಯದ ಜರಿಯಂಚು ಹೊಳೆಹೊಳೆದು ಹೆಣೆದುಕೊಳ್ಳುತ್ತದೆ, ಹಾಸ್ಯಕೇಂದ್ರಿತ ಭಾಷಣಗಳಲ್ಲಿ ನಗೆಯ ರೇಷ್ಮೆಯೆಳೆಯೊಡನೆ ಕಾವ್ಯೋಕ್ತಿಗಳ ಹೊನ್ನಿನ ಎಳೆಗಳು ಜತೆಗೂಡಿ ನೇಯ್ದುಕೊಳ್ಳುತ್ತವೆ. ಎಲ್ಲಿಯೂ ಔಚಿತ್ಯದ ಗಡಿ ಮೀರಿ ಅನರ್ಥವಾಗುವುದಿಲ್ಲ'' ಎಂಬ ಬಣ್ಣನೆ; ''ಮಿತ್ರರದು ಸಹಜವಾದ ಹಾಸ್ಯಪ್ರಜ್ಞೆ; ನಗೆಜವನಿಕೆಯಲ್ಲಿ ಮುಖ ಮರೆಸಿಕೊಂಡ ಭಾಷಾಪಾಂಡಿತ್ಯ. ನಾನಾ ಪ್ರಕಾರದ ಸಾಹಿತ್ಯದ ಸಂಸ್ಕಾರದಿಂದ ಮನಸ್ಸು ಸಂಪದ್ಯುಕ್ತ. ಜತೆಗೆ ಲೋಕಜ್ಞಾನ ಮತ್ತು ವಯೋಮಾನದಿಂದ ಪ್ರಾಪ್ತವಾಗಿರುವ ಮಾಗುವಿಕೆಯೂ ಕೂಡಿಕೊಂಡಿವೆ. ಮೌಖಿಕ ಕಥನ ಸಂಪ್ರದಾಯಕ್ಕೆ ಹೇಳಿಮಾಡಿಸಿದ ವ್ಯಕ್ತಿತ್ವವಿದು'' ಎಂಬುದು ಎಚ್ಚೆಸ್ವಿ ಅಭಿಪ್ರಾಯವಾದರೆ, ಮಲ್ಲೇಪುರಂ ಜಿ.ವೆಂಕಟೇಶ್ ''ಅ.ರಾ.ಮಿತ್ರರ ಮಾನವೀಯ ಸಂವೇದನೆಯನ್ನು ಹಲವು ಬಾರಿ ಕಂಡಿದ್ದೇನೆ, ಅನುಭವಿಸಿದ್ದೇನೆ. ಅವರ ವಚೋವಿಲಾಸದ ಭಂಗಿ-ಭಣಿತಗಳಿಗೂ ಬೆರಗಾಗಿದ್ದೇನೆ. ಅವರಲ್ಲಿ ವಿದ್ವತ್ತು-ಸಹೃದಯತೆಗಳು ಒಂದಕ್ಕೊಂದು ಒಡನಾಡಿಗಳಾಗಿ ಇರುವುದನ್ನು ಹತ್ತಾರು ಬಾರಿ ಕಂಡಿದ್ದೇನೆ. ಅವರು ಉತ್ತಮ ಬೋಧಕರೆಂದು ಅವರಿವರಿಂದ ಕೇಳಿ ತಿಳಿದಿದ್ದೇನೆ. ಛಂದೋಪರಿಜ್ಞಾನ, ವಿಷಯಸಂಪತ್ತಿ, ವಿಮರ್ಶಾಕೌಶಲ, ಶಾಸ್ತ್ರಜ್ಞಾನ ಇಂಥವೆಲ್ಲ ಒಬ್ಬರಲ್ಲೇ ಐಕ್ಯಗೊಂಡಿರುವುದನ್ನು ಕಂಡು ಮೂಕವಿಸ್ಮಿತನಾಗಿದ್ದೇನೆ. ಆದರೆ, ಇಷ್ಟೆಲ್ಲ ಸಂಪತ್ತು ಅವರಿಗಿದ್ದರೂ ಅವೆಲ್ಲವೂ ಮಾತಿನ ಗಾಳಿಯಲ್ಲಿ ತೂರಿಹೋದವಲ್ಲಾ, ಅವು ಬರಹರೂಪವನ್ನು ತಾಳಲಿಲ್ಲವಲ್ಲ ಎಂಬುದು ನನ್ನ ಸಂಕಟ'' ಎನ್ನುತ್ತಾರೆ. ಮಿತ್ರರನ್ನು 'ಅರಿವಿನ ಬೊಕ್ಕಸ' ಎಂದು ಸಿ.ಎನ್.ಕೃಷ್ಣಮಾಚಾರ್ ಬಣ್ಣಿಸಿದರೆ ''ಪಾಂಡಿತ್ಯದ ಕಬ್ಬಿಣದ ಕಡಲೆಗೆ ಘಮ್ಮೆನ್ನುವ ಹಾಸ್ಯದ ಒಗ್ಗರಣೆ ಬೆರೆಸಿ ವಿನೋದದ ಗುಗ್ಗರಿಯನ್ನು ಹಂಚುವುದರಲ್ಲಿ ಇವರನ್ನು ಮೀರಿದ ಇನ್ನೊಬ್ಬರಿಲ್ಲ'' ಎಂಬುದು ರಾಮನಾಥ್ ಅಂಬೋಣ. ಕೃಷ್ಣೇಗೌಡರಂತೂ ಶೀರ್ಷಿಕೆಯಲ್ಲೇ ''ಅವರು ನನ್ನ ಗುರು ತಂದೆ, ಅವರು ನನ್ನ ಗುರುತಂದೆ'' ಎಂದಿದ್ದಾರೆ. ಇದಾವುದೂ ಮುಖಸ್ತುತಿಯಲ್ಲ, ಮಿತ್ರರಿಗದರ ಆಸೆ-ಅವಶ್ಯಕತೆಗಳೂ ಇಲ್ಲ, ಆದರೆ ಎಲ್ಲರಿಗೂ ಅದೆಂಥ ನಿರ್ವ್ಯಾಜ ಪ್ರೀತಿಯನ್ನು ಅವರು ಹಂಚಿದ್ದಾರೆ ಮತ್ತು ಮಿತ್ರಾರ್ಜಿತವಾಗಿ ಅಷ್ಟೇ ಪ್ರೀತಿಯನ್ನು ಎಲ್ಲರಿಂದಲೂ ಪಡೆದಿದ್ದಾರೆಂಬುದು ಪ್ರತಿಅಕ್ಷರದಲ್ಲೂ ತುಳುಕುವ ಆರ್ದ್ರತೆಯಿಂದ ನಮಗೆ ಅರಿವಾಗುತ್ತದೆ. ಸಾತ್ವಿಕವಾದೊಂದು ಅಸೂಯೆಯೂ ಉಂಟಾಗುತ್ತದೆ! ನನ್ನ ಪ್ರಕಾರ 'ಮಿತ್ರಾರ್ಜಿತ'ದಲ್ಲಿ ಮುಕುಟಪ್ರಾಯವಾದುದು ಮಿತ್ರರ ಮಗಳು ಸೌಮ್ಯ ಅವರ ''ಸೂರ್ಯ(ಮಿತ್ರ)ನಿಗೇ ಟಾರ್ಚ್?!'' ಲಹರಿ. ಅದನ್ನೋದಿ ಮಿತ್ರರ ಬಗೆಗೆ ನಮ್ಮಲ್ಲಿರುವ ಗೌರವ ಎವರೆಸ್ಟ್‌ನ ಎತ್ತರಕ್ಕೇರುತ್ತದೆ. ಬೇರೆಲ್ಲ ಲೇಖನಗಳಲ್ಲಿ ಅಲ್ಲೊಂದು ಇಲ್ಲೊಂದು ಪ್ಯಾರಗ್ರಾಫ್ ಹೈಲೈಟ್ ಮಾಡಿ ಮರುಓದಿಗೆ ಗುರುತಿಸಿಟ್ಟ ನಾನು ಸೌಮ್ಯರ ಇಡೀ ಲೇಖನ ಯಥಾವತ್ತಾಗಿ ಪ್ರೌಢಶಾಲೆಯಲ್ಲೋ ಕಾಲೇಜಿನಲ್ಲೋ ಕನ್ನಡದ ವಿದ್ಯಾರ್ಥಿಗಳ ಪಾಠಪುಸ್ತಕದಲ್ಲಿ ಸೇರಬೇಕು ಎನ್ನುತ್ತೇನೆ. ಮಿತ್ರಾರ್ಜಿತದ ಸಾಹಿತ್ಯಸರಕು ಕನ್ನಡಿಗರೆಲ್ಲರ ಅರ್ಜಿತವೂ ಹೌದು.

ಬಹುಮುಖಿ ಪ್ರತಿಭಾಸಂಪನ್ನ ಡಾ.ಕುಮಾರ್ ವಿಶ್ವಾಸ್



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಕೆಲ ದಿನಗಳ ಹಿಂದೆ, ಕಮೆಡಿಯನ್ ಕಪಿಲ್ ಶರ್ಮಾ ಅವರ ಬಗ್ಗೆ ನಾನು ಬರೆದಿದ್ದೆ, ಈಗ ಅಂಥದೇ ಮತ್ತೊಬ್ಬ ಪ್ರೇರಣಾದಾಯಕ 'ಯುವ ಐಕಾನ್', ಪ್ರಭಾವಶಾಲಿ ವ್ಯಕ್ತಿತ್ವದ ಡಾ.ಕುಮಾರ್ ವಿಶ್ವಾಸ್ ಅವರನ್ನು ಪರಿಚಯಿಸುತ್ತಿದ್ದೇನೆ. ಡಾ.ಕುಮಾರ್ ಅವರದ್ದು ಸಾಕಷ್ಟು ಆಸಕ್ತಿದಾಯಕ, ವರ್ಣರಂಜಿತ ಮತ್ತು ಬಹು ಆಯಾಮದ ವ್ಯಕ್ತಿತ್ವ. ನೀವು ಅವರ ಬಗ್ಗೆ ತಿಳಿದುಕೊಂಡಷ್ಟೂ ಇನ್ನೂ ಹೆಚ್ಚು ಕುತೂಹಲಿಯಾಗುತ್ತೀರಿ. ಒಂದು ಹಂತದಲ್ಲಿ ನಿಮಗೆ ಅವರು ಕಟ್ಟಾ ದೇಶಭಕ್ತನಾಗಿ, ಕ್ರಾಂತಿಕಾರಿಯಾಗಿ ಕಂಡರೆ, ಇನ್ನೊಂದು ಹಂತದಲ್ಲಿ ಕವಿಯಾಗಿ, ಪ್ರವಚನಕಾರನಾಗಿ, ರಾಜಕಾರಣಿಯಾಗಿ ಕಾಣುತ್ತಾರೆ. ಅವರು ಕಾಲೇಜು ಅಧ್ಯಾಪಕರಾಗಿ, ಕವಿಯಾಗಿ, ಸಾಮಾಜಿಕ ಕಾರ್ಯಕರ್ತರಾಗಿ, ತಮ್ಮ ಭಾಷಣ ಕೌಶಲದಿಂದಾಗಿ ಇಂದು ದೇಶಾದ್ಯಂತ ಹೆಸರುವಾಸಿಯಾಗಿದ್ದಾರೆ. ರಾಜಕಾರಣಿಗಳಲ್ಲಿ 'ಕವಿತ್ವ' ಇರುವುದು ಹೊಸದೇನಲ್ಲ, ಇದಕ್ಕೆ ಅಟಲ್ ಬಿಹಾರಿ ವಾಜಪೇಯಿಯವರೇ ಉತ್ತಮ ಉದಾಹರಣೆ. ಆದರೆ, ಎರಡರಲ್ಲೂ ಸಮಾನವಾಗಿ ಬೆಳೆಯುವುದು ಅಪರೂಪದ ವಿಷಯ.

ಕುಮಾರ್ ವಿಶ್ವಾಸ್ ಕೇವಲ ಹವ್ಯಾಸಿ/ಅರೆಕಾಲಿಕ ಕವಿಯಲ್ಲ; ಅವರು ಹಿಂದಿ ಭಾಷೆಯಲ್ಲಿ ಅಂತಾರಾಷ್ಟ್ರೀಯ ಖ್ಯಾತಿವೆತ್ತ ಕವಿವರ್ಯ. ಅವರ 'ಕೋಯಿ ದೀವಾನಾ ಕೆಹ್ತಾ ಹೈ' ಕೃತಿಯು ಹಿಂದಿ ಸಾಹಿತ್ಯದಲ್ಲಿ ತನ್ನ ಆಳವಾದ, ಕಾವ್ಯಾತ್ಮಕ ಮತ್ತು ಭಾವನಾತ್ಮಕ ಅನುರಣನಕ್ಕೆ ಹೆಸರುವಾಸಿಯಾಗಿದ್ದರೆ, 'ಫಿರ್ ಮೇರಿ ಯಾದ್' ಕೃತಿಯು 'ಬೆಸ್ಟ್ ಸೆಲ್ಲರ್' ಎನಿಸಿಕೊಂಡು ಗಮನಾರ್ಹ ಸಾಧನೆಯನ್ನು ದಾಖಲಿಸಿದೆ. ಅವರ ಅಭಿಮಾನಿ ಬಳಗವು ಭಾರತಕ್ಕಷ್ಟೇ ಸೀಮಿತವಾಗದೆ ದುಬೈ, ಜಪಾನ್, ಸಿಂಗಾಪುರ, ಅಮೆರಿಕಗಳವರೆಗೂ ಹಬ್ಬಿದೆ. ಅವರು ಮುಖ್ಯವಾಗಿ ಶೃಂಗಾರ ರಸದ ಕವಿ-ಸೌಂದರ್ಯ, ಪ್ರೀತಿ, ಪ್ರಣಯ ಮತ್ತು ಆಕರ್ಷಣೆಯ ಬಗ್ಗೆ ಹೆಚ್ಚು ಬರೆಯುತ್ತಾರೆ.

ವಿಶ್ವಾಸ್ ಒಂದಲ್ಲಾ ಒಂದು ಕಾರಣಕ್ಕೆ ಸುದ್ದಿಯಲ್ಲಿರುತ್ತಾರೆ. ಕುತೂಹಲಕಾರಿ ಸಂಗತಿಯೆಂದರೆ, ಅವರು ಅಣ್ಣಾ ಹಜಾರೆಯವರ 'ಭ್ರಷ್ಟಾಚಾರ ವಿರೋಧಿ ಅಭಿಯಾನ'ವನ್ನು ಬೆಂಬಲಿಸಿದ್ದು, ಕೃತಿಚೌರ್ಯದ ಆರೋಪಗಳು ಮತ್ತು ಆಮ್ ಆದ್ಮಿ ಪಕ್ಷದ ನೀತಿಗಳನ್ನು ಕೆಲವೊಮ್ಮೆ ಬಹಿರಂಗವಾಗಿ ಟೀಕಿಸಿದ್ದು ಮುಂತಾದ ಕಾರಣಕ್ಕೆ ಆಗಾಗ ವಿವಾದಕ್ಕೀಡಾದದ್ದೂ ಇದೆ. ಒಟ್ಟಿನಲ್ಲಿ ಅವರ ಜೀವನವು ವೈವಿಧ್ಯಮಯವೂ ವರ್ಣರಂಜಿತವೂ ಆಗಿರುವುದಂತೂ ಖರೆ!

ಉತ್ತರ ಪ್ರದೇಶದ ಪಿಲ್ಖುವಾ ಎಂಬ ಪಟ್ಟಣದಲ್ಲಿ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಕುಮಾರ್ ವಿಶ್ವಾಸ್, ತಮ್ಮ ತಂದೆಯ ಆಸೆಯಂತೆ ಎಂಜಿನಿಯರ್ ಆಗಲು ಅಲಹಾಬಾದಿನ ಪ್ರತಿಷ್ಠಿತ ಎಂಎನ್ಐಟಿ ಎಂಜಿನಿಯರಿಂಗ್ ಕಾಲೇಜಿಗೆ ಸೇರಿದರು. ಆದರೆ, ಪ್ರತಿಭಾವಂತರಾಗಿದ್ದರೂ ಅವರಿಗೆ ಯಾಕೋ ಎಂಜನಿಯರಿಂಗ್ ಹಿಡಿಸಲೇ ಇಲ್ಲ. ಹೀಗಾಗಿ ಅದನ್ನು ತೊರೆದು ಸಾಹಿತ್ಯಾಧ್ಯಯನ ಮಾಡಿ ಕಾವ್ಯಸೃಷ್ಟಿಯಲ್ಲಿ ವೃತ್ತಿಜೀವನವನ್ನು ಕಂಡುಕೊಳ್ಳುವ ಹೃದಯದ ಬಯಕೆಗೆ ಓಗೊಟ್ಟು, ಹಿಂದಿ ಸಾಹಿತ್ಯದಲ್ಲಿ ಸ್ನಾತಕೋತ್ತರ ಮತ್ತು ಪಿಎಚ್‌ಡಿ ಪೂರ್ಣಗೊಳಿಸಿದರು. ''ಎಂಜಿನಿಯರಿಂಗ್ ತೊರೆಯುವುದು ನನಗೆ ಕಠಿಣ ನಿರ್ಧಾರವಾಗಿತ್ತು, ಆದರೆ ಅದನ್ನು ಮುಂದುವರಿಸಿದ್ದಿದ್ದರೆ ಸರಾಸರಿಗಿಂತ ಕಡಿಮೆ ದರ್ಜೆಯ ತಂತ್ರಜ್ಞನಾಗುತ್ತಿದ್ದೆ'' ಎನ್ನುತ್ತಾರೆ ಅವರು. 1994ರಲ್ಲಿ ರಾಜಸ್ಥಾನದಲ್ಲಿ ಪದವಿ ಕಾಲೇಜಿನಲ್ಲಿ ಹಿಂದಿ ಪ್ರಾಧ್ಯಾಪಕರಾಗಿ ತಮ್ಮ ವೃತ್ತಿಜೀವನ ಪ್ರಾರಂಭಿಸಿದಾಗಲೇ ಅವರು ಭಾರತ ಮತ್ತು ವಿದೇಶಗಳಲ್ಲಿ ನಡೆಯುತ್ತಿದ್ದ ಪ್ರತಿಷ್ಠಿತ ಕವಿ ಸಮ್ಮೇಳನಗಳಲ್ಲಿ ಭಾಗವಹಿಸುತ್ತಿದ್ದರು. 2012ರಲ್ಲಿ ಬೋಧನಾ ವೃತ್ತಿಯನ್ನು ತೊರೆದು ಪೂರ್ಣಕಾಲಿಕ ಕವಿ, ಸಾಮಾಜಿಕ ಕಾರ್ಯಕರ್ತ ಮತ್ತು ರಾಜಕಾರಣಿಯಾಗಿ ಮಾರ್ಪಟ್ಟರು.

ಹಿಂದಿ ದೂರದರ್ಶನ ಮತ್ತು ಬಾಲಿವುಡ್‌ಗೂ ತಮ್ಮ ಕವಿತ್ವದ ಪ್ರತಿಭೆಯನ್ನು ಧಾರೆಯೆರೆದಿರುವ ಅವರು, ವಿವಿಧ ಟಿವಿ ಕಾರ್ಯಕ್ರಮಗಳ ಶೀರ್ಷಿಕೆ ಗೀತೆಗಳನ್ನು ರಚಿಸಿದ್ದಾರೆ. ಐಐಟಿ, ಐಐಎಂ, ಎನ್‌ಐಟಿ, ಬಿಟ್ಸ್ ಪಿಲಾನಿ ಮತ್ತು ಎಂಡಿಐ ಗುರ್‌ಗಾಂವ್ ಸೇರಿದಂತೆ ಅನೇಕ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಲೈವ್ ಪ್ರದರ್ಶನಗಳನ್ನು ನೀಡಿದ್ದಾರೆ. ಕ್ಯಾಲಿಫೋರ್ನಿಯಾದ ಗೂಗಲ್ ಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಭಾರತೀಯ ಉದ್ಯೋಗಿಗಳನ್ನು ಉದ್ದೇಶಿಸಿ ಮಾತನಾಡಲೂ ಅವರು ಆಹ್ವಾನಿತರಾಗಿದ್ದುಂಟು.

ಡಾ.ಕುಮಾರ್ ವಿಶ್ವಾಸ್‌ರದ್ದು ಪ್ರೇಮವಿವಾಹ, ಪತ್ನಿ ಡಾ.ಮಂಜು ಶರ್ಮಾ ವಿಶ್ವಾಸ್ ಕೂಡ ಹಿಂದಿ ಪ್ರಾಧ್ಯಾಪಕಿ, ಹಿಂದಿ ಸಾಹಿತ್ಯದಲ್ಲಿ ಪಿಎಚ್‌ಡಿ ಪಡೆದವರು. ಇಬ್ಬರೂ ಒಂದೇ ಕಾಲೇಜಿನಲ್ಲಿ ಓದುತ್ತಿದ್ದರು. ''ಮಂಜು ಅವರನ್ನು ಮೆಚ್ಚಿಸಲು ಕವಿತೆಗಳನ್ನು ಬರೆಯುತ್ತಿದ್ದ ನಾನು, ಆ ದಿನಗಳಲ್ಲಿ ಶೃಂಗಾರ ರಸದಲ್ಲಿ ಆಸಕ್ತಿ ಬೆಳೆಸಿಕೊಂಡೆ'' ಎನ್ನುತ್ತಾರೆ ಕುಮಾರ್ ವಿಶ್ವಾಸ್. ಈ ದಂಪತಿಗೆ ಇಬ್ಬರು ಹೆಣ್ಣು ಮಕ್ಕಳು.

ಕಾವ್ಯಕ್ಕಷ್ಟೇ ತಮ್ಮನ್ನು ಸೀಮಿತಗೊಳಿಸಿಕೊಳ್ಳದ ಕುಮಾರ್ ವಿಶ್ವಾಸ್, ಭ್ರಷ್ಟಾಚಾರ-ಮುಕ್ತ ಸಮಾಜ ನಿರ್ಮಾಣದ ಯತ್ನದ ಭಾಗವಾಗಿ ಅಣ್ಣಾ ಹಜಾರೆ ನೇತೃತ್ವದ 'ಭ್ರಷ್ಟಾಚಾರ ವಿರೋಧಿ ಚಳವಳಿ'ಯಲ್ಲಿ ಅರವಿಂದ ಕೇಜ್ರಿವಾಲರ ಜತೆಗೆ ಸಕ್ರಿಯವಾಗಿ ಭಾಗವಹಿಸಿ, ನಂತರ ಆಮ್ ಆದ್ಮಿ ಪಕ್ಷವನ್ನು ಸೇರಿದರು. 2014ರ ಲೋಕಸಭಾ ಚುನಾವಣೆಯಲ್ಲಿ ಅವರು, ಕಾಂಗ್ರೆಸ್‌ನ ರಾಹುಲ್ ಗಾಂಧಿಯವರ ವಿರುದ್ಧ ಅಮೇಥಿಯಿಂದ ಸ್ಪರ್ಧಿಸಿದ್ದರು. ಅವರ ಈ ನಡೆಯು, 'ಈ ಯುವಕವಿ ಆಮ್ ಆದ್ಮಿಯ ಭವಿಷ್ಯದ ನಾಯಕನಾಗಬಹುದು' ಎಂಬ ಸಂದೇಶವನ್ನು ದೇಶಕ್ಕೆ ನೀಡಿತು. ವ್ಯಾಪಕ ಪ್ರಚಾರ ಮಾಡಿದ ವಿಶ್ವಾಸ್, ಸ್ಥಳೀಯರು ಯಾವುದೇ ವೇಳೆ ತಮ್ಮನ್ನು ತಲುಪುವಂತಾಗಲು ಅಮೇಥಿಯಲ್ಲಿ ಮನೆಯನ್ನೂ ಖರೀದಿಸಿದರು. ಆ ಚುನಾವಣೆಯಲ್ಲಿ ವಿಶ್ವಾಸ್ ಸೋತರೂ, ಅನೇಕ ವರ್ಷಗಳಲ್ಲಿ ಅದೇ ಮೊದಲ ಬಾರಿಗೆ ರಾಹುಲ್ ಮತ್ತು ಅವರ ಪಕ್ಷವು ಅಮೇಥಿ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಬೇಕಾಯಿತು. ನಂತರ ವಿಶ್ವಾಸ್ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸದಿದ್ದರೂ, 2015ರ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಆಮ್ ಆದ್ಮಿಯ 'ತಾರಾ ಪ್ರಚಾರಕ'ರಲ್ಲಿ ಒಬ್ಬರೆನಿಸಿಕೊಂಡು ತಮ್ಮ ವಿಚಕ್ಷಣತೆಯಿಂದಾಗಿ ಪಕ್ಷವು ಭಾರಿ ಗೆಲುವು ಪಡೆಯುವುದಕ್ಕೆ ನೆರವಾದರು. ಆ ಚುನಾವಣೆಯಲ್ಲಿ ಆಮ್ ಆದ್ಮಿ 70 ಸ್ಥಾನಗಳ ಪೈಕಿ 67ನ್ನು ಗೆದ್ದಿತ್ತು. ಮುಂದೆ ಕೇಜ್ರಿವಾಲರ ವಿರೋಧ ಕಟ್ಟಿಕೊಂಡು 'ಆಮ್ ಆದ್ಮಿ'ಗೆ ವಿದಾಯ ಹೇಳಿದರು.

ನೇರ ನಡೆ-ನುಡಿಯ ವಿಶ್ವಾಸ್ ಯಾರನ್ನೂ ಎದುರುಹಾಕಿಕೊಂಡು ದಕ್ಕಿಸಿಕೊಳ್ಳಬಲ್ಲ ಚಾಣಾಕ್ಷ. ಇತ್ತೀಚೆಗೆ ಅಮಿತಾಭ್ ಬಚ್ಚನ್‌ರ ವಿಷಯದಲ್ಲಿ ಅವರು ಸಾಮಾಜಿಕ ಮಾಧ್ಯಮದಲ್ಲಿ ಮತ್ತೊಮ್ಮೆ ಚರ್ಚೆಗೊಳಗಾಗಿದ್ದುಂಟು. ಪ್ರಸಿದ್ಧ ಹಿಂದಿ ಕವಿಗಳಿಗೆ ಗೌರವ ಸಲ್ಲಿಸಲು 'ತರ್ಪಣ್' ಶೀರ್ಷಿಕೆಯ ಸರಣಿ ವಿಡಿಯೋಗಳನ್ನು ಯೂಟ್ಯೂಬ್‌ನಲ್ಲಿ ಪೋಸ್ಟ್ ಮಾಡಿದ್ದ ವಿಶ್ವಾಸ್, ಅದರಲ್ಲಿ ಬಚ್ಚನ್‌ರ ತಂದೆ ಹರಿವಂಶ್ ರಾಯ್ ಬಚ್ಚನ್‌ರ ಕವಿತೆಯನ್ನು ಬಳಸಿದ್ದರು. ಅದನ್ನು ಬಳಸಿದ ರೀತಿಗೆ ಕೋಪಗೊಂಡ ಅಮಿತಾಭ್, ಅದನ್ನು 'ಕೃತಿಸ್ವಾಮ್ಯ ಉಲ್ಲಂಘನೆ' ಎಂದು ಕರೆದು, ಈ ವಿಡಿಯೋದಿಂದ ಗಳಿಸಿದ ಆದಾಯದ ಲೆಕ್ಕ ನೀಡುವಂತೆ ವಿಶ್ವಾಸ್‌ರನ್ನು ಕೇಳಿದರು. ಜತೆಗೆ, ಅದನ್ನು 24 ಗಂಟೆಯೊಳಗೆ ಸಾಮಾಜಿಕ ಜಾಲತಾಣದಿಂದ ತೆಗೆದುಹಾಕಬೇಕೆಂದು ತಾಕೀತು ಮಾಡಿದರು. ವಿಶ್ವಾಸ್ ಇದಕ್ಕೆ ಪ್ರತಿಕ್ರಿಯಿಸುತ್ತಾ, ''ಇತರೆಲ್ಲ ಕವಿಗಳ ಸಂದಣಿಯಿಂದಾಗಿ ನನ್ನ ಪ್ರಯತ್ನ ಮೆಚ್ಚುಗೆಯನ್ನೇನೋ ಪಡೆಯಿತು; ಆದರೆ ನಿಮ್ಮಿಂದ ಮಾತ್ರ ನೋಟಿಸ್ ಪಡೆಯುವಂತಾಯ್ತು ಸರ್'' ಎಂದು ಬಚ್ಚನ್‌ರ ಕಾಲೆಳೆದು, ''ಈಗಾಗಲೇ ವಿಡಿಯೋವನ್ನು ಅಳಿಸಿಹಾಕಲಾಗಿದ್ದು, ಯೂಟ್ಯೂಬ್ ಜಾಹೀರಾತುಗಳಿಂದ ಪಡೆದ ಆದಾಯವಾಗಿ ನಿಮಗೆ 32 ರುಪಾಯಿಗಳನ್ನು ಕಳುಹಿಸುತ್ತಿದ್ದೇನೆ, ತುಂಬಾ ಧನ್ಯವಾದಗಳು'' ಎಂದು ಹೇಳಿ 'ಬಿಗ್ ಬಿ'ಯನ್ನು ಟ್ರೋಲ್ ಮಾಡುವ ಧೈರ್ಯವನ್ನು ತೋರಿದ್ದರು.

ರಾಜಕಾರಣಿಯಾಗಿ ಅವರ ನಡವಳಿಕೆಯು ಅಧಿಕಾರ ಮತ್ತು ಹಣದ ದುರಾಸೆಯನ್ನು ಸೂಚಿಸುವಂತೆ ಕಾಣುವುದಿಲ್ಲ. ಇಲ್ಲದಿದ್ದರೆ ಅವರು 2015ರ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಕ್ಯಾಬಿನೆಟ್‌ನಲ್ಲಿ ಸುಲಭವಾಗಿ ಸ್ಥಾನ ಪಡೆಯಬಹುದಾಗಿತ್ತು. ಮುಖ್ಯಮಂತ್ರಿ ಕೇಜ್ರಿವಾಲರು ತಮ್ಮ ಆಪ್ತರಾಗಿದ್ದರೂ, ಪಕ್ಷದ ನೀತಿಗಳಲ್ಲಿ ತಪ್ಪಾಗಿದೆ ಎನಿಸಿದರೆ ಮಾತಾಡಲು ವಿಶ್ವಾಸ್ ಎಂದೂ ಹಿಂಜರಿಯುತ್ತಿರಲಿಲ್ಲ.

ಹೀಗೆ, ಅನೇಕ ವಿವಾದಗಳ ಹೊರತಾಗಿಯೂ ವಿಶ್ವಾಸ್ ಅವರಿಂದು ದೇಶದ 'ಯೂತ್ ಐಕಾನ್'ಗಳಲ್ಲಿ ಒಬ್ಬರು ಎಂಬುದರಲ್ಲಿ ಸಂಶಯವಿಲ್ಲ. ಈ ಮನುಷ್ಯನ ಜೀವನ ಪರಿಪೂರ್ಣವಾಗಿಲ್ಲದಿರಬಹುದು, ಆದರೆ ಸ್ಫೂರ್ತಿದಾಯಕವಾಗಿರುವುದರಲ್ಲಿ ಎರಡು ಮಾತಿಲ್ಲ. ಭಾರತದಲ್ಲಿ ಸಾಕಷ್ಟು ನಿರ್ಲಕ್ಷಿಸಲ್ಪಡುತ್ತಿರುವ ಕಾವ್ಯಜಗತ್ತಿನಲ್ಲಿ ದೊಡ್ಡದನ್ನು ಸಾಧಿಸಲೆಂದು ತಮ್ಮ ಎದೆಯ ದನಿಗೆ ಓಗೊಟ್ಟ ಇವರ ಸಾಹಸ ಮತ್ತು ಏರಿದ ಎತ್ತರವು, ಕಾವ್ಯಸೃಷ್ಟಿಯನ್ನು ವೃತ್ತಿಯಾಗಿಸಿಕೊಳ್ಳಬಯಸುವ ಯುವಜನರಿಗೆ ಖಂಡಿತ ಸ್ಫೂರ್ತಿಯಾಗಬಲ್ಲದು, ಉತ್ಸಾಹವನ್ನು ನೀಡಬಲ್ಲದು. ಕಾರಣ ಅವರ ಕವಿತೆಗಳು ಉತ್ತಮ ಜೀವನಕ್ಕಾಗಿ ಜನರನ್ನು ಪ್ರೇರೇಪಿಸುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ಅವರ ಪ್ರವಚನವಿದೆಯಲ್ಲಾ, ಅದು ಅದ್ಭುತ ರಸಗವಳದ ಭಂಡಾರ! ಹೀಗಾಗಿ ವಿಶ್ವಾಸ್ ಇಂದು ದೇಶ-ವಿದೇಶಗಳಲ್ಲಿ ಬಹುಬೇಡಿಕೆಯ ಪ್ರವಚನಕಾರ. ವಿಶೇಷವಾಗಿ ರಾಮಾಯಣದ ಕುರಿತ ಪ್ರವಚನಗಳು ಅವರ ಅಧ್ಯಯನದ ಆಳ ಮತ್ತು ಭಾವನಾತ್ಮಕತೆಯ ಎತ್ತರವನ್ನು ಸಾರಿ ಹೇಳುತ್ತವೆ. ಅವರು ಮೂಲ ವಾಲ್ಮೀಕಿ ರಾಮಾಯಣವನ್ನು, ಉತ್ತರದ ತುಳಸೀ ರಾಮಾಯಣ ಮತ್ತು ದಕ್ಷಿಣದ ಕಂಬ ರಾಮಾಯಣಗಳೊಂದಿಗೆ ಸಮೀಕರಿಸಿ ತನ್ಮಯತೆಯಿಂದ ಅನುಭವಿಸಿ ಹೇಳುವ ಚಂದವೇ ಬೇರೆ. ಆ ಸುಖವನ್ನು ಕೇಳಿಯೇ ಅನುಭವಿಸಬೇಕು. ಅವರ ಪ್ರವಚನದ ಭಾಷೆ ಹಿಂದಿಯಾದರೂ, ಎಲ್ಲ ಭಾಷಿಕರಿಗೂ ಅರ್ಥವಾಗುವಂತಿರುತ್ತದೆ, ಶೈಲಿಯೂ ಮನಮೋಹಕವಾಗಿರುತ್ತದೆ. ಹಾಗಾಗಿ ಅವರ ಪ್ರವಚನ ಸಭೆಗಳಿಗೆ ಹತ್ತಾರು ಸಾವಿರ ಪ್ರೇಕ್ಷಕರು ಸೇರುತ್ತಾರೆ. ಒಂದು ಪ್ರವಚನ ಸರಣಿಗೆ ವಿಶ್ವಾಸ್ ಹತ್ತಾರು ಲಕ್ಷಗಳನ್ನು ಗೌರವ ಸಂಭಾವನೆಯಾಗಿ ಪಡೆಯುತ್ತಾರೆ. ಅವರ ಯೂಟ್ಯೂಬ್ ವಿಡಿಯೋಗಳಿಗಂತೂ ಲಕ್ಷಾಂತರ ವೀಕ್ಷಕರಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿನ ಅವರ ಪ್ರವಚನಗಳನ್ನು ಒಮ್ಮೆ ಕೇಳಿದರೂ ಸಾಕು, ಅವರು ನಿಮ್ಮನ್ನು ಆವರಿಸಿಬಿಡುತ್ತಾರೆ ಮತ್ತು ನೀವೂ ಅವರನ್ನು ಅಭಿಮಾನದಿಂದ ಸ್ವೀಕರಿಸುವುದು ನಿಶ್ಚಿತ. ಹತ್ತು ಸಾವಿರಕ್ಕೊಬ್ಬ ವಾಗ್ಮಿ ದೊರಕುತ್ತಾನಂತೆ (ವಕ್ತಾ ದಶ ಸಹಸ್ರೇಷು). ವಿಶ್ವಾಸ್ ಅವರು ನಮ್ಮ ದೇಶದ ಅಂಥ ಅಪರೂಪದ ವಾಗ್ಮಿಗಳಲ್ಲೊಬ್ಬರು ಎಂಬುದು ನಿರ್ವಿವಾದಿತ ಸಂಗತಿ. 'ಅಪ್ನೆ ಅಪ್ನೆ ರಾಮ್' ಯೂಟ್ಯೂಬ್ ಚಾನಲ್‌ನಲ್ಲಿ ಒಮ್ಮೆ ಅವರನ್ನು ಕೇಳಿದರೆ, ನನ್ನ ಮಾತು ದಿಟವೆಂಬುದು ನಿಮಗೆ ಅರಿವಾಗುತ್ತದೆ.

ಕುಮಾರ್ ವಿಶ್ವಾಸ್ ಅನೇಕ ಅನಗತ್ಯ ಹಗರಣಗಳು, ವಿವಾದಗಳನ್ನು ಎದುರಿಸಿದ್ದಿರಬಹುದು. ಆದರೆ ಪ್ರತಿ ಬಾರಿಯೂ ತಮ್ಮ ಸ್ವಯಾರ್ಜಿತ ಪ್ರತಿಭೆಯಿಂದ ಅವರು ಮೇಲಕ್ಕೇರಿ ಬಂದಿದ್ದಾರೆ. ಅವರ ಆತ್ಮವಿಶ್ವಾಸ, ಕಲಿಕೆಯಲ್ಲಿನ ನಿರಂತರತೆ, ಸರಿಯಾದ ಸಮಯದಲ್ಲಿ ಯೋಗ್ಯರ ಸಹವಾಸ ಇವು ಅವರ ಯಶಸ್ಸಿಗೆ ಮುಖ್ಯಕಾರಣ ಎನ್ನಬಹುದೇನೋ! ಅದೇನೇ ಇರಲಿ, ದೇಶಪ್ರೇಮ, ನಮ್ಮ ಸನಾತನ ಪರಂಪರೆಯ ಕುರಿತಾದ ಆಸ್ಥೆ, ಸರಳ ಜೀವನ, ಪ್ರಾಧ್ಯಾಪಕತ್ವ, ಕವಿತ್ವಗಳಷ್ಟೇ ಅಲ್ಲದೆ, ದೇಶದ ಅತ್ಯಂತ ಕಿರಿಯ ಪಕ್ಷದ ರಾಜಕಾರಣಿಯಾಗಿ ಅದನ್ನು ಅಧಿಕಾರಕ್ಕೆ ತಂದ ಸಾಧನೆಯವರೆಗಿನ ಒಬ್ಬ ಸಾಮಾನ್ಯ ಹುಡುಗನ ಬಹು ಆಯಾಮಗಳ ಪಯಣವು ನಿಜಕ್ಕೂ ಪ್ರೇರಣಾದಾಯಿ. ವ್ಯಕ್ತಿಯೊಬ್ಬ ತನ್ನ ಜನ್ಮಜಾತ ಪ್ರತಿಭೆಯಲ್ಲಿ ನಂಬಿಕೆಯಿಟ್ಟು ಪರಿಶ್ರಮದ ಹಾದಿಯಲ್ಲಿ ಹೆಜ್ಜೆಹಾಕಿದರೆ ಏನೆಲ್ಲಾ ಯಶಸ್ಸನ್ನು ಸಾಧಿಸಬಹುದು ಎಂಬುದಕ್ಕೆ ಡಾ.ಕುಮಾರ್ ವಿಶ್ವಾಸ್ ಜೀವಂತ ಸಾಕ್ಷಿ. ದೇಶದ ಯುವಪೀಳಿಗೆಗೆ ಉತ್ತಮ ಮಾದರಿಯಾಗಿರುವ ಇಂಥವರ ಸಂಖ್ಯೆ ಸಾವಿರವಾಗಲಿ...

144 ವರ್ಷಕ್ಕೊಮ್ಮೆ ಬರುತ್ತೆ ಅಂತ, ಸೆಕ್ಷನ್ 144 ಜಾರಿ ಮಾಡೋಕಾಗುತ್ತಾ?

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಕನ್ನಡ ಚಿತ್ರರಂಗದಲ್ಲಿ ಅನೇಕ ನಿರ್ದೇಶಕರ ಗುರು ಮತ್ತು ಮಾನಸಗುರು ಆಗಿದ್ದ ಹಿರಿಯ ನಿರ್ದೇಶಕ ಕೆ.ವಿ.ರಾಜು ಬಗೆಗಿನ ಒಂದು ಇಂಟರೆಸ್ಟಿಂಗ್ ಸಂಗತಿ ಇಲ್ಲಿದೆ. ರಾಜು ಅಂದ್ರೆ ನೆನಪಾಗೋದು ಖಡಕ್ ಮಾತು, ವ್ಯಕ್ತಿತ್ವ ಅಷ್ಟೇ ಖಡಕ್ ಚಿತ್ರಗಳು. ಜೀವನದು ದ್ದಕ್ಕೂ ನೇರ ನಿಷ್ಠುರ ಎಂಬಂತೆ ಬದುಕಿದ್ದ ನಿರ್ದೇಶಕ ಅವರು. ಹಲವು ಅದ್ಭುತ ಚಿತ್ರಗಳನ್ನು ಕೊಟ್ಟಿದ್ದರೂ ಬಹುತೇಕರು ಅವರನ್ನು ಗುರುತಿಸೋದು 'ಹುಲಿಯಾ' ಚಿತ್ರದಿಂದಲೇ. ಇಂದಿನ ಪ್ರೇಕ್ಷಕರಿಗೆ ಇಷ್ಟವಾಗುವಂಥ 'ಸೋ ಕಾಲ್ಡ್' ಹೊಸ ಅಲೆಯ ಚಿತ್ರಗಳ ಸಂಸ್ಕೃತಿ ಕನ್ನ ಡದಲ್ಲಿ ಎಂದೋ ಶುರುವಾಗಿತ್ತು. ಅಂಥ ಚಿತ್ರಗಳ ಸಾಲಿನಲ್ಲಿ ಕಾಣುವ ಪ್ರಮುಖ ಚಿತ್ರ ಅಂದ್ರೆ, ದೇವರಾಜ್, ಅರ್ಚನಾ ಅಭಿನಯದ 'ಹುಲಿಯಾ'. ಕೆ.ವಿ.ರಾಜು ಅವರ ಪ್ರಮುಖ 3 ಚಿತ್ರಗಳನ್ನು ಹೆಸರಿಸಿ ಅಂದ್ರೆ ಪ್ರೇಕ್ಷಕ ಖಂಡಿತಾ 'ಹುಲಿಯಾ'ನನ್ನು ನೆನಪಿಸಿಕೊಳ್ಳುತ್ತಾನೆ. ಸದಭಿರುಚಿಯ ಚಿತ್ರಗಳನ್ನು ಇಷ್ಟಪಡುವ ಕನ್ನಡ ಪ್ರೇಕ್ಷಕನ ಮನಸ್ಸಿನಲ್ಲಿ ಹುಲಿಯಾ ಚಿತ್ರಕ್ಕೆ ಅಮೂಲ್ಯ ಜಾಗವಿದೆ. ಇದರ ಕಥೆಯನ್ನು ನೋಡಿದರೆ, 'ಈಗ ಪರಭಾಷಾ ಚಿತ್ರರಂಗದವರು ಮಾಡುತ್ತಿರೋ, ದೌರ್ಜನ್ಯಕ್ಕೆ ಒಳಗಾದವರ ಕಥೆಗಳನ್ನ ರಾಜು ಅಂದೇ ಮಾಡಿದ್ದರು' ಅನಿಸಿದರೆ ತಪ್ಪಿಲ್ಲ. ಒಂದೇ ವ್ಯತ್ಯಾಸ ಅಂದ್ರೆ ಬಡವರು ತಿರುಗಿ ಬಿದ್ದು ಉಳ್ಳವರ ಮೇಲೆ ಸೇಡು ತೀರಿಸಿಕೊಳ್ಳೋದೆಲ್ಲಾ ನಿಜಜೀವನದಲ್ಲಿ ಆಗಲ್ಲ ಅನ್ನೋ ನಂಬಿಕೆಯಲ್ಲಿ ಕೆ.ವಿ.ರಾಜು ಈ ಚಿತ್ರದಲ್ಲಿ ಸ್ಯಾಡ್ ಎಂಡಿಂಗ್ ಇಟ್ಟಿದ್ದರು. ದೇವರಾಜ್ ಅಭಿನಯಕ್ಕೆ ಎಲ್ಲೆಡೆಯಿಂದ ಪ್ರಶಂಸೆ ಕೇಳಿಬಂ ದಿತ್ತು. ಅದರಲ್ಲೂ, ರಸ್ತೆಯಲ್ಲಿ ನಿಂತು ದೇವರಾಜ್ ಅಭಿನಯಿಸಿದ್ದ ಕ್ಲೈ ಮ್ಯಾಕ್ಸ್ ದೃಶ್ಯ ನೋಡಿ ನಟ ವಿಷ್ಣುವರ್ಧನ್, ''ಅಲ್ರೀ, ಪಬ್ಲಿಕ್ ಪ್ಲೇಸ್‌ನಲ್ಲಿ ನಿಂತುಕೊಂಡು ಅಷ್ಟೊಂದು ಜನರ ಎದುರಿಗೆ ಅಂಥ ಪರ್ಫಾರ್ಮೆನ್ಸ್ ಕೊಡೋದು ಅಂದ್ರೆ ಸುಮ್ನೆನಾ, ನನ್ನ ಕೈಲಂತೂ ಆಗ್ತಾ ಇರಲಿಲ್ಲ'' ಎಂದು ದೇವರಾಜ್‌ರ ಬೆನ್ನು ತಟ್ಟಿದ್ದರು. ಇಷ್ಟಾಗಿಯೂ ಆ ಚಿತ್ರ ಗಲ್ಲಾಪ ಟ್ಟಿಯಲ್ಲಿ ಸೋತಿತು. ''ನನಗೆ ಲಾಸ್ ಆಗುತ್ತೆ, ಕ್ಲೈಮ್ಯಾಕ್ಸ್ ಬದಲಿಸಿ ಅಂತ ನಾನು ಹೇಳಿದ ಮಾತನ್ನು ರಾಜು ಕೇಳಲಿಲ್ಲ'' ಅಂತ ಆರೋಪ ಹೊರಿಸುವ ಚಿತ್ರದ ನಿರ್ಮಾಪಕ ಗೋವಿಂದು ಕೂಡ, ''ನಿಮ್ಮ ಹೆಸರೇನು?'' ಅಂತ ಯಾರಾದ್ರೂ ಕೇಳಿದ್ರೆ, ''ಗೋವಿಂದು, ಹುಲಿಯಾ ಗೋವಿಂದು'' ಅಂತಲೇ ಹೇಳ್ತಾರೆ. ಅದು ಆ ಚಿತ್ರದ ಮತ್ತು ಕೆ.ವಿ.ರಾಜು ಅವರ ತಾಕತ್ತು.

ಲೂಸ್ ಟಾಕ್

ಕುಂಭಮೇಳ ಮುಗಿಸಿ ಬಂದ ಭಕ್ತ

- **ಏನ್ ಸರ್, ಕುಂಭಮೇಳದಲ್ಲಿ ನೀವು ಮುಳುಗಿದ ನೀರು ಮಲಿನ ಆಗಿದೆ ಅಂತಿದ್ದಾರಲ್ಲ?**

– ಏನ್ ಮಾಡೋದು, ಪವಿತ್ರ ನೀರು ಅಂತ ನೀರಲ್ಲಿ ಮುಳುಗಿ ಬಂದ ಮೇಲೆ, ಮುಳುಗಿದ್ದೆಲ್ಲಾ ನೀರಲ್ಲಿ ಹೋಮ ಮಾಡಿದಂಗೆ ಆಯ್ತು ಅನ್ನೋ ಥರ ಆಗಿದೆ.

- **ಆ ನೀರು ಸ್ನಾನಕ್ಕೆ ಯೋಗ್ಯ ಅಲ್ಲ, ಅದರಲ್ಲಿ ಮುಳುಗಿ ಎದ್ರೆ ರೋಗ-ರುಜಿನ ಬರ್ತವೆ ಅಂತ ಹೇಳ್ತಿದ್ದಾರೆ?**

– ಹೌದು, ಹಾಡ್ತಾ ಹಾಡ್ತಾ ರಾಗ, ಮುಳುಗ್ತಾ ಮುಳುಗ್ತಾ ರೋಗ.

- **ಆದ್ರೂ ನಮ್ ಜನ ಅಷ್ಟು ದೂರ ಹೋಗಿ ಸಂಗಮದಲ್ಲಿ ಮುಳುಗಿ ಬರ್ತಾರಲ್ಲಾ ಅವರಿಗೆ ತಾಳ್ಮೆ ಜಾಸ್ತಿ ಅಲ್ವಾ?**

– ಮತ್ತಿನ್ನೇನು, ಪಾಪ ಕಳೀಬೇಕು ಅಂದ್ರೆ ದೂರ ಹೋಗಲೇಬೇಕು. ಎಲ್ಲಾ ಊರಲ್ಲೂ ಪಾಪಸ್‌ಕಳ್ಳಿ ಥರ ತಲೆ ಎತ್ತುತ್ತಿರೋ ದೇವಸ್ಥಾನಗಳ ಮೇಲೆ ನಂಬಿಕೆ ಇಲ್ಲ ನಮಗೆ.

- **ಆದ್ರೂ, ಯಾಕೋ ನೀವು ಹೆದರಿಕೊಂಡಂಗೆ ಇದೆ?**

– ಹಂಗೇನಿಲ್ಲ, ಆದ್ರೂ 'ಕುಂಭ'ಮೇಳಕ್ಕೆ ಹೋಗಿ ಬಂದ ಮೇಲೆ ಮನೆ ಮುಂದೆ 'ಮಡಕೆ' ಇಟ್ಟು, ಹೊಗೆ ಹಾಕೋ ಪರಿಸ್ಥಿತಿ ಬಂದ್ರೆ ಅಂತ ಸ್ವಲ್ಪ ಆತಂಕ.

- **ಅಂದಹಾಗೆ, ಈ ಸಲ ಮಹಾಕುಂಭಮೇಳದಲ್ಲಿ ಭಾರಿ ಜನಜಂಗುಳಿ ಅಂತೆ. ಎಷ್ಟೇ ಜನ ಕಾಲ್ತುಳಿತಕ್ಕೆ ಸಿಕ್ಕು ಸತ್ತುಹೋದ್ರು, ವ್ಯವಸ್ಥೆ ಸರಿ ಇಲ್ಲ ಅಲ್ವಾ?**

– ಏನ್ರೀ ಸರಿ ಇಲ್ಲ? ಮಹಾಕುಂಭಮೇಳ 144 ವರ್ಷಕ್ಕೊಮ್ಮೆ ಬರುತ್ತೆ ಅಂತ ಅಲ್ಲಿ ಸೆಕ್ಷನ್ 144 ಜಾರಿ ಮಾಡೋಕಾಗುತ್ತಾ?

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮು ತನ್ನ ಕೋತಿಯೊಂದಿಗೆ ಪಬ್‌ಗೆ ಹೋದ. ಅವನು ಟೇಬಲ್ ಮುಂದೆ ಕೂತು 2 ಪೆಗ್‌ಗೆ ಆರ್ಡರ್ ಮಾಡಿದ ಮೇಲೆ ಅವನ ಕೋತಿ ಎಲ್ಲೆಂದರಲ್ಲಿ ಸುತ್ತುತ್ತಾ ಅಲ್ಲಿ ಫ್ರಿಜ್ ಮೇಲಿಟ್ಟಿದ್ದ ಸೌತೆಕಾಯಿ, ಕ್ಯಾರೆಟ್ ಎಲ್ಲಾ ತಿಂದುಬಿಡ್ತು. ಆ ಪಬ್‌ನಲ್ಲಿ ಸ್ನೂಕರ್ ಟೇಬಲ್ ಕೂಡ ಇತ್ತು, ಅದರ ಮೇಲೆ ಹಾರಿದ ಕೋತಿ ಒಂದು ಸ್ನೂಕರ್ ಬಾಲ್ ತಗೊಂಡು ತಿಂದುಬಿಡ್ತು. ಅಷ್ಟರಲ್ಲಿ ಸಪ್ಲೈಯರ್ ಬಂದು ''ನಿಮ್ಮ ಕೋತಿ ಏನ್ ಮಾಡ್ತಾ ಇದೆ ನೋಡಿದ್ರಾ?'' ಅಂತ ಖೇಮುವನ್ನು ಕೇಳಿದ. ಅದಕ್ಕೆ ಖೇಮು ''ನಂಗೆಲ್ಲ ಗೊತ್ತು, ಅದು ಸ್ವಲ್ಪ ಹಂಗೆನೇ, ನಾನು ಎಲ್ಲದರ ಬಿಲ್ ಪೇ ಮಾಡ್ತೀನಿ, ಡೋಂಟ್ ವರಿ'' ಅಂದು ಕುಡಿತ ಮುಗಿಸಿ ಬಿಲ್ ಕೊಟ್ಟು ಮನೆಗೆ ಹೊರಟ. ವಾರದ ನಂತರ ಖೇಮು ಮತ್ತೆ ಕೋತಿಯೊಡನೆ ಪಬ್‌ಗೆ ಬಂದ. ಈ ಬಾರಿಯೂ ಕೋತಿ ಸಿಕ್ಕ ಸಿಕ್ಕದನ್ನೆಲ್ಲಾ ತಿನ್ನುತ್ತಿತ್ತು, ಆದರೆ ಪ್ರತಿ ಬಾರಿ ಏನನ್ನಾದರೂ ತಿನ್ನುವ ಮುನ್ನ ಅದನ್ನು ತನ್ನ ಗುದದ್ವಾರದ ಒಳಗೆ ಇಟ್ಟುಕೊಂಡು ನಂತರ ತೆಗೆದು ತಿನ್ನುತ್ತಿತ್ತು. ಅದನ್ನು ನೋಡಿ ವಿಚಿತ್ರ ಮತ್ತು ಅಸಹ್ಯ ಭಾವನೆಯೊಂದಿಗೆ ಸಪ್ಲೈಯರ್ ಹೇಳಿದ ''ಸರ್, ನಿಮ್ ಕೋತಿ ಏನ್ ಮಾಡ್ತಾ ಇದೆ ನೋಡ್ತಾ ಇದೀರಾ?''. ಖೇಮು ಹೇಳಿದ ''ಹೌದು, ಅದೇನಾಯ್ತು ಅಂದ್ರೆ, ಲಾಸ್ಟ್ ಟೈಮ್ ಸ್ನೂಕರ್ ಬಾಲ್ ತಿಂದ ಮರುದಿನ ಬೆಳಗ್ಗೆ ಅದಕ್ಕೆ ಮೋಷನ್ ಟೈಮಲ್ಲಿ ಸಿಕ್ಕಾಬಟ್ಟೆ ಸಮಸ್ಯೆ ಆಯ್ತು. ಹಾಗಾಗಿ ಈಗ ಅದು ಏನು ತಿನ್ನಬೇಕಾದರೂ ಮೊದಲು ಸೈಜ್ ಟೆಸ್ಟ್ ಮಾಡಿಕೊಂಡು ಆಮೇಲೆ ತಿನ್ನುತ್ತೆ''.

ಲೈನ್ ಮ್ಯಾನ್

- **ಹೆಂಗಸರಿಗೆ ಮಾತ್ರ ಗೊತ್ತಿರೋ, ಗಂಡಸರಿಗೆ ಗೊತ್ತಿಲ್ಲದೇ ಇರೋ, ಕಾಮನಬಿಲ್ಲಿನಲ್ಲಿ ಇಲ್ಲದೇ ಇರೋ ಬಣ್ಣಗಳು ಯಾವುವು?**

– ಗೋಲ್ಡ್, ಸಿಲ್ವರ್

- **ಯಾವುದೇ ಸಮಸ್ಯೆ ಬರೋಕೆ ಮುಂಚೆ ಅದರ ಬಗ್ಗೆ ಜಾಸ್ತಿ ಆತಂಕಕ್ಕೆ ಒಳಗಾಗಬಾರದು.**

– ಎಷ್ಟ್ ಸಲ, ಫುಲ್ ಅರ್ಜೆಂಟ್ ಆಗಿದೆ ಅಂದ್ಕೊಂಡು ಪ್ಯಾಂಟ್ ಬಿಚ್ಚಾಕ್ಕಿ, ಓಡೋಗಿ, ಟಾಯ್ಲೆಟ್ ಸೀಟ್ ಮೇಲೆ ಕೂತ್ಕೊಂಡು, ಆಮೇಲೆ ಬರೀ ಗ್ಯಾಸ್ ಬಿಟ್ಟು ಎದ್ ಬಂದಿಲ್ಲ ನೀವು?

- **ಯಾವಾಗಲೂ ಸಣ್ಣ ಬಟ್ಟೆಗಳನ್ನೇ ಹಾಕಿಕೊಳ್ಳೋ ಉರ್ಫಿ ಜಾವೆದ್‌ಗೆ ಕೊಡಬಹುದಾದ ಉಚಿತ ಸಲಹೆ**

– THINK BIG!!

- **ಸಾರಿಗೆ ಗಾದೆ**

– ಬಾಯಿ ಬಿಟ್ಟು ಕೇಳದೇ ಇದ್ರೆ, ಬಿಎಂಟಿಸಿ ಡ್ರೈವರ್ರೂ ಸ್ಟಾಪ್ ಕೊಡಲ್ಲ

- **ಪ್ರಯಾಣ ಪ್ರಯಾಸ**

ಬಸ್ಸಲ್ಲಿ ಕಣ್ ಮುಚ್ಕೊಂಡು ಕೂತಿದ್ದವನೊಬ್ಬನನ್ನು ನೋಡಿ ಪಕ್ಕದಲ್ಲಿದ್ದವನು ಕೇಳಿದ

- **ಯಾಕ್ ಸರ್ ಹುಷಾರಿಲ್ವಾ?**

– ಹಂಗೇನಿಲ್ಲ, ಬಸ್ಸಲ್ಲಿ ಈ ವಯಸ್ಸಾದವರು ನಿಂತ್ಕೊಂಡ್ ಪ್ರಯಾಣ ಮಾಡೋದನ್ನ ನನ್ ಕೈಲಿ ನೋಡಕಾಗಲ್ಲ ಅದಕ್ಕೆ.

- **ಫ್ರೀ ಟೈಮ್ ಮಾತು**

– ರಣಭೂಮಿಯಲ್ಲಿ ಯುದ್ಧ ನಿಲ್ಲಿಸಿದ್ರೆ – ಕದನ ವಿರಾಮ

– ವಿಧಾನಸೌಧದಲ್ಲಿ ಜಗಳ ನಿಲ್ಲಿಸಿದ್ರೆ – ಸದನ ವಿರಾಮ

- **ಲೆಜೆಂಡರೀ ಡೆಂಟಿಸ್ಟ್ ಜೀವನ ಚರಿತ್ರೆ**

– 'ದಂತ'ಕಥೆ

- **ಗಾಂಜಾ ಸೇದಿದ್ರೆ ಬೇಲಿಲ್ಲದ ಕೇಸ್ ಆಗುತ್ತೆ**

– ಗಾಂಜಾ ಗಿರಾಕಿ: ನಾವ್ ಅದಕ್ಕೆಲ್ಲಾ 'ಸೊಪ್ಪು' ಹಾಕಲ್ಲ

- **ಹೆಣದ ಪಾತ್ರ ಮಾಡಿದವನ ಬಗ್ಗೆ ವಿಮರ್ಶೆ**

– ಹೆಣದ ಪಾತ್ರಕ್ಕೆ ಜೀವ ತುಂಬಿದ್ದಾರೆ

ರಾಮಕೃಷ್ಣ ಹೆಗಡೆಯವರ ಕನಸು ನನಸಾಗುವುದೆಂದು?

ಮಾಜಿ ಮುಖ್ಯಮಂತ್ರಿ ದಿ. ರಾಮಕೃಷ್ಣ ಹೆಗಡೆಯವರ ಸಂಗಾತಿಯಾಗಿದ್ದ ಪ್ರತಿಭಾ ಪ್ರಹ್ಲಾದ್, ಹೆಗಡೆ ಅವರ ಹೆಸರಿನಲ್ಲಿ ಸಾಂಸ್ಕೃತಿಕ ಕೇಂದ್ರ ಸ್ಥಾಪಿಸುವ, ಈ ಮೂಲಕ ಬೆಂಗಳೂರನ್ನು ಅಂತಾರಾಷ್ಟ್ರೀಯ ಸಾಂಸ್ಕೃತಿಕ ನೆಲೆಯಾಗಿ ರೂಪಿಸುವ ಕನಸು ಕಂಡಿದ್ದಾರೆ, ಅಂತಾರಾಷ್ಟ್ರೀಯ ದರ್ಜೆಯ ಸಭಾಂಗಣ ನಿರ್ಮಿಸಲು ಶ್ರಮಿಸುತ್ತಿದ್ದಾರೆ. ಈ ಕೇಂದ್ರಕ್ಕೆ ಸರಕಾರ ಈಗಾಗಲೇ ನಿವೇಶನ ನೀಡಿದೆ. ಈ ಹಿನ್ನೆಲೆಯಲ್ಲಿ 'ವಿಶ್ವವಾಣಿ' ನಡೆಸಿದ ಅವರ ವಿಶೇಷ ಸಂದರ್ಶನದ 2ನೇ ಭಾಗದ ಸಾರ ಇಲ್ಲಿದೆ.

ಭಾಗ 2

ವಿಶ್ವವಾಣಿ ಸಂದರ್ಶನ
ವೈದೇಹಿ ಬಾಟಿ

- **ರಾಮಕೃಷ್ಣ ಹೆಗಡೆಯವರ ಹೆಸರಿನಲ್ಲಿ ಸಾಂಸ್ಕೃತಿಕ ಕೇಂದ್ರ ಸ್ಥಾಪಿಸಲು ಮುಂದಾಗಿದ್ದೀರಿ. ಅದರ ರೂಪುರೇಷೆ ಏನು? ಕಾರ್ಯ ಚಟುವಟಿಕೆ ಹೇಗಿರುತ್ತದೆ? ಅಷ್ಟಕ್ಕೂ ಈ ಕೇಂದ್ರದ ಬಗ್ಗೆ ನಿಮ್ಮ ಕಲ್ಪನೆ ಏನು?**

– ರಾಮಕೃಷ್ಣ ಹೆಗಡೆಯವರು 1990ರಲ್ಲಿ 'ಪ್ರಸಿದ್ಧ ಫೌಂಡೇಷನ್' ಎಂಬ ಸಂಸ್ಥೆ ಸ್ಥಾಪಿಸಿದ್ದರು. ನಾವಿಬ್ಬರೂ ಆ ಸಂಸ್ಥೆಯ ಸ್ಥಾಪಕ ಟ್ರಸ್ಟಿಗಳಾಗಿದ್ದೆವು. ಆ ಸಂಸ್ಥೆಯ ಮೂಲಕ ಕರ್ನಾಟಕದಾದ್ಯಂತ ಸಾಕಷ್ಟು ಕಾರ್ಯಕ್ರಮಗಳನ್ನು ಮಾಡಿದ್ದೆವು. ಈ ಹಿಂದೆ ಹಂಪಿಯಲ್ಲಿ ಅದ್ಭುತವಾದ 'ನ್ಯಾಷನಲ್ ಟೂರಿಸಂ ಫೆಸ್ಟಿವಲ್' ಕಾರ್ಯಕ್ರಮ ನಡೆದಿತ್ತು. ಅದನ್ನು ಕೂಡ 'ಪ್ರಸಿದ್ಧ ಫೌಂಡೇಷನ್' ಮೂಲಕವೇ ಆಯೋಜಿಸಿದ್ದೆವು. ಆ ಸಂಸ್ಥೆಗೆ ಸರಕಾರ ಒಂದು ನಿವೇಶನ ಮಂಜೂರು ಮಾಡಿತ್ತು. ಆ ಜಾಗದಲ್ಲಿ ರಾಮಕೃಷ್ಣ ಹೆಗಡೆ ಹೆಸರಿನಲ್ಲಿ ಸಾಂಸ್ಕೃತಿಕ ಕೇಂದ್ರ ಕಟ್ಟಡವೊಂದನ್ನು ಕಟ್ಟಬೇಕೆಂಬ ಇಚ್ಛೆ ನನಗಿದೆ.

ಎಲ್ಲರಿಗೂ ತಿಳಿದಿರುವಂತೆ ಹೆಗಡೆಯವರು ಕರ್ನಾಟಕ ಕಂಡ ಅಪರೂಪದ ಮುಖ್ಯಮಂತ್ರಿ. ಅವರು ದೂರದೃಷ್ಟಿಯ ನಾಯಕ. ಅವರಿಗೆ ಕರ್ನಾಟಕದ ಬಗ್ಗೆ ಸಾಕಷ್ಟು ಕನಸುಗಳಿದ್ದವು. ಅದರಲ್ಲೂ ಬೆಂಗಳೂರನ್ನು ಸಾಂಸ್ಕೃತಿಕ ಕೇಂದ್ರವಾಗಿಸಬೇಕೆಂಬ ಹಂಬಲವಿತ್ತು. ಕಲೆ ಮತ್ತು ಸಂಸ್ಕೃತಿಯಷ್ಟೇ ಅಲ್ಲದೆ ಸಾಹಿತ್ಯ ಕ್ಷೇತ್ರದಲ್ಲೂ ಬದಲಾವಣೆ ತರಲು ಬಯಸಿದ್ದರು. 'ಇಂಡಿಯಾ ಇಂಟರ್‌ನ್ಯಾಷನಲ್ ಸೆಂಟರ್' ರೀತಿ ಬೆಂಗಳೂರಿನ ಸಾಂಸ್ಕೃತಿಕ ಕೇಂದ್ರವನ್ನು ಬೆಳೆಸಬೇಕೆಂಬ ಆಸೆ ಅವರಿಗಿತ್ತು. ಬಹು ಕಲೆಗಳಿಗೆ ಪ್ರೋತ್ಸಾಹ ನೀಡಿ ಪ್ರತಿಭಾವಂತ ಕಲಾವಿದರಿಗೆ ವೇದಿಕೆ ಒದಗಿಸಬೇಕೆಂಬ ಬಯಕೆಯಿತ್ತು. ಈಗ ಅವರ ಕನಸನ್ನು ನನಸು ಮಾಡಲು ನಾನು ಹೊರಟಿದ್ದೇನೆ. ಈಗಿನ ಹೊಸ ತಲೆಮಾರಿನ ಯುವಜನರಿಗೆ ನಮ್ಮ ದೇಶದ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ತಿಳಿಸಿಕೊಡಬೇಕು. ಕೇವಲ ಭರತನಾಟ್ಯ ಮತ್ತು ಸಂಗೀತವಷ್ಟೇ ಅಲ್ಲದೆ ಅವರಿಗೆ ನಮ್ಮ ದೇಶದ ಶ್ರೀಮಂತ ಪರಂಪರೆಯ ಬಗ್ಗೆ ಹೇಳಿಕೊಡುವ ಅಗತ್ಯವಿದೆ. ಆ ನಿಟ್ಟಿನಲ್ಲಿ ಕಾರ್ಯಚಟುವಟಿಕೆಯನ್ನು ಆರಂಭಿಸಿದ್ದೇನೆ.

- **ನಿಮ್ಮ ಈ ಕೆಲಸಕ್ಕೆ ಯಾರೆಲ್ಲ ಕೈಜೋಡಿಸಿದ್ದಾರೆ? ಏನೆಲ್ಲಾ ಯೋಜನೆಗಳಿವೆ?**

– ನನ್ನೊಂದಿಗೆ ಒಳ್ಳೆಯ ತಂಡವಿದೆ. ತಾಳ್ಮೆ, ಶ್ರದ್ಧೆಯಿಂದ ಕೆಲಸ ಮಾಡುವ ಜನರಿದ್ದಾರೆ. ಅವರಿಗೆ ನನ್ನ ಆಲೋಚನೆಗಳು ಅರ್ಥವಾಗಿವೆ. ನಾನು ಕಳೆದ 50 ವರ್ಷಗಳಿಂದ ಕಲಾಕ್ಷೇತ್ರದಲ್ಲಿರುವುದರಿಂದ ನನ್ನ ಸಂಪರ್ಕದಲ್ಲಿ ಸಾವಿರಾರು ಕಲಾವಿದರಿದ್ದಾರೆ. ಅವರೆಲ್ಲರೂ ನನ್ನ ಕೆಲಸಕ್ಕೆ ಕೈಜೋಡಿಸುತ್ತಾರೆ. ಸಾಂಸ್ಕೃತಿಕ ಕೇಂದ್ರದ ಕಟ್ಟಡ ಕಟ್ಟಲು ನನ್ನಲ್ಲಿ ಹಣವಿಲ್ಲ. ಆದರೆ ಅದನ್ನು ನಡೆಸಿಕೊಂಡು ಹೋಗುವ ಶಕ್ತಿಯಿದೆ. ಇಂಥ ಉಪಯುಕ್ತ ಕೇಂದ್ರಕ್ಕೆ ಕರ್ನಾಟಕ ಸರಕಾರದ ಸಹಕಾರ ನಿರೀಕ್ಷಿಸಿದ್ದೇನೆ.

- **ಭರತನಾಟ್ಯ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ಖ್ಯಾತಿ ನಿಮಗಿದೆ. ನಿಮ್ಮ ಈ ಸಾಧನೆ ಅನನ್ಯ. ನಿಮ್ಮ ಬಾಲ್ಯ ಹೇಗಿತ್ತು? ಈ ಕಲಾಯಾನ ಶುರುವಾದದ್ದು ಹೇಗೆ?**

– ನಾನು ಭರತನಾಟ್ಯವನ್ನು ಆಯ್ಕೆ ಮಾಡಿಕೊಳ್ಳಲಿಲ್ಲ, ಬದಲಾಗಿ ಭರತನಾಟ್ಯವೇ ನನ್ನನ್ನು ಆಯ್ಕೆ ಮಾಡಿಕೊಂಡಿತು. ಯಾಕೆಂದರೆ ನಮ್ಮ ಕುಟುಂಬದಲ್ಲಿ ಯಾರೂ ಕಲಾವಿದರಿರಲಿಲ್ಲ. ಅಮ್ಮ ಪ್ರೊಫೆಸರ್ ಆಗಿದ್ದರು. ತಂದೆ ಎಂಜಿನಿಯರ್. ಅವರಿಗೆ ನನ್ನನ್ನು ಭರತನಾಟ್ಯ ಕಲಾವಿದೆ ಮತ್ತು ಗಾಯಕಿಯನ್ನಾಗಿಸುವ ಆಸೆಯಂತೂ ಇರಲಿಲ್ಲ. ಸಂಜೆ 4 ಗಂಟೆಯಾಗುತ್ತಿದ್ದಂತೆ ನಮ್ಮ ಮನೆಯ ಬೀದಿಯಲ್ಲಿ 'ಥೈ ಥೈ ಥಕ ಥೈ' ಎಂಬ ಸ್ವರ ಕಿವಿಗೆ ಬೀಳುತ್ತಿತ್ತು. ನನಗಾಗ ಕೇವಲ ನಾಲ್ಕೂವರೆ ವರ್ಷ. ಒಂದು ಸಣ್ಣ ಮನೆಯಲ್ಲಿ ಸುನಂದಾ ಎಂಬುವವರು ಸಾಕಷ್ಟು ವಿದ್ಯಾರ್ಥಿಗಳಿಗೆ ಭರತನಾಟ್ಯ ಕಲಿಸುತ್ತಿದ್ದರು. ನಾನು ಚಿಕ್ಕ ಹುಡುಗಿಯಾದ್ದರಿಂದ ಅವರು ನನಗೆ ಕಲಿಸಲು ಮನಸ್ಸು ಮಾಡಿರಲಿಲ್ಲ. ನಾನು ಸಂಜೆಯಾದರೆ ಅವರ ಮನೆಗೆ ಹೋಗಿ ಅಲ್ಲಿ ನಾಟ್ಯ ಮಾಡುತ್ತಿದ್ದವರನ್ನು ನೋಡಿ ಕಲಿಯುತ್ತಿದ್ದೆ. ಹೀಗೊಮ್ಮೆ ಅವರ ವಿದ್ಯಾರ್ಥಿಗಳು ದೊಡ್ಡ ವೇದಿಕೆಯಲ್ಲಿ ಪ್ರದರ್ಶನ ನೀಡಬೇಕಿತ್ತು. ಒಂದು ಹುಡುಗಿ ಸರಿಯಾಗಿ ಕಲಿತಿರಲಿಲ್ಲ. ಆಗ ಸುನಂದಾ ಅವರ ಗುರುಗಳಾದ ಲೋಕಯ್ಯ ಅವರು ನನ್ನನ್ನು ಆಯ್ಕೆ ಮಾಡಿದರು. 'ಈ ಹುಡುಗಿಗೆ ಅವಕಾಶ ಕೊಟ್ಟು ನೋಡು' ಎಂದರು. ನಾನು ನೋಡುತ್ತಲೇ ಕಲಿತಿದ್ದ ವಿಷಯ ಅವರಿಗೆ ಗೊತ್ತಿತ್ತು.

ಗೆಜ್ಜೆ ಮತ್ತು ಕಾಸ್ಟ್ಯೂಮ್ಸ್‌ಗಾಗಿ ಅಮ್ಮನ ಬಳಿ ಹತ್ತು ರುಪಾಯಿ ಪಡೆದು ಮೊದಲ ಬಾರಿಗೆ ವೇದಿಕೆ ಏರಿದೆ. ಅಲ್ಲಿಂದ ಈ ಜರ್ನಿ ಶುರುವಾಯಿತು. ಮುಂದೆ ಅಸಾಧಾರಣ ಕಲಾವಿದರಾದ ಮುತ್ತುಸ್ವಾಮಿ ಪಿಳ್ಳೈ, ಕಲಾನಿಧಿ ನಾರಾಯಣನ್, ವೆಂಪತಿ ಚಿನ್ನ ಸತ್ಯಂ ಇವರಿಂದ ಭರತನಾಟ್ಯ, ಕೂಚಿಪೂಡಿ ಕಲಿತೆ. ಕಲಿಯುವ ಸಲುವಾಗಿಯೇ ರೈಲಿನಲ್ಲಿ ಮದ್ರಾಸ್‌ಗೆ ಹೋಗಿ ಬರುತ್ತಿದ್ದೆ. 18 ವರ್ಷವಿದ್ದಾಗಲೇ ಈ ಕಲೆಯನ್ನು ವೃತ್ತಿಯಾಗಿ ಆಯ್ಕೆ ಮಾಡಿಕೊಂಡೆ. ಆದರೆ ನಮ್ಮಮ್ಮ ವಿದ್ಯಾಭ್ಯಾಸದ ಕಡೆಗೂ ಗಮನಕೊಡು ಎನ್ನುತ್ತಿದ್ದರು. ಹಾಗಾಗಿ 'ಜರ್ನಲಿಸಂ ಆ್ಯಂಡ್ ಮಾಸ್ ಕಮ್ಯೂನಿಕೇಷನ್' ವಿಷಯದಲ್ಲಿ ಪದವಿ ಪಡೆದೆ. ಜರ್ನಲಿಸ್ಟ್ ಆಗಿಯೂ ಕೆಲಸ ಮಾಡಿದ ಅನುಭವವಿದೆ. ಟೈಮ್ಸ್ ಆಫ್ ಇಂಡಿಯಾ, ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಿಗೆ ಲೇಖನ ಬರೆಯುತ್ತಿದ್ದೆ. ಕ್ಯಾಮೆರಾ ಮತ್ತು ಎಡಿಟಿಂಗ್ ಕೆಲಸಗಳನ್ನು ಕೂಡ ಮಾಡಿದ್ದೇನೆ.

ಆದರೆ ನನ್ನ ಅಂತಿಮ ಆಯ್ಕೆ ಭರತನಾಟ್ಯವೇ ಆಗಿತ್ತು. ಆರಂಭದಿಂದಲೂ ನನ್ನಲ್ಲೊಂದು ಕೊರಗಿತ್ತು. ಈ ಹಿಂದೆ ಭರತನಾಟ್ಯ ಕ್ಷೇತ್ರದಲ್ಲಿ ಕರ್ನಾಟಕದ ಯಾವ ಕಲಾವಿದರೂ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿರಲಿಲ್ಲ. ನಾನು ರಾಷ್ಟ್ರಮಟ್ಟದಲ್ಲಿ ಜನಪ್ರಿಯತೆ ಗಳಿಸಬೇಕೆಂಬ ಇಂಗಿತದೊಂದಿಗೆ ಪ್ರಾಮಾಣಿಕವಾಗಿ ಈ ಕಲೆಯನ್ನು ಒಲಿಸಿಕೊಂಡೆ. ಅಂದುಕೊಂಡಂತೆ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದೆ. ಕಳೆದ 58 ವರ್ಷಗಳಿಂದ ಈ ಕ್ಷೇತ್ರಕ್ಕೆ ನನ್ನನ್ನು ಅರ್ಪಿಸಿಕೊಂಡಿದ್ದೇನೆ.

- **ನೀವು ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಸದಸ್ಯರಾಗಿ ಕೂಡ ಕಾರ್ಯನಿರ್ವಹಿಸಿದ್ದೀರಿ. ಆ ದಿನಗಳಲ್ಲಿ ನಮ್ಮ ರಾಜ್ಯದ ಕಲಾವಿದರ ಬಗ್ಗೆ ಕೇಂದ್ರ ಯಾವ ನಿಲುವನ್ನು ಇಟ್ಟುಕೊಂಡಿತ್ತು? ನೀವು ಸದಸ್ಯರಾದ ಮೇಲೆ ಏನೆಲ್ಲಾ ಬದಲಾವಣೆಗಳನ್ನು ತಂದಿರಿ?**

– ನನಗೆ ಅದು ಅಪರೂಪದ ಅವಕಾಶ. ಆಗೆಲ್ಲ ಕರ್ನಾಟಕದ ಕಲಾವಿದರನ್ನು ಕಡೆಗಣಿಸಲಾಗಿತ್ತು. ಲಾಬಿ ಮಾಡುವವರಿಗೆ ಮಾತ್ರ ವಿಶೇಷ ಸೌಲಭ್ಯ ಮತ್ತು ಅಕಾಡೆಮಿ ಪ್ರಶಸ್ತಿಗಳು ಸಿಗುತ್ತಿದ್ದವು. ಕರ್ನಾಟಕದಲ್ಲಿ ಯಾವ ಹಿರಿಯ ಮತ್ತು ಪ್ರತಿಭಾವಂತ ಕಲಾವಿದರಿಗೂ ಪ್ರಶಸ್ತಿ ದೊರೆತಿರಲಿಲ್ಲ. ನಾನು ನನ್ನ 5 ವರ್ಷಗಳ ಅವಧಿಯಲ್ಲಿ ವರ್ಷಕ್ಕೆ ರಾಜ್ಯದ ಐವರು ಕಲಾವಿದರನ್ನು ಗುರುತಿಸಿ ಪ್ರಶಸ್ತಿ ನೀಡಿದೆ. ಒಟ್ಟು 25 ಕಲಾವಿದರಿಗೆ ಅಕಾಡೆಮಿ ಪ್ರಶಸ್ತಿ ಬಂತು. ನಮ್ಮ ಕಲಾವಿದರು ರಾಷ್ಟ್ರಮಟ್ಟದಲ್ಲೂ ಹೆಸರು ಮಾಡಿದರು.

- **ಕಲಾವಿದರ ಬಗ್ಗೆ ಹಲವರಿಗೆ ತಾತ್ಸಾರ ಭಾವನೆಯಿದೆ. ಯಾಕಿರಬಹುದು?**

– ಸಾಮಾನ್ಯವಾಗಿ ಎಲ್ಲ ಪೋಷಕರು ತಮ್ಮ ಮಕ್ಕಳು ಡಾಕ್ಟರ್ ಮತ್ತು ಎಂಜಿನಿಯರ್ ಆಗಬೇಕೆಂದು ಬಯಸುತ್ತಾರೆ. ತಮ್ಮ ಮಕ್ಕಳು ಕಲಾವಿದರಾಗಲು ಬಯಸಿದರೆ ಸಸಿಯಲ್ಲೇ ಚಿವುಟುವ ಕೆಲಸ ಮಾಡುತ್ತಾರೆ. ಸಮಾಜದಲ್ಲಿ ಕಲಾವಿದರನ್ನು ಗೌರವಿಸುವವರು ಕಡಿಮೆ. ಹಾಗಾಗಿ ಕಲಾವಿದರೆಂದರೆ ಕೆಲವರಿಗೆ ತಿರಸ್ಕಾರದ ಭಾವನೆ. ಕಲಾವಿದ ಒಂದು ಪರಂಪರೆಯ ಕೊಂಡಿ. ಅದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಕಲಾವಿದರನ್ನು ಗೌರವಿಸಬೇಕು. ಅವರಿಗೆ ಪ್ರೋತ್ಸಾಹ ನೀಡಬೇಕು. ಆಗ ಮಾತ್ರ ಅವರು ಮುಂದಿನ ತಲೆಮಾರನ್ನು ಕಲೆಯ ಕಡೆಗೆ ತರುತ್ತಾರೆ.

- **ದೆಹಲಿಯ ಇಂಟರ್‌ನ್ಯಾಷನಲ್ ಆರ್ಟ್ ಫೆಸ್ಟಿವಲ್ ನಿಮ್ಮ ಕಲ್ಪನೆಯ ಕೂಸು. ಈ ಕೇಂದ್ರದ ಆಶಯ ಈಡೇರಿತೆ?**

– ಈ ಹಿಂದೆ ಕಲಾವಿದರು ಅವರದ್ದೇ ಸ್ವಂತ ಖರ್ಚಿನಲ್ಲಿ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದರು. ಅವರೇ ಆಹ್ವಾನ ಪತ್ರಿಕೆ ನೀಡಿ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಿದ್ದರು. ವೇದಿಕೆ ಮೇಲೆ ಕಾರ್ಯಕ್ರಮವನ್ನೂ ಅವರೇ ನೀಡಬೇಕಿತ್ತು. ಕೊನೆಗೆ ಕಾರ್ಯಕ್ರಮಕ್ಕೆ ಬಂದ ಅತಿಥಿಗಳನ್ನು ಬೀಳ್ಕೊಡಬೇಕಿತ್ತು. ಕಲಾವಿದರ ಶಕ್ತಿಯೆಲ್ಲ ಸೋರಿಹೋಗುತ್ತಿತ್ತು. ಕಲಾವಿದರನ್ನು ಗುರುತಿಸಿ ಅವರಿಗೆ ವೇದಿಕೆ ಕಲ್ಪಿಸಿ ಕಾರ್ಯಕ್ರಮ ಆಯೋಜಿಸುವವರು ಇರಲಿಲ್ಲ. ಪ್ರತಿ ವರ್ಷವೂ ಹತ್ತಾರು ಫೆಸ್ಟಿವಲ್‌ಗಳು ನಡೆಯುತ್ತಿದ್ದವು. ಎಲ್ಲಾ ಕಡೆಯೂ ಅದೇ ಕಲಾವಿದರು ಬರುತ್ತಿದ್ದರು. ದೇಶದಲ್ಲಿ ಸಾವಿರಾರು ಪ್ರತಿಭಾವಂತ ಕಲಾವಿದರಿದ್ದಾರೆ, ಅವರಿಗೆ ವೇದಿಕೆ ಸಿಗುತ್ತಿರಲಿಲ್ಲ. ಹಾಗಾಗಿ ದೆಹಲಿಯಲ್ಲಿ ಒಂದು ಫೆಸ್ಟಿವಲ್ ಮಾಡಬೇಕೆಂದು ತೀರ್ಮಾನಿಸಿದೆ. ಯಾಕೆಂದರೆ ರಾಜಧಾನಿಗೆ ಎಲ್ಲಾ ರೀತಿಯ ಕಲಾವಿದರು ಬರುತ್ತಾರೆ. ಅವರ ಪ್ರತಿಭೆಯನ್ನು ಸಾವಿರಾರು ಜನರು ಗುರುತಿಸುತ್ತಾರೆ. ಆ ಕಾರಣದಿಂದ ದೆಹಲಿ ಇಂಟರ್‌ನ್ಯಾಷನಲ್ ಆರ್ಟ್ ಫೆಸ್ಟಿವಲ್ ಆಯೋಜಿಸುತ್ತಾ ಬಂದೆವು. ಅಸಾಮಾನ್ಯ ಕಲಾವಿದರು ಮುಖ್ಯವಾಹಿನಿಗೆ ಬಂದರು, ಕಲಾರಸಿಕರು ಅವರನ್ನು ಪ್ರೋತ್ಸಾಹಿಸಿದರು. ನನ್ನ ಕಲ್ಪನೆಯ ಕೂಸು ಯಶಸ್ಸನ್ನು ಕಂಡಿತು.

- **ನಿಮ್ಮ ಹಳೆಯ ಫೋಟೊಗಳನ್ನು ನೋಡುತ್ತಿದ್ದೆವು. ನೀವು ಸುಂದರರೂಪಿ. ಸಿನಿಮಾ ಕ್ಷೇತ್ರಕ್ಕೆ ಬನ್ನಿ ಎಂದು ನಿಮ್ಮನ್ನು ಯಾರೂ ಕರೆಯಲಿಲ್ಲವೇ?**

– ತಮ್ಮ ನಿರ್ದೇಶನದ 'ಉತ್ಸವ್' ಸಿನಿಮಾದಲ್ಲಿ ನಟಿಸುವಂತೆ ಗಿರೀಶ್ ಕಾರ್ನಾಡ್ ಹೇಳಿದ್ದರು. ನನ್ನ ಅಭಿನಯದ ಭಾಗದ ಶೂಟಿಂಗ್ ಕೂಡ ನಡೆದಿತ್ತು. ಆದರೆ ನಮ್ಮ ತಂದೆಗೆ ಸಿನಿಮಾ ನಟನೆಯ ಬಗ್ಗೆ ತೀವ್ರ ಅಸಮಾಧಾನವಿತ್ತು. ಸಿನಿಮಾದಲ್ಲಿ ನಟಿಸಕೂಡದು ಎಂದು ಕಟ್ಟುನಿಟ್ಟಾಗಿ ಹೇಳಿಬಿಟ್ಟರು. ತಂದೆಯ ಭಯದಿಂದ ಆ ಸಿನಿಮಾದ ಮುಂದಿನ ಶೂಟಿಂಗ್‌ಗೆ ಹೋಗಲಿಲ್ಲ. ಆದರೆ ಎಂ.ಎಸ್.ಸತ್ಯು ಅವರ ಸೀರಿಯಲ್ ಒಂದರಲ್ಲಿ ಭರತನಾಟ್ಯ ಕಲಾವಿದೆಯಾಗಿ ನಟಿಸಿದ್ದೆ. ಅದು ಸಾಕಷ್ಟು ಜನಪ್ರಿಯತೆ ಗಳಿಸಿತ್ತು. ಭರತನಾಟ್ಯ ಕಲಾವಿದೆಯ ಪಾತ್ರ ಸಿಕ್ಕರೆ ಪೋಷಕರು ಏನೂ ಹೇಳುತ್ತಿರಲಿಲ್ಲ. ಬೇರೆ ಪಾತ್ರವೆಂದರೆ ಸುತರಾಂ ಒಪ್ಪುತ್ತಿರಲಿಲ್ಲ. ಆರಂಭದಲ್ಲಿ, 'ನೃತ್ಯ ಮಾಡುವುದೇ ತಪ್ಪು, ಇದನ್ನು ನಿಲ್ಲಿಸಿಬಿಡು' ಎನ್ನುತ್ತಿದ್ದರು. ಮುಂದೆ ಹೇಗೋ ಸುಮ್ಮನಾದರು. ಹಾಗಾಗಿ ಸಿನಿಮಾ ರಂಗಕ್ಕೆ ಹೋಗಲಿಲ್ಲ. ನನಗೂ ಸಿನಿಮಾದ ಬಗ್ಗೆ ಅಂಥ ಮೋಹವಿರಲಿಲ್ಲ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:40

ಸಮಾಚಾರ ಸಣ್ಣದಲ್ಲ

ರಾಜಸ್ಥಾನ ಸಿಎಂಗೇ ಕೈದಿ ಕೊಲೆ ಬೆದರಿಕೆ!

ಜೈಪುರ: ರಾಜಸ್ಥಾನ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಅವರಿಗೇ ಕೊಲೆ ಬೆದರಿಕೆ ಕರೆ ಬಂದಿದೆ. ದೌಸಾದ್ ಸಲಾವಾಸ್ ಜೈಲಿನಿಂದ ಕೈದಿಯೊಬ್ಬ ಸಿಎಂಗೆ ಕೊಲೆ ಬೆದರಿಕೆ ಹಾಕಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಅತ್ಯಾಚಾರ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೊಳ ಗಾಗಿ ರುವ ರಿಂಕು(29) ಜೈಪುರ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿ ಸಿಎಂಗೆ ಕೊಲೆ ಬೆದರಿಕೆ ಹಾಕಿದ್ದಾನೆ. ಸಲಾವಾಸ್ ಜೈಲಿನಿಂದ ರಿಂಕು ಕರೆ ಮಾ ಡಲು ಬಳಸಿದ ಮೊಬೈಲ್ ಫೋನ್ ಮತ್ತು ಸ್ಥಳವನ್ನು ಪೊಲೀಸರು ತನಿಖೆ ನಡೆಸಿ ಪತ್ತೆ ಹಚ್ಚಿದ್ದಾರೆ. ಜೈಲಿನಲ್ಲಿ ಶನಿವಾರ ನಸುಕಿನ 3 ಗಂಟೆಯಿಂದಲೇ ತೀವ್ರ ತಪಾಸಣೆ ಆರಂಭಿಸಿದ ಪೊಲೀಸರು, ಬೆಳಗ್ಗೆ 7 ಗಂಟೆವರೆಗೂ ತೀವ್ರ ಶೋಧ ಕಾರ್ಯ ನಡೆಸಿ ಕಡೆಗೂ ಮೊಬೈಲ್ ಫೋನ್ ವಶಪಡಿಸಿಕೊಂಡಿದ್ದಾರೆ.

ಅಕ್ರಮ ಗಸಗಸೆ ಕೃಷಿ: 190 ಮಂದಿ ಬಂಧನ

ರಾಂಚಿ: ಜಾರ್ಖಂಡ್ ರಾಜ್ಯದಲ್ಲಿ 19 ಸಾವಿರ ಎಕರೆ ಪ್ರದೇಶದಲ್ಲಿ ಅಕ್ರಮವಾಗಿ ಬೆಳೆಯಲಾಗಿದ್ದ ಗಸಗಸೆ ಬೆಳೆಯನ್ನು ರಾಜ್ಯ ಸರಕಾರ ಕಳೆದೆರಡು ತಿಂಗಳಲ್ಲಿ ನಾಶಪಡಿಸಿದೆ. ಅಕ್ರಮವಾಗಿ ಗಸಗಸೆ ಬೆಳೆದಿದ್ದ 190 ಬೆಳೆಗಾರರನ್ನು ಬಂಧಿಸಿ 283 ಅಪರಾಧ ಪ್ರಕರಣ ದಾಖಲಿಸಲಾಗಿದೆ. ಅಫೀಮು ಸೇರಿದಂತೆ ಮಾದಕ' ದ್ರವ್ಯಗಳ ತಯಾರಿಗೆಂದೇ ಅಕ್ರಮವಾಗಿ ಗಸಗಸೆ ಬೆಳೆ ಮಾಡಲಾಗುತ್ತಿದೆ ಎಂಬ ಕಾರಣಕ್ಕೇ ಚತ್ರಾ, ಕುಂತಿ, ಲತೇಹರ, ರಾಂಚಿ, ಪಲಾಮು, ಚೈಬಾಸಾ, ಸರೈಕೆಲಾ, ಹಜಾರಿಬಾಗ್ ಜಿಲ್ಲೆಗಳಲ್ಲಿನ ಅಕ್ರಮ ಬೆಳೆ ಪ್ರದೇಶಗಳನ್ನು ಸರಕಾರ ನಾಶಪಡಿಸಿದೆ.

ಕಾಶ್ಮೀರದ ಬಗ್ಗೆ ಟರ್ಕಿ ಮಾತು: ಭಾರತ ಕಿಡಿ

ದೆಹಲಿ: ಜಮ್ಮು-ಕಾಶ್ಮೀರ ಕುರಿತು ಟರ್ಕಿ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೋಗನ್ ನೀಡಿದ ಹೇಳಿಕೆಗೆ ಭಾರತ ತೀವ್ರ ವಿರೋಧ ವ್ಯಕ್ತಪಡಿಸಿದೆ. ಭಾರತದ ಸಮಗ್ರತೆ-ಸಾರ್ವಭೌಮತ್ವ ಕುರಿತು ಬೇರೆ ದೇಶಗಳ ಹೇಳಿಕೆಗಳನ್ನು ಸಹಿಸುವುದಿಲ್ಲ ಎಂದು ಗುಡುಗಿದೆ. ಭಾರತದ ಆಂತರಿಕ ವಿಷಯಗಳ ಕುರಿತು ಆಕ್ಷೇಪಾರ್ಹ ಹೇಳಿಕೆಗಳನ್ನು ಸಹಿಸುವುದಿಲ್ಲ. ಜಮ್ಮು-ಕಾಶ್ಮೀರ ಭಾರತದ ಅವಿಭಾಜ್ಯ ಅಂಗ. ಈ ವಿಚಾರದಲ್ಲಿ 3ನೆಯವರ ಮಧ್ಯಪ್ರವೇಶ ಅಗತ್ಯವಿಲ್ಲ. ಈ ಕುರಿತು ದೆಹಲಿಯಲ್ಲಿನ ಟರ್ಕಿ ರಾಯಭಾರಿಗೆ ಸಮನ್ ಮಾಡಿ ತೀವ್ರ ಪ್ರತಿಭಟನೆ ವ್ಯಕ್ತಪಡಿಸಲಾಗಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಶನಿವಾರ ಹೇಳಿದ್ದಾರೆ. ಕಳೆದ ವಾರ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಜತೆಗಿನ ಮಾತುಕತೆ ನಂತರ ಟರ್ಕಿ ಅಧ್ಯಕ್ಷ ಎರ್ಡೋಗನ್, ಕಾಶ್ಮೀರ ಸಮಸ್ಯೆ ವಿಶ್ವಸಂಸ್ಥೆ ನಿರ್ಣಯದಂತೆ ಮಾತುಕತೆ ಮೂಲಕ, ಕಾಶ್ಮೀರ ಜನರ ಆಕಾಂಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು ಪರಿಹರಿಸಬೇಕು ಎಂದಿದ್ದರು.

42 ಭಾರತೀಯರ ಕಾಣೆ

ಚಂಡೀಗಢ: ಪಂಜಾಬ್‌ನ ಫತೇಗಢ ಸಾಹಿಬ್ ಜಿಲ್ಲೆಯ ಟ್ಯಾಪ್ರಿಯನ್ ಗ್ರಾಮದ ದಲ್ಜಿತ್ ಸಿಂಗ್ ಅವರ ಪುತ್ರ ರವೀಂದರ್ ಸಿಂಗ್ 2010ರ ಸೆ.15 ರಂದು ಅಮೆರಿಕಕ್ಕೆ ಅಕ್ರಮ(ಡಂಕಿ) ಮಾರ್ಗದಲ್ಲಿ ಹೋದವರು ನಾಪತ್ತೆಯಾಗಿದ್ದಾರೆ. '12ನೇ ತರಗತಿ ಓದಿದ್ದ ಮಗ ಚಾಲಕನಾಗಿದ್ದ. ಹೆಚ್ಚಿನ ದುಡಿಮೆಗಾಗಿ ಅಮೆರಿಕಕ್ಕೆ ಹೋಗಲು ಬಯಸಿ ಪಂಚಕುಲದ ಟ್ರಾವೆಲ್ ಏಜೆಂಟ್ ಸಂಪರ್ಕಿಸಿದಾಗ 20 ಲಕ್ಷ ರು.ಗೆ ಒಪ್ಪಂದವಾಗಿತ್ತು. ಮುಂಗಡವಾಗಿ 5 ಲಕ್ಷ ರು. ನೀಡಿದ್ದೆವು. ಮಗನನ್ನು ಮೆಕ್ಸಿಕೊಕ್ಕೆ ಕರೆದೊಯ್ದು ಅಲ್ಲಿಂದ ಅಮೆರಿಕಕ್ಕೆ ಮುಟ್ಟಿಸುವುದಾಗಿ ಏಜೆಂಟ್ ಹೇಳಿದ್ದ. 10 ದಿನಗಳ ಬಳಿಕ ಗ್ವಾಟೆಮಾಲಾ ತಲುಪಿದ್ದಾರೆಂಬ ವಿಚಾರ ತಿಳಿಯಿತು. ನಿಮ್ಮ ಮಗ ಅಮೆರಿಕ ತಲುಪಿದ ನಂತರ ಕರೆ ಮಾಡುತ್ತಾನೆ ಎಂದು ಹೇಳಿದ ಏಜೆಂಟ್ 10 ಲಕ್ಷ ರು. ಕೇಳಿದ. ನಾವು 7 ಲಕ್ಷ ರು. ನೀಡಿದೆವು. ಮಗ ಈವರೆಗೂ ಕರೆ ಮಾಡಲೇ ಇಲ್ಲ' ಎಂದು ದಲ್ಜಿತ್ ಸಿಂಗ್ ಕಣ್ಣೀರಾದರು. ಹೀಗೆ 'ಡಂಕಿ ಮಾರ್ಗ' ಮೂಲಕ ಅಮೆರಿಕಕ್ಕೆ ತೆರಳಿದ್ದ 42 ಭಾರತೀಯರು 15 ವರ್ಷಗಳಿಂದ ನಾಪತ್ತೆಯಾಗಿದ್ದಾರೆ ಎಂದು ತಿಳಿದುಬಂದಿದೆ.

ಬಯಲಲ್ಲೇ ಶೌಚ: 'ಎನ್‌ಜಿಟಿ' ನೋಟಿಸ್

ಪ್ರಯಾಗ್‌ರಾಜ್: ಉತ್ತರ ಪ್ರದೇಶದ ಮಹಾ ಕುಂಭಮೇಳದಲ್ಲಿ ಲಕ್ಷಾಂತರ ಜನರು ಗಂಗಾನದಿ ದಡದಲ್ಲೇ ಮಲವಿಸರ್ಜನೆ ಮಾಡುತ್ತಿದ್ದಾರೆ. ಇದಕ್ಕೆ ಅಸಮರ್ಪಕ ಶೌಚಾಲಯ ವ್ಯವಸ್ಥೆಯೇ ಕಾರಣ ಎಂಬ ಆರೋಪ ಕೇಳಿಬಂದ ಬಳಿಕ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(ಎನ್‌ಜಿಟಿ) ಉತ್ತರ ಪ್ರದೇಶ ಸರಕಾರಕ್ಕೆ ನೋಟಿಸ್ ಜಾರಿ ಮಾಡಿದೆ. ನಿಪುಣ್ ಭೂಷಣ್ ಎಂಬವರು ರಾಜ್ಯ ಸರಕಾರದಿಂದ 10 ಕೋಟಿ ರು. ಪರಿಸರ ಹಾನಿ ಪರಿಹಾರ ಕೋರಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ ನಂತರ ಪ್ರಯಾಗ್‌ರಾಜ್ ಕುಂಭಮೇಳ ಪ್ರಾಧಿಕಾರ ಮತ್ತು ಉತ್ತರ ಪ್ರದೇಶ ಮಾಲಿನ್ಯ ನಿಯಂತ್ರಣ ಮಂಡಳಿಗೆ ಎನ್‌ಜಿಟಿ ನೋಟಿಸ್ ನೀಡಿದೆ.

{ **ಅಣ್ಣಾ ಹಜಾರೆ** } ಸಾಮಾಜಿಕ ಹೋರಾಟಗಾರ

ಅರವಿಂದ್ ಕೇಜ್ರಿವಾಲ್ ದೆಹಲಿ ಸಿಎಂ ಆಗಿ ಉತ್ತಮ ಕೆಲಸ ಮಾಡುತ್ತಿದ್ದರು, ಆದರೆ, ಮದ್ಯದಂಗಡಿ ತೆರೆಯಲು ಅವಕಾಶ ಮಾಡಿಕೊಟ್ಟು ದಾರಿ ತಪ್ಪಿ ಜನರ ಕೋಪಕ್ಕೆ ಗುರಿಯಾದರು. ರೇಖಾ ಗುಪ್ತಾ ಸಿಎಂ ಆಗಿರುವುದು ಹೆಮ್ಮೆಯ ವಿಷಯ. ಅವರ ಶುದ್ಧ ಆಲೋಚನೆ, ಉತ್ತಮ ಕಾರ್ಯಗಳನ್ನು ನೋಡಿಯೇ ಜನರು ಮತ ಹಾಕಿದ್ದಾರೆ.

ಕೇಂದ್ರದ ಪ್ರಗತಿಪರ ಸುಧಾರಣೆ ರಾಜಕೀಯ ಬೆದರಿಕೆ ಅಲ್ಲ: ಪ್ರದಾನ್ | ಡಿಎಂಕೆ ಇರುವವರೆಗೆ ಅವಕಾಶವಿಲ್ಲ: ಸ್ಟಾಲಿನ್

ಹೊಸ ಶಿಕ್ಷಣ ನೀತಿ-2020: ಕೇಂದ್ರ-ತ.ನಾ. ಜಟಾಪಟಿ

ದೆಹಲಿ/ಕಡಲೂರು: ಭಾಷೆ ಮತ್ತು ಶಿಕ್ಷಣ ಮಾಧ್ಯಮ ವಿಚಾರವಾಗಿ ಕೇಂದ್ರ ಸರಕಾರ ಮತ್ತು ತಮಿಳುನಾಡು ಸರಕಾರಗಳ ನಡುವೆ ಮತ್ತೊಮ್ಮೆ ಜಟಾಪಟಿ ಶುರುವಾಗಿದೆ. ಈ ಭಾಷಾ ಕದನಕ್ಕೆ ಈ ಬಾರಿ ಹೊಸದಾಗಿ ನಟ-ರಾಜಕಾರಣಿ ಕಮಲಹಾಸನ್ ಕೂಡಾ ಪ್ರವೇಶಿಸಿದ್ದಾರೆ.

'ರಾಷ್ಟ್ರೀಯ ಶಿಕ್ಷಣ ನೀತಿ' ಅನುಷ್ಠಾನ ಸಂಬಂಧ ಕೇಂದ್ರ ಸರಕಾರ ತಡೆಹಿಡಿದಿರುವ ಹಣವನ್ನು ಬಿಡುಗಡೆ ಮಾಡುವಂತೆ ಕೋರಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಿಎಂ ಸ್ಟಾಲಿನ್ ಪತ್ರ ಬರೆದಿದ್ದರು. ಆ ಪತ್ರಕ್ಕೆ ಉತ್ತರಿಸಿದ ಕೇಂದ್ರದ ಮಾನವ ಸಂಪನ್ಮೂಲ ಸಚಿವ ಧರ್ಮೇಂದ್ರ ಪ್ರಧಾನ್, 'ಎನ್‌ಇಪಿ-2020' ಮತ್ತು ಅದಕ್ಕೆ ಸಂಬಂಧಿಸಿದ ಯೋಜನೆಗಳಿಗೆ ತಮಿಳುನಾಡು ಸರಕಾರ ವಿರೋಧ ವ್ಯಕ್ತಪಡಿಸುತ್ತಿರುವುದೇಕೆ? ಎಂದು ಪ್ರಶ್ನೆ ಮಾಡಿದ್ದರು. ಭಾಷೆ ಮತ್ತು ಶಿಕ್ಷಣ ಮಾಧ್ಯಮ ವಿಚಾರದಲ್ಲಿ ಡಿಎಂಕೆ ಸರಕಾರ ಸಂಕುಚಿತ ಮನೋಭಾವ ಹೊಂದಿದೆ ಎಂದು ಆರೋಪಿಸಿದ್ದರು.

'ಯಾವುದೇ ರಾಜ್ಯ ಅಥವಾ ಸಮುದಾಯದ ಮೇಲೆ ಯಾವುದೇ ಭಾಷೆಯನ್ನು ಹೇರುವ ಪ್ರಶ್ನೆಯೇ ಇಲ್ಲ' ಎಂದು ಸಚಿವ ಧರ್ಮೇಂದ್ರ ಪ್ರಧಾನ್, ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಅವರಿಗೆ ಬರೆದ 3 ಪುಟಗಳ ಪತ್ರದಲ್ಲಿ ತಿಳಿಸಿದ್ದರು.

ಇದಕ್ಕೆ ಉತ್ತರವೆಂಬಂತೆ ಕಡಲೂರಿನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಸಿಎಂ ಸ್ಟಾಲಿನ್, ಎನ್‌ಇಪಿಗೆ ರಾಜ್ಯ ಸರಕಾರ ವಿರೋಧ ವ್ಯಕ್ತಪಡಿಸುವುದನ್ನೇ ರಾಜಕೀಯ ವಿರೋಧ ಎಂಬಂತೆ ಕರೆದಿರುವುದಕ್ಕೆ ಕೇಂದ್ರ ಸಚಿವ ಪ್ರದಾನ್ ಅವರನ್ನು ತರಾಟೆಗೆ ತೆಗೆದುಕೊಂಡರು.

ರಾಷ್ಟ್ರೀಯ ಶಿಕ್ಷಣ ನೀತಿಯ ಯೋಜನೆಗಳನ್ನು ನಾವು ರಾಜ್ಯದಲ್ಲಿ ಜಾರಿಗೆ ತರದ ಕಾರಣ ತಮಿಳುನಾಡು ಸರಕಾರ 5,000 ಕೋಟಿ ರು.ಗಳನ್ನು ಪಡೆಯಲಾಗಿಲ್ಲ ಎಂದು ಕೇಂದ್ರ ಸಚಿವರು ಹೇಳುತ್ತಾರೆ. ಅದಕ್ಕೆ ಪ್ರತಿಯಾಗಿ, ತಮಿಳುನಾಡಿನಲ್ಲಿ ಸಂಗ್ರಹಿಸಿದ ತೆರಿಗೆ ಹಣವನ್ನು ಕೇಂದ್ರಕ್ಕೆ ಪಾವತಿಸಲು ನಾವೇನಾದರೂ ನಿರಾಕರಿಸಿದರೆ ಆಗ ಏನು ಮಾಡುತ್ತಾರೆ? ಒಕ್ಕೂಟ ವ್ಯವಸ್ಥೆ ಎಂಬುದು ಪರಸ್ಪರ ಸಹಕಾರವನ್ನು ಆಧರಿಸಿದೆ. ಅದುವೇ ಸಂವಿಧಾನದ ಅಡಿಪಾಯವಾಗಿದೆ. ದುರದೃಷ್ಟವಶಾತ್, ಈ ಸಹಕಾರ ತತ್ವವನ್ನು ಅರ್ಥಮಾಡಿಕೊಳ್ಳದವರು ಇಂದು ದೇಶವನ್ನು ಆಳುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದರು. ಎನ್‌ಇಪಿ-2020 ಜಾರಿಗೊಳಿಸಿರುವುದು ಶಿಕ್ಷಣದ ಅಭಿವೃದ್ಧಿಗಲ್ಲ, ಬದಲಾಗಿ ಹಿಂದಿ ಭಾಷೆಯನ್ನು ಉತ್ತೇಜಿಸಲು ಸ್ಟಾಲಿನ್ 'ರಾಷ್ಟ್ರೀಯ ಶಿಕ್ಷಣ ನೀತಿ'ಗೆ ವಿರೋಧ ಮುಂದುವರಿಸಿದರು.

ಹಿಂದಿಯನ್ನು ನೇರವಾಗಿ ಅನುಷ್ಠಾನಗೊಳಿಸುವುದನ್ನು ಜನರು ವಿರೋಧಿಸುತ್ತಾರೆ ಎಂದೇ ಹಂತ ಹಂತವಾಗಿ ಪರಿಚಯಿಸಲು ಕೇಂದ್ರ ಪ್ರಯತ್ನಿಸುತ್ತಿದೆ. ಕೇಂದ್ರ ಸಚಿವರು ಪ್ರಾದೇಶಿಕ ಭಾಷೆಗಳನ್ನು ಅಭಿವೃದ್ಧಿಪಡಿಸುತ್ತೇವೆ ಎಂದು ಹೇಳಿಕೊಳ್ಳುತ್ತಾರೆ. ಆದರೆ ತಮಿಳನ್ನು ಹೇಗೆ ಅಭಿವೃದ್ಧಿಪಡಿಸಬೇಕೆಂದು ನಮಗೆ ತಿಳಿದಿದೆ. ಹಿಂದಿ ಹೇರಿಕೆಯಿಂದಾಗಿ ಮಾತೃಭಾಷೆಯನ್ನೇ ಕಳೆದುಕೊಂಡಿರುವವರನ್ನು ಕೇಳಿನೋಡಿ. ತಮಿಳಿನ ಬೆಳವಣಿಗೆಗೆ ಕೇಂದ್ರದ ಬೆಂಬಲ ಅಗತ್ಯವಿಲ್ಲ ಎಂದು ಸ್ಟಾಲಿನ್, ಸಚಿವ ಧರ್ಮೇಂದ್ರ ಪ್ರದಾನ್‌ಗೆ ತಿರುಗೇಟು ನೀಡಿದ್ದಾರೆ.

ಸ್ಟಾಲಿನ್ ವಿರೋಧ: ಜಿಎಸ್‌ಟಿಯ ಎಲ್ಲಾ ಆದಾಯವನ್ನು ಕೇಂದ್ರವೇ ತೆಗೆದುಕೊಳ್ಳುತ್ತದೆ, ರಾಜ್ಯಕ್ಕೆ ಸರಿಯಾದ ಪಾಲು ಹಿಂದಿರುಗಿಸಲು ನಿರಾಕರಿಸುತ್ತದೆ. ರಾಜ್ಯಕ್ಕೆ ಹೊಸ ಯೋಜನೆ ಘೋಷಿಸುತ್ತಿಲ್ಲ. ಜಂಟಿ ಯೋಜನೆಗಳಿಗೆ ಹಣವನ್ನೂ ನೀಡುವುದಿಲ್ಲ. ಈ ಅಡೆತಡೆಗಳ ಹೊರತಾಗಿಯೂ, ರಾಜ್ಯವನ್ನು ಪ್ರಗತಿಪಥದಲ್ಲಿ ಕೊಂಡೊಯ್ಯುವಲ್ಲಿ ಯಶಸ್ವಿಯಾಗಿದ್ದೇವೆ. ಇದೇ ಅವರನ್ನು ಕೆರಳಿಸಿದೆ. ಈಗ, ಹೊಸ ಕಾನೂನು ರಚಿಸುವ ಮೂಲಕ ನಮ್ಮ ಪ್ರಗತಿ ತಡೆಯಲು ಯತ್ನಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮತ್ತು ತಮಿಳು ನಾಡಿನ ಆಡಳಿತಾರೂಢ ಡಿಎಂಕೆ ನಡುವಿನ ಭಾಷಾ ಸಮರ ತೀವ್ರಗೊಂಡಿದೆ. ರಾಷ್ಟ್ರೀಯ ಶಿಕ್ಷಣ ನೀತಿ-2020(ಎನ್‌ಇಪಿ) ವಿದ್ಯಾರ್ಥಿಗಳ ಹಿತಕ್ಕೂ ಅಲ್ಲ, ಶಿಕ್ಷಣಕ್ಕೂ ಅಲ್ಲ. ಬದಲಾಗಿ ದೇಶದಲ್ಲಿ ಹಿಂದಿ ಭಾಷೆಯನ್ನು ಹೇರುವುದಕ್ಕಾಗಿ ತರಲಾದ ನೀತಿಯಾಗಿದೆ. ಕೇಂದ್ರ ಸರಕಾರ ತಮಿಳು ಜನರನ್ನು ಪ್ರಚೋದಿಸಬಾರದು. ಜೇನುಗೂಡಿಗೆ ಕಲ್ಲೆಸೆಯಬೇಡಿ. ದ್ರಾವಿಡ ಮುನ್ನೇತ್ರ ಕಳಗಂ(ಡಿಎಂಕೆ) ಪಕ್ಷ ಮತ್ತು ನಾನು ಇಲ್ಲಿ ಇರುವವರೆಗೂ ನೀವು ಇಲ್ಲಿಗೆ ಪ್ರವೇಶಿಸಲು ಸಾಧ್ಯವಿಲ್ಲ.

-ಎಂ.ಕೆ.ಸ್ಟಾಲಿನ್ ಮುಖ್ಯಮಂತ್ರಿ

ಕೇಂದ್ರ ಸರಕಾರ ಜನರ ಹಿತದೃಷ್ಟಿಯಿಂದ ಕೈಗೊಳ್ಳುವ ಪ್ರತಿಯೊಂದು ಪ್ರಗತಿಶೀಲ ಸುಧಾರಣೆಯನ್ನೂ ತಮಿಳುನಾಡು ರಾಜ್ಯ ಸರಕಾರ 'ಪ್ರಾದೇಶಿಕ ರಾಜಕೀಯಕ್ಕೆ ಎದುರಾಗುತ್ತಿರುವ ಬೆದರಿಕೆ' ಎಂಬಂತೆ ನೋಡುತ್ತಿದೆ. ರಾಜಕೀಯ ಕಾರಣಕ್ಕಾಗಿ ಎನ್‌ಇಪಿ-2020ಗೆ ನಿರಂತರ ವಿರೋಧ ವ್ಯಕ್ತಪಡಿಸುವುದರಿಂದ ತಮಿಳುನಾಡಿನ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಶಿಕ್ಷಣ ಸಂಸ್ಥೆಗಳಿಗೆ ಹೊಸ ಶಿಕ್ಷಣ ನೀತಿ ನೀಡುವ ಅಪಾರ ಅವಕಾಶಗಳು ಮತ್ತು ಸಂಪನ್ಮೂಲ ಲಭಿಸುವುದು ತಪ್ಪಿದಂತಾಗಲಿದೆ.

-ಧರ್ಮೇಂದ್ರ ಪ್ರಧಾನ್ ಕೇಂದ್ರ ಮಾನವ ಸಂಪನ್ಮೂಲ ಸಚಿವ

ತಮಿಳುನಾಡಿನ ಜನರು ವಿವೇಚನೆ ಇರುವವರು. ಅವರಿಗೆ ಯಾವ ಭಾಷೆ ಬೇಕು ಎಂಬುದು ಚೆನ್ನಾಗಿ ಗೊತ್ತಿದೆ. ಅವರ ಮೇಲೆ ಹಿಂದಿ ಹೇರಲು ಯತ್ನಿಸಿದರೆ ಅವರು ಒಪ್ಪಿಕೊಳ್ಳುವುದೂ ಇಲ್ಲ. ತಮಿಳಿನ ಮಕ್ಕಳು ತಮ್ಮ ಇಷ್ಟದ ಭಾಷೆಗಳನ್ನು, ತಮಗೆ ಸರಿಹೋಗುವ ಶಿಕ್ಷಣ ಬೋಧನಾ ಮಾಧ್ಯಮವನ್ನೂ ಆರಿಸಿಕೊಳ್ಳಬಲ್ಲಷ್ಟು ಪ್ರಬುದ್ಧರಾಗಿದ್ದಾರೆ. ಈ ಹಿಂದೆಯೂ ತ್ರಿಭಾಷಾ ಸೂತ್ರದ ಮೂಲಕ ಹಿಂದಿ ಹೇರುವ ಪ್ರಯತ್ನ ನಡೆದಿತ್ತು. ಅದನ್ನು ತಮಿಳರು ಬಲವಾಗಿಯೇ ವಿರೋಧಿಸಿದ್ದರು. ಈಗಲೂ ವಿರೋಧಿಸುತ್ತಾರೆ.

-ಕಮಲಹಾಸನ್ ನಟ-ರಾಜಕಾರಣಿ

ಎನ್‌ಇಪಿ-2020 ತಿರಸ್ಕರಿಸಲು 12 ಪ್ರಮುಖ ಕಾರಣಗಳಿವೆ. ರಾಜ್ಯ ಭಾಷಾ ಗುರುತು ಮತ್ತು ಒಕ್ಕೂಟ ವ್ಯವಸ್ಥೆಯಲ್ಲಿನ ಸ್ವಾಯತ್ತತೆಗೆ ಬದ್ಧವಾಗಿದೆ. ನಮ್ಮ ದ್ವಿಭಾಷಾ ನೀತಿ ಹೆಚ್ಚಿನ ಸಾಕ್ಷರತೆ ಮತ್ತು ಜಾಗತಿಕ ಸ್ಪರ್ಧಾತ್ಮಕತೆ ಖಚಿತಪಡಿಸುತ್ತದೆ. ಮೂರನೇ ಭಾಷೆಯಾಗಿ ಹಿಂದಿಯನ್ನು ಹೇರುವ ಪರೋಕ್ಷ ಪ್ರಯತ್ನಕ್ಕೆ ನಮ್ಮ ವಿರೋಧವಿದೆ.

-ಅನ್ಬಿಲ್ ಮಹೇಶ್ ಪೊಯ್ಯಮೋಳಿ ತ.ನಾಡು ಶಿಕ್ಷಣ ಸಚಿವ

ಟೆಸ್ಲಾ ಕಾರು ಉದ್ಯಮಿ ಎಲಾನ್ ಮಸ್ಕ್ ಅಮೆರಿಕದ ಆಡಳಿತ ಸುಧಾರಣೆ ವಿಭಾಗದ ಮುಖ್ಯಸ್ಥರಾಗಿದ್ದು, ಇತ್ತೀಚೆಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಶ್ವೇತಭವನದಲ್ಲಿನ ಓವಲ್ ಕಚೇರಿಯಲ್ಲಿ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ್ದರು. ಆಗ ಅಲ್ಲಿಯೇ ಇದ್ದ ಮಸ್ಕ್ ಅವರ ಪುಟ್ಟ ಮಗ ಬಾಲ್ಯ ಸಹಜವಾಗಿ ಮೂಗಿನೊಳಕ್ಕೆ ಬೆರಳು ತೂರಿಸಿ ಗೊಣ್ಣೆ ತೆಗೆದು ಟ್ರಂಪ್ ಅವರ ಟೇಬಲ್ ಅಂಚಿಗೆ ಒರೆಸಿದ್ದ. ಅದನ್ನು ಟ್ರಂಪ್ ವಾರೆಗಣ್ಣಿನಲ್ಲೇ ನೋಡಿ ಮುಖ ಕಿವುಚಿದ್ದರು. ಈ ಸಂದರ್ಭದ ವಿಡಿಯೊ ವೈರಲ್ ಆಗಿತ್ತು. ಅದರ ಪರಿಣಾಮವೆಂಬಂತೆ, ಅಧ್ಯಕ್ಷರ ಕಚೇರಿಯಲ್ಲಿ 145 ವರ್ಷಗಳಿಂದ ಇದ್ದ ಐತಿಹಾಸಿಕ 'ರೆಸಲ್ಯೂಟ್ ಡೆಸ್ಕ್' ಈಗ ಎತ್ತಂಗಡಿಯಾಗಿದೆ!

ಬಿಬಿಸಿ ಇಂಡಿಯಗೆ ರು.3.44 ಕೋಟಿ ದಂಡ

ದೆಹಲಿ: ವಿದೇಶಿ ನೇರ ಹೂಡಿಕೆ(ಎಫ್‌ಇಎಂಎ- ಫೆಮಾ) ನಿಯಮಗಳನ್ನು ಉಲ್ಲಂಘಿಸಿದ ಆರೋಪದಡಿ ಬಿಬಿಸಿ ವರ್ಲ್ಡ್ ಸರ್ವಿಸ್ ಇಂಡಿಯಗೆ ಜಾರಿ ನಿರ್ದೇಶನಾಲಯ(ಇ.ಡಿ) 3.44 ಕೋಟಿ ರು. ದಂಡ ವಿಧಿಸಿದೆ. ನಂತರ, ಬಿಬಿಸಿ ಇಂಡಿಯದ ಮೂವರು ನಿರ್ದೇಶಕರಿಗೂ ತಲಾ 1.14 ಕೋಟಿ ರು. ದಂಡ ವಿಧಿಸಿದೆ. ಆದರೆ, ಬಿಬಿಸಿ ವರ್ಲ್ಡ್ ಸರ್ವಿಸ್ ಇಂಡಿಯ, ಜಾರಿ ನಿರ್ದೇಶನಾಲಯದಿಂದ ಯಾವುದೇ ದಂಡದ ಆದೇಶ ಬಂದಿಲ್ಲ ಎಂದು ಪಿಟಿಐಗೆ ತಿಳಿಸಿದೆ. ಆದಾಯ ತೆರಿಗೆ ಇಲಾಖೆ 2023ರ ಫೆಬ್ರವರಿಯಲ್ಲಿ ದೆಹಲಿಯಲ್ಲಿನ ಬಿಬಿಸಿ ಇಂಡಿಯ ಕಚೇರಿಯಲ್ಲಿ ಸಮೀಕ್ಷೆ ನಡೆಸಿತು. 2023ರ ಆ.4ರಂದು ಬಿಬಿಸಿ ಇಂಡಿಯ, ಅದರ ಮೂವರು ನಿರ್ದೇಶಕರು ಮತ್ತು ಹಣಕಾಸು ವಿಭಾಗದ ಮುಖ್ಯಸ್ಥರಿಗೆ ಫೆಮಾ ಕಾನೂನಿನ ಉಲ್ಲಂಘ ನೆಗಳಿಗಾಗಿ ಶೋಕಾಸ್ ನೋಟಿಸ್ ನೀಡಿದ ನಂತರ ತೀರ್ಪು ಪ್ರಕ್ರಿಯೆಗಳನ್ನು ಪ್ರಾರಂಭಿಸಲಾಯಿತು.

ಕೇರಳದಲ್ಲಿ ನಕ್ಸಲ್‌ವಾದ ಅಂತ್ಯ

ಕೇರಳದ ಕೊನೆಯ ನಕ್ಸಲ್ ಸಂತೋಷ್ ತ.ನಾಡಲ್ಲಿ ಸೆರೆ

ಕೊಚ್ಚಿ: ಕೇರಳ ಪೊಲೀಸರಿಗೆ ಹಲವಾರು ಪ್ರಕರಣಗಳಲ್ಲಿ ಬೇಕಾಗಿದ್ದ ನಕ್ಸಲ್ ಸಂತೋಷ್‌ನನ್ನು ತಮಿಳುನಾಡು ಪೊಲೀಸರ ವಶದಿಂದ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡ ಕೇರಳ ಪೊಲೀಸರು, ಶನಿವಾರ ಎರ್ನಾಕುಲಂ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ನ್ಯಾಯಾಧೀಶರು ನಕ್ಸಲ್ ಸಂತೋಷ್‌ನನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶ ಹೊರಡಿಸಿದರು.

ಹೆಚ್ಚಿನ ತನಿಖೆಗಾಗಿ ಸಂತೋಷ್‌ನ ಕಸ್ಟಡಿ ಕೋರಿ 'ಎಟಿಎಸ್' ಅಧಿಕಾರಿಗಳು ಸದ್ಯದಲ್ಲೇ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಿದ್ದಾರೆ ಎನ್ನಲಾಗಿದೆ. ನಕ್ಸಲ್ ಸಂತೋಷ್‌ನನ್ನು ಕರೆತರಲಿದ್ದ ಹಿನ್ನೆಲೆ ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಶನಿವಾರ ಪೊಲೀಸ್ ಭದ್ರತೆ ಹೆಚ್ಚಿಸಲಾಗಿತ್ತು.

ಸಂತೋಷ್, ವಯನಾಡ್ ಅರಣ್ಯದಲ್ಲಿ ಸಕ್ರಿಯವಾಗಿದ್ದ ಕಬನಿದಳಂನ ಪೀಪಲ್ಸ್ ಲಿಬರೇಶನ್ ಗೆರಿಲ್ಲಾ ಆರ್ಮಿ(ಪಿಎಲ್‌ಜಿಎ) ಭಾಗವಾಗಿದ್ದ. ಸಂತೋಷ್ ಬಂಧನದೊಂದಿಗೆ, ಕೇರಳದಲ್ಲಿ ಕಾರ್ಯಾಚರಣೆ ನಡೆಸಿದ ಎಲ್ಲಾ ನಕ್ಸಲ್ ಕಾರ್ಯಕರ್ತರನ್ನು ಬಂಧಿಸಿದಂತಾಗಿದೆ. ಈ ಮೊದಲು ನಡೆದ ಹಲವು ಪೊಲೀಸ್ ಕಾರ್ಯಾಚರಣೆಗಳಲ್ಲಿ ಬಹಳಷ್ಟು ನಕ್ಸಲರು ಹತರಾಗಿದ್ದಾರೆ. ಕೇರಳ ರಾಜ್ಯದಲ್ಲಿನ ಕಟ್ಟಕಡೆಯ ನಕ್ಸಲ್ ಎಂದೇ ಗುರುತಿಸಲಾಗಿದ್ದ ಸಂತೋಷ್‌ನನ್ನು ತಮಿಳುನಾಡಿನ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಖಚಿತ ಮಾಹಿತಿ ಮೇರೆಗೆ ಹೊಸೂರು ಬಳಿ ಶುಕ್ರವಾರ ಕಾರ್ಯಾಚರಣೆ ನಡೆಸಿ ಬಂಧಿಸಿತು. ಸಂತೋಷ್ ಹಲವು ವರ್ಷಗಳಿಂದ ಮಾವೋವಾದಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ. ಕಳೆದ ವರ್ಷ ವಿವಿಧೆಡೆ 'ಎಟಿಎಸ್'ನಿಂದ ಬಂಧಿತರಾದ ನಕ್ಸಲ್ ಮುಖಂಡರಾದ ಸಿಪಿ ಮೊಯಿದ್ದೀನ್, ಸೋಮನ್ ಮತ್ತು ಮನೋಜ್ ಅವರ ನಿಕಟ ಸಹಚರನಾಗಿದ್ದ. ಕೇರಳದಲ್ಲಿ ನಡೆದ ಹಲವು ನಕ್ಸಲ್ ದಾಳಿ ಪ್ರಕರಣಗಳಲ್ಲಿ ಪೊಲೀಸರಿಗೆ ಬೇಕಾಗಿದ್ದ.

ಕುಲದೀಪ್ ಸಿಂಗ್ ಧಾಲಿವಾಲ್ ಶೂನ್ಯ ಸಾಧನೆ

ಪಂಜಾಬ್: 21 ತಿಂಗಳಿಂದ ಖಾತೆಯೇ ಇಲ್ಲದ ಸಚಿವ!

ಚಂಡೀಗಢ: ಆಮ್ ಆದ್ಮಿ ಪಕ್ಷದ(ಎಎಪಿ) ಸರಕಾರವಿರುವ ಪಂಜಾಬ್‌ನಿಂದ ವಿಚಿತ್ರ ಸುದ್ದಿ ಹೊರಬಿದ್ದಿದೆ. ಮುಖ್ಯಮಂತ್ರಿ

ಭಗವಂತ್ ಸಿಂಗ್ ಮಾನ್ ನೇತೃತ್ವದ ಸಚಿವ ಸಂಪುಟದಲ್ಲಿ ಕುಲದೀಪ್ ಸಿಂಗ್ ಧಾಲಿವಾಲ್ ಎಂಬವರೊಬ್ಬರು 21 ತಿಂಗಳುಗಳಷ್ಟು ಸುದೀರ್ಘ ಅವಧಿಯಿಂದ ಯಾವುದೇ ಖಾತೆಯೇ ಇಲ್ಲವಾದರೂ ಸಚಿವರಾಗಿದ್ದಾರೆ ಎಂಬ ಅಚ್ಚರಿ ಮತ್ತು ಆಘಾತಕಾರಿ ಸುದ್ದಿ ಶನಿವಾರ ಹೊರಬಿದ್ದಿದೆ.

ಈ ವಿಚಾರ ರಾಜ್ಯ ಸರಕಾರ ಶನಿವಾರ ಪ್ರಕಟಿಸಿದ ಅಧಿಸೂಚನೆಯೊಂದರಿಂದ ಹೊರಬಿದ್ದಿದೆ. ಅದರಲ್ಲಿ ಸಚಿವ ಧಾಲಿವಾಲ್ ಹೆಸರಿನ ಮುಂದೆ ಖಾತೆ ವಿವರವೇ ಇಲ್ಲ. ತಮಗೆ ಖಾತೆ ಇಲ್ಲದಿರುವುದನ್ನು ಸಚಿವ ಧಾಲಿವಾಲ್ ಕೂಡಾ ಖಚಿತಪಡಿಸಿದ್ದಾರೆ!

ನನ್ನನ್ನು ಸಿಎಂ ಭಗವಂತ್ ಸಿಂಗ್ ಮಾನ್ ಸಂಪುಟದಲ್ಲಿ 21 ತಿಂಗಳ ಹಿಂದೆ ಸಚಿವನಾಗಿ ನೇಮಿಸಲಾಯಿತು. ಸಂಪುಟ ದರ್ಜೆ ಸಚಿವನಾಗಿ ಪ್ರಮಾಣವಚನವನ್ನೂ ಸ್ವೀಕರಿಸಿದೆ. ಸಿಎಂ ನನ್ನನ್ನು ಆಡಳಿತ ಸುಧಾರಣಾ ಇಲಾಖೆ ಸಚಿವ ಎಂದರು. ಆದರೆ, ಅಂತಹ ಇಲಾಖೆಯೇ ರಾಜ್ಯದಲ್ಲಿಲ್ಲ. ಹಾಗಾಗಿ ನಾನು ಖಾತೆಯೇ ಇಲ್ಲದ ಸಚಿವನಾಗಿದ್ದೇನೆ. ಇಲಾಖೆಯೇ ಇಲ್ಲದ ಮೇಲೆ ಅಧಿಕಾರಿ-ಸಿಬ್ಬಂದಿಗಳೂ ಇಲ್ಲ. ಹಾಗಾಗಿ ಒಂದು ಸಭೆಯನ್ನೂ ನಡೆಸಲಾಗಿಲ್ಲ ಎಂದು ಧಾಲಿವಾಲ್ ಹೇಳಿದ್ದಾರೆ. ಸದ್ಯ ನನಗೆ ಅನಿವಾಸಿ ಭಾರತೀಯರ ವ್ಯವಹಾರಗಳ ಇಲಾಖೆ ನೋಡಿಕೊಳ್ಳಲು ಹೇಳಲಾಗಿದೆ ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಧಾಲಿವಾಲ್ ಉತ್ತರಿಸಿದ್ದಾರೆ.

ಬಿಜೆಪಿ ಟೀಕೆ: ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರಿಗೆ ರಾಜ್ಯ ಸರಕಾರದ ಬಗ್ಗೆ ಜವಾಬ್ದಾರಿಯೇ ಇಲ್ಲ. ಅವರ ಸಂಪುಟದ ಸಚಿವರೊಬ್ಬರಿಗೆ 21 ತಿಂಗಳಿಂದ ಖಾತೆಯನ್ನೇ ಕೊಟ್ಟಿಲ್ಲ ಎನ್ನುವುದಾದರೆ ಅವರು ಹೇಗೆ ಸರಕಾರ ನಡೆಸುತ್ತಿದ್ದಾರೆ ಎನ್ನುವುದಕ್ಕೆ ಧಾಲಿವಾಲ್ ಪ್ರಸಂಗವೇ ಸಾಕ್ಷಿಯಾಗಿದೆ ಎಂದು ಬಿಜೆಪಿ ಪಂಜಾಬ್ ಘಟಕ ಪ್ರಧಾನ ಕಾರ್ಯದರ್ಶಿ ಸುಭಾಷ್ ಶರ್ಮಾ ಟೀಕಿಸಿದ್ದಾರೆ. ಸಚಿವರಿಗೆ ಖಾತೆ ಇಲ್ಲ ಎಂಬುದಷ್ಟೇ ಅಲ್ಲ, ಆಡಳಿತ ನಡೆಸಲು ರಾಜ್ಯದಲ್ಲಿಉ ಸರಕಾರವೇ ಇಲ್ಲ ಎಂಬ ಸ್ಥಿತಿ ಪಂಜಾಬ್‌ನಲ್ಲಿದೆ ಎಂದು ಶಿರೋಮಣಿ ಅಕಾಲಿ ದಳ ವಾಗ್ದಾಳಿ ನಡೆಸಿದೆ.

ಭಗವದ್ಗೀತೆ ಮೇಲೆ ಕಾಶ್ ಪಟೇಲ್ ಪ್ರಮಾಣ

ವಾಷಿಂಗ್ಟನ್: ಅನಿವಾಸಿ ಭಾರತೀಯ, ಅಮೆರಿಕ ಪ್ರಜೆ ಕಾಶ್ ಪಟೇಲ್ ಅಮೆರಿಕದ ಅತ್ಯುಚ್ಚ ತನಿಖಾ ಸಂಸ್ಥೆ 'ಫೆಡರಲ್ ಬ್ಯೂರೊ ಆಫ್ ಇನ್ವೆಸ್ಟಿಗೇಷನ್'(ಎಫ್‌ಬಿಐ)ನ 9ನೇ ನಿರ್ದೇಶಕರಾಗಿ ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಿದರು. ಪ್ರಮಾ ಣ ವಚನ ಪ್ರಕ್ರಿಯೆ ವೇಳೆ ಕಾಶ್ ಪಟೇಲ್ ಭಗವದ್ಗೀತೆಯ ಮೇಲೆ ಕೈಯಿರಿಸಿದ್ದರು ಎಂಬುದು ಉಲ್ಲೇಖಾರ್ಹ.

ಐಸೆನ್ ಹೋವರ್ ಕಾರ್ಯನಿರ್ವಾಹಕ ಕಚೇರಿ ಕಟ್ಟಡದಲ್ಲಿ ಅಮೆರಿಕದ ಅಟಾರ್ನಿ ಜನರಲ್ ಪ್ಯಾಮ್ ಬೋಂಡಿ ಪ್ರಮಾಣ ವಚನ ಬೋಧಿಸಿದರು. ಕಾಶ್ ಪಟೇಲ್ ಪ್ರಮಾಣ ವಚನ ಸ್ವೀಕರಿಸುವಾಗ ಪತ್ನಿ, ಪುತ್ರ ಮತ್ತು ಅವರ ಗೆಳತಿ ಪಕ್ಕದಲ್ಲೇ ನಿಂತಿದ್ದರು. ಕುಟುಂಬದ ಇತರೆ ಸದಸ್ಯರು ಮುಂದಿನ ಸಾಲಿನಲ್ಲಿ ಕುಳಿತಿದ್ದರು. ಕ್ರಿಸ್ಟೋಫರ್ ವ್ರೇ ನಂತರ ಎಫ್‌ಬಿಐ ನಿರ್ದೇಶಕರಾಗಿ ಕಾಶ್ ನೇಮಕವಾಗಿದ್ದು, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇಮಕ ಆದೇಶಕ್ಕೆ ಅಮೆರಿಕ ಸಂಸತ್ತು ದೃಢೀಕರಣದ ಅಂಗೀಕಾರ ಮುದ್ರೆ ಒತ್ತಿದೆ. ಪ್ರಮಾಣ ವಚನ ಸ್ವೀಕರಿಸಿದ ನಂತರ ಮಾಧ್ಯಮಗಳ ಜತೆ ಮಾತನಾಡಿದ ಕಾಶ್ ಪಟೇಲ್, ಮೊದಲ ತಲೆಮಾರಿನ ಭಾರತೀಯರು ಭೂಮಿಯ ಮೇಲಿನ ಶ್ರೇಷ್ಠ ದೇಶದ ಕಾನೂನು ಜಾರಿ ಸಂಸ್ಥೆ ಮುನ್ನಡೆಸಲಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು. 'ಅಮೆರಿಕನ್ನರ ಕನಸು ಸತ್ತುಹೋಗಿದೆ ಎಂದು ಯಾರಾದರೂ ಭಾವಿಸುತ್ತಿದ್ದರೆ ಅದು ತಪ್ಪು. ಇಲ್ಲಿ ನೋಡಿ, ನಾನು ಅಮೆರಿಕನ್ನರ ಕನಸಿನಲ್ಲಿ ಜೀವಿಸುತ್ತಿದ್ದೇನೆ. ಎಫ್‌ಬಿಐ ಒಳಗೆ ಹೊಣೆಗಾರಿಕೆಯನ್ನು ಸರಿಯಾಗಿ ನಿರ್ವಹಿಸುವೆ' ಎಂದು ಕೆಲಸದ ಬಗ್ಗೆ ಬದ್ಧತೆ ತೋರಿದರು. ಡೊನಾಲ್ಡ್ ಟ್ರಂಪ್ ಮಾತನಾಡಿ, ಕಾಶ್‌ರನ್ನು ನಾನು ಮೆಚ್ಚಲು ಮತ್ತು ಅವರನ್ನು ಎಫ್‌ಬಿಐಗೆ ನೇಮಿಸಲು ಕಾರಣವೇನೆಂದರೆ ಎಫ್‌ಬಿಐ ಏಜೆಂಟರು ಅವರ ಬಗ್ಗೆ ಹೊಂದಿದ್ದ ಗೌರವ. ಅವರು ಆ ಸ್ಥಾನದಲ್ಲಿ ಅತ್ಯುತ್ತಮ ವ್ಯಕ್ತಿಯಾಗಿರುತ್ತಾರೆ ಎಂಬ ನಂಬಿಕೆ ಇದೆ ಎಂದರು.



ಕಾಶ್ ಪಟೇಲ್ ಎಫ್‌ಬಿಐ ನಿರ್ದೇಶಕರಗಿ ಪ್ರಮಾಣ ವಚನ ಸ್ವೀಕರಿಸುವಾಗ ಕುಟುಂಬದವರು ಪಕ್ಕದಲ್ಲೇ ನಿಂತಿದ್ದರು.

ಚುನಾವಣೆಗೆ ಅಮೆರಿಕಾ ಕಿಕ್ ಬ್ಯಾಕ್: ತನಿಖೆಗೆ ಸಂಸದ ಜೇಠ್ಮಲಾನಿ ಆಗ್ರಹ

ಬಂದು-ಹೋದ ವೀಣಾರೆಡ್ಡಿ ಬಗ್ಗೆ ತನಿಖೆ?

ದೆಹಲಿ: ಅಮೆರಿಕ ಅಂತಾರಾಷ್ಟ್ರೀಯ ಅಭಿವೃದ್ಧಿ ಏಜೆನ್ಸಿ(ಯುಎಸ್‌ಎಯ್ಡ್) ಭಾರತ ಘಟಕದ ಯೋಜನಾ ನಿರ್ದೇಶಕಿಯಾಗಿ 2021ರ ಜುಲೈನಲ್ಲಿ ಅಧಿಕಾರ ಸ್ವೀಕರಿಸಿದ ವೀಣಾ ರೆಡ್ಡಿ, 2024ರ ಲೋಕಸಭಾ ಚುನಾವಣೆ ಕೊನೆಗೊಂಡ ಬಳಿಕ ಇಲ್ಲಿನ ಕೆಲಸಕ್ಕೆ ರಾಜೀನಾಮೆ ಸಲ್ಲಿಸಿ ಅಮೆರಿಕಕ್ಕೆ ವಾಪಸಾದರು.

ಭಾರತದಲ್ಲಿನ ಚುನಾವಣೆಗಳಲ್ಲಿ ಮತದಾನ ಪ್ರಮಾಣ ಹೆಚ್ಚಿಸುವ ಸಲುವಾಗಿ ಅಮೆರಿಕ 182 ಕೋಟಿ ರು. ನೆರವು ನೀಡಿದೆ ಎಂಬ ವಿಚಾರವಾಗಿ ಅಮೆರಿಕ ಮತ್ತು ಭಾರತದಲ್ಲಿ ಬಿಸಿಬಿಸಿ ಚರ್ಚೆ ನಡೆದಿರುವಾಗಲೇ ವೀಣಾರೆಡ್ಡಿ ಅವರು ಭಾರತಕ್ಕೆ ಬಂದಿದ್ದು, ಲೋಕಸಭಾ ಚುನಾವಣೆವರೆಗೆ ಇದ್ದಿದ್ದು, ಚುನಾವಣೆ ಪೂರ್ಣಗೊಳ್ಳುತ್ತಲೇ ಕೆಲಸಕ್ಕೆ ರಾಜೀನಾಮೆ ಸಲ್ಲಿಸಿ ಅಮೆರಿಕಕ್ಕೆ ವಾಪಸಾಗಿದ್ದು ಎಲ್ಲಾ ವಿಚಾರವನ್ನೂ ಪ್ರಸ್ತಾಪಿಸಿರುವ ರಾಜ್ಯಸಭೆಯಲ್ಲಿನ ಬಿಜೆಪಿ ಸದಸ್ಯ, ಹಿರಿಯ ನ್ಯಾಯವಾದಿ ಮಹೇಶ್ ಜೇಠ್ಮಲಾನಿ, 'ಅಮೆರಿಕ ಏಜೆನ್ಸಿ ಫಾರ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್' ಅರ್ಥಾತ್ 'ಯುಎಸ್ ಎಯ್ಡ್' ಪ್ರಕರಣವನ್ನು ಸಮಗ್ರವಾಗಿ ತನಿಖೆಗೆ ಒಳಪಡಿಸಬೇಕಿದೆ. ಅಷ್ಟೇ ಅಲ್ಲ, ಈ ವಿಚಾರವಾಗಿ ಭಾರತದಲ್ಲಿನ ಅಮೆರಿಕ ರಾಯಭಾರಿ ಎರಿಕ್ ಗಾರ್ಸೆಟ್ಟಿ ಅವರನ್ನೂ ತನಿಖೆಗೆ ಒಳಪಡಿಸಿ ಪ್ರಶ್ನೆ ಮಾಡಬೇಕಿದೆ ಎಂದು ಆಗ್ರಹಿಸಿದ್ದಾರೆ.

ಮತದಾನ ಪ್ರಮಾಣ ಹೆಚ್ಚಿಸುವ(ಯಾರ ಪರ ಎಂಬುದೇ ಪ್ರಶ್ನೆ) ಸಲುವಾಗಿ ಅಮೆರಿಕದಿಂದ ಬಂದ 2.10 ಕೋಟಿ ಡಾಲರ್ ನೆರವು ಯಾವುದಕ್ಕೆಲ್ಲಾ ಬಳಕೆಯಾಯಿತು? 2024ರಲ್ಲಿನ ಲೋಕಸಭಾ ಚುನಾವಣೆಯಲ್ಲಿ ಮತದಾನ ಪ್ರಮಾಣ ಯಾರಿಗೆ ಎಷ್ಟು ಹೆಚ್ಚಳವಾಯಿತು? ಹಿಂದಿನ ಚುನಾವಣೆಗಿಂತ ಈ ಬಾರಿ ಯಾವ ರೀತಿಯಲ್ಲಿ ಬದಲಾವಣೆಗಳಾಗಿವೆ? ಇದೆಲ್ಲಾ ವಿಚಾರಗಳಲ್ಲಿ ವೀಣಾ ರೆಡ್ಡಿ ಅವರ ಪಾತ್ರವೇನು? ಅಮೆರಿಕ ಸರಕಾರದ ನಿಗೂಢ ಯೋಜನೆ ಎಷ್ಟರ ಮಟ್ಟಿಗೆ ಈಡೇರಿದೆ? ಎಂಬ ಎಲ್ಲಾ ಅಂಶಗಳನ್ನೂ ತನಿಖೆ ಮಾಡಬೇಕಿದೆ ಎಂದು ಕೇಂದ್ರ ಸರಕಾರಕ್ಕೆ ಮಹೇಶ್ ಜೇಠ್ಮಲಾನಿ ಒತ್ತಾಯಿಸಿದ್ದಾರೆ.





ಜನರ ಹಣ ದುರ್ಬಳಕೆ

ಈ ಮಧ್ಯೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಹಿಂದಿನ ಜೋ ಬೈಡನ್ ಸರಕಾರ ನನ್ನ ಸ್ನೇಹಿತ ಪ್ರಧಾನಿ ಮೋದಿ ಅವರ ಭಾರತಕ್ಕೆ 2.10 ಕೋಟಿ, ಬಾಂಗ್ಲಾದೇಶಕ್ಕೆ 2.90 ಕೋಟಿ ಡಾಲರ್ ನೆರವು ಕೊಡುತ್ತಿದ್ದುದೇಕೆ? ಅಮೆರಿಕನ್ನರ ತೆರಿಗೆ ಹಣದ ದುರ್ಬಳಕೆ ಇದಲ್ಲವೇ? ಎಂದು ಮತ್ತೊಮ್ಮೆ ಪ್ರಶ್ನಿಸಿದ್ದಾರೆ.

ಕೃಷಿ ಸಚಿವರಿಗೆ ಮುರಿದ ಸೀಟು ಕೊಟ್ಟ ಏರಿಂಡಿಯಾ

ಭೋಪಾಲ್: ಸಾಮಾನ್ಯ ಪ್ರಯಾಣಿಕರಷ್ಟೇ ಅಲ್ಲ, ಕೇಂದ್ರದ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅಂತಹವರೇ ಆಗಿದ್ದರೂ ಏರ್ ಇಂಡಿಯ ವಿಮಾನಯಾನ ಸಂಸ್ಥೆಯ ಮಟ್ಟಿಗೆ ಎಲ್ಲರೂ ಒಂದೇ. ಸಚಿವ ಸಿಂಗ್ ಭೋಪಾಲ್‌ನಿಂದ ದೆಹಲಿಗೆ ಏರ್ ಇಂಡಿಯ ವಿಮಾನ 'ಎಐ436'ನಲ್ಲಿ ಪ್ರಯಾಣಿಸಿದಾಗ ಮುರಿದು ಹೋಗಿದ್ದ '8ಸಿ' ಆಸನದಲ್ಲಿಯೇ ಕುಳಿತು ಪ್ರಯಾಣಿಸುವಂತಾಗಿದೆ. ಅಷ್ಟೇ ಅಲ್ಲದೇ, ವಿಮಾನದಲ್ಲಿನ ಹಲವಾರು ಆಸನಗಳು ಹಾನಿಗೀಡಾಗಿದ್ದುದೂ ಸಚಿವರ ಕಣ್ಣಿಗೆ ಬಿದ್ದಿದೆ. 'ಪ್ರಯಾಣಿಕರಿಂದ ಸಾವಿರಾರು ರು. ಟಿಕೆಟ್ ಶುಲ್ಕ ಪಡೆಯುವ ಏರ್ ಇಂಡಿಯ ಪ್ರಯಾಣಿರಿಗೆ ಮುರಿದ ಆಸನದಲ್ಲಿ ಕೂತು ಪ್ರಯಾಣಿಸುವಂತೆ ಮಾಡುತ್ತಿರುವುದು ಘೋರ ಅಪರಾಧ, ಇದು ಬಹಳ ಕೆಟ್ಟ ಪದ್ಧತಿಯಾಗಿದೆ' ಎಂದು ಸಚಿವ ಸಿಂಗ್ 'ಎಕ್ಸ್' ಖಾತೆಯಲ್ಲಿ ಕಿಡಿಕಾರಿದ್ದಾರೆ. ನಂತರದಲ್ಲಿ ಬಳಿ ಬಂದ ವಿಮಾನದ ಸಿಬ್ಬಂದಿ, ಆಸನ 8ಸಿ ಮುರಿದಿರುವುದರಿಂದ ಬೇರೆ ಆಸನದಲ್ಲಿ ಕೂರುವಂತೆ ನನಗೆ ಹೇಳಿದರು. ಆದರೆ, ಇತರೆ ಪ್ರಯಾಣಿಕರಿಗೆ ತೊಂದರೆ ಆಗಬಾರದೆಂದು '8ಸಿ' ಆಸನದಲ್ಲೇ ಪ್ರಯಾಣಿಸಿದೆ ಎಂದಿದ್ದಾರೆ.

ಪುಣ್ಯ ಸ್ನಾನದ ವಿಡಿಯೊ: 13 ಎಫ್‌ಐಆರ್, 3 ಸೆರೆ

ಪ್ರಯಾಗ್‌ರಾಜ್: ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆದಿರುವ ಮಹಾ ಕುಂಭಮೇಳದಲ್ಲಿ ತ್ರಿವೇಣಿ ಸಂಗಮ ಸ್ಥಳದಲ್ಲಿ ಮಹಿಳೆಯರು, ಯುವತಿಯರು ಪವಿತ್ರ ಸ್ನಾನ ಮಾಡುತ್ತಿದ್ದಾಗ ಮರೆಯಿಂದ ವಿಡಿಯೊ ಚಿತ್ರೀಕರಿಸಿದ್ದ, ಫೋಟೊಗಳನ್ನು ತೆಗೆದಿದ್ದ, ಅವುಗಳನ್ನು 'ಡಾರ್ಕ್‌ನೆಟ್'ನಲ್ಲಿ ಹಣಕ್ಕೆ ಮಾರುತ್ತಿದ್ದ ಪ್ರಕರಣದಲ್ಲಿ ಉತ್ತರ ಪ್ರದೇಶ ಪೊಲೀಸರು 13 ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ. ಇನ್ನೊಂದೆಡೆ, ಇವೇ ಪ್ರಕರಣಗಳ ಸಂಬಂಧ ಗುಜರಾತ್ ಪೊಲೀಸರು ಮೂವರು ದುಷ್ಕರ್ಮಿಗಳನ್ನು ಶನಿವಾರ ಬಂಧಿಸಿದ್ದಾರೆ. ದುಷ್ಕರ್ಮಿಗಳು ಈ ದೃಶ್ಯಾವಳಿ, ಫೋಟೊಗಳನ್ನು ಅಪರಾಧ ಹಿನ್ನೆಲೆಯ 'ಡಾರ್ಕ್‌ನೆಟ್' ಜಾಲತಾಣದಲ್ಲಿ ಮಾರಾಟಕ್ಕಿಟ್ಟಿದ್ದರು. ಅವರ ಕರಾಳ ಜಾಲ ಅಟ್ಲಾಂಟಾ, ಅಮೆರಿಕ, ರೊಮೇನಿಯ ಮೊದಲಾದ ದೇಶಗಳ ಸಹಿತ ಅಂತಾರಾಷ್ಟ್ರೀಯ ಮಟ್ಟದಲ್ಲಿತ್ತು ಎಂದು ಪೊಲೀಸರ ತನಿಖೆಯಿಂದ ತಿಳಿದುಬಂದಿದೆ. ಇದೇ ಪ್ರಕರಣ ಸಂಬಂಧ ಕೇಂದ್ರದ ಗೃಹ ಸಚಿವಾಲಯ 17 ವೆಬ್‌ಸೈಟ್‌ಗಳು, ಸಾಮಾಜಿಕ ಮಾಧ್ಯಮ ಜಾಲತಾಣಗಳನ್ನು ನಿರ್ಬಂಧಿಸಿ ಆದೇಶ ಹೊರಡಿಸಿದೆ. ಬಾಬಾ ಕಾ ವ್ಲೋಗಿ, ಮೇಳ ಮಹೋತ್ಸವ್ ಮತ್ತು ಹಿಂದೂ ಅಫಿಷಿಯಲ್ ಹೆಸರಿನ ಜಾಲತಾಣಗಳು ಇದರಲ್ಲಿ ಸೇರಿವೆ.



ತೆಲಂಗಾಣ ಸುರಂಗದಲ್ಲಿ ಸಿಲುಕಿದ 8 ಕಾರ್ಮಿಕರು

ಹೈದರಾಬಾದ್: ತೆಲಂಗಾಣದ ನಾಗರ್‌ಕರ್ನೂಲ್ ಜಿಲ್ಲೆಯ ಶ್ರೀಶೈಲಂ ಎಡದಂಡೆ ಕಾಲುವೆಯ ಭಾಗದಲ್ಲಿ ನಿರ್ಮಾಣಗೊಳ್ಳುತ್ತಿರುವ ಸುರಂಗದ ಛಾವಣಿಯ ಒಂದು ಭಾಗ ಶನಿವಾರ ಕುಸಿದಿದ್ದು, ಒಳಗೆ 8 ಕಾರ್ಮಿಕರು ಸಿಲುಕಿಕೊಂಡಿದ್ದಾರೆ.

ಸುರಂಗ ನಿರ್ಮಾಣ ಗುತ್ತಿಗೆ ತೆಗೆದುಕೊಂಡಿರುವ ಕಂಪನಿಯ ಒಂದು ತಂಡ ಸುರಂಗದೊಳಗೆ ಪ್ರವೇಶಿಸಲು ಯತ್ನಿಸಿದ್ದು, ಒಳಗೆ ಸಿಲುಕಿಕೊಂಡಿರುವವರನ್ನು ರಕ್ಷಿಸಲು ಮುಂದಾಗಿದೆ. 8 ಕಾರ್ಮಿಕರು ಕುಸಿದ ಸುರಂಗದೊಳಗೆ ಸಿಲುಕಿದ್ದಾರೆ. 8 ಕಾರ್ಮಿಕರು ಕೆಲಸದ ಭಾಗವಾಗಿ ಶನಿವಾರ ಬೆಳಗ್ಗೆ ಸುರಂಗದೊಳಗೆ 12-13 ಕಿ.ಮೀ.ಗಳಷ್ಟು ದೂರ ಹೋಗಿದ್ದಾಗ ಸುರಂಗದ ಛಾವಣಿಯ ಭಾಗ ಕುಸಿದು ದಾರಿ ಮುಚ್ಚಿಹೋಗಿದೆ ಎಂದು ಕಂಪನಿ ಅಧಿಕಾರಿಗಳು ಮಾಹಿತಿ ನೀಡಿರುವುದಾಗಿ ಹಿರಿಯ ಪೊಲೀಸ್ ಅಧಿಕಾರಿ ಸುದ್ದಿಸಂಸ್ಥೆಗೆ ವಿವರಿಸಿದ್ದಾರೆ. ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿಗೆ ಕರೆ ಮಾಡಿದ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ, ಅವಘಡವಾಗಿರುವ ಸ್ಥಳಕ್ಕೆ ತಕ್ಷಣ ತೆರಳಿ ರಕ್ಷಣಾ ಕ್ರಮಗಳನ್ನು ತ್ವರಿತಗೊಳಿಸುವಂತೆ ಸೂಚಿಸಿದ್ದಾರೆ. ಅಲ್ಲದೇ ಸಿಎಂ ನಿರ್ದೇಶನದಂತೆ ನೀರಾವರಿ ಸಚಿವ ಉತ್ತಮ್ ಕುಮಾರ್ ರೆಡ್ಡಿ, ನೀರಾವರಿ ಸಲಹೆಗಾರ ಆದಿತ್ಯನಾಥ ದಾಸ್ ಮತ್ತು ಹಿರಿಯ ಅಧಿಕಾರಿಗಳು ವಿಶೇಷ ಹೆಲಿಕಾಪ್ಟರ್‌ನಲ್ಲಿ ಘಟನಾ ಸ್ಥಳಕ್ಕೆ ತೆರಳಿದ್ದಾರೆ.

ಮೇಘಾಲಯ ವಿಸಿ ಮಹಬೂಬ್ ಸೆರೆ

ಗುವಾಹಟಿ: ಮೇಘಾಲಯದ ವಿಜ್ಞಾನ-ತಂತ್ರಜ್ಞಾನ ವಿಶ್ವವಿದ್ಯಾಲಯ ಕುಲಪತಿ ಮಹಬೂಬ್ ಉಲ್ ಹಕ್ ಅವರನ್ನು ಗುವಾಹಟಿಯ ಅವರ ನಿವಾಸದಲ್ಲಿ ಅಸ್ಸಾಂ ಪೊಲೀಸರು ಶನಿವಾರ ಬಂಧಿಸಿದ್ದಾರೆ. ಸಿಬಿಎಸ್‌ಇ 12ನೇ ತರಗತಿ ಭೌತಶಾಸ್ತ್ರ ಪರೀಕ್ಷೆ ವೇಳೆ ಅಕ್ರಮ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಡುವ ಸಲುವಾಗಿ ಹಣ ಪಡೆದ ಆರೋಪ ಸಂಬಂಧ ಮಹಬೂಬ್‌ರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅಸ್ಸಾಂನ ಶ್ರೀಭೂಮಿ ಜಿಲ್ಲೆಯ ಕೇಂದ್ರೀಯ ವಿದ್ಯಾಲಯದಲ್ಲಿ 274 ವಿದ್ಯಾರ್ಥಿಗಳು ಭೌತಶಾಸ್ತ್ರ ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ 45 ವಿದ್ಯಾರ್ಥಿಗಳು ಮಾತ್ರವೇ ನೇರ ಶಾಲೆಯಿಂದ ಬಂದವರು. ಉಳಿದ 214 ವಿದ್ಯಾರ್ಥಿಗಳು ಇಆರ್‌ಡಿ ಗ್ರೂಪ್‌ನವರಾಗಿದ್ದರು. ಮಹಬೂಬ್ ಹಣ ಪಡೆದು ಇಆರ್‌ಡಿ ಗ್ರೂಪ್ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ನೆರವಾಗಲು ಅವಕಾಶ ಮಾಡಿಕೊಟ್ಟಿದ್ದರು ಎಂದು ಆರೋಪಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಬೆಳ್ಮಣ್ ಶಾಲೆಯಲ್ಲಿ 1.50 ಲಕ್ಷ ರು. ಕಳವು

ಉಡುಪಿ: ಶಾಲೆಯ ಬಾಗಿಲು ಮುರಿದು 1.50 ಲಕ್ಷ ರೂ. ನಗದು ಕಳವುಗೈದ ಘಟನೆ ಕಾರ್ಕಳ ತಾಲೂಕು ಬೆಳ್ಮಣ್ ಸೈಂಟ್ ಜೋಸೆಫ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಫೆ. 21ರ ರಾತ್ರಿ ಸಂಭವಿಸಿದೆ. ಶಾಲೆಗೆ ಅಳವಡಿಸಿದ್ದ ಸಿಸಿ ಕ್ಯಾಮೆರಾ ಡ್ಯಾಮೇಜ್ ಮಾಡಿ, ಶಾಲಾ ಕಚೇರಿಯ ಬಾಗಿಲಿನ ಬೀಗ ಮುರಿದು ಒಳಗಿದ್ದ ಮೇಜಿನ ಡ್ರಾಯರನ್ನು ಒಡೆದು ಅದರಲ್ಲಿದ್ದ 1,50,000 ರು. ನಗದು ಹಾಗೂ 3 ಡಿವಿಯರ್‌ಗಳನ್ನು ಕಳ್ಳತನ ಮಾಡಿದ್ದಾರೆ. ಘಟನಾ ಸ್ಥಳಕ್ಕೆ ಎಎಸ್‌ಪಿ ಡಾ. ಹರ್ಷಪ್ರಿಯಂವದ, ವೃತ್ತ ನಿರೀಕ್ಷಕ ಮಂಜಪ್ಪ ಡಿ. ಆರ್., ಕಾರ್ಕಳ ಗ್ರಾಮಾಂತರ ಪೊಲೀಸ್ ಉಪನಿರೀಕ್ಷಕರಾದ ದಿಲೀಪ್ ಮತ್ತು ಸುಂದರ್, ಬೆರಳಚ್ಚು ತಂತ್ರಜ್ಞರು, ಶ್ವಾನದಳ ಮತ್ತು ವಿಧಿ ವಿಜ್ಞಾನ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿಡಿಗೇಡಿಗಳಿಂದ ಶಿಲುಬೆ ಧ್ವಂಸ: ಎಫ್‌ಐಆರ್

ಉಡುಪಿ: ಕಾಪು ತಾಲೂಕು ಮೂಡುಬೆಳ್ಳೆ ಸಮೀಪ ಕಟ್ಟಿಂಗೇರಿ ಗ್ರಾಮದ ಕುದುರೆಮಲೆ ಎಂಬಲ್ಲಿ

ಖಾಸಗಿ ಸ್ಥಳದಲ್ಲಿದ್ದ ಶಿಲುಬೆಯೊಂದನ್ನು ಕಿಡಿಗೇಡಿಗಳು ಧ್ವಂಸಗೊಳಿಸಿರುವ ಕುರಿತು ಶಿರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫೆ. 19ರಂದು ಕಟ್ಟಿಂಗೇರಿ ಗ್ರಾಮದ ಕುದುರೆಮಲೆ ಬೆಟ್ಟದಲ್ಲಿದ್ದ ಪವಿತ್ರ ಶಿಲುಬೆಯನ್ನು ದುಷ್ಕರ್ಮಿಗಳು ಕೆಡವಿ ಧ್ವಂಸ ಮಾಡಿರುವುದು ಗಮನಕ್ಕೆ ಬಂದಿದೆ. ಈ ಪವಿತ್ರ ಶಿಲುಬೆ ಕ್ರೈಸ್ತ ಸಮುದಾಯದ ಹಾಗೂ ಕುಟುಂಬದ ಪೂಜಾ ಸ್ಥಳವಾಗಿದ್ದು ಧಾರ್ಮಿಕ ಪಾವಿತ್ರ್ಯಕ್ಕೆ ಧಕ್ಕೆಯಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಕೃತ್ಯದಿಂದ ತಮಗೆ ಅಘಾತವಾಗಿದ್ದು ಕ್ರೈಸ್ತ ಧರ್ಮಕ್ಕೆ ಅಪಮಾನವಾಗಿದೆ ಹಾಗೂ ತಮ್ಮ ಸಮುದಾಯದ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿದೆ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸಿ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಎಂದು ಕಟ್ಟಿಂಗೇರಿ ನಿವಾಸಿ ಪ್ಲಾಲೀವನ್ ಎಂಬವರು ಶಿರ್ವ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ತ್ಯಾಜ್ಯ ಪ್ರಕರಣ: ತಪ್ಪಿತಸ್ಥರ ವಿರುದ್ಧ ಕ್ರಮ

ಮಂಗಳೂರು: ನಗರದ ನೇತ್ರಾವತಿ ನದಿಗೆ ಕೇರಳದಿಂದ ಘನ ಹಾಗೂ ದ್ರವ ತ್ಯಾಜ್ಯ ತಂದು ಸುರಿಯುತ್ತಿರುವ ಪ್ರಕರಣ ಗಂಭೀರ ವಿಚಾರವಾಗಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಕೇರಳದಿಂದ ನೇತ್ರಾವತಿಗೆ ದ್ರವ ತ್ಯಾಜ್ಯ ಸುರಿಯುತ್ತಿರುವ ಎರಡು ವಾಹನಗಳನ್ನು ಈಗಾಗಲೇ ಪೊಲೀಸ್ ಇಲಾಖೆ ವಶಪಡಿಸಿಕೊಂಡಿದೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸ ಲಾಗಿದೆ. ಬಯೋಮೆಡಿಕಲ್ ವೇಸ್ಟ್ ಕೂಡಾ ಡಂಪ್ ಮಾಡಲಾಗುತ್ತಿದೆ ಎಂಬ ಮಾಹಿತಿಯಿದೆ. ಈ ಬಗ್ಗೆ ಸ್ಥಳೀಯಾಡಳಿತ ಎಚ್ಚರಿಕೆ ವಹಿಸಿ ಕ್ರಮ ಕೈಗೊಳ್ಳಬೇಕಿದೆ ಎಂದರು.

ಚಾಮರಾಜನಗರ ಜಿಲ್ಲೆಯಲ್ಲೂ ಗಡಿ ಪ್ರದೇಶಗಳಲ್ಲಿ ಕೇರಳ, ತಮಿಳುನಾಡು ರಾಜ್ಯಗಳಿಂದ ತ್ಯಾಜ್ಯ ತಂದು ಸುರಿಯಲಾ ಗುತ್ತಿದೆ. ಮಂಗಳೂರಿನಲ್ಲಿ ಕೇರಳದಿಂದ ತ್ಯಾಜ್ಯವನ್ನು ತಂದು ನದಿಗೆ ಬಿಸಾಡುತ್ತಿದ್ದಾರೆ. ಈ ಬಗ್ಗೆ ಸ್ಥಳೀಯಾಡಳಿತ ಹಾಗೂ ಸಾರ್ವಜನಿಕರು ಎಚ್ಚರಿಕೆ ವಹಿಸಬೇಕು. ಕಾನೂನು ಜಾರಿಗೆ ಎಲ್ಲರೂ ಸಹಕಾರ ನೀಡಬೇಕು. ಇಲ್ಲವಾದಲ್ಲಿ ಮಂಗಳೂರಿನಲ್ಲಿ ಮುಂದಕ್ಕೆ ಗಂಭೀರ ಆರೋಗ್ಯ ಸಮಸ್ಯೆ ಉಂಟಾಗಬಹುದು ಎಂದು ಅವರು ಹೇಳಿದರು.

ಜೈಲಿನಲ್ಲಿ ಜಾಮರ್: ಜನರ ಆಕ್ರೋಶ

ಮಂಗಳೂರು: ನಗರದ ಕೇಂದ್ರ ಕಾರಾಗೃಹದಲ್ಲಿ ಜಾಮರ್ ಅಳವಡಿಕೆಯ ತಾಂತ್ರಿಕ ಪ್ರಕ್ರಿಯೆ ಪ್ರಾಯೋಗಿಕವಾಗಿ ನಡೆಯುತ್ತಿದೆ. ಆ ಹಿನ್ನೆಲೆಯಲ್ಲಿ ನಗರದ ಸುತ್ತಮುತ್ತ ಶುಕ್ರವಾರ ಮೊಬೈಲ್ ನೆಟ್ ವರ್ಕ್ ಸಮಸ್ಯೆ ತಲೆದೋರಿತು. ಬೆಳಗ್ಗಿನಿಂದಲೇ ನಗರದ ಪಿವಿಎಸ್, ಬಂಟ್ಸ್‌ಹಾಸ್ಟೆಲ್, ನಂತೂರು, ಲೇಡಿಹಿಲ್ ಮತ್ತಿತರ ಕಡೆಗಳಲ್ಲಿ ಮೊಬೈಲ್ ನೆಟ್ ವರ್ಕ್ ಸಿಗದೆ ಗ್ರಾಹಕರು ಪರದಾಡುವಂತಾಯಿತು. ಎಲ್ಲ ಮೊಬೈಲ್ ಕಂಪನಿಗಳ ನೆಟ್‌ವರ್ಕ್ ಸಿಗದ ಕಾರಣ ತಾಂತ್ರಿಕ ಸಮಸ್ಯೆ ಎಂದು ಭಾವಿಸಲಾಗಿತ್ತು. ಬಳಿಕ ಜೈಲಿನಲ್ಲಿ ಜಾಮರ್ ಅಳವಡಿಕೆಯ ಪ್ರಕ್ರಿಯೆ ನಡೆಯುತ್ತಿರುವುದು ಈ ಸಮಸ್ಯೆಗೆ ಕಾರಣವಾಗಿದೆ ಎನ್ನಲಾಗಿದೆ. ಜೈಲಿನೊಳಗೆ ಹಾಳಾದ ಜಾಮರ್ ದುರಸ್ತಿಪಡಿಸಲಾಗಿದೆ. ಅದರ ಪ್ರಾಯೋಗಿಕ ನಿರ್ವಹಣೆ ನಡೆಸಲಾಗುತ್ತಿದೆ. ನೆಟ್‌ವರ್ಕ್ ಸಮಸ್ಯೆಗೆ ಜಾಮರ್ ಕಾರಣ ಅಲ್ಲವೆಂದು ಜೈಲಿನ ಅಧಿಕಾರಿಗಳು ಹೇಳಿಕೊಂಡಿದ್ದಾರೆ.

{ಸತೀಶ ಜಾರಕಿಹೊಳಿ } ಸಚಿವ

ರಾಜ್ಯ ಸರಕಾರ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಿಲ್ಲ. ಗೃಹ ಲಕ್ಷ್ಮಿ ಯೋಜನೆಯ ಫಲಾನುಭವಿಗಳಿಗೆ ಹಣ ನೀಡುವುದು ಒಂದೆರಡು ತಿಂಗಳು ವಿಳಂಬವಾಗಿರಬಹುದು. ಎರಡೂ ತಿಂಗಳ ಹಣವನ್ನು ಒಟ್ಟಿಗೆ ಸೇರಿಸಿಕೊಡಬಹುದು. ಸರಕಾರದ ಮಟ್ಟದಲ್ಲಿ ಹಣ ನೀಡುವುದು ವಿಳಂಬವಾಗುವುದು ಸಹಜ. ವಿಳಂಬವಾದರೂ ಹಣ ಕೊಡುವುದನ್ನು ನಿಲ್ಲಿಸಿಲ್ಲ.

ಪ್ರಗತಿ ಪಥ ಯೋಜನೆ ಶೀಘ್ರ ಜಾರಿ | ಹೊಂಬೆಳಕು ಕಾರ್ಯಕ್ರಮದಲ್ಲಿ ಸಚಿವ ಖರ್ಗೆ ವಿಶ್ವಾಸ

ರಾಜ್ಯ ಸರಕಾರದ ವಿರುದ್ಧ ಅಪಪ್ರಚಾರ

ಮಂಗಳೂರು: ಸರಕಾರದ ವಿರುದ್ಧ ದುಡ್ಡಿಲ್ಲ ಎಂದು ಸುಮ್ಮನೆ ಅಪಪ್ರಚಾರ ಮಾಡಲಾಗುತ್ತಿದೆ. ದುಡ್ಡಿಲ್ಲ ಎಂದು ಯಾವ ಕಾಮಗಾರಿಯನ್ನೂ ನಿಲ್ಲಿಸಲಾಗಿಲ್ಲ. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಗಿಂತ ಭಿನ್ನವಾಗಿ ಪ್ರಗತಿ ಪಥ ಎಂಬ ಯೋಜನೆಯನ್ನು ರಾಜ್ಯ ಸರಕಾರ ಒಂದು ತಿಂಗಳೊಳಗೆ ಜಾರಿಗೊಳಿಸಲಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಗ್ರಾಮ ಸ್ವರಾಜ್ ಪ್ರತಿಷ್ಠಾನ ನೇತೃತ್ವದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಪಂಚಾಯತ್ ಹಾಗೂ ಇತರ ಸ್ಥಳೀಯಾಡಳಿತ ಸಂಸ್ಥೆಗಳ ಸಹಕಾರದೊಂದಿಗೆ ಮಂಗಳೂರು ಅಡ್ಯಾರ್ ಸಹ್ಯಾದ್ರಿ ಕ್ಯಾಂಪಸ್ ನಲ್ಲಿ ಶನಿವಾರ ನಡೆದ ಹೊಂಬೆಳಕು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಪ್ರಗತಿ ಪಥ ಹೆಸರಿನಲ್ಲಿ 7110 ಕಿ.ಮೀ. ಗ್ರಾಮೀಣ ರಸ್ತೆಗಳಿಗೆ 5190 ಕೋಟಿ ರೂ.ಗಳನ್ನು ಖರ್ಚು ಮಾಡಲಾಗುತ್ತದೆ. ಇಲ್ಲಿ ಪ್ರಗತಿ ಪಥವಾದರೆ, ನಮ್ಮಲ್ಲಿ ಕಲ್ಯಾಣ ಪಥದಡಿ 1,150 ಕಿ.ಮೀ. ರಸ್ತೆಯನ್ನು 1 ಸಾವಿರ ಕೋಟಿ ರು.ಗಳಲ್ಲಿ ಅಭಿವೃದ್ಧಿಪಡಿಸಲಾಗುವುದು. ಮುಂದಿನ ಶನಿವಾರ ಮುಖ್ಯಮಂತ್ರಿ ಸಿದ್ಧರಾಮಯ್ಯ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಚಾಲನೆ ನೀಡಲಿದ್ದಾರೆ ಎಂದು ಅವರು ಹೇಳಿದರು.

ಪಾಕೃತಿಕ ವಿಕೋಪದಿಂದ ಹಾಳಾಗಿರುವ ಗ್ರಾಮೀಣ ರಸ್ತೆಗಳ ದುರಸ್ತಿಗೆ ಪ್ರತಿ ಕ್ಷೇತ್ರಕ್ಕೆ ತಲಾ 10 ಕೋಟಿ ರೂ. ಗಳಂತೆ 189 ಕ್ಷೇತ್ರಗಳಿಗೆ 1890 ಕೋಟಿರೂ. ಬಿಡುಗಡೆ ಕೆಲವೆಡೆ ಕೆಲಸ ಆರಂಭವಾಗಿದೆ. ರಾಜ್ಯದ 5770 ಅರಿವು ಕೇಂದ್ರಗಳಲ್ಲಿ 51 ಲಕ್ಷ ವಿದ್ಯಾರ್ಥಿಗಳು ನೋಂದಣಿ ಮಾಡಿದ್ದು, ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುತ್ತಿದ್ದಾರೆ. ಕೆಎಎಸ್ ಪ್ರಿಲಿಮ್ಸ್‌ನಲ್ಲಿಯೂ ಅರಿವು ಕೇಂದ್ರದಲ್ಲಿ ತರಬೇತು ಹೊಂದಿದ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಭಾರತ ಸರಕಾರದ ಸ್ವಚ್ಛ ಭಾರತದ ಕನಸು ನನಸಾಗಿಸಲು ರಾಜ್ಯದಲ್ಲಿ 5712 ಘನತ್ಯಾಜ್ಯ ವಿಲೇವಾರಿ ಘಟಕಗಳಿಗೆ ತಲಾ 2 ಕೋಟಿ ರೂ. ಖರ್ಚು ಮಾಡಲಾಗುತ್ತಿದ್ದು, ಅವಿಭಜಿತ ದ.ಕ. ಜಿಲ್ಲೆಯಲ್ಲಿ ಈ ಘಟಕಗಳು ಅತ್ಯಂತ ಪರಿಣಾಮಕಾರಿ ಕಾರ್ಯಗತವಾಗುತ್ತಿವೆ ಎಂದು ಅವರು ಹೇಳಿದರು.



ಹೊಂಬೆಳಕು ಕಾರ್ಯಕ್ರಮವನ್ನು ಸಚಿವ ಪ್ರಿಯಾಂಕ್ ಖರ್ಗೆ ಅವರು ಉದ್ಘಾಟಿಸಿದರು.

ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್ ಮಾತನಾಡಿ, ಸ್ಥಳೀಯಾಡಳಿತಗಳಲ್ಲಿ 40 ವರ್ಷಗಳಿಂದ ಇದ್ದ ಇ ಖಾತಾ ಸಮಸ್ಯೆ ನಿವಾರಿಸಿ ಇ ಖಾತಾ ಹಾಗೂ ಬಿ ಖಾತಾ ನೀಡಲು ಕ್ರಮ ಕೈಗೊಳ್ಳಲಾಗಿದೆ. ಮಧ್ಯವರ್ತಿಗಳಿಲ್ಲದೆ ಆಂದೋಲನ ಮಾದರಿಯಲ್ಲಿ ಇ ಖಾತೆ ನೀಡಲು ಸೂಚನೆ ನೀಡಲಾಗಿದೆ ಎಂದರು.

ವೇದಿಕೆಯಲ್ಲಿ ಸಂಸದ ಬ್ರಿಜೇಶ್ ಚೌಟ, ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ, ಅಶೋಕ್ ರೈ, ಉಮಾನಾಥ ಕೋಟ್ಯಾನ್, ಐವನ್ ಡಿಸೋಜಾ, ಕಿಶೋರ್ ಕುಮಾರ್, ಮಾಜಿ ಶಾಸಕ ಅಭಯ ಚಂದ್ರ ಜೈನ್, ಶಕುಂತಳಾ ಶೆಟ್ಟಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಹಾಗೂ ಶಾಸಕ ನರೇಂದ್ರ ಸ್ವಾಮಿ, ಮೂಡ ಅಧ್ಯಕ್ಷ ಸದಾಶಿವ ಉಳ್ಳಾಲ, ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ, ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸ್ಟ್ಯಾನ್ಲಿ ಅಲ್ವಾರಿಸ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹರೀಶ್ ಕುಮಾರ್, ಇನಾಯತ್ ಫೌಂಡೇಶನ್‌ನ ಇನಾಯತ್ ಅಲಿ, ಎಡಿಜಿಪಿ ನಂಜುಂಡ ಸ್ವಾಮಿ, ಬೆಸ್ಟ್ ಫೌಂಡೇಶನ್‌ನ ಅಧ್ಯಕ್ಷ ರಕ್ಷಿತ್ ಶಿವರಾಂ, ಗುರುಬೆಳದಿಂಗಳು ಫೌಂಡೇಶನ್‌ನ ಪದ್ಮರಾಜ್, ಉಪಸ್ಥಿತರಿದ್ದರು.

ಪ್ರತಿಷ್ಠಾನದ ಅಧ್ಯಕ್ಷ ಸುಭಾಷ್ಚಂದ್ರ ಶೆಟ್ಟಿ ಕುಳಾಲು ಸ್ವಾಗತಿಸಿದರು. ಸರಕಾರದ ಸಹಭಾಗಿತ್ವದಲ್ಲಿ ಹೊಂಬೆಳಕು ಆಯೋಜನೆಗೆ ಪರಿಶೀಲನೆ. ಪಂಚಾಯಿತಿ, ನಗರ ಸ್ಥಳೀಯಾಡಳಿತದ ಚುನಾಯಿತ ಜನಪ್ರತಿನಿಧಿಗಳು ಹಾಗೂ ಸಿಬ್ಬಂದಿಗಾಗಿ ಮಂಗಳೂರಿನಲ್ಲಿ ಹೊಂಬೆಳಕು ಶೀರ್ಷಿಕೆಯಲ್ಲಿ ಆಯೋಜಿಸುತ್ತಿರುವ ಕ್ರೀಡೋತ್ಸವ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು ವಿಭಿನ್ನವಾಗಿದ್ದು, ಮುಂದಿನ ದಿನಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಸಂಘಟಿಸುವ ಜಿಲ್ಲೆಗಳಿಗೆ ಸರಕಾರ ಸಹಭಾಗಿತ್ವ ಒದಗಿಸುವ ನಿಟ್ಟಿನಲ್ಲಿ ಗಂಭೀರವಾಗಿ ಪರಿಶೀಲಿಸುವುದಾಗಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಸಚಿವ ಪ್ರಿಯಾಂಕ ಖರ್ಗೆ ಭರವಸೆ ನೀಡಿದ್ದಾರೆ.

> **8000 ಮಂದಿ ಚುನಾಯಿತ ಜನಪ್ರತಿನಿಧಿ ಹಾಗೂ ಸ್ಥಳೀಯ ಅಧಿಕಾರಿಗಳಲ್ಲಿ ಒಟ್ಟು 7600 ನೋಂದಾಯಿಸಿ ಕೊಂಡು ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮಕ್ಕೆ ಹೊಸ ಮೆರುಗು ನೀಡಿದ್ದಾರೆ. ಮುಂದಿನ ಬಜೆಟ್ ನಲ್ಲಿ ಜಾಪನದ ಕ್ರೀಡೆಗೆ ಅನುದಾನ ಮೀಸಲಿಟ್ಟು, ಇಂತಹ ಕ್ರೀಡಾಕೂಟಗಳಿಗೆ ಪ್ರೋತ್ಸಾಹ ನೀಡುವ ಕಾರ್ಯ ಸರಕಾರ ದಿಂದ ನಡೆಯಲಿ.**
> **-ಮಂಜುನಾಥ ಭಂಡಾರಿ, ವಿಧಾನ ಪರಿಷತ್ ಸದಸ್ಯ**

ಅಡ್ಯಾರ್‌ನ ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ಸ್ವರಾಜ್ ಪ್ರತಿಷ್ಠಾನದ ಆಶ್ರಯದಲ್ಲಿ ನಡೆದ ಎರಡನೇ ಆವೃತ್ತಿಯ ಹೊಂಬೆಳಕು ಕಾರ್ಯಕ್ರಮದಲ್ಲಿ ನನ್ನ ಕನಸಿನ ಭಾರತ, ಗ್ರಾಮ ಸ್ವರಾಜ್ಯ ಹಾಗೂ ಕರಾವಳಿಯ ಸಂಸ್ಕೃತಿಯನ್ನು ಬಿಂಬಿಸುವ ಥೀಮ್ ಪಥ ಸಂಚಲನವನ್ನು ಆಯೋಜಿಸಲಾಗಿತ್ತು. ಅವಿಭಜಿತ ದ.ಕ. ಜಿಲ್ಲೆಯ ವಿವಿಧ ಸ್ಥಳೀಯಾಡಳಿತದ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಂದ ಕೂಡಿದ ಪಥ ಸಂಚಲನದಲ್ಲಿ ಕರಾವಳಿಯ ಜಾನಪದ ಕ್ರೀಡೆ ಕಂಬಳದ ಕೋಣಗಳು, ಕೋಳಿ ಅಂಕ, ಹುಲಿ ವೇಷ, ಆಟಿ ಕಳಂಜದ ಜತೆಗೆ ಮಹಿಷಾಸುರ ಮರ್ಧಿನಿಯ ಟ್ಯಾಬ್ಲೋಗಳು ವಿಶೇಷ ಆಕರ್ಷಣೆ ನೀಡಿದವು.

ಉಳಾಯಿಬೆಟ್ಟು ತಂಡದ ಎತ್ತಿನಗಾಡಿಯನ್ನು ಪ್ರತಿಬಿಂಬಿಸುವ ಟ್ಯಾಬ್ಲೋ, ಸುಳ್ಯ ಪಣ್ಣ ಪಂಚಾಯತ್ ನಿಂದ ಕಂಬಳದ ಪ್ರತಿಕೃತಿಗಳು ಪಥ ಸಂಚಲದಲ್ಲಿ ಪಾಲು ಪಡೆದರೆ, ಮುನ್ನೂರು ಉಳ್ಳಾಲ ತಂಡವು ಕೃಷಿ ಕಂಬಳವನ್ನು ಪ್ರತಿನಿಧಿಸಿತು. ಮಿತ್ತೂರಿನ ತಂಡವು ಸಂವಿಧಾನದ ಪೀಠಿಕೆಯ ಮೂಲಕ ಗಮನ ಸೆಳೆದರೆ, ಹಾರಾಡಿ ಗ್ರಾ.ಪಂ. ತಂಡವು ಮದುವೆ ದಿಬ್ಬಣದೊಂದಿಗೆ ಪಥ ಸಂಚಲದಲ್ಲಿ ಭಾಗಿಯಾಗಿ ಪೌರೋಹಿತ್ಯದಲ್ಲಿ ನಡೆಯುವ ಕರಾವಳಿಯ ಮದುವೆ ಆಚರಣೆಯನ್ನು ವೇದಿಕೆಯ ಎದುರು ಪ್ರಸ್ತುತ ಪಡಿಸಿತು. ಮುದ್ರಾಡಿ ಗ್ರಾ.ಪಂ. ಯಕ್ಷಗಾನ ಹಾಗೂ ಆಟಿಕಳಂಜ ಸಂಸ್ಕೃತಿಯನ್ನು ಪ್ರತಿಬಿಂಬಿಸಿದರೆ, ಕುತ್ಯಾರು ತಂಡ ದೇಶದ ರಕ್ಷಣೆಯ ಸೈನಿಕರ ಗಾಂಭೀರ್ಯವನ್ನು ಪ್ರದರ್ಶಿಸಿದರು. ಕಾರ್ಕಳ ಕುಕ್ಕುಂದೂರು ತಂಡ ಕೃಷಿ ಸಂಸ್ಕೃತಿಯನ್ನು ಬಿಂಬಿಸಿಕೊಂಡು ಕರಾವಳಿಯ ಜಾನಪದ ಕ್ರೀಡೆಗಳಲ್ಲಿ ಒಂದಾಗಿರುವ ಕೋಳಿ ಅಂಕದ ಪ್ರದರ್ಶನವನ್ನು ವೇದಿಕೆ ಎದುರು ತೋರ್ಪಡಿಸಿದರು. ಬೆಳ್ತಂಗಡಿ ನಾರಾವಿಯ ತಂಡ ಶೋಷಣೆ ಮುಕ್ತ ಬದುಕನ್ನು ಪ್ರತಿಬಿಂಬಿಸುವ ನಿಟ್ಟಿನಲ್ಲಿ ಅಂಬೇಡ್ಕರ್‌ರವರ ಸ್ತಬ್ಧಚಿತ್ರದ ಮೂಲಕ ಗಮನ ಸೆಳೆಯಿತು.

ಉಳಿದಂತೆ ಅಮ್ಮುಂಜೆ, ಅರಂತೋಡು, ಸಂಪಾಜೆ, ಸಾಲಿಗ್ರಾಮ ಪಟ್ಟಣ ಪಂ., ಹೆಜಮಾಡಿ, ಮುದ್ರಾಡಿ, ಕೆರಾಡಿ, ಗಂಗೊಳ್ಳಿ, ಬೈಂದೂರು, ಹೊಂಬಾಡಿ-ಮಂಡಾಡಿ, ತೆಂಕ, ತೆಕ್ಕಟ್ಟೆ, ಜಾಲ್ಸೂರು, ಕೆಮ್ಮಣ್ಣು, ಕಾಲಾವರ, ಅರೆಹಳ್ಳಿ, ಬಾರ್ಕೂರು, 34 ನೆಕ್ಕಿಲಾಡಿ, ಬನ್ನೂರು, ಕೊಡೆಂಬಾಡಿ, ಆರ್ಯಾಪು, ಉಚ್ಚಿಲ, ಕೋಟೆತಟ್ಟು ಮೊದಲಾದ ತಂಡಗಳು ಆಕರ್ಷಣೆ ಪಥ ಸಂಚಲನೆಯ ಮೂಲಕ ಅತಿಥಿಗಳಿಗೆ ಗೌರವ ವಂದನೆ ನೀಡಿದರು.

ಮಂಗಳೂರು ಮಹಾನಗರ ಪಾಲಿಕೆಯ ತಂಡದಿಂದ ನೃತ್ಯ, ಕೋಲಾಟ, ಪೂಜಾಕುಣಿತ, ವೀರಗಾಸೆ, ಹುಲಿಕುಣಿತ, ಮಹಿಷಾಸುರಮರ್ಧಿನಿ ಪ್ರಾತ್ಯಕ್ಷಿಕೆಯೊಂದಿಗೆ ವೈವಿಧ್ಯತೆಯನ್ನು ಪ್ರದರ್ಶಿಸುವ ಜತೆಗೆ ಪೌರ ಕಾರ್ಮಿಕರು ಪಥ ಸಂಚಲನ ದಲ್ಲಿ ಹೆಜ್ಜೆ ಹಾಕಿದರು. ಸಹ್ಯಾದ್ರಿ ಕಾಲೇಜಿನ ಹಿಂಬದಿಯ ನೇತ್ರಾವತಿ ನದಿಯ ತಟದಲ್ಲಿ ಪ್ರಾಕೃತಿಕ ರಮಣೀಯ ವಿಶಾಲವಾದ ಮೈದಾನದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ತಂತ್ರಜ್ಞಾನದಿಂದ ಆರೋಗ್ಯ ಕ್ಷೇತ್ರದಲ್ಲಿ ಅಭಿವೃದ್ಧಿ

ಮೂಡುಬಿದಿರೆ: ಆಳ್ವಾಸ್ ಅಲೈಡ್ ಹೆಲ್ತ್ ಸೈನ್ಸ್ ಕಾಲೇಜಿನ ಹಾಸ್ಪಿಟಲ್ ಅಡ್ಮಿನಿಸ್ಟ್ರೇಷನ್ ವಿಭಾಗದ ವತಿಯಿಂದ 'ಇನ್ಸ್ಪೀರಿಯಾ – 2025' ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಿತು.

ವಿದ್ಯಾಗಿರಿಯ ಕುವೆಂಪು ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಪಾನ್ ಮೂಲದ ಸಕ್ರಾ ವರ್ಲ್ಡ್ ಹಾಸ್ಪಿಟಲ್‌ನ ವ್ಯವಸ್ಥಾಪಕ ನಿರ್ದೇಶಕ ಡಾ. ಯುಚಿ ನಗಾನೊ ಮುಖ್ಯ ಅತಿಥಿಯಾಗಿ ಮಾತನಾಡಿ, ಕೃತಕ ಬುದ್ಧಿಮತ್ತೆ ಹಾಗೂ ಇನ್ನಿತರ ತಂತ್ರಜ್ಞಾನಗಳ ಪ್ರಗತಿಯೊಂದಿಗೆ ಆರೋಗ್ಯ ನಿರ್ವಹಣಾ ಕ್ಷೇತ್ರವು ಬಹಳಷ್ಟು ಮುಂದುವರಿದಿದೆ. ವೈದ್ಯಕೀಯ ಕ್ಷೇತ್ರವು ಸೋಂಕುಗಳನ್ನು ತಡೆಗಟ್ಟಿ ರೋಗಿಯ ಚೇತರಿಕೆಗೆ ಗಮನ ನೀಡುವುದರೊಂದಿಗೆ ಆಸ್ಪತ್ರೆಗಳು ಮನೆಯ ವಾತಾವರಣವನ್ನು ಕಲ್ಪಿಸಿಕೊಡುವಂತಿರಬೇಕು. ಆಸ್ಪತ್ರೆ ನಿರ್ವಹಣೆಯ ಕುರಿತು ಸೂಕ್ಷ್ಮ ದೃಷ್ಟಿ ಬೆಳೆಸಿಕೊಳ್ಳಲು ನಮ್ಮಲ್ಲಿರುವ ಜ್ಞಾನ, ಕನಸುಗಳು ಹಾಗೂ ಆಶಯಗಳನ್ನು ಇತರರೊಂದಿಗೆ ಹಂಚಿಕೊಳ್ಳಬೇಕು ಎಂದರು.

ಆಸ್ಪತ್ರೆ ನಿರ್ವಹಣೆಯಲ್ಲಿ ನೈತಿಕ ನಾಯಕತ್ವ ವಿಷಯದ ಕುರಿತು ಫಾದರ್ ಮುಲ್ಲರ್ ಮೆಡಿಕಲ್ ಕಾಲೇಜಿನ ವ್ಯವಸ್ಥಾಪಕ ರೆವರೆಂಡ್ ಫಾದರ್ ಅಜಿತ್ ಎಂ ಮಿನೇಜಸ್, ಆರೋಗ್ಯ ನಿರ್ವಹಣಾ ಕ್ಷೇತ್ರದಲ್ಲಿ ಆಗುತ್ತಿರುವ ಕ್ರಿಯಾತ್ಮಕ ಬದಲಾವಣೆಯ ಕುರಿತು ಎ.ಜೆ ಹಾಸ್ಪಿಟಲ್‌ನ ವೈದ್ಯಕೀಯ ನಿರ್ದೇಶಕ ಡಾ. ಪ್ರಶಾಂತ್ ಮಾರ್ಲಾ ಕೆ., ನಾಯಕತ್ವದಲ್ಲಿ ನಾವಿನ್ಯತೆಯ ಕುರಿತು ಯೇನ ಪೋಯಾ ಕಾಲೇಜ್ ಆಫ್ ಅಲೈಡ್ ಹೆಲ್ತ್ ಸೈನ್ಸ್‌ನ ಡೀನ್ ಡಾ. ಸುನಿತಾ ಸಲ್ಡಾನ, ಆಸ್ಪತ್ರೆ ನಿರ್ವಹಣೆ ಹಾಗೂ ಮಂಡಳಿಯ ನಾಯಕತ್ವದ ಕುರಿತು ಬೆಂಗಳೂರಿನ ಸ್ಪರ್ಶ್ ಗ್ರೂಪ್ ಆಫ್ ಹಾಸ್ಪಿಟಲ್ಸ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜೋಸೆಫ್ ಪಸಂಗ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದರು.

ಆಳ್ವಾಸ್ ಅಲೈಡ್ ಹೆಲ್ತ್ ಸೈನ್ಸ್ ಕಾಲೇಜಿನ ಹಾಸ್ಪಿಟಲ್ ಅಡ್ಮಿನಿಸ್ಟ್ರೇಷನ್ ವಿಭಾಗದ ವತಿಯಿಂದ 'ಇನ್ಸ್ಪೀರಿಯಾ – 2025' ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಿತು.

> **ಹೆಚ್ಚಿನ ಆಸ್ಪತ್ರೆಗಳನ್ನು ಕಾರ್ಪೋರೇಟ್ ಸಂಸ್ಥೆಗಳು ನಿರ್ವಹಿಸುವುದರಿಂದ ಜನಸಾಮಾನ್ಯರಿಗೆ ವ್ಯವಸ್ಥೆಗಳು ಬಳಸಿಕೊಳ್ಳಲು ಅನುಕೂಲಕರವಾಗಿಲ್ಲ. ಆಸ್ಪತ್ರೆಯ ನಿರ್ವಾಹಕರು ರೋಗಿಗಳ ಮೇಲೆ ಸಹಾನುಭೂತಿಯ ಮನೋಭಾವ ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಹೊಸ ವಿಷಯಗಳನ್ನು ತಿಳಿದುಕೊಳ್ಳುವ ಹಸಿವು ಹೆಚ್ಚಾಗಬೇಕು.**
> **-ವಿವೇಕ್ ಆಳ್ವ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ**

ಉದ್ಘಾಟನಾ ಕರ್ಯಕ್ರಮದಲ್ಲಿ ಮಾಹೆಯ ಹಾಸ್ಪಿಟಲ್ ಅಡ್ಮಿನಿಸ್ಟ್ರೇಷನ್ ವಿಭಾಗದ ಮುಖ್ಯಸ್ಥೆ ಡಾ ಉಷಾರಾಣಿ, ಸಕ್ರಾ ವಲ್ಡ್ ಹಾಸ್ಪಿಟಲ್‌ನ ನಿರ್ದೇಶಕಿ ನೀತಾ ವೇಗಸ್ ಇದ್ದರು. ರಾಷ್ಟ್ರದ ವಿವಿಧ ಭಾಗಗಳಿಂದ 300ಕ್ಕೂ ಅಧಿಕ ವಿದ್ಯಾರ್ಥಿಗಳು ಕರ್ಯಕ್ರಮದಲ್ಲಿ ಪಾಲ್ಗೊಂಡರು. ಸಮಾರೋಪ ಕರ್ಯಕ್ರಮದಲ್ಲಿ ಆಳ್ವಾಸ್ ಹೆಲ್ತ್ ಸೆಂಟರ್‌ನ ಸ್ತ್ರೀರೋಗ ತಜ್ಞೆ ಡಾ ಹನಾ ಶೆಟ್ಟಿ, ಉದ್ಯಮಿ ರಾಹುಲ್ ಇದ್ದರು. ಪೋಸ್ಟರ್ ಪ್ರಸ್ತುತಿ ಸ್ಪರ್ಧೆಯ ಸ್ನಾತಕೋತ್ತರ ವಿಭಾಗದಲ್ಲಿ ಡಾ ಟೋಬಿ ಟಾಮ್ ಪ್ರಥಮ, ಅಪರ್ಣ ವಿಕೆ ದ್ವಿತೀಯ, ಸ್ನಾತಕ ವಿಭಾಗದಲ್ಲಿ ತುಳಸಿ ಪ್ರಥಮ, ಫಾತಿಮಾ ಸೈಮಾ ದ್ವಿತೀಯ ಸ್ಥಾನ ಪಡೆದರು. ಕಾರ್ಯಕ್ರಮದಲ್ಲಿ ವಿಭಾಗ ಮುಖ್ಯಸ್ಥ ಪ್ರೊ. ಆದರ್ಶ ಹೆಗ್ಡೆ ಅವರ ಲೀಡ್ ಟು ಹೀಲ್ ಎಂಬ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು. ಉಪನ್ಯಾಸಕಿ ನಿಧಿ ವಂದಿಸಿದರು, ವಿದ್ಯಾರ್ಥಿನಿ ವರ್ಷಿಣಿ ಕಾರ್ಯಕ್ರಮ ನಿರೂಪಿಸಿದರು.

ಬಟ್ಟೆ ಚೀಲ ಬಳಸುವಂತೆ ಜಾಗೃತಿ

ಶ್ರೀಅಂಬಾಮಹೇಶ್ವರಿ ಸೇವಾ ಟ್ರಸ್ಟ್ ತನ್ನ ಪರಿಸರದ ನಿವಾಸಿಗಳಿಗೆ ಸುಮಾರು 5000 ಬಟ್ಟೆ ಚೀಲಗಳನ್ನು ವಿತರಿಸಿದರು.

ಮಂಗಳೂರು: ನಗರದ 3 ವಾರ್ಡ್ ಗಳಾದ ಮಂಗಳಾದೇವಿ, ಬೋಳಾರ ಹಾಗೂ ಹೊಯಿಗೆಬಜಾರ್ ವಾರ್ಡ್ ಗಳನ್ನು ಮಾದರಿ ವಾರ್ಡ್ ಮಾಡುವ ನಿಟ್ಟಿನಲ್ಲಿ ಹಲವಾರು ಯೋಜನೆ, ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿರುವ ಶ್ರೀಅಂಬಾಮಹೇಶ್ವರಿ ಸೇವಾ ಟ್ರಸ್ಟ್ ಈಗ ಏಕ ಬಳಕೆಯ ಪ್ಲಾಸ್ಟಿಕ್ ಚೀಲಗಳ ಉಪಯೋಗ ಕಡಿಮೆ ಮಾಡಲು ತನ್ನ ಪರಿಸರದ ನಿವಾಸಿಗಳಿಗೆ ಸುಮಾರು 5000 ಬಟ್ಟೆ ಚೀಲಗಳನ್ನು ವಿತರಿಸುವ ವಿಶೇಷ ಹೆಜ್ಜೆಯನ್ನಿಟ್ಟಿದೆ.

ಇದರ ಪ್ರಥಮ ಹಂತವಾಗಿ ಕಳೆದ ಒಂದು ವರ್ಷದಿಂದ ಶ್ರೀಅಂಬಾಮಹೇಶ್ವರಿ ಭಜನಾ ಮಂಡಳಿಯ ಪ್ರಸಾದವನ್ನು ಬಟ್ಟೆ ಚೀಲಗಳಲ್ಲಿಯೇ ಕೊಡುತ್ತಾ ಬಂದಿರುತ್ತದೆ. ಈಗ ಇನ್ನೂ ಒಂದು ಹೆಜ್ಜೆ ಮುಂದೆ ಇಡುತ್ತಾ 2024ರ ಫೆ.16ರಂದು ನಡೆದ ಶ್ರೀಅಂಬಾಮಹೇಶ್ವರಿ ಭಜನಾ ಮಂಡಳಿಯ 71ನೇ ವಾರ್ಷಿಕ ಏಕಾಹ ಭಜನೋತ್ಸವದಲ್ಲಿ ಸಾರ್ವಜನಿಕರಿಗೆ ಪ್ರಸಾದವನ್ನು ಬಟ್ಟೆ ಚೀಲಗಳಲ್ಲಿ ಕೊಟ್ಟಿದ್ದಲ್ಲದೆ, ಭಜನೆಯಲ್ಲಿ ಪಾಲ್ಗೊಂಡ ಇತರೆ 20 ಭಜನಾ ಮಂಡಳಿಗಳ ಭಜಕರಿಗೆ ಬಟ್ಟೆ ಚೀಲಗಳನ್ನು ವಿತರಿಸಿ, ಅವರಿಗೆ ಅವರವರ ಮನೆಗಳಲ್ಲಿ ಹಾಗೂ ಅವರ ಮಂಡಳಿಯ ಕಾರ್ಯಕ್ರಮಗಳಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಉಪಯೋಗ ಕಡಿಮೆ ಮಾಡಿ ಬಟ್ಟೆ ಚೀಲಗಳನ್ನೇ ಹೆಚ್ಚಾಗಿ ಉಪಯೋಗಿಸುವಂತೆ ವಿನಂತಿಸಲಾಯಿತು.

ಇದುವರೆಗೆ ಒಟ್ಟು ಸುಮಾರು 3700 ದಷ್ಟು ಚೀಲಗಳನ್ನು ವಿತರಿಸಲಾಗಿದ್ದು; ಮುಂದಿನ ಹಂತಗಳಲ್ಲಿ ತನ್ನ ಸುತ್ತಲಿನ ಪರಿಸರಗಳಾದ ಅರೆಕೆರೆಬೈಲು, ಗೋರಕ್ಷದಂಡು ಹಾಗೂ ಮುಳಿಹಿತ್ಲು ಪ್ರದೇಶದ ನಿವಾಸಿಗಳಿಗೆ ಬಟ್ಟೆ ಚೀಲಗಳನ್ನು ವಿತರಿಸಿ ಪರಿಸರವನ್ನು ಸಂರಕ್ಷಿಸುವಂತೆ ಜಾಗೃತಿ ಮೂಡಿಸಲು ಯೋಜನೆಯನ್ನು ರೂಪಿಸಲಾಗಿದೆ ಎಂದು ಸೇವಾ ಟ್ರಸ್ಟ್ ನ ಅಧ್ಯಕ್ಷರಾದ ಶ್ರೀಸೀತಾರಾಮ್ ಎ ರವರು ಪತ್ರಿಕೆಗೆ ತಿಳಿಸಿದರು.

ಮುಂದೆ ಅವೇಕ್ ಕುಡ್ಲ ಎಂಬ ವಿಶೇಷ ಯೋಚನೆ, ಯೋಜನೆ ಜಾರಿಗೊಳ್ಳಲಿದ್ದು; ಇದರ ಅಡಿಯಲ್ಲಿ ಮಾದರಿ ವಾರ್ಡ್ ಗಳ ಎಲ್ಲಾ ಧಾರ್ಮಿಕ ಕೇಂದ್ರಗಳನ್ನು ಸಂಪರ್ಕಿಸಿ ಅಲ್ಲಿ ಕಡ್ಡಾಯವಾಗಿ ಬಟ್ಟೆ ಚೀಲಗಳನ್ನೇ ಉಪಯೋಗಿಸಿವಂತೆ ಮಾಡಲು ಅಭಿಯಾನ ಹಮ್ಮಿಕೊಳ್ಳಲಾಗುವುದು.

> **ಶೇ.100ರಷ್ಟು ಬಟ್ಟೆ ಬಳಕೆ**
> ಹಲವೆಡೆ ಬಟ್ಟೆ ಚೀಲ ಎಂದು ಹೇಳಿ ಪ್ಲಾಸ್ಟಿಕ್ ಮಿಶ್ರಿತ ಬಟ್ಟೆ ಚೀಲಗಳನ್ನು ಕೊಡುವುದು ಸಾಮಾನ್ಯವಾಗಿ ಬಿಟ್ಟಿದೆ. ಆದರೆ ಇಲ್ಲಿನ ಬಟ್ಟೆ ಚೀಲಗಳು ನೂರು ಪ್ರತಿಶತ ಕೇವಲ ಬಟ್ಟೆಯನ್ನು ಉಪಯೋಗಿಸಲಾಗಿದೆ. ಅಲ್ಲದೆ ಜನರಿಗೆ ಇದನ್ನು ಪಯೋಗಿಸುವಾಗ ಮುಜುಗರವಾಗದಂತೆ ಚೀಲದಲ್ಲಿ ಮಂಡಳಿಯ ಹೆಸರನ್ನಾಗಲೀ, ಸೇವಾ ಟ್ರಸ್ಟಿನ ಹೆಸರನ್ನಾಗಲೀ ಮುದ್ರಿಸದೆ ವಿವಿಧ ಅಳತೆಯ ಸರಳ ಬಟ್ಟೆ ಚೀಲಗಳನ್ನೇ ನೀಡಿದ್ದು ವಿಶೇಷವಾಗಿತ್ತು.

ಫೆ.25ರಂದು ಆಯುರ್ವೇದ ಆಸ್ಪತ್ರೆ ಉದ್ಘಾಟನೆ

ಕೊಣಾಜೆ: ನಾಟೆಕಲ್ ಕಣಚೂರು ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ದಶಮಾನೋತ್ಸವ ಪೂರೈಸುತ್ತಿರುವ ಸುಸಂದರ್ಭದಲ್ಲಿ ಮೈಲುಗಲ್ಲಾಗಿ ಫೆ.25 ರಂದು ಕಣಚೂರು ಆಯುರ್ವೇದ ಆಸ್ಪತ್ರೆ, ಕಣಚೂರು ಫಾರ್ಮಸಿ ಕಾಲೇಜು, 1000 ಆಸನವುಳ್ಳ ಸುಸಜ್ಜಿತ ಆಡಿಟೋರಿಯಂ, ಆಸ್ಪತ್ರೆ ಸ್ಥಾಪಕ ಡಾ.ಕಣಚೂರು ಮೋನು ಇವರ ಆತ್ಮಚರಿತ್ರೆ ಪುಸ್ತಕ ಅನಾವರಣ ಹಾಗೂ ಹೃದಯ ಸಂಬಂಧಿ ಕಾಯಿಲೆಗಳ ಚಿಕಿತ್ಸೆಗಾಗಿ ಇಂಟರ್ ವೆನ್ಷನಲ್ ಕೆಥಟರೈಝೇಷನ್ ಲ್ಯಾಬ್ ಸಹಿತ ಲೆವೆಲ್ 3 ಐಸಿಯು ಹಾಗೂ ಶಸ್ತ್ರಚಿಕಿತ್ಸಾ ಘಟಕಗಳ ಉದ್ಘಾಟನೆ ನಡೆಯಲಿದೆ ಎಂದು ಕಣಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಆಡಳಿತ ನಿರ್ದೇಶಕ ಕಣಚೂರು ಅಬ್ದುಲ್ ರೆಹಮಾನ್ ಹೇಳಿದರು.

ಅವರು ಕಣಚೂರು ಆಸ್ಪತ್ರೆ ಹಾಗೂ ವೈದ್ಯಕೀಯ ಕಾಲೇಜು ಸಭಾಂಗಣದಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಫೆ.25 ರಂದು ನಡೆಯಲಿರುವ ಸಮಾರಂಭದಲ್ಲಿ ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇವರು ಇಂಟರ್ ವೆನ್ಷನಲ್ ಕೆಥಟರೈಝೇಷನ್ ಲ್ಯಾಬ್, ಲೆವೆಲ್ 3 ಐಸಿಯು ಮತ್ತು ಶಸ್ತ್ರ ಚಿಕಿತ್ಸಾ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ.

ಕೊಣಾಜೆಯ ನಾಟೆಕಲ್ ಕಣಚೂರು ಆಸ್ಪತ್ರೆ

ವಿಧಾನಸಭಾ ಸ್ಪೀಕರ್ ಯು.ಟಿ.ಖಾದರ್ ಕಣಚೂರು ಕಾನ್ಫರೆನ್ಸ್ ಸಭಾಂಗಣ ಹಾಗೂ ಕಣಚೂರು ಸ್ಥಾಪಕ ಯು.ಕಣಚೂರು ಮೋನು ಇವರ ಆತ್ಮಚರಿತ್ರೆ ಪುಸ್ತಕದ ಅನಾವರಣಗೊಳಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಕಣಚೂರು ಆಯುರ್ವೇದ ಆಸ್ಪತ್ರೆಯ ನೂತನ ಕಟ್ಟಡ ಹಾಗೂ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್ ಕಣಚೂರು ಫಾರ್ಮಸಿ ಕಾಲೇಜು ಉದ್ಘಾಟಿಸಲಿದ್ದಾರೆ. ಸ್ಥಾಪಕ ಯು.ಕಣಚೂರು ಮೋನು ಇವರ ಆತ್ಮಚರಿತ್ರೆಯನ್ನು ಮುಳಿಯ ಶಂಕರ್ ಭಟ್ ಇವರು ಬರೆದಿದ್ದು, ಆಂಗ್ಲ ಭಾಷೆಗೆ ಬಾಲಕೃಷ್ಣ ಹೊಸಮಣಿ ಇವರು ತರ್ಜುಮೆ ನಡೆಸಿದ್ದಾರೆ. ಒಟ್ಟು 382 ಪುಟಗಳ ಸುದೀರ್ಘ ಜೀವನ ಚರಿತ್ರೆಯನ್ನು ಪುಸ್ತಕ ಒಳಗೊಂಡಿದೆ ಎಂದರು.

ವೈದ್ಯಕೀಯ ಕಾಲೇಜುಗಳ ಡೀನ್ ಶಹನವಾಝ್ ಮಾಣಿಪ್ಪಾಡಿ ಕಾರ್ಯಕ್ರಮಗಳ ವಿವರ ನೀಡಿ ದ.ಕ ಜಿಲ್ಲಾ ಸಂಸದ ಕ್ಯಾ. ಬ್ರಿಜೇಶ್ ಚೌಟ ಮತ್ತು ಮಾಜಿ ಸಚಿವೆ ಮೋಟಮ್ಮ ಅವರ ಉಪಸ್ಥಿತಿಯನ್ನು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಆಡಳಿತಾಧಿಕಾರಿ ಡಾ. ರೋಹನ್ ಮೋನಿಸ್, ಕಣಚೂರು ವೈದ್ಯ ವಿಜ್ಞಾನಗಳ ಸಲಹಾ ಸಮಿತಿ ಡಾ. ವೆಂಕಟರಾಯ ಪ್ರಭು ಉಪಸ್ಥಿತರಿದ್ದರು.

ಫೆ.24ರಿಂದ ಉಚಿತ ಸಹಸ್ರಲಿಂಗ ದರ್ಶನ

ಮಂಗಳೂರು: ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಮಂಗಳೂರು ಇದರ ವತಿಯಿಂದ ಮಹಾ ಶಿವರಾತ್ರಿ ಅಂಗವಾಗಿ ಫೆ.24ರಿಂದ 28ರವರೆಗೆ ಬೆಳಗ್ಗೆ 9ರಿಂದ ರಾತ್ರಿ 8ರವರೆಗೆ ನಗರದ ಕದ್ರಿ ಮೈದಾನದಲ್ಲಿ ಉಚಿತ ಸಹಸ್ರ ಲಿಂಗ ದರ್ಶನ ಏರ್ಪಡಿಸಲಾಗಿದೆ.ಪ್ರತೀ ದಿನ ಬೆಳಗ್ಗೆ 7ರಿಂದ 8ರವರೆಗೆ ಹಾಗೂ ಸಾಯಂಕಾಲ 6 ರಿಂದ 7ರವರೆಗೆ ಶಿವಧ್ಯಾನ ಶಿಬಿರ ಹಾಗೂ ಆಧ್ಯಾತ್ಮಿಕ ಚಿತ್ರ ಪ್ರದರ್ಶನ ನಡೆಯಲಿದೆ. ಫೆ.24ರಂದು ಸಾಯಂಕಾಲ 5ಕ್ಕೆ ಕದ್ರಿ ಶ್ರೀಮಂಜುನಾಥ ದೇವಸ್ಥಾನದ ಅರ್ಚಕ ಶ್ರೀ ಕೃಷ್ಣ ಅಡಿಗ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಜಾನಪದ ವಿದ್ವಾಂಸ ಕೆ.ಕೆ.ಪೇಜಾವರ, ಉದ್ಯಮಿ ರಾಜ್‌ಕುಮಾರ್ ಶೆಟ್ಟಿ ತಿರುವೈಲುಗುತ್ತು ಮುಖ್ಯ ಅತಿಥಿಗಳಾಗಿ ಭಾಗವಹಿಸ ಲಿದ್ದಾರೆ. ಬ್ರಹ್ಮಕುಮಾರಿ ವಿಶ್ವೇಶ್ವರಿ ಶಿವ ಸಂದೇಶ ನೀಡಲಿದ್ದಾರೆ. ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಸುರತ್ಕಲ್ ಇದರ ವತಿಯಿಂದ ಮಹಾ ಶಿವರಾತ್ರಿ ಅಂಗವಾಗಿ ಫೆ.23ರಿಂದ 28ರವರೆಗೆ ಬೆಳಗ್ಗೆ 9ರಿಂದ ರಾತ್ರಿ 8ರವರೆಗೆ ಸುರತ್ಕಲ್‌ನ ಕಾಂತೇರಿ ಧೂಮಾವತಿ ದೈವಸ್ಥಾನದ ಬಳಿಯ ಕರ್ನಾಟಕ ಸೇವಾವೃಂದದ ಸಭಾಂಗಣದಲ್ಲಿ ಉಚಿತ ಅಮರನಾಥ ಶಿವಲಿಂಗ ದರ್ಶನ ಏರ್ಪಡಿಸಲಾಗಿದೆ.

ಭದ್ರತೆಗೆ ಕ್ಷತ್ರಿಯರ ಕೊಡುಗೆ ಅಪಾರ

ಮಂಗಳೂರು: ರಾಮಕ್ಷತ್ರಿಯ ಸೇವಾ ಸಂಘ(ರಿ) ಮಂಗಳೂರು ಇದರ ನೇತೃತ್ವದಲ್ಲಿ ಮೋರ್ಗನ್ಸ್ ಗೇಟ್‌ನಲ್ಲಿರುವ ಪಾಲೆಮಾರ್ ಗಾರ್ಡನ್ ನಲ್ಲಿ ''ಕ್ಷಾತ್ರ ಸಂಗಮ-3'' ರಾಮಕ್ಷತ್ರಿಯರ ಸಮಾವೇಶದ ಉದ್ಘಾಟನೆ ನಡೆಯಿತು. ಯೋಗೀಶ್ ಕುಮಾರ್ ಜೆಪ್ಪುರವರು ಪ್ರಸ್ತಾವಿಕ ಭಾಷಣ ಮಾಡಿದರು. ಉಧ್ಘಾಟಿಸಿ ಮಾತನಾಡಿದ ಮಾಜಿ ಸಚಿವ ಕೃಷ್ಣ ಪಾಲೆಮಾರ್ ಈ ಕಾರ್ಯಕ್ರಮ ಕ್ಷತ್ರಿಯ ಸಂಗಮದ ಹೆಗ್ಗುರುತು ಹಿಂದಿನ ಕಾಲದಲ್ಲಿ ನಾಲ್ಕು ಪಂಡಗಳಿದ್ದೂ ಇವತ್ತೂ ನೂರಾರು ಪಂಗಡಗಳಾಗಿವೆ.ರಾಜ್ಯದಲ್ಲಿ 39 ಪಂಗಡ ಗಳಿವೆ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಒಗ್ಗೂಡಬೇಕು,ಇದು ಇಲ್ಲಿಗೆ ಮಾತ್ರ ನಿಲ್ಲದೆ ಪ್ರತಿ ಜಿಲ್ಲೆಯಲ್ಲಿ ಕ್ಷಾತ್ರ ಸಂಗಮ ನಡೆಸಿ ಒಗ್ಗೂಡಿಸಬೇಕು. ನಮ್ಮ ನಿಷ್ಠಾವಂತ ಸಮಾಜದಲ್ಲಿ ಪೊಲಿಸ್ ಇಲಾಖೆಯ ಇದ್ದು ಎಲ್ಲಾ ನಾಯಕರು ಮುಂದೆಬರಬೇಕು,ಹುಟ್ಟಿದ ಮೇಲೆ ಸಮಾಜಕ್ಕೆ ಕೊಡುಗೆ ಕೊಡಬೇಕು, ದೇಶಭಕ್ತಿ,ದೈವ ಭಕ್ತಿಯನ್ನು ನೀಡಬೇಕು,ಮುಂದಿನ ದಿನಕ್ಕೆ ಒಗ್ಗಟ್ಟಿನ ಮಂತ್ರದೊಂದಿಗೆ ಈ ಕ್ಷಾತ್ರ ಸಂಗಮ ನಿರಂತರವಾಗಿ ನಡೆಯಲಿ ಎಂದು ಆಶಿಸಿದರು. ಬಳಿಕ ಮಾತನಾಡಿದ ವಾಗ್ಮಿ ಶ್ರೀಕಾಂತ್ ಶೆಟ್ಟಿ ಅವರು ಮಾತನಾಡಿದರು. ವೇದಿಕೆಯಲ್ಲಿ ಅಧ್ಯಕ್ಷ ಸಿ.ಚ್ ಮುರಳಿಧರ್,ಯೋಗಿಶ್ ಜೆಪ್ಪು,ವಿನೋದ್ ಕುಮಾರ್ ,ಅನಂತ ಪದ್ಮನಾಭ, ಸಂದೀಪ್ ಜೆ,ರಾಘವೇಂದ್ರ ರಾವ್ ,ರಾಮಕ್ಷತ್ರಿಯ ಒಕ್ಕೂಟದ ಅಧ್ಯಕ್ಷ ಸುರೇಶ್ ರಾವ್,ದಿನೇಶ್ ಲೆಕ್ಕಪರಿಶೋಧಕ ಶಿವಪ್ರಸಾದ್ ಉಪಸ್ಥಿತರಿದ್ದರು.

ಕೌಶಲ ಕಲಿಕೆಯಿಂದ ಉದ್ಯೋಗ ಅವಕಾಶ

ಮಂಗಳೂರು: ವರ್ತಮಾನ ಯುಗದಲ್ಲಿ ಅತ್ಯಂತ ಪ್ರಾಶಸ್ತ್ಯವನ್ನು ಹೊಂದಿರುವ ಂತಹ ತಂತ್ರಜ್ಞಾನ ಕೌಶಲಗಳೊಂದಿಗೆ ಉತ್ತಮ ಉದ್ಯೋಗವಕಾಶದ ಸಾಧ್ಯತೆಗಳು ಇರುವ ಕಾರಣ ವಿದ್ಯಾರ್ಥಿಗಳು ಈ ಸದವಕಾಶಗಳನ್ನು ತಮ್ಮದಾಗಿಸಿಕೊಳ್ಳಬೇಕು ಎಂಬುದಾಗಿ ನಗರದ ಕೆನರಾ ಎಂಜಿನಿಯರಿಂಗ್ ಕಾಲೇಜಿನ ಇನ್‌ಫಾರ್ಮೆಷನ್ ಸೈನ್ಸ್ ಮತ್ತು ಇಂಜಿನಿಯರಿಂಗ್ ವಿಭಾಗದ ಅಸಿಸ್ಟೆಂಟ್ ಪ್ರೊಫೆಸರ್ ಶ್ರೀಪ್ರಶಾಂತ್ ಕುಮಾರ್ ಎ. ಅಭಿಪ್ರಾಯವಿತ್ತರು.

ಮಂಗಳೂರು ನಗರದ ಶಾರದಾ ವಿದ್ಯಾಲಯದಲ್ಲಿ ಆಯೋಜಿಸಲಾದ ಸ್ಪಾರ್ಕ್ ಟಿಂಕರ್ ಫೆಸ್ಟ್ ಎಕ್ಸಿಬಿಷನ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ದೀಪ ಪ್ರಜ್ವಲನಗೈದು ಉದ್ಘಾಟಿಸಿ ಅವರು ಮಾತನಾಡಿದರು.

ಅಂಕ ಗಳಿಕೆಯೊಂದೇ ಮಹತ್ವವಲ್ಲ, ಬದಲಾಗಿ ಕ್ರಿಯಾಶೀಲತೆಯನ್ನು ಬೆಳೆಸಿಕೊಂಡು ಈ ಜಗತ್ತಿನಲ್ಲಿ ಹೊಸ ಹೊಸ ಚಿಂತನೆ, ಆವಿಷ್ಕಾರಗಳನ್ನು ಮಾಡಿ ತೋರಿಸುವ ಮೂಲಕ ಬದಲಾವಣೆಗಳನ್ನು ತರುವ ಕೆಲಸವನ್ನು ವಿದ್ಯಾರ್ಥಿಗಳು ಮಾಡಿ ತೋರಿಸಬೇಕು. ಹೊಸ ಹೊಸ ತಂತ್ರಜ್ಞಾನದ ಕಲಿಕೆಗಳೊಂದಿಗೆ ಉತ್ತಮ ಅವಕಾಶಗಳನ್ನು ಪಡೆದು ಉಜ್ವಲ ಭವಿಷ್ಯವನ್ನು ನಿರ್ಮಿಸಿಕೊಳ್ಳಬೇಕು ಎಂಬುದಾಗಿ ಸಭಾಧ್ಯಕ್ಷತೆ ವಹಿಸಿದ್ದ ಶಾರದಾ ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಡಾ| ಎಂ.ಬಿ.ಪುರಾಣಿಕರು ವಿದ್ಯಾರ್ಥಿಗಳಿಗೆ ಕಿವಿ ಮಾತನ್ನು ಹೇಳಿದರು.

ಸ್ಪಾರ್ಕ್ ಟಿಂಕರ್ ಫೆಸ್ಟ್ ಎಕ್ಸಿಬಿಷನ್ ಅನ್ನು ಪ್ರಶಾಂತ್ ಕುಮಾರ್ ಅವರು ಉದ್ಘಾಟಿಸಿದರು.

ಶಾರದಾ ಸಮೂಹ ಸಂಸ್ಥೆಗಳ ಆಡಳಿತ ನಿರ್ದೇಶಕ ಹಾಗೂ ವಿಶ್ವಸ್ಥರಾದ ಶ್ರೀಸಮೀರ್ ಪುರಾಣಿಕ್, ವಿದ್ಯಾಲಯದ ಪ್ರಾಂಶುಪಾಲ ಶ್ರೀದಯಾನಂದ ಕಟೀಲ್ ಹಾಗೂ ಉಪಪ್ರಾಂಶುಪಾಲರಾದ ಶ್ರೀಮತಿ ಲಕ್ಷ್ಮೀ ಉಡುಪ ಹಾಗೂ ಶ್ರೀಮತಿ ಕೆ. ಲಕ್ಷ್ಮಿ ಪೈ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿದ್ಯಾಲಯದ ಶಿಕ್ಷಕಿ ಶ್ರೀಮತಿ ನೀರಜಾ ಹರೀಶ್ ಸ್ವಾಗತ, ಧನ್ಯವಾದ ಸಮರ್ಪಣೆ ಹಾಗೂ ನಿರೂಪಣೆಗೈದರು. ಟಿಂಕರಿಂಗ್ ಲ್ಯಾಬ್‌ನ ಸದಸ್ಯ ವಿದ್ಯಾರ್ಥಿಗಳು ಈ ಪ್ರದರ್ಶಿನಿಯಲ್ಲಿ ಭಾಗವಹಿಸಿ ರೋಬೋಟಿಕ್ ಮತ್ತು ಇತರ ತಂತ್ರಜ್ಞಾನ ಆಧಾರಿತ ಮಾಡೆಲ್‌ಗಳ ತಯಾ ರಿಕೆಯೊಂದಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ದಿನಾಂಕ 21 ಮತ್ತು 22ರ ಫೆಬ್ರವರಿ ಮಧ್ಯಾಹ್ನದ ವರೆಗೆ ಈ ಪ್ರದರ್ಶಿನಿವೀಕ್ಷಣೆಗೆಅವಕಾಶ ನೀಡಲಾಯಿತು.

ಕೇಂದ್ರದಿಂದ ರಾಜ್ಯಕ್ಕೆ ಹಣ ಬರುತ್ತಿಲ್ಲ: ಸಚಿವ

ಮಂಗಳೂರು: ಬಿಜೆಪಿಯವರಿಗೆ ಕೆಲಸ ಇಲ್ಲ. ಕೆಲಸ ಇಲ್ಲದೆ ಮೈ ಎಲ್ಲ ಪರಚಿಕೊಂಡ ರೀತಿ ಬಿಜೆಪಿಯ ಪರಿಸ್ಥಿತಿಯಾಗಿದೆ. ಅವರು ಮೊದಲು ಸರಕಾರದಿಂ ಕರ್ನಾಟಕಕ್ಕೆ ಎಷ್ಟು ಅನುದಾನ ಬಿಡುಗಡೆ ಮಾಡಿಸಿದ್ದಾರೆ ಎಂದು ಮೊದಲು ಉತ್ತರಿಸಲಿ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಬಿಜೆಪಿಯವರಿಗೆ ಸವಾಲು ಹಾಕಿದ್ದಾರೆ. ಮಂಗಳೂರಿನ ಸಹ್ಯಾದ್ರಿ ಕಾಲೇಜಿನಲ್ಲಿ ಹೊಂಬೆಳಕು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅವರು ಸುದ್ದಿಗಾರರ ಪ್ರಶ್ನೆ ಯೊಂದಕ್ಕೆ ಈ ಪ್ರತಿಕ್ರಿಯೆ ನೀಡಿದರು. ಕೇಂದ್ರದಿಂದ ರಾಜ್ಯಕ್ಕೆ ಹಣ ಬರುತ್ತಿಲ್ಲ. ಕೇಂದ್ರದ ಪಾಲಿನ ಹಣ ಸಹ ನಾವೇ ಕೊಡುತ್ತಿದ್ದೇವೆ ಎಂದು ಹೇಳಿದ ಅವರು, ಜಲಜೀವನ್ ಮಿಷನ್‌ನಡಿ ರಾಜ್ಯಕ್ಕೆ 36,00 ಕೋಟಿ ರೂ. ಕೇಂದ್ರ ಕೊಡಬೇಕಿತ್ತು. ನಮಗೆ ಬಂದಿರುವುದು ಕೇವಲ 517 ಕೋಟಿ ರು. ಕುಡಿಯುವ ನೀರಿನ ಯೋಜನೆಯನ್ನು ನಿಲ್ಲಿಸಬಾರದು ಎಂದು ನಮ್ಮ ರಾಜ್ಯ ಸರ್ಕಾರವೇ 2,900 ಕೋಟಿ ರೂ. ನೀಡಿದೆ. ಹೆಸರು ಮಾತ್ರ ಬಿಜೆಪಿಯವರದ್ದು, ಆದರೆ ದುಡ್ಡು ನಮ್ಮದು. ನಮಗೆ ತೆರಿಗೆ ಹಾಗೂ ಜಿಎಸ್‌ಟಿ ಪಾವತಿ ಯಲ್ಲಿ ಕೇಂದ್ರ ಅನ್ಯಾಯ ಮಾಡುತ್ತಿದೆ. ಜಿಎಸ್‌ಟಿ ಪಾವತಿಯಲ್ಲಿ ರಾಜ್ಯ ಮುಂಚೂಣಿಯಲ್ಲಿದ್ದರೂ ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಿದೆ. ಕರ್ನಾಟಕಕ್ಕೆ ಬಿಡಿಗಾಸು ನೀಡುತ್ತಿದ್ದಾರೆ. ಆದರೆ ಉತ್ತರ ಪ್ರದೇಶ, ಬಿಹಾರ್ ರಾಜ್ಯಗಳಿಗೆ ಕೋಟ್ಯಂತರ ರೂ. ಕೇಂದ್ರ ನೀಡುತ್ತಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸಮಾಚಾರ ಸಣ್ಣದಲ್ಲ

ಹೆನ್ರಿ ಅಬ್ಬರ ಆಟಕ್ಕೆ ಒಲಿದ ಜಯ

ಬೆಂಗಳೂರು: ಎಂಟು ಸಿಕ್ಸರ್ ಸಿಡಿಸಿದ ಚೈನೆಲ್ ಹೆನ್ರಿ ಅವರು ಗಳಿಸಿದ ದಾಖಲೆ ವೇಗದ ಅರ್ಧಶತಕದ ಬಲದಿಂದ ಯು.ಪಿ ವಾರಿಯರ್ಸ್ ತಂಡವು ಶನಿವಾರ ಇಲ್ಲಿ ನಡೆದ ಮಹಿಳಾ ಪ್ರೀಮಿಯರ್‌ಲೀಗ್ ಪಂದ್ಯದಲ್ಲಿ ಜಯಿಸಿತು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ನಡೆದ ಪಂದ್ಯದಲ್ಲಿ ವಾರಿಯರ್ಸ್ ತಂಡವು 33 ರನ್‌ಗಳಿಂದ ಜಯಿಸಿತು. ಪಂದ್ಯದಲ್ಲಿ ಟಾಸ್ ಗೆದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕಿ ಮೆಗ್ ಲ್ಯಾನಿಂಗ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಎಂಟನೇ ಕ್ರಮಾಂಕದ ಬ್ಯಾಟರ್ ಹೆನ್ರಿ (62; 23ಎಸೆತ) ಹೊಡೆದ ಅರ್ಧಶತಕದ ಬಲದಿಂದ ವಾರಿಯರ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 177 ರನ್ ಗಳಿಸಿತು. ಹೆನ್ರಿ ಅವರು ಕೇವಲ 18 ಎಸೆತಗಳಲ್ಲಿ 50 ರನ್ ಗಳಿಸಿದರು. ಇದರೊಂದಿಗೆ 2023ರಲ್ಲಿ ಗುಜರಾತ್ ಜೈಂಟ್ಸ್ ತಂಡದ ಸೋಫಿಯಾ ಡಂಕ್ಲಿ ಅವರು ಹೊಡೆದಿದ್ದ ಅರ್ಧಶತಕವನ್ನು ಸರಿಗಟ್ಟಿದರು. ಹೆನ್ರಿ ಅವರು ಕ್ರೀಸ್‌ಗೆ ಬರುವ ಮುನ್ನ ವಾರಿಯರ್ಸ್ ತಂಡವು ಅಲ್ಪಮೊತ್ತಕ್ಕೆ ಕುಸಿಯುವ ಆತಂಕದಲ್ಲಿತ್ತು. ಡೆಲ್ಲಿ ತಂಡದ ಜೆಸ್ ಜೊನಾಸೆನ್ (31ಕ್ಕೆ4) ಅವರ ಬೌಲಿಂಗ್ ಬಲದಿಂದ 89 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡಿತ್ತು. ತಂಡದ ಮೊತ್ತ ಶತಕದ ಗಡಿ ದಾಟುವುದೂ ಅನುಮಾನವಾಗಿತ್ತು. ಆಗ ಕ್ರೀಸ್‌ಗೆ ಬಂದ ವೆಸ್ಟ್ ಇಂಡೀಸ್‌ನ ವೇಗದ ಬೌಲರ್ ಹೆನ್ರಿ, ಬೌಲರ್‌ಗಳ ಬೆವರಳಿಸಿದರು. ಅದುವರೆಗೂ ಉತ್ತಮ ಲೈನ್, ಲೆಂಗ್ತ್ ಮೂಲಕ ಮೆರೆದಾಡಿದ್ದ ಬೌಲರ್‌ಗಳು ಹೆನ್ರಿ ಆಟಕ್ಕೆ ಬಸವಳಿದರು. 269.57ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ರನ್ ಸೂರೆ ಮಾಡಿದರು. ಅವರಿಗೆ ಸೋಫಿ ಎಕ್ಲೆಸ್ಟೋನ್ (12; 8ಎ) ಜತೆ ನೀಡಿದರು. 8ನೇ ವಿಕೆಟ್ ಜತೆಯಾಟದಲ್ಲಿ 57 ರನ್ ಸೇರಿಸಿದರು. ಇದರಿಂದಾಗಿ ವಾರಿಯರ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 177 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಡೆಲ್ಲಿ ತಂಡಕ್ಕೆ ಜೆಮಿಮಾ ರಾಡ್ರಿಗಸ್ (56; 35ಎ, 4ಗ8, 6ಗ1) ಅವರು ಗೆಲುವಿನ ಭರವಸೆ ಮೂಡಿಸಿದ್ದರು. ಆದರೆ, ವಾರಿಯರ್ಸ್ ತಂಡದ ಕ್ರಾಂತಿ ಗೌಡ್ ಮತ್ತು ಗ್ರೇಸ್ ಹ್ಯಾರಿಸ್ ಅವರು ತಲಾ 4 ವಿಕೆಟ್ ಗಳಿಸಿದರು. ಇದರಿಂದಾಗಿ ಡೆಲ್ಲಿ ತಂಡವು 19.3 ಓವರ್‌ಗಳಲ್ಲಿ 144 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ರೋಹಿತ್ ಪಡೆಗೆ ಸೇಡು ಲೆಕ್ಕ ಚುಕ್ತಾ ತವಕ, ಪಾಕ್‌ಗೆ ಮಾಡು-ಮಡಿ ಪಂದ್ಯ

ಇಂದು ಭಾರತ-ಪಾಕ್‌ನ ಹೈ ವೋಲ್ಟೇಜ್ ಕದನ

ದುಬೈ: ಸಾಂಪ್ರದಾಯಿಕ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಹೈವೋಲ್ಟೇಜ್ ಪಂದ್ಯಕ್ಕೆ ಭಾನುವಾರ ದುಬೈ ಕ್ರಿಕೆಟ್ ಅಂಗಳ ಸಾಕ್ಷಿಯಾಗಲಿದೆ. ನ್ಯೂಜಿಲೆಂಡ್ ವಿರುದ್ಧ ಈಗಾಗಲೇ ತನ್ನ ಮೊದಲನೇ ಪಂದ್ಯದಲ್ಲಿ ಸೋಲು ಅನುಭವಿಸಿದ್ದ ಪಾಕಿಸ್ತಾನ ತಂಡ, ನಾಕ್‌ಔಟ್ ಹಂತವನ್ನು ಜೀವಂತವಾಗಿರಿಸಿಕೊಳ್ಳಬೇಕೆಂದರೆ, ಭಾರತದ ಎದುರು ಗೆಲ್ಲಲೇಬೇಕಾಗಿದೆ. ಈ ಹಿನ್ನೆಲೆಯಲ್ಲಿ ಇದು ಪಾಕ್ ಪಾಲಿಗೆ ಮಾಡು ಇಲ್ಲವೆ ಮಡಿ ಪಂದ್ಯವಾಗಿದೆ.

ಟೂರ್ನಿಯ ಆತಿಥ್ಯ ಪಾಕ್ ವಹಿಸುತ್ತಿದ್ದರೂ ಭಾರತ ಪಾಕ್‌ಗೆ ತೆರಳಲು ಒಪ್ಪದ ಕಾರಣ ಭಾರತದ ಪಂದ್ಯಗಳು ದುಬೈನಲ್ಲಿ ನಡೆಯುತ್ತಿದೆ. ಇದೇ ವಿಚಾರವಾಗಿ ಉಭಯ ದೇಶಗಳ ಕ್ರಿಕೆಟ್ ತಂಡಗಳ ನಡುವೆ ಟೂರ್ನಿ ಆರಂಭಕ್ಕೂ ಮುನ್ನವೇ ಭಾರೀ ಕಿತ್ತಾಟ ನಡೆದಿತ್ತು. ಸ್ವತಃ ಪಾಕ್ ಪ್ರಧಾನಿಯೇ ತನ್ನ ಆಟಗಾರರಿಗೆ ಭಾರತವನ್ನು ಸೋಲಿಸುವಂತೆ ಕರೆ ನೀಡಿದ್ದಾರೆ. ಅಭಿಮಾನಿಗಳ ನಿರೀಕ್ಷೆ ಉತ್ತುಂಗದಲ್ಲಿರುವ ಕಾರಣ ಉಭಯ ದೇಶಗಳ ಕ್ರಿಕೆಟಿಗರಿಗೂ ಇದು ಒತ್ತಡದ ಪಂದ್ಯ. ಈ ಒತ್ತಡವನ್ನು ಮೀರಿ ಆಡುವವರಿಗೆ ಜಯ ಲಭ್ಯವಾಗಲಿದೆ. ಪಾಕಿಸ್ತಾನ ಕಳೆದ ಬಾರಿಯ ಟೂರ್ನಿಯಲ್ಲಿ ಭಾರತವನ್ನೇ ಮಣಿಸಿ ಚಾಂಪಿಯನ್ ಪಟ್ಟ ಅಲಂಕರಿಸಿತ್ತು. ಇದೀಗ ಸೇಡು ತೀರಿಸಿಕೊಳ್ಳುವ ಸುವರ್ಣಾವಕಾಶವೊಂದು ರೋಹಿತ್ ಪಡೆಗೆ ಒದಗಿ ಬಂದಿದೆ. .

ದುಬೈನಲ್ಲಿ ಪಾಕ್ ಬಲಶಾಲಿ: ದುಬೈ ಅಂಗಳ ಪಾಕ್ ಆಟಗಾರರಿಗೆ ಎರಡನೇ ತವರು ಇದ್ದಂತೆ. ಇದಕ್ಕೆ ಉತ್ತಮ ನಿದರ್ಶನ 2021 ಟಿ20 ವಿಶ್ವಕಪ್ ಟೂರ್ನಿ. ಲೀಗ್ ಹಂತದ ಪಂದ್ಯದಲ್ಲಿ ಪಾಕ್ ಭಾರತವನ್ನು 10 ವಿಕೆಟ್‌ಗಳಿಂದ ಸೋಲಿಸಿತ್ತು. ವಿಶ್ವಕಪ್‌ನಲ್ಲಿ ಪಾಕ್ ವಿರುದ್ಧ ಅಜೇಯ ದಾಖಲೆ ಹೊಂದಿರುವ ಭಾರತ ಚಾಂಪಿಯನ್ಸ್ ಟ್ರೋಫಿಯಲ್ಲಿ ಇದಕ್ಕೆ ತದ್ವಿರುದ್ಧ ದಾಖಲೆ ಹೊಂದಿದೆ. ಇದುವರೆಗಿನ 5 ಮುಖಾಮುಖಿಗಳಲ್ಲಿ ಭಾರತ ಕೇವಲ 2 ಪಂದ್ಯ ಮಾತ್ರ ಗೆದ್ದಿದೆ. ಮೂರಲ್ಲಿ ಸೋಲು ಕಂಡಿದೆ. ಹೀಗಾಗಿ ಭಾರತ ಈ ಬಾರಿ ಎಚ್ಚರಿಕೆಯಿಂದ ಆಡಬೇಕಿದೆ.

ಪಾಕ್ ಪರ ಫಖರ್ ಜಮಾನ್ ಟೂರ್ನಿಗೆ ಅಲಭ್ಯರಾದರೂ, ಇವರ ಸ್ಥಾನಕ್ಕೆ ಬದಲಿ ಆಟಗಾರನಾಗಿ ಬಂದಿರುವ ಇಮಾಮ್ ಕೂಡ ಅಪಾಯಕಾರಿ. ಜತೆಗೆ ಬಾಬರ್ ಆಜಂ, ನಾಯಕ ಮೊಹಮ್ಮದ್ ರಿಜ್ವಾನ್ ವೇಗಿಗಳಾದ ಅಫ್ರಿದಿ, ಯುವ ವೇಗಿ ನಸೀಮ್ ಶಾ, ಹ್ಯಾರಿಸ್ ರೌಫ್ ಅವರೆಲ್ಲ ಎದುರಾಳಿಗೆ ಆತಂಕ ತಂದೊಡ್ಡಬಲ್ಲರು. ಆದರೆ ನಮ್ಮ ರೋಹಿತ್, ವಿರಾಟ್, ರಾಹುಲ್, ಗಿಲ್, ಶಮಿ, ಅಕ್ಷರ್ ಅವರೆಲ್ಲ ಇದನ್ನು ಮೆಟ್ಟಿ ನಿಲ್ಲಬಲ್ಲರೆಂಬ ವಿಶ್ವಾಸ ಇದೆ.

ಭಾರತ ಈ ಪಂದ್ಯಕ್ಕೆ ಆಡುವ ಬಳಗದಲ್ಲಿ ಬದಲಾವಣೆ ಮಾಡುವುದು ಅನುಮಾನ. ಕಳೆದ ಬಾಂಗ್ಲಾ ವಿರುದ್ಧದ ತಂಡವನ್ನೇ ಕಣಕ್ಕಿಳಿಸಬಹುದು. ಆದರೆ ಪಾಕ್‌ನಲ್ಲಿ ಕೆಲ ಬದಲಾವಣೆ ನಿರೀಕ್ಷೆ ಮಾಡಬಹುದು. ರನ್ ಬರಗಾಲದಲ್ಲಿರುವ ವಿರಾಟ್ ಕೊಹ್ಲಿಯ ಬ್ಯಾಟ್ ಈ ಪಂದ್ಯದಲ್ಲಿ ಸದ್ದು ಮಾಡಬೇಕಿದೆ. ಹೆಚ್ಚಾಗಿ ಪಾಕ್ ವಿರುದ್ಧ ಅವರು ಅಮೋಘ ಇನಿಂಗ್ಸ್ ಆಡುತ್ತಾರೆ. ಇದೇ ನಂಬಿಕೆ ಅವರ ಅಭಿಮಾನಿಗಳದ್ದಾಗಿದೆ.

ವರುಣ್ ಚಕ್ರವರ್ತಿ ಇನ್?

ಬಾಂಗ್ಲಾದೇಶ ವಿರುದ್ಧ ತನ್ನ ಮೊದಲನೇ ಪಂದ್ಯವನ್ನು ಗೆದ್ದು ಟೂರ್ನಿಯಲ್ಲಿ ಶುಭಾರಂಭ ಕಂಡಿರುವ ಭಾರತ, ಪಾಕ್ ವಿರುದ್ಧದ ಪಂದ್ಯಕ್ಕೆ ಪೂರ್ಣ ಪ್ರಮಾಣದ ಸ್ಪಿನ್ನರ್ ಕುಲ್‌ದೀಪ್ ಯಾದವ್ ಬದಲು ವರುಣ್ ಚಕ್ರವರ್ತಿಯನ್ನು ಆಡಿಸುವ ನಿರೀಕ್ಷೆ ಇದೆ. ಭಾರತದ ಸಂಭಾವ್ಯ ಪ್ಲೇಯಿಂಗ್ ಇಲೆವೆನ್: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆಎಲ್ ರಾಹುಲ್ (ವಿಕೆಟ್ ಕೀಪರ್, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ರವೀಂದ್ರ ಜಡೇಜಾ, ವರುಣ್ ಚಕ್ರವರ್ತಿ, ಹರ್ಷಿತ್ ರಾಣಾ ಮತ್ತು ಮೊಹಮ್ಮದ್ ಶಮಿ.

ಮೂರು ಗಂಟೆ ಮೊದಲೇ ಕೊಹ್ಲಿ ಅಭ್ಯಾಸ

ಬ್ಯಾಟಿಂಗ್ ಲಯವನ್ನು ಕಂಡುಹಿಡಿಯಲು ಹೆಣಗಾಡುತ್ತಿರುವ ಟೀಮ್ ಇಂಡಿಯಾದ ಹಿರಿಯ ಬ್ಯಾಟರ್ ವಿರಾಟ್ ಕೊಹ್ಲಿ ಪಾಕಿಸ್ತಾನ ವಿರುದ್ಧದ ಪಂದ್ಯಕ್ಕೂ ಮುನ್ನ ನೆಟ್ಸ್‌ನಲ್ಲಿ ಭಾರೀ ಬ್ಯಾಟಿಂಗ್ ಅಭ್ಯಾಸ ನಡೆಸಿದ್ದಾರೆ. ಸಹ ಆಟಗಾರರ ಅಭ್ಯಾಸಕ್ಕೂ 3 ಗಂಟೆ ಮೊದಲೇ ತರಬೇತಿಗೆ ಹಾಜರಾಗಿದ್ದಾರೆ. ಈ ಮೂಲಕ ಕಳೆದುಕೊಂಡ ಬ್ಯಾಟಿಂಗ್ ಫಾರ್ಮ್ ಮರಳಿ ಪಡೆಯುವ ಪ್ರಯತ್ನದಲ್ಲಿದ್ದಾರೆ. ಉಳಿದ ಆಟಗಾರರು ಶನಿವಾರ ಕೊಹ್ಲಿ ಮಾರ್ಗದರ್ಶನದಲ್ಲಿಯೇ ಅಭ್ಯಾಸ ನಡೆಸಿ ಗಮನ ಸೆಳೆದರು. ಕೊಹ್ಲಿ ಈ ಟೂರ್ನಿಯಲ್ಲಿ ಒಟ್ಟಾರೆ 241 ಕಲೆ ಹಾಕಿದರೆ, ಚಾಂಪಿಯನ್ಸ್ ಟ್ರೋಫಿಯಲ್ಲಿ ಅತ್ಯಧಿಕ ರನ್ ಗಳಿಸಿದ ವಿಶ್ವದ ಮೊದಲ ಬ್ಯಾಟರ್ ಎನಿಸಿಕೊಳ್ಳಲಿದ್ದಾರೆ. ಸದ್ಯ ದಾಖಲೆ ವಿಂಡೀಸ್‌ನ ಮಾಜಿ ಆಟಗಾರ ಕ್ರಿಸ್ ಗೇಲ್ ಹೆಸರಿನಲ್ಲಿದೆ.

351 ರನ್ ಬೆಂಬತ್ತಿ ಇಂಗ್ಲೆಂಡ್ ವಿರುದ್ಧ ಗೆದ್ದು ಆಸೀಸ್ ತಂಡ

ಆಸ್ಟ್ರೇಲಿಯಾ ವಿಶ್ವ ದಾಖಲೆ ಜಯ

ಲಾಹೋರ್: ಇಲ್ಲಿನ ಲಾಹೋರ್ ಗಡಾಫಿ ಸ್ಟೇಡಿಯಂನಲ್ಲಿ ಶನಿವಾರ ನಡೆದ ಚಾಂಪಿಯನ್ಸ್ ಟ್ರೋಫಿಯ ಗ್ರೂಪ್ ಬಿ ಆರಂಭಿಕ ಪಂದ್ಯದಲ್ಲಿ ಆಸ್ಟ್ರೇಲಿಯಾ ಹೊಸ ದಾಖಲೆ ಬರೆದಿದೆ. ಇಂಗ್ಲೆಂಡ್ ನೀಡಿದ 351 ರನ್‌ಗಳನ್ನು ಬೆಂಬತ್ತಿ ಜಯ ದಾಖಲಿಸುವ ಮೂಲಕ ಆಸ್ಟ್ರೇಲಿಯಾ ಮತ್ತೊಮ್ಮೆ ತನ್ನ ಪಾರಮ್ಯ ಮೆರೆದಿದೆ. ಚಾಂಪಿಯನ್ಸ್ ಟ್ರೋಫಿಯಲ್ಲಿ ಇಂಗ್ಲೆಂಡ್ ತಂಡವನ್ನು 5 ವಿಕೆಟ್‌ಗಳಿಂದ ಸೋಲಿಸುವ ಮೂಲಕ ಆಸ್ಟ್ರೇಲಿಯಾ ಎಲ್ಲಾ ಐಸಿಸಿ ಪಂದ್ಯಾವಳಿಗಳಲ್ಲಿ ಅತ್ಯಧಿಕ ರನ್ ಚೇಸ್ ಮಾಡಿ ಗೆದ್ದ ಹೊಸ ದಾಖಲೆ ಬರೆದಿದೆ.

ಜೋಶ್ ಇಂಗ್ಲಿಶ್ ಅವರ ಶತಕದಬ್ಬರದ ನೆರವಿನಿಂದ ಆಸ್ಟ್ರೇಲಿಯಾ, ತಂಡ ಇಂಗ್ಲೆಂಡ್ ಸವಾಲನ್ನು ಹತ್ತಿಕ್ಕಿ ದಾಖಲೆಯ ವಿಜಯ ಸಾಧಿಸಿತು. ಆರಂಭಿಕ ಬ್ಯಾಟ್ಸ್‌ಮನ್ ಮ್ಯಾಥ್ಯೂ ಶಾರ್ಟ್ (63 ರನ್), ಅಲೆಕ್ಸ್ ಕ್ಯಾರಿ (69)ಗ್ಲೆನ್ ಮ್ಯಾಕ್ಸ್‌ವೆಲ್ (32) ಜೋಶ್ ಗೆ ಸಮರ್ಥ ಬೆಂಬಲ ನೀಡಿದರು.

ಆರಂಭದಲ್ಲಿ ಟ್ರಾವಿಸ್ ಹೆಡ್ ಮತ್ತು ಸ್ಟೀವ್ ಸ್ಮಿತ್ ಔಟಾದಾಗ ಇಂಗ್ಲೆಂಡ್ ಗೆಲುವು ನಿಶ್ಚಿತ ಎಂದೇ ಭಾವಿಸಲಾಗಿತ್ತು. ಆದರೆ ನಂತರ ಬಂದ ಇಂಗ್ಲಿಸ್ ಪಂದ್ಯದ ಗತಿ ಬದಲಿಸಿದರು. ಆಸ್ಟ್ರೇಲಿಯಾದ ಆಟಗಾರ ಜೋಶ್ ಇಂಗ್ಲಿಶ್ 120 ರನ್ ಗಳಿಸಿ ಅಜೇಯರಾಗಿ ಉಳಿದರು. ಇವರ ಇನ್ನಿಂಗ್ಸ್‌ನಲ್ಲಿ 6 ಸಿಕ್ಸರ್ ಮತ್ತು 8 ಬೌಂಡರಿಗಳಿದ್ದವು.

ಇದಕ್ಕೂ ಮೊದಲು 143 ಎಸೆತಗಳಲ್ಲಿ 17 ಬೌಂಡರಿ, 3 ಸಿಕ್ಸರ್‌ಗಳ ನೆರವಿನಿಂದ 165 ರನ್‌ಗಳಿಸಿದ ಬೆನ್‌ಡಕೆಟ್ ಇಂಗ್ಲೆಡ್‌ನ ಬೃಹತ್ ಮೊತ್ತಕ್ಕೆ ಕಾರಣರಾದರು. ಡಕೆಟ್‌ಗೆ ಸಾಥ್ ನೀಡಿದ ಮಾಜಿ ನಾಯಕ ಜೋ ರೂಟ್ 78 ಎಸೆತಗಳಲ್ಲಿ 4 ಬೌಂಡರಿ ಸಹಿತ 68 ರನ್ ಗಳಿಸಿದರು.

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಇಂಗ್ಲೆಂಡ್ 2ನೇ ಓವರ್‌ನಲ್ಲಿ ಫಿಲ್ ಸಾಲ್ಟ್ (10) ಹಾಗೂ 6ನೇ ಓವರ್‌ನಲ್ಲಿ ಜೇಮೀ ಸ್ಮಿತ್ (15) ವಿಕೆಟ್ ಕಳೆದುಕೊಂಡಿತು. ಆದರೆ 3ನೇ ವಿಕೆಟ್‌ಗೆ ಬೆನ್ ಡಕೆಟ್ ಹಾಗೂ ಮಾಜಿ ನಾಯಕ ಜೋ ರೂಟ್ ಜೊತೆಗೂಡಿ 158 ರನ್‌ಗಳ ಜೊತೆಯಾಟ ನೀಡಿದರು. ಜೋಸ್ ಬಟ್ಲರ್ 23ಕ್ಕೆ ವಿಕೆಟ್ ಒಪ್ಪಿಸಿದರೆ, ಹ್ಯಾರಿ ಬ್ರೂಕ್ 3 ಮತ್ತು ಲಿಯಾಮ್ ಲಿವಿಂಗ್‌ಸ್ಟೋನ್ 14 ರನ್‌ಗೆ ವಿಕೆಟ್ ಒಪ್ಪಿಸಿದ ಚಾಂಪಿಯನ್ಸ್ ಟ್ರೋಫಿಯಲ್ಲೂ ತಮ್ಮ ಕಳಪೆ ಫಾರ್ಮ್ ಮುಂದುವರಿಸಿದರು. ಕೆಳ ಕ್ರಮಾಂಕದಲ್ಲಿ ಜೋಫ್ರಾ ಆರ್ಚರ್ 10 ಎಸೆತಗಳಲ್ಲಿ 2 ಬೌಂಡರಿ, 1 ಸಿಕ್ಸ ಸಹಿತ ಅಜೇಯ 21 ರನ್‌ಗಿಸಿದರು.ಬ್ರೈಡನ್ ಕಾರ್ಸ್ 8ರನ್‌ಗಳಿಸಿದರು.

ಆಸ್ಟ್ರೇಲಿಯಾದ ಪರ ಬೆನ್ ಡ್ವಾರ್ಷಿಯಸ್ 66ಕ್ಕೆ3, ಆ್ಯಡಂ ಜಂಪಾ 64ಕ್ಕೆ2, ಮಾರ್ನಸ್ ಲಾಬುಶೇನ್ 41ಕ್ಕೆ2 ಗ್ಲೆನ್ ಮ್ಯಾಕ್ಸ್‌ವೆಲ್ 64ಕ್ಕೆ1 ವಿಕೆಟ್ ಪಡೆದರು.

ವಿಶ್ವದಾಖಲೆಯ ಮೊತ್ತ

351ರನ್ ಸಿಡಿಸುವ ಮೂಲಕ ಇಂಗ್ಲೆಂಡ್ ಚಾಂಪಿಯನ್ಸ್ ಟ್ರೋಫಿ ಇತಿಹಾಸದಲ್ಲಿ ಅತಿ ಹೆಚ್ಚು ರನ್ ಸಿಡಿಸಿದ ತಂಡವಾಗಿ ವಿಶ್ವದಾಖಲೆ ಬರೆಯಿತು. ಈ ಹಿಂದೆ 2004ರಲ್ಲಿ ನ್ಯೂಜಿಲ್ಯಾಂಡ್ ತಂಡ ಯುಎಎಸ್‌ಎ ವಿರುದ್ಧ 347 ರನ್ ಗಳಿಸಿತ್ತು ದಾಖಲೆಯಾಗಿತ್ತು. ಆದರೆ ಇದನ್ನು ಬೆಂಬತ್ತುವ ಮೂಲಕ ಆಸ್ಟ್ರೇಲಿಯಾ ಕೆಲವೇ ಗಂಟೆಗಳಲ್ಲಿ ಈ ಸಾಧನೆಯನ್ನು ತನ್ನದಾಗಿಸಿಕೊಂಡಿತು.

ಕಾಸರಗೋಡಿನಲ್ಲಿ ತಮ್ಮದೇ ಹೆಸರಿನ ರಸ್ತೆಯನ್ನು ಉದ್ಘಾಟಿಸಿದ ಹಿರಿಯ ಕ್ರಿಕೆಟಿಗ ಸುನೀಲ್ ಗಾವಸ್ಕರ್ ಪೌರಸನ್ಮಾನವನ್ನೂ ಸ್ವೀಕರಿಸಿದರು. ಇಲ್ಲಿನ ವಿದ್ಯಾನಗರದ ನಗರಸಭೆ ಕ್ರೀಡಾಂಗಣದ ರಸ್ತೆಗೆ ಸುನೀಲ್ ಗಾವಸ್ಕರ್ ಹೆಸರನ್ನು ಇಡಲಾಗಿದೆ.

ಮಾಸ್ಟರ್ಸ್ ಕ್ರಿಕೆಟ್: ಯೂಸುಫ್ ಮಿಂಚು

ಮುಂಬೈ: ಒಂದೆಡೆ ಚಾಂಪಿಯನ್ಸ್ ಲೀಗ್ ಕದನ, ಇನ್ನೊಂದೆಡೆ ಮಹಿಳಾ ಟಿ-20 ವಿಶ್ವಕಪ್ ಭರಾಟೆ. ಇವುಗಳ ನಡುವೆ ಕ್ರಿಕೆಟ್ ಇತಿಹಾಸದ ಪುಟಗಳಲ್ಲಿ ಈಗಾಗಲೇ ತಮ್ಮ ಹೆಸರು ಅಚ್ಚೊತ್ತಿರುವ ಕ್ರಿಕೆಟ್ ದಿಗ್ಗಜರನ್ನು ಮುಂಬಯಿನ ಕ್ರಿಕೆಟ್ ಪ್ರೇಮಿಗಳು ಶನಿವಾರ ಮತ್ತೊಮ್ಮೆ ಕಣ್ತುಂಬಿಕೊಂಡರು. ಕನ್ನಡಿಗ ಸ್ಟುವರ್ಟ್ ಬಿನ್ನಿ, ಯೂಸುಫ್ ಪಠಾಣ್ ಮತ್ತು ಯುವರಾಜ್ ಸಿಂಗ್ ಅವರ ಸಿಡಿಲಬ್ಬರದ ಹೊಡೆತಗಳ ಮೂಲಕ ಮತ್ತೊಮ್ಮೆ ಇಲ್ಲಿನ ಕ್ರಿಕೆಟ್ ಪ್ರೇಮಿಗಳನ್ನು ರಂಜಿಸಿದರು. ಪಠಾಣ್ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡಲ್ಲೂ ಮಿಂಚಿದರು.

ಮಾಜಿ ಕ್ರಿಕೆಟ್ ದಿಗ್ಗಜರ ಚೊಚ್ಚಲ ಆವೃತ್ತಿಯ ಇಂಟರ್‌ನ್ಯಾಷನಲ್ ಮಾಸ್ಟರ್ಸ್ ಲೀಗ್ ಟಿ-20 ಟೂರ್ನಿಗೆ ಶನಿವಾರ ನವಿ ಮುಂಬೈನ ಡಿ.ವೈ ಪಾಟೀಲ್ ಸ್ಟೇಡಿಯಂನಲ್ಲಿ ಅಧಿಕೃತ ಚಾಲನೆ ನೀಡಲಾಯಿತು. ಸಚಿನ್ ತೆಂಡೂಲ್ಕರ್ ನೇತೃತ್ವದ ಭಾರತ ತಂಡ ಮತ್ತು ಕುಮಾರ ಸಂಗಕ್ಕಾರ ನೇತೃತ್ವದ ಲಂಕಾ ತಂಡದ ಹಣಾಹಣಿ ಹಾಲಿ ಟಿ-20 ತಂಡಗಳ ಕದನಕ್ಕಿಂತ ಯಾವ ರೀತಿಯಲ್ಲೂ ಕಡಿಮೆ ಇರಲಿಲ್ಲ.

ಮೊದಲು ಬ್ಯಾಟಿಂಗ್ ಮಾಡಿದ ಇಂಡಿಯಾ ಮಾಸ್ಟರ್ಸ್ ಪರ ನಾಯಕ ತೆಂಡುಲ್ಕರ್ ಮತ್ತು ಅಂಬಾಟಿ ನಾಯುಡು ಅಲ್ಪ ಮೊತ್ತಕ್ಕೆ ನಿರ್ಗಮಿಸಿ ನಿರಾಶೆ ಮೂಡಿಸಿದರು. ಅಂಬಾಟಿ 5 ಎಸೆತಗಳಲ್ಲಿ 5 ರನ್ ಗಳಿಸಿ ಔಟಾದರೆ ಸಚಿನ್ 10 ರನ್ ಗಳಿಗೆ ವಿಕೆಟ್ ಒಪ್ಪಿಸಿದರು. ಆದರೆ ನಂತರ ಬಂದ ಕನ್ನಡಿಗ ಸ್ಟುವರ್ಟ್ ಬಿನ್ನಿ ಮತ್ತು ಗುರು ಕೀರತ್ ಸಿಂಗ್ ಭಾರತ ತಂಡವನ್ನು ಆಧರಿಸಿದರು. ಬಿನ್ನಿ ಕೇವಲ 31 ಎಸೆತಗಳಲ್ಲಿ 68 ರನ್ ದಾಖಲಿಸಿದರೆ, ಸಿಂಗ್ 32 ಎಸೆತಗಳಲ್ಲಿ 44 ರನ್ ಗಳಿಸಿ ಉತ್ತಮ ಅಡಿಪಾಯ ಹಾಕಿ ಕೊಟ್ಟರು. ಆದರೆ ಬಂದ ಯುಸುಫ್ ಪಠಾಣ್ ಕೇವಲ 22 ಬಾಲ್‌ಗಳಲ್ಲಿ 56 ರನ್ ಬಾರಿಸಿ ಭಾರತದ ಹಿರಿಯರ ತಂಡ 4 ವಿಕೆಟ್ ನಷ್ಟಕ್ಕೆ 222 ರನ್‌ಗಳ ಗೌರವಾರ್ಹ ಮೊತ್ತ ದಾಖಲಿಸಲು ಕಾರಣರಾದರು. 22 ಬಾಲ್‌ಗಳಲ್ಲಿ 31 ರನ್ ಪೇರಿಸಿದ ಯುವರಾಜ್ ಸಿಂಗ್ ಇವರಿಗೆ ಉತ್ತಮ ಸಾಥ್ ನೀಡಿದರು.

ಸೂರಿಗೆ ಸಾಥ್ ನೀಡಿದ ಉಪ್ಪಿ

ಕಾಶಿನಾಥ್ ಪುತ್ರ ಅಭಿಮನ್ಯು ಕಾಶಿನಾಥ್ ಸಾಲು ಸಾಲು ಚಿತ್ರಗಳಲ್ಲಿ ಅಭಿನಯಿಸುತ್ತಿದ್ದಾರೆ. ಅದರಲ್ಲಿ ಸೂರಿ ಲವ್ಸ್ ಸಂಧ್ಯಾ ಚಿತ್ರ ತೆರೆಗೆ ಸಿದ್ಧವಾಗಿದ್ದು, ಸದ್ಯ ಈ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ನಟ, ನಿರ್ದೇಶಕ ಉಪೇಂದ್ರ ಟೀಸರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಸಿನಿಮಾದಲ್ಲಿ ಒಳ್ಳೆಯ ಪ್ರೇಮಕಥೆ ಇರುವುದು ಟ್ರೇಲರ್‌ನಲ್ಲಿ ಸ್ಪಷ್ಟವಾಗುತ್ತದೆ. ಸಿನಿಮಾದಲ್ಲಿ ಎಲ್ಲರೂ ನೈಜವಾಗಿ ಅಭಿನಯಿಸಿದ್ದಾರೆ ಎಂದು ಉಪ್ಪಿ ಎಲ್ಲಾ ಕಲಾವಿದರನ್ನು ಮೆಚ್ಚಿಕೊಂಡಾಡಿದರು.

ಸೂರಿ ಲವ್ಸ್ ಸಂಧ್ಯಾ, ಮಧ್ಯಮ ವರ್ಗದ ಯುವಕನ ಪ್ರೇಮ್ ಕಹಾನಿಯನ್ನು ಹೊತ್ತು ಬಂದಿದೆ. ಸೂರಿ ತಾನು ಪ್ರೀತಿಸಿದ ಹುಡುಗಿಯನ್ನು ಕೈಹಿಡಿಯಲು ಹೇಗೆಲ್ಲಾ ಶ್ರಮಪಡುತ್ತಾನೆ ಎಂಬುದನ್ನು ಚಿತ್ರದಲ್ಲಿ ಮನಮುಟ್ಟುವಂತೆ ಕಟ್ಟಿಕೊಡಲಾಗಿದೆ. ಅಭಿಮನ್ಯು ಚಿತ್ರದಲ್ಲಿ ಹೊಸ ಲುಕ್‌ನಲ್ಲಿ ಕಂಗೊಳಿಸಿದ್ದಾರೆ. ಅಭಿಗೆ ಜತೆಯಾಗಿ ಅಪೂರ್ವಾ ಬಣ್ಣಹಚ್ಚಿದ್ದಾರೆ. ಯಾದವ್ ರಾಜ್ ಚಿತ್ರದ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ಚಿತ್ರದಲ್ಲಿ ಮಧ್ಯಮ ವರ್ಗದ ಯುವಕನ ಪ್ರೇಮಕಥೆ ಅಡಕವಾಗಿದೆ. ಸಂಧ್ಯಾಳನ್ನು ಮನಸಾರೆ ಪ್ರೀತಿಸುವ ಸೂರಿಗೆ ಪ್ರೀತಿಯ ಹಾದಿಯಲ್ಲಿ ಯಾವೆಲ್ಲಾ ಸವಾಲುಗಳು ಕಾಡುತ್ತವೆ. ಅದನ್ನು ಆತ ಹೇಗೆ ಎದಿರಿಸುತ್ತಾನೆ ಎಂಬುದನ್ನು ಎಲ್ಲರಿಗೂ ಇಷ್ಟವಾಗುವಂತೆ ಕಟ್ಟಿಕೊಟ್ಟಿದ್ದಾರೆ. ನೈಜತೆಗೆ ಹತ್ತಿರವಾಗುವಂತೆ ಸಿನಿಮಾ ಮೂಡಿಬಂದಿದೆ ಎಂದು ಅಭಿಮನ್ಯು ಹೇಳಿದರು.

ನಾನು ಈ ಚಿತ್ರದಲ್ಲಿ ಸಂಧ್ಯಾಳಾಗಿ ಕಾಣಿಸಿಕೊಂಡಿದ್ದೇನೆ, ಚಿತ್ರದಲ್ಲಿ ನನಗೆ ಒಳ್ಳೆಯ ಪಾತ್ರವೇ ಸಿಕ್ಕಿದ್ದು, ತುಂಬಾ ಖುಷಿಕೊಟ್ಟಿದೆ ಎಂದು ಅಪೂರ್ವಾ ಸಂತಸದಿಂದ ನುಡಿದರು. ಪ್ರತಾಪ್ ನಾರಾಯಣ್, ಪ್ರದೀಪ್, ಜಯರಾಮ್, ಪಲ್ಲವಿ, ಖುಷಿ ಆಚಾರ್ ಸೇರಿದಂತೆ ಮತ್ತಿತರರು ಚಿತ್ರದ ತಾರಾಬಳಗದಲ್ಲಿದ್ದಾರೆ. ಸೆವೆನ್ ಕ್ರೋರ್ ಎಂಟರ್‌ಟೇನ್‌ಮೆಂಟ್ ಬ್ಯಾನರ್‌ನಲ್ಲಿ ಮಂಜುನಾಥ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಅರುಣ ಗಿರಿ ಸಂಗೀತ ನಿರ್ದೇಶನ, ರಾಜ್ ಕಿಶೋರ್ ನೃತ್ಯ ನಿರ್ದೇಶನ, ಅಲ್ಕಾ ಶ್ರೀನಿವಾಸ್ ಛಾಯಾಗ್ರಹಣ ಈ ಚಿತ್ರಕ್ಕಿದೆ.

ರಿಯಲ್ ಹೀರೊ ಕಾಶಿನಾಥ್

ಕಾಶಿನಾಥ್ ಅವರು ಸಿನಿಮಾ ನಿರ್ದೇಶನ ಮಾಡುವ ಸಂದರ್ಭದಲ್ಲಿ ನಡೆದ ಘಟನೆಯೊಂದನ್ನು ಉಪೇಂದ್ರ ನೆನಪಿಸಿಕೊಂಡರು. ಅದೊಂದು ದಿನ ಚಿತ್ರೀಕರಣ ನಡೆಯುತ್ತಿತ್ತು. ಸಿನಿಮಾದಲ್ಲಿ ಕೆಲಸ ಮಾಡುವವನೊಬ್ಬ ಬಂದು, ಕಾಶಿನಾಥ್ ಅವರನ್ನು ಹಣ ಕೇಳಿದ. ನೀನು ಕೆಲಸವನ್ನೇ ಮಾಡಿಲ್ಲ, ನಾನು ಯಾಕೆ ಕೊಡಬೇಕು ಎಂದು ಕಾಶಿನಾಥ್ ಅವರು ಉತ್ತರ ನೀಡಿದರು. ಅದಕ್ಕವನು ಒಂದು ಬಾಟಲ್ ತೆಗೆದು ಅವರ ಮುಂದೆ ಇಟ್ಟು ಇದರಲ್ಲಿ ಆಸಿಡ್ ಇದೆ. ನಾಳೆ ಬೆಳಗ್ಗೆ ಬರುತ್ತೇನೆ ಆಗ ಹಣ ಕೊಟ್ಟರೆ ಸರಿ ಇಲ್ಲದಿದ್ದರೆ, ಆಸಿಡ್ ಹಾಕುವುದಾಗಿ ಬೆದರಿಸಿದ, ಆತ ಮರು ದಿನ ತಿರುಗಿ ಬಂದ ಆಗ ಕಾಶಿನಾಥ್ ಅವರು ಒಬ್ಬರೇ ಕುಳಿತಿದ್ದರು. ಆತ ಬೆದರಿಕೆ ಹಾಕಿದರು ಹೆದರದೆ ನಿನಗೆ ಯಾವುದೇ ಕಾರಣಕ್ಕೂ ಹಣ ಕೊಡುವುದಿಲ್ಲ ಎಂದು ಹೇಳಿ ಕಳುಹಿಸಿದರು. ಈ ಘಟನೆ ನೋಡಿದ ನನಗೆ ಕಾಶಿನಾಥ್ ಅವರು ನಿಜವಾದ ಹೀರೊ ಅನ್ನಿಸಿತು ಎಂದು ಉಪ್ಪಿ ಹೇಳಿದರು.

ಯುಗಾದಿಗೆ ಬರಲ್ಲ ಕೆಡಿ

ಜೋಗಿ ಪ್ರೇಮ್ ನಿರ್ದೇಶನದ ಕೆಡಿ ಚಿತ್ರ ಆರಂಭದಿಂದಲೂ ಸದ್ದು ಮಾಡುತ್ತಿದೆ. ಇತ್ತೀಚೆಗೆ ಬಿಡುಗಡೆಯಾದ ಶಿವ ಶಿವ.. ಹಾಡು ಸಿನಿಪ್ರಿಯರ ಮನಗೆದ್ದಿದೆ. ಯುಗಾದಿ ಹೊತ್ತಿಗೆ ಕೆಡಿ ಬೆಳ್ಳಿತೆರೆಗೆ ಎಂಟ್ರಿಯಾಗಲಿದ್ದಾನೆ ಎಂದು ಈ ಹಿಂದೆಯೇ ಪ್ರೇಮ್ ಘೋಷಿಸಿದ್ದರು. ಆದರೆ ಕೆಡಿ ಯುಗಾದಿ ಹಬ್ಬಕ್ಕೆ ಬರುವುದು ಡೌಟ್ ಎನ್ನಲಾಗುತ್ತಿದೆ. ಕೆಡಿ ಚಿತ್ರದ ಒಂದಷ್ಟು ಸನ್ನಿವೇಶಗಳ ಚಿತ್ರೀಕರಣ ಬಾಕಿಯಿದ್ದು, ಇನ್ನೂ ಒಂದು ಹಾಡಿನ ಶೂಟಿಂಗ್ ಕೂಡ ಬಾಕಿ ಇದೆ. ಈ ಹಾಡನ್ನು ವಿದೇಶದಲ್ಲಿ ಚಿತ್ರೀಕರಿಸಲು ಪ್ಲಾನ್ ಮಾಡಿದ್ದು ಅದಕ್ಕಾಗಿ ಪ್ರೇಮ್ ಲೊಕೇಶನ್ ಹುಡುಕಾಟದಲ್ಲಿದ್ದಾರೆ. ಇನ್ನು ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಕೆಡಿಯಲ್ಲಿ ವಿಶೇಷ ಪಾತ್ರದಲ್ಲಿ ನಟಿಸಲಿದ್ದು, ಜಂಗಮನ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರಂತೆ, ಶಿವಣ್ಣ ಅವರ ಭಾಗದ ಶೂಟಿಂಗ್ ಕೂಡ ಬಾಕಿಯಿದೆ. ಇದೆಲ್ಲವೂ ಮುಗಿಯುವ ಹೊತ್ತಿಗೆ ಇನ್ನೂ ಒಂದಷ್ಟು ದಿನ ಹಿಡಿಯಲಿದೆ. ಹಾಗಾಗಿ ಚಿತ್ರದ ಬಿಡುಗಡೆ ತಡವಾಗುವ ಸಾಧ್ಯತೆ ಇದೆ.

ಕೆಡಿ ಭೂಗತ ಲೋಕದ ಕಥೆಯನ್ನು ಒಳಗೊಂಡಿದ್ದು, ರೆಟ್ರೋ ಸ್ಟೈಲ್‌ನಲ್ಲಿ ಸಾಗಲಿದೆ. ಧ್ರುವ ಸರ್ಜಾ ಅಂಡರ್‌ವರ್ಲ್ಡ್ ಡಾನ್ ಆಗಿ ಕಾಣಿಸಿಕೊಂಡಿದ್ದಾರೆ. ರೀಷ್ಮಾ ನಾಯಕಿಯಾಗಿ ಅಭಿನಯಿಸಿದ್ದು, ಬಾಲಿವುಡ್ ಖಳನಾಯಕ್ ಸಂಜಯ್ ದತ್ ವಿಲನ್ ಆಗಿ ಅಬ್ಬರಿಸಲಿದ್ದಾರೆ. ಕ್ರೇಜಿಸ್ಟಾರ್ ರವಿಚಂದ್ರನ್, ರಮೇಶ್ ಅರವಿಂದ್, ಬಾಲಿವುಡ್ ಬೆಡಗಿ ಶಿಲ್ಪಾ ಶೆಟ್ಟಿ ಮುಂತಾದವರು ತಾರಾಗಣದಲ್ಲಿದ್ದಾರೆ. ಕೆಡಿ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ಹೈಬಜೆಟ್‌ನಲ್ಲಿ ಮೂಡಿಬರಲಿದೆ. ಕೆವಿಎನ್ ಪ್ರೊಡಕ್ಷನ್‌ನಲ್ಲಿ ಚಿತ್ರ ನಿರ್ಮಾಣವಾಗುತ್ತಿದೆ.

ಧ್ರುವ ಸರ್ಜಾ ಅಭಿನಯ ಮಾರ್ಟಿನ್ ಕಳೆದ ವರ್ಷ ಅದ್ದೂರಿಯಾಗಿ ತೆರೆಗೆ ಬಂದಿತ್ತು. ಸಿನಿಮಾದ ಬಗ್ಗೆ ಅಪಾರ ನಿರೀಕ್ಷೆಯೂ ಇತ್ತು. ಆದರೆ ಮಾರ್ಟಿನ್ ನಿರೀಕ್ಷಿತ ಮಟ್ಟದಲ್ಲಿ ಯಶಸ್ಸು ಕಾಣಲಿಲ್ಲ. ಹೀಗಾಗಿ ಧ್ರುವ ಸರ್ಜಾ ಮತ್ತೊಂದು ಬಿಗ್ ಬ್ರೇಕ್‌ಗಾಗಿ ಕಾಯುತ್ತಿದ್ದಾರೆ. ಕೆಡಿ ಧ್ರುವಾಗೆ ಭರ್ಜರಿ ಯಾಶಸ್ಸು ತಂದುಕೊಡಲಿದೆ ಎಂಬ ನಿರೀಕ್ಷೆ ಇದೆ. ಯಾಕೆಂದರೆ ಇದು ಜೋಗಿ ಪ್ರೇಮ್ ಸಿನಿಮಾವಾಗಿರುವುದರಿಂದ ಮೇಕಿಂಗ್‌ನಲ್ಲಿ ಮೋಡಿ ಮಾಡುವುದು ಖಚಿತವಾಗಿದೆ. ತೆರೆಯಲ್ಲಿ ಪ್ರೇಕ್ಷಕರನ್ನು ರಂಜಿಸಲಿದೆ.

ರಾಮಾಯಣಕ್ಕೆ ಸಿದ್ಧವಾದ ರಾಕಿಬಾಯಿ

ಕೆಜಿಎಫ್ ಚಿತ್ರದಿಂದ ಭರ್ಜರಿ ಯಶಸ್ಸು ಪಡೆದ ಯಶ್ ಈಗ ಟಾಕ್ಸಿಕ್ ಚಿತ್ರದಲ್ಲಿ ಬ್ಯುಸಿಯಾಗಿದ್ದಾರೆ. ಬೆಂಗಳೂರಿನಲ್ಲಿ ಅದ್ದೂರಿ ಸೆಟ್ ಹಾಕಿ ಶೂಟಿಂಗ್ ಮಾಡಿದ್ದ ಚಿತ್ರತಂಡ ಈಗ ಮುಂಬೈನಲ್ಲಿ ಬೀಡುಬಿಟ್ಟಿದೆ. ಯಶ್ ಜತೆಗೆ ಹುಮಾ ಖುರೇಷಿ, ಕಿಯಾರಾ ಅಡ್ವಾಣಿ ಕೂಡ ಶೂಟಿಂಗ್‌ನಲ್ಲಿ ಪಾಲ್ಗೊಂಡಿದ್ದಾರೆ. ಮಲೆಯಾಳಂ ನಿರ್ದೇಶಕಿ ಗೀತು ಮೋಹನ್ ದಾಸ್ ಸಾರಥ್ಯದಲ್ಲಿ ಟಾಕ್ಸಿಕ್ ಮೂಡಿಬರುತ್ತಿದೆ.

ಈ ನಡುವೆಯೇ ರಾಕಿಬಾಯಿ ಮತ್ತೊಂದು ಸಿಹಿ ಸುದ್ದಿ ನೀಡಿದ್ದಾರೆ. ಅದ್ದೂರಿಯಾಗಿ ಮೂಡಿಬರಲಿರುವ ರಾಮಾಯಣ ಚಿತ್ರದಲ್ಲಿಯೂ ಯಶ್ ನಟಿಸುತ್ತಿದ್ದು, ಚಿತ್ರೀಕರಣದಲ್ಲಿಯೂ ಪಾಲ್ಗೊಳ್ಳಲಿದ್ದಾರೆ. ರಾಮಾಯಣ ಚಿತ್ರಕ್ಕಾಗಿ ಮುಂಬೈನಲ್ಲಿ ಬೃಹತ್ ಸೆಟ್ ನಿರ್ಮಿಸಿ ಚಿತ್ರೀಕರಿಸಲಾಗುತ್ತಿದೆ. ಆ ಬಳಿಕ ಸಮುದ್ರ ತಟದಲ್ಲಿ ಯುದ್ಧದ ಸನ್ನಿವೇಶವನ್ನು ಸೆರೆಹಿಡಿಯಲಾಗುತ್ತದೆ. ಈ ಹಂತದಲ್ಲಿ ಯಶ್ ಚಿತ್ರತಂಡ ಸೇರಲಿದ್ದಾರೆ. ಈಗಾಗಲೇ ತಮ್ಮ ಪಾತ್ರದ ಕಾಸ್ಟ್ಯೂಮ್ ಧರಿಸಿ ರಿಹಾರ್ಸಲ್ ಕೂಡ ನಡೆಸಿದ್ದಾರೆ.

ಈ ಚಿತ್ರದಲ್ಲಿ ರಣಬೀರ್ ಕಪೂರ್ ರಾಮನಾಗಿ ನಟಿಸುತ್ತಿದ್ದು, ಸಾಯಿ ಪಲ್ಲವಿ ಸೀತೆಯ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ. ಯಶ್ ರಾವಣನಾಗಿ ಅಬ್ಬರಿಸಲಿದ್ದಾರೆ. ಉಳಿದಂತೆ ಸನ್ನಿ ಡಿಯೋಲ್, ಲಾರಾ ದತ್ತ, ಅರುಣ್ ಗೋಯಲ್, ರಕುಲ್ ಪ್ರೀತ್ ಸಿಂಗ್ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರ ದಲ್ಲಿದೆ. ಎ.ಆರ್. ರೆಹಮಾನ್ ಸಂಗೀತ ಸಂಯೋಜಿಸುತ್ತಿದ್ದಾರೆ. ರಾಮಾಯಣ ಎರಡು ಭಾಗದಲ್ಲಿ ಮೂಡಿಬರಲಿದ್ದು, ನಿತೀಶ್ ತಿವಾರಿ ನಿರ್ದೇಶನದಲ್ಲಿ ಚಿತ್ರ ಸಿದ್ಧವಾಗುತ್ತಿದೆ. ಬರೋಬ್ಬರಿ ಎಂಟು ನೂರು ಕೋಟಿ ವೆಚ್ಚದಲ್ಲಿ ಸಿನಿಮಾ ನಿರ್ಮಾಣವಾಗುತ್ತಿದ್ದು ನಮೀತ್ ಮಲ್ಹೋತ್ರ ಬಂಡವಾಳ ಹೂಡುತ್ತಿದ್ದಾರೆ. ಯಶ್ ಕೂಡ ನಿರ್ಮಾಣಕ್ಕೆ ಕೈ ಜೋಡಿಸಿದ್ದಾರೆ.

ಕಿರಿಕ್ ಟ್ರೇಲರ್ ರಿಲೀಸ್

ನಾಗತಿಹಳ್ಳಿ ಗಂಗಾಧರಗೌಡ ನಿರ್ದೇಶನದಲ್ಲಿ ಸಿದ್ಧವಾಗಿರುವ ಕಿರಿಕ್ ಚಿತ್ರದ ಟ್ರೇಲರ್ ಬಿಡುಗೆಯಾಗಿದೆ. ಸಚಿವ ಎನ್.ಚೆಲುವರಾಯಸ್ವಾಮಿ ಟ್ರೇಲರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಕಿರಿಕ್‌ನಲ್ಲಿ ಅಪರೂಪದ ಪ್ರೇಮಕಥೆ ಅಡಕವಾಗಿದ್ದು, ಅದಕ್ಕೆ ಒಂದಷ್ಟು ಕಾಮಿಡಿ ಸೆಂಟಿಮೆಂಟ್ ಬೆರೆಸಿ ಕಟ್ಟಿಕೊಡಲಾಗಿದೆ. ಗ್ಯಾರೇಜ್‌ನಲ್ಲಿ ಮೆಕ್ಯಾನಿಕ್ ಕೆಲಸ ಮಾಡುವ ನಾಯಕ ಸೂರ್ಯ, ಸದಾ ಕಿರಿಕ್ ಮಾಡುವ ನಾಯಕಿ ಅಮ್ಮು ಇಬ್ಬರ ಮಧ್ಯೆ ಕಿರಿಕ್ ನಡೆಯುತ್ತಲೇ ಇರುತ್ತದೆ. ಜಗಳದಲ್ಲಿಯೇ ಪ್ರೀತಿ ಹುಟ್ಟುತ್ತದೆ. ಸೂರ್ಯ ಮತ್ತು ಅಮ್ಮು ನಡುವೆ ಹುಟ್ಟಿದ ಪ್ರೀತಿ ಆನಂತರ ಯಾವ ಹಂತ ತಲುಪುತ್ತದೆ ಎನ್ನುವುದೆ ಕಿರಿಕ್ ಚಿತ್ರದ ಕಥಾಹಂದರ. ಈ ಚಿತ್ರಕ್ಕಾಗಿ ಕಾರ್ತಿಕ್ ವೆಂಕಟೇಶ್ ರಚಿಸಿರುವ ತಾಯಿ ಸೆಂಟಿಮೆಂಟ್ ಸಾಂಗ್ ಕೂಡ ಬಿಡುಗಡೆಯಾಗಿದೆ. ಡಾ.ವಿ.ನಾಗೇಂದ್ರ ಪ್ರಸಾದ್ ಹಾಡು ಬಿಡುಗಡೆ ಮಾಡಿದರು.

ನಾಯಕನಾಗಿ ರವಿ ಶೆಟ್ಟಿ ನಟಿಸಿದ್ದು, ಪೂಜಾ ರಾಮಚಂದ್ರ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಹೊನ್ನವಳ್ಳಿ ಕೃಷ್ಣ, ಕುರಿ ರಂಗ, ಸದಾನಂದ ಕಾಳೆ, ರಾಧಿಕಾ ಶೆಟ್ಟಿ, ಜ್ಯೋತಿ ಮರೂರು ಚಿತ್ರದ ತಾರಾಬಳಗದಲ್ಲಿದ್ದಾರೆ. ಮುಕ್ತಿನಾಗ ಫಿಲಂಸ್ ಅರ್ಪಿಸುವ ಈ ಚಿತ್ರವನ್ನು ಎಸ್.ನಾಗರಾಜ್ ನಿರ್ಮಿಸಿದ್ದಾರೆ. ಆರ್.ಬಿ.ಭರತ್ ಅವರ ಸಂಗೀತ ನಿರ್ದೇಶನ, ಎಸ್.ಕೀರ್ತಿವರ್ಧನ್ ಛಾಯಾಗ್ರಹಣ, ಕೆ.ಎಂ.ಭಾರ್ಗವ್ ಸಂಕಲನ ಈ ಚಿತ್ರಕ್ಕಿದೆ. ರಾಕೆಟ್ ವಿಕ್ರಮ್ ಹಾಗೂ ಚಂದ್ರು ಬಂಡೆ ಸಾಹಸ ನಿರ್ದೇಶನ ಮಾಡಿದ್ದಾರೆ.

ಒಂದು ವಿಭಿನ್ನವಾದ ಪ್ರೇಮಕಥೆಯನ್ನು ಕಿರಿಕ್ ಚಿತ್ರದಲ್ಲಿ ಕಾಣಬಹುದು. ಜಗಳದಲ್ಲಿಯೇ ಶುರುವಾಗುವ ಪ್ರೀತಿ ಹೇಗೆ ಸಾಗುತ್ತದೆ ಎಂಬುದನ್ನು ಎಲ್ಲರಿಗೂ ಮನಮುಟ್ಟುವಂತೆ ಕಟ್ಟಿಕೊಡಲಾಗಿದೆ. ಈಗಾಗಲೇ ಚಿತ್ರೀಕರಣ ಮುಕ್ತಾಯವಾಗಿದ್ದು ಚಿತ್ರ ಬಿಡುಗಡೆಯ ಹಂತ ತಲುಪಿದೆ.
-ನಾಗತಿಹಳ್ಳಿ ಗಂಗಾಧರ ಗೌಡ, ನಿರ್ದೇಶಕ

ವಿರಾಮ

ವಿಶ್ವವಾಣಿ
23.02.2025
ಭಾನುವಾರ

ಓದುವ ಲೋಕಕ್ಕೆ ಓದುವ ನಿಲ್ದಾಣ

ವಿಜ್ಞಾನ ಮತ್ತು ಸಾಹಿತ್ಯ ಪರಸ್ಪರ ವಿರೋಧವೆಂಬ ರೂಢಿಯ ನಂಬುಗೆ ಅರ್ಥವಿಲ್ಲದ್ದು. ಸಾಹಿತ್ಯ ಭಾವ ಜಗತ್ತಿಗೆ ಸಂಬಂಧಪಟ್ಟದ್ದು, ವಿಜ್ಞಾನ ಭವ ಜಗತ್ತಿಗೆ ಸಂಬಂಧಪಟ್ಟದ್ದು ಎಂಬುದು ನಿಜವಾದರೂ ಇವುಗಳ ನಡುವೆ ಅರ್ಥಪೂರ್ಣ ಸಂಬಂಧವಿದೆ. ಆದರೆ 1950ರ ಸುಮಾರಿಗೆ ಬ್ರಿಟಿಷ್ ವಿಜ್ಞಾನಿ ಮತ್ತು ಕಾದಂಬರಿಕಾರ ಸಿ.ಪಿ. ಸ್ನೋ 'ದ ಟು ಕಲ್ಚರ್ಸ್' ಎಂಬ ಕೃತಿ ಬರೆದು ಸಾಹಿತ್ಯವನ್ನು ವಿಜ್ಞಾನೇತರ ವಿಷಯಗಳ ಪ್ರಾತಿನಿಧಿಕವಾಗಿ ತೆಗೆದುಕೊಂಡು ವಿಜ್ಞಾನ ಮತ್ತು ಸಾಹಿತ್ಯದ ನಡುವೆ ಒಂದು ಬಿರುಕಿದೆ ಎನ್ನುತ್ತಾನೆ. ವಿಜ್ಞಾನಿಗಳಿಗೆ ಸಾಹಿತ್ಯಿಕ ಸಂಸ್ಕೃತಿ ಗೊತ್ತಿರುವುದಿಲ್ಲ, ಸಾಹಿತಿಗಳಿಗೆ ವೈಜ್ಞಾನಿಕ ಸಂಸ್ಕೃತಿ ತಿಳಿದಿರುವುದಿಲ್ಲ, ಲೋಕದ ಹಲವು ಸಮಸ್ಯೆಗಳು ಪರಿಹಾರಗೊಳ್ಳದೇ ಇರುವುದಕ್ಕೆ ಈ ಬಿರುಕೇ ಕಾರಣ ಎನ್ನುವುದು ಸಿ.ಪಿ.ಸ್ನೋ ನ ವಾದ. ಮಾನವಿಕ ಹಾಗೂ ವಿಜ್ಞಾನ ವಿಷಯದ ಅಧ್ಯಯನಗಳು ಪರಸ್ಪರ ಪೂರಕವಾದಂತಹವುಗಳು. ಮಾನವ ಕುಲಕ್ಕೆ ಈ ಎಲ್ಲದರ ಅಗತ್ಯವೂ ಇದೆ. ಆದರೆ ಈಗ ನಮ್ಮ ಅಧ್ಯಯನ ಕ್ರಮದಲ್ಲಿ ಮಾನವಿಕ ವಿಷಯಗಳು ಹಿಂದೆ ಸರಿದು ವಿಜ್ಞಾನ ವಿಷಯಗಳಿಗೆ ಹೆಚ್ಚು ಪ್ರಾಧಾನ್ಯತೆ ದೊರಕುತ್ತಿದೆ. ಅದರಲ್ಲೂ ಮೂಲ ವಿಜ್ಞಾನಕ್ಕಿಂತ ತಂತ್ರಜ್ಞಾನಕ್ಕೆ ಹೆಚ್ಚು ಆದ್ಯತೆ ಇದೆ. ಈ ಬೆಳವಣಿಗೆಯ ಬಗ್ಗೆಯೂ ಸಂವೇದನಾಶೀಲ ಮನಸ್ಸುಗಳು ಇಂದು ಚಿಂತಿಸುವ ಅಗತ್ಯವಿದೆ.

ವಿಜ್ಞಾನ ಹಾಗೂ ಸಂವೇದನಾಶೀಲ ಸಾಹಿತ್ಯ

» ನರಹಳ್ಳಿ ಬಾಲಸುಬ್ರಹ್ಮಣ್ಯ

ನಾವು ಬದುಕುತ್ತಿರುವುದೇ ಜಾಗತೀಕರಣ ಹಾಗೂ ತಂತ್ರಜ್ಞಾನದ ಯುಗದಲ್ಲಿ. ಇವುಗಳ ಪರಿಣಾಮವೆಂದರೆ ಇವುಗಳೊಟ್ಟಿಗೇ ಬರುವ ಎಲ್ಲ ವಲಯಗಳ ಪಲ್ಲಟಗಳನ್ನೂ ನಾವು ಅನಿವಾರ್ಯವಾಗಿ ಒಪ್ಪಿಕೊಳ್ಳಲೇಬೇಕು. ಅರ್ಥವ್ಯವಸ್ಥೆಯಲ್ಲಾಗುವ ಅಲ್ಲೋಲ ಕಲ್ಲೋಲ, ಜೀವನಶೈಲಿಯಲ್ಲಾಗುವ ಬದಲಾವಣೆ, ರೂಢಿಯ ನಂಬಿಕೆಗಳನ್ನು ಅಸ್ತವ್ಯಸ್ತಗೊಳಿಸುವ ಆಧುನಿಕ ಪ್ರಗತಿಯ ವಿದ್ಯಮಾನಗಳು, ಪ್ರಕೃತಿಯ ಮೇಲಾಗುತ್ತಿರುವ ಹಲ್ಲೆ, ಮಾನವ ಸಂಬಂಧಗಳ ಮೇಲಾಗುತ್ತಿರುವ ಆಘಾತಗಳು ಇವೆಲ್ಲವೂ ನಮ್ಮ ಬದುಕಿನ ಸಹಜ ಲಯವನ್ನು ವ್ಯತ್ಯಸ್ಥಗೊಳಿಸುತ್ತಿವೆ. ರಸೆಲ್ ಹೇಳುವಂತೆ ನಮ್ಮ ಕಾಲದಲ್ಲಿ ತಂತ್ರಜ್ಞಾನ ಸ್ವತಂತ್ರ ಅಸ್ತಿತ್ವ ಪಡೆದ ಶಾಸ್ತ್ರವಲ್ಲ; ಅದು ಜನರ ಮೇಲೆ ಸವಾರಿ ಮಾಡುತ್ತಿರುವ ಯಜಮಾನಿಕೆಯ ಶಕ್ತಿ. ಈ ಹೊತ್ತಿನಲ್ಲಿ ತಂತ್ರಜ್ಞಾನದ ಅನುಕೂಲ ಹಾಗೂ ಅಪಾಯಗಳನ್ನು ಚರ್ಚಿಸುವುದು ನಮ್ಮ ಕಾಲದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜವಾಬ್ದಾರಿಯೂ ಹೌದು.

ಭಾರತೀಯ ಜ್ಞಾನ ಪರಂಪರೆಯನ್ನು ಗಮನಿಸಿದರೆ ಸಾಹಿತ್ಯಕ್ಕೆ ಇದ್ದಷ್ಟೇ ಪ್ರಾಶಸ್ತ್ಯ ವಿಜ್ಞಾನಕ್ಕೂ ಇದ್ದಿತ್ತು. ಗಣಿತ, ಖಗೋಳ ವಿಜ್ಞಾನ, ಆಯುರ್ವೇದ ಮುಂತಾದ ಜ್ಞಾನ ಶಾಖೆಗಳನ್ನು ನಾವು ನಿದರ್ಶನಕ್ಕಾಗಿ ಗಮನಿಸಬಹುದು. ಅದರಲ್ಲೂ ದಶಮೂಲ ಪದ್ಧತಿ ಜಗತ್ತಿಗೆ ಭಾರತ ನೀಡಿದ ಬಹುದೊಡ್ಡ ಕೊಡುಗೆ. ಅಂತೆಯೇ ಸೊನ್ನೆಯ ಪರಿಕಲ್ಪನೆ. ನಮ್ಮ ಅಧ್ಯಯನ ಕ್ರಮದಲ್ಲಿ ಒಂದು ರೀತಿಯ ಸಮಗ್ರತೆ ಇತ್ತು. ಆದರೆ ಬರಬರುತ್ತಾ ನಮ್ಮ ಅಧ್ಯಯನದ ಕ್ರಮ ಬಿಡಿಯಾದ ನೆಲೆಯಲ್ಲಿ ನಡೆಯುತ್ತಿದೆಯೇ ಹೊರತು, ಇಡಿಯಾದ ಪರಿಕಲ್ಪನೆಯಿಂದ ದೂರ ಸರಿದಂತೆ ಕಾಣುತ್ತದೆ. ವಿಶೇಷ ನೈಪುಣ್ಯತೆಯ ನೆಲೆಯಲ್ಲಿ ಆಳಕ್ಕೆ ಇಳಿಯುತ್ತಾ ಹೋಗಿ ವಿಸ್ತಾರವನ್ನು ಕಳೆದುಕೊಂಡಿತೇ? ಅನ್ಯಜ್ಞಾನ ಶಿಸ್ತುಗಳ ಜೊತೆ ಅನುಸಂಧಾನ ಕಡಿಮೆಯಾಯಿತೇ? ಇಂದು ಮಾನವ ಸಂಬಂಧಗಳಂತೆಯೇ ಜ್ಞಾನ ಶಾಖೆಗಳೂ ದ್ವೀಪಗಳಾಗುತ್ತಿವೆಯೇ? ಇಂತಹ ಪ್ರಶ್ನೆಗಳಿಗೆ ನಾವು ಮುಖಾಮುಖಿಯಾಗಬೇಕಿದೆ.

ವಿಜ್ಞಾನ ಮತ್ತು ಸಾಹಿತ್ಯ ಪರಸ್ಪರ ವಿರೋಧವೆಂಬ ರೂಢಿಯ ನಂಬುಗೆ ಅರ್ಥವಿಲ್ಲದ್ದು. ಸಾಹಿತ್ಯ ಭಾವ ಜಗತ್ತಿಗೆ ಸಂಬಂಧಪಟ್ಟದ್ದು, ವಿಜ್ಞಾನ ಭವ ಜಗತ್ತಿಗೆ ಸಂಬಂಧಪಟ್ಟದ್ದು ಎಂಬುದು ನಿಜವಾದರೂ ಇವುಗಳ ನಡುವೆ ಅರ್ಥಪೂರ್ಣ ಸಂಬಂಧವಿದೆ. ಹಾಗೆ ನೋಡಿದರೆ ಕುವೆಂಪು ವಿಜ್ಞಾನಿಯನ್ನು 'ಯಂತ್ರರ್ಷಿ' ಎಂದು ಕರೆದು ಕೈವಾರಿಸಿದ್ದಾರೆ.

ಯುಗಯುಗಗಳಜ್ಞಾನದಿಂದೆಮ್ಮನುದ್ಧರಿಸಿ
ವಿಜ್ಞಾನ ವಿದ್ಯೆಯನು ನೀಡಿ ಕಾಪಾಡಿರುವ
ಓ ಮಾನವನ ಧೀರ ಮತಿಯೆ, ನೀನಿಂದೆಮಗೆ
ಆರಾಧ್ಯ ದೇವತೆಯು! ನಿನ್ನ ಪೂಜಿಪ ನರರು,
ಯಂತ್ರರ್ಷಿ ಮಾನವರೆ, ಮಂತ್ರರ್ಷಿಗಳು ನಮಗೆ!
ಹೇ ಪುಣ್ಯಯಂತ್ರರ್ಷಿ, ನೀನೆಮ್ಮ ವಿಜಿಗೀಷು
ಮತಿಗೆ ಪ್ರತಿನಿಧಿಯಾಗಿ ನಿಂತಿರುವೆ; ಅದರಿಂದೆ
ರಾಜರಾಜರ ಹೊಗಳಲಾರದೀ ಕಬ್ಬಿಗನ
ವಾಣಿ ನಿನ್ನನು ಕುರಿತು ಹಾಡುತಿದೆ! ಇನ್ನೆಲ್ಲಿ
ಭೂತಳಾದಿಪರ ನುತಿ? ಇನ್ನೆಲ್ಲಿ ಮಾನವರ
ಕೊಲೆಗೈವ ರಕ್ತದಾಹಾತುರರ ವೀರಕಥೆ?
ಜಯಮಕ್ಕೆ! ಸೊಗಮಕ್ಕೆ! ಮನುಜ ಜೀವನ ಶಾಂತಿ
ಸಂಸ್ಥಾಪನೆಗೆ ಯಶೋಲೋಭವಿನಿತಿಲ್ಲದೆಯೆ
ಮೂರ್ಖ ನಿಂದೆಯ ಲೆಕ್ಕಿಸದೆ ದುಡಿವ ಯಂತ್ರರ್ಷಿ,
ನಿನಗೆ ಜಯವಾಗಲಿ! ಶಾಂತಿ ಸುಖವಾಗಲಿ!

ನಿನ್ನ ತಂತ್ರಕೆ ಮಣಿದು ಹರಿವ ವಾಹಿನಿ ನಿಂತು
ಕೈವೊಲಕೆ ಕೈನೀರನೆರೆಯುತಿದೆ; ಮರುಭೂಮಿ
ಹಸುರು ನಗೆಯನು ಸೂಸುವುದ್ಯಾನವಾಗುತಿದೆ;
ಲೋಹ ಸ್ವಪ್ನವ ಕಾಣುತೊರಗಿದ್ದ ಸಹ್ಯಾದ್ರಿ
ನಿನ್ನ ಮಂತ್ರಾಘಾತದಲಿ ನಿದ್ರೆಯಿಂದೆದ್ದು
ಮಾನವಗೆ ಕೈಂಕರ್ಯವೆಸಗುತಿದೆ! ಓ ಋಷಿಯೆ,
ನೀನು ಮನುಜನ ಮಹಾಮತಿಗೆ ವಿಜಯಪತಾಕೆ!
ಮನುಜ ಮಾನಸ ನಾಕದಿಂದೆ ಧೀ ಗಂಗೆಯಂ
ಭೂಮಿಗೆಳೆತಂದಿರುವ ನೂತನ ಭಗೀರಥನೆ,
ನಿನಗೆ ಜಯವಾಗಲಿ! ಶಾಂತಿಸುಖವಾಗಲಿ:
ವಿಶ್ವೇಶ ಕೃಪೆಯಿಂದೆ ಧೀಶಕ್ತಿ ಚಿರವಾಗಲಿ!

ಮೌಢ್ಯವನ್ನು ತೊಡೆದು ಹಾಕಿ ನವ ಸಮಾಜ ನಿರ್ಮಾಣಕ್ಕೆ ಕಾರಣವಾಗಿ ಕ್ರಾಂತಿಕಾರಕ ಬದಲಾವಣೆಯನ್ನು ತಂದ ವಿಜ್ಞಾನದ ಬಗ್ಗೆ ಕುವೆಂಪು ಅವರಿಗೆ ಅಪಾರ ಮೆಚ್ಚುಗೆಯಿದೆ.

ಕಾರಂತರ ಸಾಹಸ

ಶಿವರಾಮ ಕಾರಂತರಂತೂ ಕೇವಲ ಸಾಹಿತಿಯಾಗಿರಲಿಲ್ಲ. ಒಬ್ಬ ವಿಜ್ಞಾನಿಯೂ ಆಗಿದ್ದರು. 1931ರಲ್ಲೇ ಅವರು 'ಬಾಲಪ್ರಪಂಚ'ವೆಂಬ ಮಕ್ಕಳ ವಿಶ್ವಕೋಶ ಹೊರತಂದರು. ನಾಲ್ಕು ಸಂಪುಟಗಳ ಅವರ ಬೃಹತ್ ಯೋಜನೆ 'ವಿಜ್ಞಾನ ಪ್ರಪಂಚ' 1964ರಲ್ಲಿ ಕೊನೆಗೊಂಡಿತು. 'ನಾಗರಿಕತೆಯ ಹೊಸ್ತಿಲಲ್ಲಿ' ಎಂಬ ಅವರ ಪುಸ್ತಕ ವಿಜ್ಞಾನಕ್ಕೆ ಸಂಬಂಧಿಸಿದ ಮತ್ತೊಂದು ಪ್ರಮುಖ ಕೃತಿ. ಇಲ್ಲಿಯೇ ನಾವು ಬಿ.ಜಿ.ಎಲ್ ಸ್ವಾಮಿಯವರ 'ಹಸುರು ಹೊನ್ನು' ಪುಸ್ತಕವನ್ನು ಗಮನಿಸಬಹುದು. ವಿಜ್ಞಾನದಂತಹ ಶಾಸ್ತ್ರ ವಿಷಯವನ್ನು ಸಾಹಿತ್ಯ ಸ್ಪರ್ಶದಿಂದ ಹೇಗೆ ಆಕರ್ಷಕವಾಗಿ ಹೇಳಬಹುದೆಂಬುದಕ್ಕೆ ಇದು ಅತ್ಯುತ್ತಮ ಉದಾಹರಣೆ. ಜೂಲ್ಸ್ ವರ್ನ್‌ನ 'ಜರ್ನಿ ಟು ದ ಸೆಂಟರ್ ಆಫ್ ದಿ ಅರ್ಥ್' ಕೃತಿಯನ್ನು ಗೋಪಾಲಕೃಷ್ಣ ಅಡಿಗರು 'ಭೂಗರ್ಭಯಾತ್ರೆ' ಎಂದು ಅನುವಾದಿಸಿರುವುದು ನನಗಿಲ್ಲಿ ನೆನಪಾಗುತ್ತದೆ. 'ನನ್ನ ಕಾದಂಬರಿಗಳಲ್ಲಿ ಆಧ್ಯಾತ್ಮಿಕ, ಧಾರ್ಮಿಕ ಅಂಶಗಳನ್ನು ತ್ಯಜಿಸಿ ಆದಷ್ಟು ವೈಜ್ಞಾನಿಕ ಅಂಶಗಳಿಗೆ ಪ್ರಾಧಾನ್ಯತೆ ಕೊಡಲು ಪ್ರಯತ್ನಿಸಿದ್ದೇನೆ' ಎಂದಿರುವ ತೇಜಸ್ವಿಯವರು ವೈಜ್ಞಾನಿಕ ಚಿಂತನೆ ನನ್ನ ವ್ಯಕ್ತಿತ್ವದ ಅವಿಭಾಜ್ಯ ಅಂಗವೆನ್ನುತ್ತಾರೆ. ಅವರ 'ಕರ್ವಾಲೋ' ಇದಕ್ಕೆ ಅತ್ಯುತ್ತಮ ನಿದರ್ಶನ.

ಬಿರುಕು ಇದೆಯೆ?

ಆದರೆ 1950ರ ಸುಮಾರಿಗೆ ಬ್ರಿಟಿಷ್ ವಿಜ್ಞಾನಿ ಮತ್ತು ಕಾದಂಬರಿಕಾರ ಸಿ.ಪಿ. ಸ್ನೋ 'ದ ಟು ಕಲ್ಚರ್ಸ್'(ಎರಡು ಸಂಸ್ಕೃತಿಗಳು) ಎಂಬ ಕೃತಿ ಬರೆದು ಸಾಹಿತ್ಯವನ್ನು ವಿಜ್ಞಾನೇತರ ವಿಷಯಗಳ ಪ್ರಾತಿನಿಧಿಕವಾಗಿ ತೆಗೆದುಕೊಂಡು ವಿಜ್ಞಾನ ಮತ್ತು ಸಾಹಿತ್ಯದ ನಡುವೆ ಒಂದು ಬಿರುಕಿದೆ ಎನ್ನುತ್ತಾನೆ. ವಿಜ್ಞಾನಿಗಳಿಗೆ ಸಾಹಿತ್ಯಿಕ ಸಂಸ್ಕೃತಿ ಗೊತ್ತಿರುವುದಿಲ್ಲ. ಸಾಹಿತಿಗಳಿಗೆ ವೈಜ್ಞಾನಿಕ ಸಂಸ್ಕೃತಿ ತಿಳಿದಿರುವುದಿಲ್ಲ. ಲೋಕದ ಹಲವು ಸಮಸ್ಯೆಗಳು ಪರಿಹಾರಗೊಳ್ಳದೇ ಇರುವುದಕ್ಕೆ ಈ ಬಿರುಕೇ ಕಾರಣ ಎನ್ನುವುದು ಸ್ನೋನ ವಾದ.

ನಮ್ಮ ಅಧ್ಯಯನ ಕ್ರಮದಲ್ಲಿ ಸ್ಪಷ್ಟವಾಗಿ ಎರಡು ವಿಭಾಗಗಳಿವೆ. ಒಂದು ಮಾನವಿಕ ಪ್ರಕಾರ. ಇದರಲ್ಲಿ ಸಾಹಿತ್ಯ, ಸಂಗೀತ, ನೃತ್ಯ, ಶಿಲ್ಪ, ಚಿತ್ರಕಲೆ ಮೊದಲಾದವುಗಳ ಜೊತೆಗೆ ಚರಿತ್ರೆ, ತರ್ಕಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜ ವಿಜ್ಞಾನ, ತತ್ತ್ವಜ್ಞಾನ ಇವುಗಳೂ ಸೇರುತ್ತವೆ. ಮತ್ತೊಂದು ವಿಜ್ಞಾನದ ಅಧ್ಯಯನ ಪ್ರಕಾರ. ಇದರಲ್ಲಿ ವೈದ್ಯ ವಿಜ್ಞಾನ, ಕಂಪ್ಯೂಟರ್ ಸೈನ್ಸ್, ತಂತ್ರಜ್ಞಾನ, ಭೌತಶಾಸ್ತ್ರ, ರಾಸಾಯನಿಕ ಶಾಸ್ತ್ರ, ಜೀವವಿಜ್ಞಾನ, ಅನ್ವಯಿಕ ವಿಜ್ಞಾನ ಮೊದಲಾದ ಪ್ರಕಾರಗಳು ಸೇರುತ್ತವೆ.

> **ಕನ್ನಡಕ್ಕಿದೆ ವಿಜ್ಞಾನದ ಸ್ಪರ್ಶ**
>
> ಮೈಸೂರಿನ 'ಮಹಾಜನ ಕಾಲೇಜು' ಮತ್ತು 'ಅಭಿನವ ಬೆಂಗಳೂರು' ಜಂಟಿಯಾಗಿ 'ಕನ್ನಡವೆಂದರೆ ಬರಿನುಡಿಯಲ್ಲ ಅದಕಿದೆ ವಿಜ್ಞಾನದ ಸ್ಪರ್ಶ' ಎಂಬ ಎರಡು ದಿನಗಳ ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ಈ ವಾರ ಹಮ್ಮಿಕೊಂಡಿದ್ದು, ಆ ಕಾರ್ಯಕ್ರಮದ ರೂವಾರಿ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಆಶಯ ಇಲ್ಲಿದೆ.

ಮಾನವಿಕ ಹಾಗೂ ವಿಜ್ಞಾನ ವಿಷಯದ ಅಧ್ಯಯನಗಳು ಪರಸ್ಪರ ಪೂರಕವಾದಂತಹವುಗಳು. ಮಾನವ ಕುಲಕ್ಕೆ ಈ ಎಲ್ಲದರ ಅಗತ್ಯವೂ ಇದೆ. ಆದರೆ ಈಗ ನಮ್ಮ ಅಧ್ಯಯನ ಕ್ರಮದಲ್ಲಿ ಮಾನವಿಕ ವಿಷಯಗಳು ಹಿಂದೆ ಸರಿದು ವಿಜ್ಞಾನ ವಿಷಯಗಳಿಗೆ ಹೆಚ್ಚು ಪ್ರಾಧಾನ್ಯತೆ ದೊರಕುತ್ತಿದೆ. ಅದರಲ್ಲೂ ಮೂಲ ವಿಜ್ಞಾನಕ್ಕಿಂತ ತಂತ್ರಜ್ಞಾನಕ್ಕೆ ಹೆಚ್ಚು ಆದ್ಯತೆ ಇದೆ. ಈ ಬೆಳವಣಿಗೆಯ ಬಗ್ಗೆಯೂ ಸಂವೇದನಾಶೀಲ ಮನಸ್ಸು ಚಿಂತಿಸುವ ಅಗತ್ಯವಿದೆ.

ಸ್ನೋ ಹೇಳುವ ವಿಜ್ಞಾನ ಮತ್ತು ಸಾಹಿತ್ಯದ ನಡುವಿನ ಬಿರುಕನ್ನು ಕೆ.ವಿ. ತಿರುಮಲೇಶ್ ಸಾಹಿತ್ಯದ ಪರಿಭಾಷೆಯಲ್ಲಿ 'ಸಂವೇದನಾ ವಿಘಟನೆ' (ಡಿಸ್ ಅಸೋಷಿಯೇಷನ್ ಆಫ್ ಸೆನ್ಸಿಬಿಲಿಟಿ) ಎಂದು ಕರೆಯುತ್ತಾರೆ. ಅಂದರೆ ವಿಚಾರ ಮತ್ತು ಭಾವದ ನಡುವೆ, ಆಧುನಿಕತೆ ಮತ್ತು ಪರಂಪರೆಯ ನಡುವೆ, ಸಮಕಾಲೀನತೆ ಮತ್ತು ಸಾರ್ವಕಾಲಿಕತೆಯ ನಡುವೆ ಇರುವ ಬಿರುಕನ್ನು ಎಲಿಯೆಟ್ 'ಸಂವೇದನಾ ವಿಘಟನೆ' ಎಂದು ಕರೆದಿದ್ದಾನೆ. ಅತ್ಯುತ್ತಮ ಕೃತಿಯೊಂದರಲ್ಲಿ ಇವುಗಳ ಅರ್ಥಪೂರ್ಣ ಹೊಂದಾಣಿಕೆ ಇರಬೇಕಾಗುತ್ತದೆ. ಸ್ನೋ ಸಹ ಇದೇ ಅರ್ಥದಲ್ಲಿ ಮಾತನಾಡುತ್ತಿದ್ದಾನೆ. ಮಾನವ ಹಿತಕ್ಕೆ, ಸಮಾಜದ ಬೆಳವಣಿಗೆಗೆ ವಿಜ್ಞಾನ ಮತ್ತು ಸಾಹಿತ್ಯದ ನಡುವೆ ವಿಘಟನೆಯ ಬದಲು ಅರ್ಥಪೂರ್ಣ ಹೊಂದಾಣಿಕೆ ಸಾಧ್ಯವಾಗಬೇಕೆಂಬುದು ಆತನ ನಿಲುವು. ಆದರೆ ಇದು ಸಾಧ್ಯವಾಗಿಲ್ಲವೆಂಬುದು ಸ್ನೋನ ವಾದ.

ವಿಜ್ಞಾನವೆಂದರೆ ನಿರಂತರ ಬದಲಾವಣೆ. ಜನರಿಗೆ ಸ್ಥಿರತೆ ಮತ್ತು ಬದಲಾವಣೆಯನ್ನು ಹೊಂದಿಸಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಅದರಲ್ಲೂ ಅವರ ಆಚಾರ ವಿಚಾರಗಳನ್ನು ತಿರಸ್ಕರಿಸಿದಾಗ ನಮ್ಮ ಮತ ಧರ್ಮಗಳು, ನಮ್ಮ ನಂಬಿಕೆಗಳು, ವಿಶ್ವಾಸಗಳು ನಮಗೆ ದಿನನಿತ್ಯದ ಚಟುವಟಿಕೆಯಂತೆ ಅಭ್ಯಾಸವಾಗಿಬಿಟ್ಟಿರುತ್ತದೆ. ಡಿ.ವಿ.ಜಿ.ಯವರು ಹೇಳುವಂತೆ, ರೂಢಿಗತ ಮಾರ್ಗದಲ್ಲಿ ಒಂದು ಅನುಕೂಲತೆ ಇರುತ್ತದೆ. ಅಭ್ಯಾಸದಲ್ಲಿ ಸವಾಲುಗಳಿರುವುದಿಲ್ಲ. ಹೊಸದು ಬಂದಾಗ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಬಹುಶಃ ವಿಜ್ಞಾನದ ಕುರಿತಾದ ಪ್ರತಿರೋಧಕ್ಕೆ ಇದೂ ಒಂದು ಕಾರಣವಿರಬೇಕು. ಆದರೆ ಜಗತ್ತು ನಿರಂತರ ಬದಲಾಗುತ್ತಾ ಹೋಗುತ್ತದೆ. ಬದಲಾದ ಸಂದರ್ಭಕ್ಕೆ ತಕ್ಕಂತೆ ಮನುಷ್ಯ ಜೀವನಕ್ಕೆ ಹೊಸ ಶಕ್ತಿ ಮೂಲಗಳು ಅಗತ್ಯವಿವೆ. ಅವುಗಳನ್ನು ನಿರಾಕರಿಸಿದರೆ ಬದುಕು ದುರ್ಬರವಾಗುತ್ತದೆ. ವಿಜ್ಞಾನ ಹೊಸ ಹೊಸ ಶಕ್ತಿ ಮೂಲಗಳನ್ನು ಸದಾ ಅನ್ವೇಷಿಸುತ್ತಿರುತ್ತದೆ. ಸಮಾಜ ಅದನ್ನು ಮೊದಲು ಸ್ವೀಕರಿಸಲು ನಿರಾಕರಿಸಿದರೂ ಕ್ರಮೇಣ ಅದು ಬದುಕಿನ ಭಾಗವಾಗಿಬಿಡುತ್ತದೆ.

ದೇಸಿ ವಿದೇಶಿ ಪರಿಕಲ್ಪನೆ

ಭಾರತೀಯ ಸಂದರ್ಭದಲ್ಲಿ 'ದೇಸಿ ವಿದೇಶಿ' ಎಂಬ ಪರಿಕಲ್ಪನೆ ನಮ್ಮ ಅನೇಕ ಬಗೆಯ ದ್ವಂದ್ವಗಳಿಗೆ ಕಾರಣವಾಗಿದೆ. ಪರಂಪರೆಯನ್ನು ದೇಸಿ ಎಂದು, ಆಧುನಿಕತೆಯನ್ನು ವಿದೇಶಿ ಎಂದು ಅದು ಹೇಗೋ ನಾವು ಪರಿಗಣಿಸಿಬಿಟ್ಟಿದ್ದೇವೆ. ದೇಸಿ ಸ್ವೀಕೃತ, ವಿದೇಶಿ ವರ್ಜ್ಯ ಎಂಬ ಸರಳ ಪರಿಕಲ್ಪನೆಯೂ ರೂಢಿಯಲ್ಲಿದೆ. ಆದರೆ ನಮ್ಮ ಬದುಕಿಗೆ ಆಧುನಿಕ ತಂತ್ರಜ್ಞಾನ ಅನಿವಾರ್ಯ. ದಿನನಿತ್ಯದ ಬದುಕಿನಲ್ಲಿ ತಂತ್ರಜ್ಞಾನದ ಎಲ್ಲ ಸೌಲಭ್ಯಗಳನ್ನು ಪಡೆಯುತ್ತಲೇ ಅದನ್ನು ವಿರೋಧಿಸುವ ಒಂದು ಬಗೆಯ ಛಿದ್ರ ವ್ಯಕ್ತಿತ್ವ (ಸ್ಪ್ಲಿಟ್ ಪರ್ಸನಾಲಿಟಿ)ವನ್ನು ನಾವು ಕಾಣುತ್ತೇವೆ.

ನಮ್ಮ ಪರಂಪರಾಗತ ಪದ್ಧತಿಗೂ, ಧರ್ಮಕ್ಕೂ ನಿಕಟವಾದ ಸಂಬಂಧವಿದೆ. ಅಂತಹ ಕೆಲವನ್ನು ನಾವು ಪ್ರಶ್ನಾತೀತವೆಂಬಂತೆ ಆಚರಿಸಿಕೊಂಡು ಬರುತ್ತಿದ್ದೇವೆ. ಆದರೆ ಪ್ರಶ್ನಿಸಿ ಅರಿತುಕೊಳ್ಳುವುದು ವಿಜ್ಞಾನದ ವಿಧಾನ.

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?
ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?
ನಿನ್ನೆದೆಯ ದನಿಯೆ ಋಷಿ ಮನು ನಿನಗೆ ನೀನು!

ಒಂದು ಕಾಲದ ಆಚರಣೆಗೆ ತನ್ನ ಸಂದರ್ಭದಲ್ಲಿ ತರ್ಕವಿರುತ್ತದೆ. ಸಕಾರಣವಿರುತ್ತದೆ. ಆದರೆ ಬದಲಾದ ಕಾಲಘಟ್ಟದಲ್ಲಿ ಅದು ಅರ್ಥಹೀನವಾಗಿ ಮೌಢ್ಯವಾಗಿಬಿಡಬಹುದು. ಆದರೆ ಸಮುದಾಯ ಪ್ರಶ್ನಾತೀತವಾಗಿ ಅದನ್ನು ಆಚರಿಸಿಕೊಂಡು ಬರುತ್ತಲೇ ಇರುತ್ತದೆ. ಆಧುನಿಕ ಮನಸ್ಸು ಇದನ್ನು ಪ್ರಶ್ನಿಸಿದಾಗ ಘರ್ಷಣೆ ಆರಂಭವಾಗುತ್ತದೆ. ಇದೇ 'ಛಿದ್ರ ವ್ಯಕ್ತಿತ್ವ'ಕ್ಕೆ ಕಾರಣವಾಗುವಂಥದ್ದು.

ಮೊಬೈಲ್‌ನ ನಿದರ್ಶನ

ವಿಜ್ಞಾನ ಮತ್ತು ತಂತ್ರಜ್ಞಾನ ನಮ್ಮ ಬದುಕಿನಲ್ಲಿ ಅನೇಕ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿದೆ. ಅನೇಕ ಸವಲತ್ತುಗಳನ್ನು ಒದಗಿಸಿಕೊಟ್ಟಿದೆ. ಬೆರಳ ತುದಿಯಲ್ಲಿ ಜಗತ್ತಿನ ದರ್ಶನವಾಗುತ್ತದೆ. ಇದೆಲ್ಲವನ್ನೂ ನಾವು ಬಳಸಿಕೊಳ್ಳುತ್ತಿದ್ದೇವೆ. ಇದಕ್ಕೆ ಮೊಬೈಲ್‌ಗಿಂತ ಮತ್ತೊಂದು ನಿದರ್ಶನ ಬೇಕಿಲ್ಲ. ಸಂಸಾರಿಯಿಂದ ಹಿಡಿದು ಸನ್ಯಾಸಿಯವರೆಗೆ, ಪ್ರಧಾನ ಮಂತ್ರಿಯಿಂದ ಹಿಡಿದು ಪಾದಚಾರಿ ಮಾರ್ಗದ ಮಾರಾಟಗಾರರವರೆಗೆ ಇದರ ಬಳಕೆಯಿದೆ. ಇದರ ಪ್ರಯೋಜನವನ್ನು ನಾವೆಲ್ಲರೂ ಪಡೆಯುತ್ತಿದ್ದೇವೆ. ನಮ್ಮ ಬದುಕನ್ನು ಸುಖಮಯವಾಗಿಸುತ್ತಿರುವ ಇಂತಹ ಅನೇಕ ನಿದರ್ಶನಗಳನ್ನು ನಾವು ನೋಡಬಹುದು.

ಇದನ್ನು ಒಪ್ಪಿಕೊಳ್ಳುತ್ತಲೇ ಇದು ತಂದೊಡ್ಡುತ್ತಿರುವ ಅಪಾಯಗಳ ಬಗ್ಗೆಯೂ ನಾವು ಯೋಚಿಸಬೇಕಾಗಿದೆ. ಭವ ಜಗತ್ತಿಗೆ ಅನೇಕ ಸವಲತ್ತುಗಳನ್ನು ಕಲ್ಪಿಸಿಕೊಡುವ ಈ ತಂತ್ರಜ್ಞಾನ ನಮ್ಮ ಭಾವ ಜಗತ್ತಿನ ಮೇಲೆ, ಪರಿಸರದ ಮೇಲೆ, ಜೀವ ವೈವಿಧ್ಯದ ಮೇಲೆ, ನಮ್ಮ ಜೀವನ ವಿಧಾನವಾದ ಸಂಸ್ಕೃತಿಯ ಮೇಲೆ ಬೀರುತ್ತಿರುವ ಪ್ರಭಾವ ಯಾವ ಬಗೆಯದು ಎಂಬುದನ್ನೂ ನಾವು ಚಿಂತಿಸುವ ಅಗತ್ಯವಿದೆ. ನಮ್ಮೆಲ್ಲರ ವೈಯಕ್ತಿಕ ಅನುಭವದ ಕೆಲವು ಸರಳವಾದ ನಿದರ್ಶನಗಳನ್ನು ನೀಡುವುದಾದರೆ

ಚಿಕ್ಕವರಾಗಿರುವಾಗ ರಾತ್ರಿ ಹಾಸಿಗೆ ಹಾಸಿ ಬೆಳಿಗ್ಗೆ ಎದ್ದು ಅದನ್ನು ಸುತ್ತಿಡುವುದು ರೂಢಿಯಲ್ಲಿತ್ತು. ಯಾರಿಗೋ ಹುಷಾರಿಲ್ಲದಿದ್ದಾಗ ಮಾತ್ರ ಹಗಲು ಹಾಸಿಗೆ ಹಾಸುತ್ತಿದ್ದರು. ಯಾರದ್ದಾದರೂ ಮನೆಯಲ್ಲಿ ಹಗಲು ಹಾಸಿಗೆ ಕಂಡರೆ ಅದು ಅನಾರೋಗ್ಯದ ಸೂಚಕ. ಕರ್ಲಾನ್ ಬೆಡ್ ಬಂದಮೇಲೆ ಹಗಲಿರುಳು ಹಾಸಿಗೆ ಸದಾ ಸಿದ್ಧವಿರುತ್ತದೆ. ನಿದ್ದೆಯೇನು? ಊಟ ತಿಂಡಿ ಓದು ಎಲ್ಲವೂ ಹಾಸಿಗೆಯ ಮೇಲೆ. ಇದು ಮೇಲ್ನೋಟಕ್ಕೆ ಸರಳವಾದ ಬದಲಾವಣೆಯಂತೆ ಕಂಡರೂ ನಮ್ಮ ಜೀವನ ವಿಧಾನದ ಮೇಲೆ, ಆರೋಗ್ಯದ ಮೇಲೆ ಬೀರಿರುವ ಪರಿಣಾಮ ಅಪಾರವಾದುದು.

ಬಳಸಿ ಬಿಸಾಕು ಪ್ರಭಾವ

'ಬಳಸಿ ಬಿಸಾಕು' (ಯೂಸ್ ಅಂಡ್ ತ್ರೋ) ಎಂಬುದು ಆಧುನಿಕತೆ ಒದಗಿಸಿಕೊಟ್ಟಿರುವ ಮತ್ತೊಂದು ಸವಲತ್ತು. ಇದು ನಮಗೆ ಅನೇಕ ಬಗೆಯಲ್ಲಿ ಅನುಕೂಲ ಒದಗಿಸಿಕೊಟ್ಟಿದೆ ಎಂಬುದು ನಿಜ. ಆದರೆ ಇದರ ಪರಿಣಾಮ ಎರಡು ನೆಲೆಯಲ್ಲಿದೆ. ಒಂದು ಇದು ಉಂಟು ಮಾಡುವ ತ್ಯಾಜ್ಯ; ಪ್ಲಾಸ್ಟಿಕ್ ಉಂಟು ಮಾಡುತ್ತಿರುವ ಅಪಾಯವನ್ನು ಗಮನಿಸಿ. ಮತ್ತೊಂದು ಈ ತತ್ವ ನಮ್ಮ ಭಾವ ಜಗತ್ತನ್ನು ಪ್ರಭಾವಿಸಿದಂತೆ ತೋರುತ್ತದೆ. ಅಪ್ಪ, ಅಮ್ಮ, ಅಣ್ಣ, ತಂಗಿ, ಹೆಂಡತಿ, ಗಂಡ, ಗೆಳೆಯ ಈ ನೆಲೆಯಲ್ಲೂ ಬಳಸಿ ಬಿಸಾಕುವ ಭಾವನೆ ಬಲಗೊಂಡಂತೆ ಕಾಣಿಸುತ್ತಿದೆ.

ಈಗಾಗಲೇ ಸೂಚಿಸಿದಂತೆ ಮೊಬೈಲ್ ಅನೇಕ ಅನುಕೂಲಗಳನ್ನು ಕಲ್ಪಿಸಿದ್ದರೂ, ಮಾನವ ಸಂಘಜೀವಿ ಎಂಬ ಮೂಲ ತತ್ತ್ವವನ್ನೇ ಪಲ್ಲಟಗೊಳಿಸಿಬಿಟ್ಟಿದೆ. ಮನುಷ್ಯ ಸಂಬಂಧಗಳೇ ಅರ್ಥಹೀನವಾಗುತ್ತಿವೆ. ಸಂದೇಶಗಳೇ ಸಂಬಂಧ ಸಾಧನವಾಗಿವೆಯೇ ಹೊರತು ಮುಖತಃ ಭೇಟಿಯಾಗಲಿ, ಪರಸ್ಪರ ಒಡನಾಟವಾಗಲಿ ದೂರವಾಗುವುದರ ಮೂಲಕ ಸಾಂಘಿಕ ಬದುಕಿನ ಸಂತಸದಿಂದ ಮನುಷ್ಯ ವಂಚಿತನಾಗುತ್ತಿರುವ ಸಂದರ್ಭ ಸೃಷ್ಟಿಯಾಗುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಪರಿಸರದ ಮೇಲಾಗುತ್ತಿರುವ ಹಾನಿಯಂತೂ ಅಪಾರ. ಲಯ ತಪ್ಪುತ್ತಿರುವ ಪ್ರಕೃತಿ ಅನೇಕ ಬಗೆಯ ಪ್ರಳಯಗಳಿಗೆ ಕಾರಣವಾಗುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ.

ತಂತ್ರಜ್ಞಾನದ ಪ್ರಭಾವದಿಂದಾಗಿ ರೂಪುಗೊಂಡಿರುವ ಕೊಳ್ಳುಬಾಕ ಸಂಸ್ಕೃತಿ ಸದಾ ನಮ್ಮನ್ನು ಅತೃಪ್ತಿಯ ನೆಲೆಯಲ್ಲಿಯೇ ನಿಲ್ಲುವಂತೆ ಮಾಡಿದೆ. ನೀವು ಯಾವ ವಸ್ತುವನ್ನು ಕೊಂಡರೂ ಕೆಲವು ದಿನಗಳಲ್ಲಿಯೇ ಅದು ನಿಮಗೆ ಅಪ್ರಸ್ತುತವಾಗಿಬಿಡುವ ಬಗೆ, ಭೋಗ ಸಾಧನಗಳಿಗೂ ಸಾಮಾಜಿಕ ಸ್ಥಾನಮಾನಕ್ಕೂ ಸೃಷ್ಟಿಯಾಗಿರುವ ಸಂಬಂಧ ನೆಮ್ಮದಿಯ ಬದುಕು ಸಾಧ್ಯವಾಗದ ಸ್ಥಿತಿಯನ್ನು ನಿರ್ಮಾಣ ಮಾಡುತ್ತಿರುವಂತೆ ತೋರುತ್ತಿದೆ.

ಏಕಾಕೃತಿಯ ಸೃಷ್ಟಿ

ತಂತ್ರಜ್ಞಾನದ ಮತ್ತೊಂದು ಅಪಾಯವೆಂದರೆ ಬಹುಸಂಸ್ಕೃತಿಯನ್ನು ನಾಶಮಾಡಿ ಏಕಾಕೃತಿಯನ್ನು ಅದು ರೂಪಿಸುತ್ತದೆ ಎಂಬುದು. ಮಾರುಕಟ್ಟೆ ವಿಸ್ತಾರವಾದಂತೆ ಬೃಹತ್ ಪ್ರಮಾಣದ ನಿರ್ಮಾಣಕ್ಕೆ ಈ ಏಕರೂಪತೆ ಅನಿವಾರ್ಯವೂ ಹೌದು. ಮನುಷ್ಯನ ಬದುಕನ್ನು ಚಂದಗೊಳಿಸಬೇಕಾದ ವಿಜ್ಞಾನ ಮಾರುಕಟ್ಟೆ ಕೇಂದ್ರಿತ ತಂತ್ರಜ್ಞಾನವಾದಾಗ ಈ ಅಪಾಯ ಸಹಜ. ನಮ್ಮಲ್ಲಿ ಪ್ರತಿಯೊಬ್ಬರ ಮನೆಯ ಅಡುಗೆಗೂ ವಿಭಿನ್ನ ರುಚಿಯಿರುತ್ತದೆ. ಆದರೆ ಸಿದ್ಧ ಆಹಾರಕ್ಕೆ (ರೆಡಿ ಫುಡ್) ಜಗತ್ತಿನಾದ್ಯಂತ ಒಂದೇ ರುಚಿ ಇರುತ್ತದೆ. ಆಧುನಿಕ ಬದುಕಿನಲ್ಲಿ ನಾವು ಸಿದ್ಧ ಆಹಾರದ ಅಗತ್ಯವನ್ನು ಅಲ್ಲಗಳೆಯಲಾಗುವುದಿಲ್ಲ. ಆದರೆ ಮನುಷ್ಯನ ಇಂದ್ರಿಯಗಳು ಈ ಬದಲಾವಣೆಯನ್ನು ಸಹಜವಾಗಿ ಸ್ವೀಕರಿಸುವುದಿಲ್ಲ. ಅದರಲ್ಲೂ ನಮ್ಮ ಕಿವಿ ಮತ್ತು ನಾಲಿಗೆ ಮೂಲ ಸಂಸ್ಕೃತಿಯನ್ನು ಅಷ್ಟು ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಅಮೆರಿಕಾದಲ್ಲಿರುವ ಕರ್ನಾಟಕದ ಒಬ್ಬ ವ್ಯಕ್ತಿ ಪಿಜ್ಜಾ, ಬರ್ಗರ್, ಸ್ಯಾಂಡ್‌ವಿಚ್‌ಗಳನ್ನು ಬಳಸಿದರೂ ಇಡ್ಲಿ, ದೋಸೆ, ಅನ್ನ ಸಾರನ್ನು ಅವನ ನಾಲಿಗೆ ಸದಾ ಹಂಬಲಿಸುತ್ತಿರುತ್ತದೆ. ಅಮೆರಿಕಾದಲ್ಲಿರುವ ನನ್ನ ಮೊಮ್ಮಗಳು ಅವರ ಅಮ್ಮಮ್ಮ 'ನಿನಗೇನು ಇಷ್ಟ?' ಎಂದಾಗ, 'ಅನ್ನ ಸಾರು' ಎಂದದ್ದು ನನಗೆ ಅಚ್ಚರಿ ಅನ್ನಿಸಲಿಲ್ಲ. ಕಣ್ಣು ನಮಗೆ ಅನೇಕ ವೇಳೆ ಮೋಸ ಮಾಡಬಹುದು. ಹೀಗಾಗಿ ಹೊರಗಿನ ರೂಪ ಆಕರ್ಷಣೆಗೆ ನಾವು ಒಳಗಾಗಬಹುದು. ಆದರೆ ರುಚಿ ವೈವಿಧ್ಯ ಅಷ್ಟು ಸುಲಭವಾಗಿ ಪಲ್ಲಟವಾಗುವುದಿಲ್ಲವೆನ್ನಿಸುತ್ತದೆ. ಸಂವೇದನಾಶೀಲ ಮನಸ್ಸಿನ ಸಾಹಿತಿಗೆ ಈ ಎಲ್ಲವೂ ಚಿಂತನೆಯ ಸಂಗತಿಗಳೇ.

ಈ ಸಂಕಿರಣ ನಮ್ಮ ಕಾಲದಲ್ಲಿ ಗಾಢ ಪರಿಣಾಮ ಬೀರುತ್ತಿರುವ ಅತ್ಯಂತ ಪ್ರಭಾವಿಯಾದ ವಿಜ್ಞಾನದ ಸವಲತ್ತು – ಸವಾಲುಗಳನ್ನು ಚರ್ಚಿಸುತ್ತಾ ವಿಜ್ಞಾನವನ್ನು ಸಾಹಿತ್ಯ ತನ್ನ ತೆಕ್ಕೆಗೆ ತೆಗೆದುಕೊಳ್ಳಲಿ ಎಂಬ ಆಶಯ ನನ್ನದು.

ಜಗತ್ತಿನ ಅತಿ ಅಪರೂಪದ ಕಾಯಿಲೆಗಳಲ್ಲಿ ಒಂದು ಎನಿಸಿರುವ ಜಿ.ಬಿ.ಸಿಂಡ್ರೋಮ್, 2025ರಲ್ಲಿ ಪುಣೆ ನಗರದಲ್ಲಿ ಒಮ್ಮೆಗೇ ಉಲ್ಬಣಿಸಿ ಹನ್ನೊಂದು ಜನರನ್ನು ಬಲಿ ಪಡೆದಿದೆ. ಅತಿ ಅಪರೂಪದ ಈ ರೋಗವು ಈ ರೀತಿ ಕಾಣಿಸಿಕೊಂಡಿರುವುದಿರಿಂದಾಗಿ, ಈಗ ಮಾಧ್ಯಮಗಳಲ್ಲಿ ಪ್ರಚಾರ ಪಡೆದಿದೆ.

ಜಿ ಬಿ ಸಿಂಡ್ರೋಮ್ ಭಯಬೇಡ

» ಡಾ. ನಾಗೇಶ್ ಎಸ್.ಅಡಿಗ

ಇತ್ತೀಚಿಗೆ ವರ್ತಮಾನ ಪತ್ರಿಕೆಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ, ದೇಶದ ವಿವಿಧ ಭಾಗಗಳಲ್ಲಿ ಈ ಕಾಯಿಲೆಯ ಸುದ್ದಿ ಬರುತ್ತಿದೆ. 2025ರ ಜನವರಿಯಿಂದ ಪುಣೆ ನಗರ ಮತ್ತು ಸುತ್ತಮುತ್ತ ಸುಮಾರು 211 ಜನರಿಗೆ ಇದು ಕಾಣಿಸಿಕೊಂಡಿದ್ದು, ಹನ್ನೊಂದು ಜನರು ಈ ಕಾಯಿಲೆಯಿಂದ ನಿಧನರಾಗಿದ್ದಾರೆ. ದೇಶದ ವಿವಿಧ ಭಾಗಗಳಲ್ಲಿ ಅಲ್ಲಲ್ಲಿ ಈ ಕಾಯಿಲೆ ವರದಿಯಾಗಿದೆ.

ಇದನ್ನು ಮೊದಲು ಕ್ರಿ.ಶ. 1859 ರಲ್ಲಿ ಲಾಂಡ್ರಿ ಜೀನ್ ಬ್ಯಾಪ್ಟಿಸ್ಟ್ ಒಕ್ಟೇವ್ ಎಂಬ ಫ್ರೆಂಚ್ ದೇಶದ ವೈದ್ಯರು ದೇಹದ ಕೆಳಬಾಗದಿಂದ ನಿಧಾನವಾಗಿ ಆವರಿಸಿಕೊಳ್ಳುವ ನರಮಾಂಸ ಕಾಂಡಗಳ ನಿಷ್ಕ್ರಿಯತೆ ಎಂದು ನಮೂದಿಸಿದ್ದರು. ಕ್ರಿ.ಶ. 1916 ರಲ್ಲಿ ಫ್ರೆಂಚ್ ನರರೋಗ ತಜ್ಞರಾದ ಜಾರ್ಜ್ ಗುಲಿಯನ್ ಮತ್ತು ಜಾನ್ ಅಲೆಕ್ಸಾಂಡ್ರೆ ಬ್ಯಾರೆ ಎಂಬುವರು ಈ ಕಾಯಿಲೆಯ ರೋಗ ಲಕ್ಷಣಗಳನ್ನು ವೈಜ್ಞಾನಿಕವಾಗಿ ದಾಖಲಿಸಿದ್ದರಿಂದ ಈ ಕಾಯಿಲೆಗೆ ಅವರ ಹೆಸರನ್ನೇ ಇಡಲಾಗಿತ್ತು. ಜಿ.ಬಿ.ಸಿಂಡ್ರೋಮ್ ಎಂದು ಸಾಮಾನ್ಯವಾಗಿ ಕರೆಯುತ್ತಾರೆ.

ಲಕ್ಷಣಗಳು

ರಕ್ತದಲ್ಲಿ ರೋಗ ನಿರೋಧಕ ಕಣಗಳ ವ್ಯತ್ಯಯದಿಂದ ಈ ಕಾಯಿಲೆ ಬರುತ್ತದೆ. ಸಾಮಾನ್ಯವಾಗಿ ಕೆಲವು ಸೂಕ್ಷ್ಮ ಕ್ರಿಮಿಗಳು ದೇಹದಲ್ಲಿ ಕಾಣಿಸಿಕೊಂಡ 7 ರಿಂದ 14 ದಿನಗಳ ಒಳಗೆ ರೋಗ ನಿರೋಧಕ ಕಣಗಳ ವ್ಯತ್ಯಯ ಕಂಡು ಬಂದು, ಮನುಷ್ಯರ ಪದಗಳಿಂದ ಮೇಲುಮೈಗೆ ನಿಧಾನವಾಗಿ ನರಮಾಂಸ ಖಂಡಗಳ ನಿಷ್ಕ್ರಿಯತೆ ಉಂಟುಮಾಡುತ್ತದೆ. ಆದರೆ, ಒಟ್ಟಾರೆ ಜಗತ್ತಿನಲ್ಲಿ ಇದು ಅತಿ ಅಪರೂಪದ ಕಾಯಿಲೆ ಮತ್ತು ಜಗತ್ತಿನಲ್ಲಿ ಸರಾಸರಿ ವಾರ್ಷಿಕ 1,00,000 ಜನರಿಗೆ ಈ ಕಾಯಿಲೆ ಕಂಡುಬರುತ್ತದೆ ಎಂದು ದಾಖಲಿಸಲಾಗಿದೆ.

ಜಿಬಿಎಸ್ ಕಾಯಿಲೆಯ ಕಾರಣ

ಸಣ್ಣ ಕರುಳನ್ನು ಬಾಧಿಸುವ ಕ್ಯಾಂಪಿಲೋಬ್ಯಾಕ್ಟರ್ ಜೆಲುನಿ ಕ್ರಿಮಿಯಿಂದ ಬಾಧಿಸುವ ಭೇದಿ, ಇತರ ಕೆಲವು ವೈರಸ್‌ನಿಂದ ಉಂಟಾಗುವ ಫ್ಲೂ ಜ್ವರದ ವಾರದ ನಂತರ ದೇಹದಲ್ಲಿ ಕಾಣಿಸಿಕೊಳ್ಳುತ್ತದೆ. ಇದು ಕಶ್ಮಲ ನೀರು, ಅಥವಾ ಗಾಳಿಯ ಸೋಂಕಿನಿಂದ, ಸಣ್ಣ ಮಟ್ಟದಲ್ಲಿ ಜ್ವರಭಾಧೆ ಉಂಟಾಗಿ, ವಾಸಿಯಾಗುತ್ತದೆ. ಆದರೆ ಅವು ದೇಹದ ರೋಗನಿರೋಧಕ ಶಕ್ತಿಯ ಪ್ರೊಟೀನ್ ಕಣಗಳನ್ನು ನಿಷ್ಕ್ರಿಯಗೊಳಿಸಿ ಹೋಗಿರುತ್ತವೆ.

ನಿಷ್ಕ್ರಿಯಗೊಂಡ ಪ್ರೊಟೀನ್ ಗಳು, ನರಕೋಶದ ಮೇಲುಮೈಯ ಕವಚವನ್ನು ನಾಶ ಮಾಡುತ್ತವೆ. ಇದರಿಂದ ಮಾಂಸಖಂಡಗಳು ನಿಷ್ಕ್ರಿಯೆಗೊಂಡು, ಕಾಲುಗಳು ಸ್ಪರ್ಶಜ್ಞಾನವನ್ನು ಕಳೆದುಕೊಳ್ಳಬಹುದು. ಇದು ಒಂದು ತರಹದ ಪಾರ್ಶ್ವವಾಯು. ಇದು ಕ್ರಮೇಣ ಇಡೀ ದೇಹಕ್ಕೆ ಹಬ್ಬಿ, ಶ್ವಾಸಕೋಶದ ಮಾಂಸಖಂಡವನ್ನು ನಿಷ್ಕ್ರಿಯೆ ಗೊಳಿಸುವುದರಿಂದ ಉಸಿರಾಡಲು ಕಷ್ಟವಾಗುತ್ತದೆ.

ರೋಗ ನಿರೋಧಕ ಶಕ್ತಿ

ಇದು 30 ರಿಂದ 60 ವರ್ಷಗಳ ವಯಸ್ಕರಲ್ಲಿ,ರೋಗ ನಿರೋಧಕ ಶಕ್ತಿ ಕಡಿಮೆ ಇರುವವರಲ್ಲಿ ಕಾಣಿಸಿಕೊಳ್ಳುತ್ತದೆ. ಉದಾಹರಣೆಗೆ ಮಧುಮೇಹ ಇರುವವರಿಗೆ, ಹಾಗು ದುರಭ್ಯಾಸಗಳಾದ ತಂಬಾಕು, ಸಿಗರೇಟ್ ಸೇವನೆ, ಕುಡಿತ, ರಸ್ತೆ ಬದಿಯ ಕಲುಷಿತ ಆಹಾರ ಹಾಗು ಪಾನೀಯಗಳನ್ನು ಸೇವಿಸುವರಲ್ಲಿ ಹೆಚ್ಚಾಗಿ ಕಾಣಬರುತ್ತದೆ.

ರೋಗನಿರ್ಣಯ ಇದು ಚಾಲನಾ ಅಂಗಗಳ ಕಾಯಿಲೆ ಆಗಿರುವುದರಿಂದ ತಜ್ಞವೈದ್ಯರು ಕೆಲವು ಬೇರೆ ಕಾಯಿಲೆಗಳ ಇಲ್ಲದಿರುವಿಕೆಯನ್ನು ಪರೀಶೀಲನೆ ಮಾಡುತ್ತಾರೆ. ಉದಾಹರಣೆಗೆ : ಮಲ್ಟಿಪಲ್ ಸಿರೋಸಿಸ್, ದೇಹದ ಲವಣ ಅಂಶಗಳಾದ ಸೋಡಿಯಂ ಮತ್ತು ಪೊಟಾಶಿಯಂ ಗಳ ಕೊರತೆಯಿಂದ ಕೂಡ ಉಂಟಾಗುವ ಸಾಧ್ಯತೆ ಇರುವವದರಿಂದ, ಇದನ್ನು ಪರೀಶೀಲಿಸಿ ನಂತರ ರೋಗಿಯ ಮೆದುಳಿಂದ ನೀರಿನ ಸಿಎಸ್‌ಎಫ್ ಪರೀಕ್ಷೆಯಲ್ಲಿ ಸಾಮಾನ್ಯಕ್ಕಿಂತ ಹೆಚ್ಚು ಪ್ರೊಟೀನ್ ಕಣಗಳು ಕಂಡು ಬಂದು ಉಳಿದ ಅಂಶಗಳು ಸಹಜವಾಗಿದ್ದರೆ, ಈ ಕಾಯಿಲೆಯ ರೋಗ ನಿರ್ಣಯ ಆಗುತ್ತದೆ. ಈ ಕಾಯಿಲೆಯ ಪ್ರಾರಂಭದಲ್ಲಿ ಚಿಕಿತ್ಸೆಯನ್ನು ಪಡೆದರೆ ಶೇಕಡಾ 100 ರಷ್ಟು ಗುಣಮುಖ ಆಗಬಹುದು.

ಪ್ಲಾಸ್ಮಾಫೆರೆಸಿಸ್

ಆರೋಗ್ಯವಂತ ರಕ್ತದ ಕೆಂಪು ರಕ್ತ ಕಣಗಳನ್ನು ಬೇರ್ಪಡಿಸಿ, ಬಿಳಿಯ ಪ್ಲಾಸ್ಮಾವನ್ನು ರೋಗಿಯ ದೇಹಕ್ಕೆ ರವಾನಿಸಿ, ರೋಗ ನಿರೋಧಕ ಶಕ್ತಿಯನ್ನು ಹೆಚ್ಚುಪಡಿಸಿ ಗುಣಪಡಿಸಲಾಗುವುದು. ಇದನ್ನು ಕನಿಷ್ಠ 7 ರಿಂದ 14 ದಿನಗಳ ವರೆಗೆ ಮಾಡಬೇಕಾಗಬಹುದು. ಬಿಳಿಯ ಪ್ಲಾಸ್ಮಾ ದಲ್ಲಿ ಒಳ್ಳೆಯ ಸಸಾರಜನಕ ಇರುವುದ ರಿಂದ ರೋಗಿಯ ನರದ ಕವಚವನ್ನು ಸರಿಪಡಿಸಿ ಕಾಯಿಲೆ ಗುಣಮಾಡಬಹುದು.

ಐವಿ ಇಮ್ಯುನೋಗ್ಲೋಬಿನ್

ಈ ಚಿಕಿತ್ಸೆ ಅತ್ಯುತ್ತಮವಾಗಿದ್ದು ಶೇಕಡಾ 100 ರಷ್ಟು ರೋಗಿಗಳು ಉಸಿರಾಟದ ತೊಂದರೆಯಿಂದ ಗುಣಮುಖರಾಗಿದ್ದಾರೆ. ಇದು ರೋಗ ನಿರೋಧಕ ಹೆಚ್ಚಿರುವ ಪ್ರೊಟೀನ್ ಪ್ರತಿಕಾಯ ದ್ರಾವಣ; ಇದನ್ನು ರೋಗಿಗೆ ಐವಿ ಮೂಲಕ ನೀಡುತ್ತಾರೆ. ಇದು ಸ್ವಲ್ಪ ದುಬಾರಿ ಆಗಿರುವುದರಿಂದ ಬಡರೋಗಿಗಳಿಗೆ ಕಷ್ಟವಾಗಬಹುದು.

ಮುಂಜಾಗ್ರತೆ

ನರಗಳನ್ನು ನಿಧಾನವಾಗಿ ನಿಷ್ಕ್ರಿಯಗೊಳಿಸುವ ಜಿ.ಬಿ.ಸಿಂಡ್ರೋಮ್ ಕಾಯಿಲೆಯು ಈ ವರ್ಷದ ಜನವರಿಯಿಂದ ಪುಣೆಯಲ್ಲಿ ಸುಮಾರು 211 ಜನರಲ್ಲಿ ಕಾಣಿಸಿಕೊಂಡಿದ್ದು, ಅವರಲ್ಲಿ 11 ಜನರು ಮೃತಪಟ್ಟದ್ದು ಸುದ್ದಿಯಾಗಿದೆ. ಇದನ್ನು ತಡೆಯಲು ನಿರ್ದಿಷ್ಟ ಮುಂಜಾಗರೂಕತಾ ಕ್ರಮಗಳು ಇಲ್ಲದೇ ಇದ್ದರೂ, ಪುಣೆ ನಗರದ ಆರೋಗ್ಯ ವಿಭಾಗವು, ಕೆಲವು ಸಲಹೆಗಳನ್ನು ಜನರಿಗೆ ನೀಡಿದೆ. ಸರಿಯಾಗಿ ಬೇಯಿಸದೇ ಇರುವ ಚಿಕನ್, ಮಟನ್ ತಿನ್ನಬಾರದು; ತಯಾರಿಸಿ ಹೆಚ್ಚು ಹೊತ್ತಾದ ನಂತರ ತಿನ್ನಬಾರದು ಮತ್ತು ಬಿಸಿ ಬಿಸಿ ಆಹಾರ ತಿನ್ನಬೇಕು ಮತ್ತು ಕುದಿಸಿ ಆರಿಸಿದ ನೀರನ್ನು ಕುಡಿಯಬೇಕು ಎಂದು ಅಲ್ಲಿ ಸಲಹೆ ನೀಡಲಾಗಿದೆ. ಇದು ಜಗತ್ತಿನ ಅತಿ ಅಪರೂಪದ ಕಾಯಿಲೆಗಳಲ್ಲಿ ಒಂದಾಗಿರುವುದರಿಂದ ಮತ್ತು ಸೋಂಕು ಆಗುವ ಸಂಭವ ಕಡಿಮೆ ಇರುವುದರಿಂದ, ಜನರು ಹೆಚ್ಚು ಭಯಪಡುವ ಅಗತ್ಯವಿಲ್ಲ ಎಂದೂ ಹೇಳಲಾಗಿದೆ.

ಪುಸ್ತಕ ವಿಮಾನ

» ಡಾ. ಸುಂಕಂ ಗೋವರ್ಧನ

ಕನ್ನಡ ಸಾಹಿತ್ಯದ ಪ್ರತಿಯೊಂದು ಪ್ರಕಾರಗಳಲ್ಲಿಯೂ ಆರಂಭದಿಂದಲೂ ಅತ್ಯುತ್ತಮ ಕೊಡುಗೆಗಳನ್ನು ನೀಡಿದವರು ಜೈನ ಸಾಹಿತಿಗಳು. ಈ ಜೈನವಾಙ್ಮಯದ ವಿಶಿಷ್ಟ ಲಕ್ಷಣಗಳೇನು? ಅವರದ್ದೇ ಆದ ಅಸ್ಮಿತೆಗಳೇನು? ಕನ್ನಡ ಸಾಹಿತ್ಯಕ್ಕೆ ಜೈನಸಾಹಿತಿಗಳ ಕೊಡಗೆಯೇನು? ಎಂದು ಅರ್ಥಮಾಡಿಕೊಳ್ಳಲು ಈ ಸಂಪುಟಗಳು ಉತ್ತಮ ಆಕರ ಎನಿಸಿದೆ. ಡಾ. ಎಸ್. ಪಿ. ಪದ್ಮಪ್ರಸಾದ್ ಅವರು ಸಿದ್ಧಪಡಿಸಿರುವ 6 ಬೃಹತ್

ಡಾ.ಎಸ್.ಪಿ.ಪದ್ಮಪ್ರಸಾದ್ ಅವರ ಕನ್ನಡ ಜೈನ ಸಾಹಿತ್ಯ ಚರಿತ್ರೆಯ ಆರು ಸಂಪುಟಗಳು, ಅಪರೂಪದ ಆಕರ ಗ್ರಂಥಗಳಾಗಿ ಮೂಡಿಬಂದಿವೆ.

ಸಂಪುಟಗಳ 'ಕನ್ನಡ ಜೈನ ಸಾಹಿತ್ಯ ಚರಿತ್ರೆ' ಕೃತಿಗಳ ಮೂಲಕ ಇಂತಹ ನೂರಾರು ಪ್ರಶ್ನೆಗಳಿಗೆ ಉತ್ತರ ದೊರಕಿದೆ. ಒಂದು ವಿಶ್ವವಿದ್ಯಾಲಯವೋ ಅಥವಾ ಒಂದು ಸಂಸ್ಥೆ ಮಾಡಬೇಕಾದ ಕಾರ್ಯವನ್ನು ಇವರೊಬ್ಬರೇ ನೆರವೇರಿಸುವುದರ ಮೂಲಕ ತಾವು ಅಂದುಕೊಂಡ ಕಾಲಮಿತಿಯಲ್ಲಿ ಈ ಸಂಪುಟಗಳನ್ನು ಸಿದ್ದಪಡಿಸಿ ಮಾದರಿ ಸಂಪುಟಗಳನ್ನು ನೀಡಿದ್ದಾರೆ.

ಮೊದಲ ಸಂಪುಟ

ಆರಂಭದಿಂದ ಕ್ರಿ.ಶ. 1150 ಕಾಲಘಟ್ಟವನ್ನು ಹೊಂದಿರುವ 634 ಪುಟಗಳ ಮೊದಲನೆಯ ಸಂಪುಟದಲ್ಲಿ ಶಾಸನಗಳನ್ನು ಬರೆದು ಪ್ರಯೋಗಶೀಲರಾದ ಕವಿಗಳೇ ಮುಂದೆ ಅದ್ಭುತವಾದ ಕಾವ್ಯಗಳನ್ನು ಬರೆಯಲು ಆರಂಭಿಸಿದ್ದನ್ನು ಗುರುತಿಸಲಾಗಿದೆ. ಈ ಮೊದಲನೆಯ ಸಂಪುಟದಲ್ಲಿ ಕನ್ನಡದಲ್ಲಿ ಶಾಸನಗಳನ್ನು ಬರೆದ ಸುಮಾರು 34 ಜನ ಕವಿಗಳನ್ನು ಮೊದಲನೆಯ ಬಾರಿಗೆ ವಿಸ್ತೃತವಾಗಿ ಪರಿಚಯಿಸಲಾಗಿದೆ. ಶ್ರವಣಬೆಳಗೊಳದ ಬಹುತೇಕ ಶಾಸನಗಳನ್ನು ಜೈನಕವಿಗಳೇ ಬರೆದಿರಬಹುದು ಎಂದು ಸತಾರ್ಕಿಕವಾಗಿ ಹೇಳುತ್ತಾ ಇದಕ್ಕೆ ಕಾರಣವನ್ನು ಜಿನಭಕ್ತಿ ಹಾಗೂ ಜೈನಪಾರಿಭಾಷಿಕಗಳಿಂದ ಗುರುತಿಸುತ್ತಾರೆ.

ಕ್ರಿ.ಶ. 1150ರಿಂದ 1300 ಕಾಲಘಟ್ಟವನ್ನು ಹೊಂದಿರುವ ಎರಡನೆಯ ಸಂಪುಟವು ಒಟ್ಟು 690 ಪುಟಗಳನ್ನು ಹೊಂದಿದೆ. ದೇಜಗೌ ಅವರು ಬರೆದಿರುವ ನೇಮಿಚಂದ್ರ ಮತ್ತು ಅವನ

ಸಮಗ್ರ ಜೈನಸಾಹಿತ್ಯ ದರ್ಶನ

ಕಾವ್ಯಗಳು ಎಂಬ ಲೇಖನದಿಂದ ಆರಂಭಿಸಿ ಮಾಧವ ಪೆರಾಜೆಯವರ ರಟ್ಟಕವಿಯ ರಟ್ಟಮತದವರೆಗಿನ 49 ಲೇಖನಗಳು ಈ ಸಂಪುಟದಲ್ಲಿವೆ. 826 ಪುಟಗಳ ಕನ್ನಡ ಜೈನ ಸಾಹಿತ್ಯ ಚರಿತ್ರೆಯ ಮೂರನೆಯ ಸಂಪುಟವು ಕ್ರಿ.ಶ. 1300ರಿಂದ 1575ರವರೆಗಿನ ಕಾಲಮಾನವನ್ನು ಇರಿಸಿಕೊಂಡಿದೆ. ಈ ಸಂಪುಟದಲ್ಲಿ ಬ್ರಹ್ಮದೇವನಿಂದ ಆರಂಭವಾಗುವ ಕವಿಗಳ ಇತಿಹಾಸವು ಶ್ರುತಕೀರ್ತಿಯ ವಿಜಯಕುಮಾರಿ ಚರಿತೆಯವರೆಗೆ ಬಂದು ನಿಲ್ಲುತ್ತದೆ.

686 ಪುಟಗಳ ಕನ್ನಡ ಜೈನ ಸಾಹಿತ್ಯ ಚರಿತ್ರೆಯ 4ನೆಯ ಸಂಪುಟವು ಕ್ರಿ.ಶ. 1575ರಿಂದ 1775ರವರೆಗಿನ ಎರಡು ಶತಮಾನಗಳ ಹರಹನ್ನು ಹೊಂದಿದೆ. ಈ ಸಂಪುಟದಲ್ಲಿ ಒಟ್ಟು 61 ಲೇಖನಗಳಿವೆ. ಇದರಲ್ಲಿ ಪದ್ಮಪ್ರಸಾದ್ ಅವರೊಬ್ಬರೇ 26 ಲೇಖನಗಳನ್ನು ಬರೆದಿದ್ದಾರೆ. ಕ್ರಿ.ಶ. 1563–1654ರ ಕಾಲಕ್ಕೆ ಸೇರುವ ಭಟ್ಟಾಕಳಂಕನಿಂದ ಆರಂಭವಾಗುವ ಇಲ್ಲಿನ ಲೇಖನಗಳು ಕ್ರಿ.ಶ. 1775ರ ಕಾಲದ ಲಕ್ಷ್ಮಣ ಪಂಡಿತನ ಅಕಾರಾದಿ ನಿಘಂಟುವರೆಗೆ ಹಬ್ಬಿಕೊಂಡಿದೆ. ವಿಜಯನಗರ ಸಾಮ್ರಾಜ್ಯೋತ್ತರ ಈ ಕಾಲಘಟ್ಟದಲ್ಲಿ ಪುಡಿ ಅರಸರುಗಳೇ ಸ್ವತಂತ್ರ ಆಡಳಿತವನ್ನು ನಡೆಸುತ್ತಿದ್ದ ಈ ಕಾಲದಲ್ಲಿ ಸಾಕಷ್ಟು ಸಂಖ್ಯೆಯ ಕವಿಗಳು ಹೊರಹೊಮ್ಮಿರುವುದು ವಿಶೇಷವಾದ ಸಂಗತಿಯಾಗಿದೆ. ಐದನೆಯ ಸಂಪುಟವನ್ನು ಕ್ರಿ.ಶ. 1775ರಿಂದ 1950ರವರೆಗೆ ವಿಸ್ತರಿಸಿದ್ದಾರೆ. ಈ ಐದನೆಯ ಸಂಪುಟಕ್ಕೆ ವಿಶೇಷವಾದ ಮಹತ್ತ್ವವಿದೆ. 18ನೇ ಶತಮಾನದ ಶಾಂತೀಶ್ವರನಿಂದ ಆರಂಭಗೊಳ್ಳುವ ಇಲ್ಲಿನ ಜೈನ ಸಾಹಿತಿಗಳು ಅನಂತರಾವ್ ಭೋಸಗೆಯವರವರೆಗೆ ಈ ಸಂಪುಟದಲ್ಲಿ 48 ಜನ ಸಾಹಿತಿಗಳನ್ನು ಕುರಿತ 57 ಲೇಖನಗಳಿವೆ.

ಆರನೆಯ ಸಂಪುಟ

ಉದ್ದೇಶಿತ ಹಾಗೂ ಕನ್ನಡ ಜೈನ ಸಾಹಿತ್ಯ ಚರಿತ್ರೆಯ ಕೊನೆಯ ಸಂಪುಟವಾದ ಆರನೆಯ ಸಂಪುಟವು ಕ್ರಿ.ಶ. 1950ರ ನಂತರ ಕನ್ನಡದ ಜೈನ ಸಾಹಿತಿಗಳನ್ನು ಪರಿಚಯಿಸುವ ಕೃತಿ ಹಾಗೂ ಈ ಶ್ರುಂಖಲೆಯ ಕೊನೆಯ ಕೃತಿ. ಇದರ ಮೂಲಕ ಇದುವರೆಗಿನ ಜೈನಸಾಹಿತ್ಯ ಚರಿತ್ರೆಗೆ ಮಂಗಳ ಹಾಡಿದ್ದಾರೆ. ಕ್ರಿ.ಶ. 1894–1974ರ ಕಾಲದ ಬಿ.ಬಿ.ಬಾಗಿಯವರಿಂದ ಆರಂಭವಾಗುವ ಈ ಕೃತಿಯು 100ಕ್ಕೂ ಹೆಚ್ಚು ಲೇಖಕರನ್ನು ಪರಿಚಯಿಸುತ್ತದೆ. ಈ ಸಂಪುಟದ ಇನ್ನೊಂದು ಮುಖ್ಯವಾದ ಕೊಡುಗೆಯೆಂದರೆ ಕನ್ನಡದ ಜೈನ ಲೇಖಕಿಯರನ್ನು ಹೆಚ್ಚೆಚ್ಚು ಪರಿಚಯಿಸುವಲ್ಲಿ ಈ ಕೃತಿ ಹೆಚ್ಚಿನ ಯಶಸ್ಸನ್ನು ಕಂಡಿದೆ. ಜೈನೇಂದ್ರ ಕೋಶ ಸಂಪುಟಗಳು, ಸೃಜನಶೀಲ ಕೃತಿಗಳ ಅನುವಾದ, ಸೃಜನಶೀಲ ಸಾಹಿತ್ಯ ಮತ್ತು ವಿಮರ್ಶೆ, ಶಾಸ್ತ್ರಗ್ರಂಥಗಳನ್ನು ಸಂಪಾದಿಸು ವುದು, ಅದಕ್ಕೆ ವ್ಯಾಖ್ಯಾನಗಳನ್ನು ಬರೆಯುವುದು, ಈ ಕ್ಷೇತ್ರದಲ್ಲಿ ಪರಿಣತರಾದವರನ್ನು ಶಾಸನ, ಶಿಲ್ಪ, ಇತಿಹಾಸ, ಸಂಸ್ಕೃತಿ ಮುಂತಾದ ಕ್ಷೇತ್ರಗಳಲ್ಲಿ ಪರಿಣತರಾದ ಸಾಹಿತ್ಯದ ಎಲ್ಲಾ ರಂಗಗಳಲ್ಲೂ ತಮ್ಮ ಛಾಪನ್ನು ಒತ್ತಿರುವ ಲೇಖಕರನ್ನು ಈ ಕೃತಿಯಲ್ಲಿ ಪರಿಚಯಿಸಲಾಗಿದೆ. ವಿಶೇಷವಾಗಿ ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಂಡವರ ಬಗ್ಗೆ ಒಳ್ಳೆಯ ಮಾಹಿತಿಯಿದೆ.

ಕರ್ನಾಟಕ ಜೈನ ಸಾಹಿತ್ಯದ ಸಮಗ್ರ ನೋಟ

ಒಟ್ಟಿನಲ್ಲಿ ಸರಿಸುಮಾರು 400 ಪ್ರಾಚೀನ ಕವಿಗಳು ಹಾಗೂ ಸುಮಾರು 100ಕ್ಕೂ ಹೆಚ್ಚು ಆಧುನಿಕ ಕನ್ನಡ ಸಾಹಿತಿಗಳನ್ನು ಈ ಕೃತಿ ಸಮಗ್ರವಾಗಿ ಪರಿಚಯಿಸಿದೆ. ಶಾಸನ ಕವಿಗಳನ್ನೂ ಒಳಗೊಂಡು 500ಕ್ಕೂ ಮಿಕ್ಕ ಬರಹಗಾರರನ್ನು ಇಲ್ಲಿ ಒಂದೆಡೆ ಸಂಗ್ರಹಿಸಿರುವುದರಿಂದ ಕನ್ನಡ ವಾಙ್ಮಯಕ್ಕೆ ಜೈನ ಕವಿಗಳ ಕೊಡುಗೆ ಏನು ಎಂಬುದು ಸುಸ್ಪಷ್ಟವಾಗಿದೆ. ಈ ಸಮಗ್ರ ಜೈನಸಾಹಿತ್ಯ ಚರಿತ್ರೆಯನ್ನು ಸಂಪಾದಿಸಿ ಜೈನವಾಙ್ಮಯಕ್ಕೆ ಪದ್ಮಪ್ರಸಾದ್ ಅವರು ನೀಡಿರುವ ಕೊಡುಗೆ ಅಸಾಧಾರಣವಾದುದು.

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ಏರುಘಟ್ಟದ ನಡಿಗೆ
(ಪ್ರೊ. ಮಾಧವ ಗಾಡ್ಗೀಳರ ಆತ್ಮಕಥೆ)
ಅನು : ಶಾರದಾ ಗೋಪಾಲ, ನಾಗೇಶ ಹೆಗಡೆ
ಪ್ರ: ಆಕೃತಿ - ಆಶಯ ಪಬ್ಲಿಕೇಷನ್ಸ್, ಮಂಗಳೂರು
ಬೆಲೆ : ರೂ 650/-

2



ಮೇದಿನಿ ಜೊತೆ ನನ್ನ ಕಥೆ
(ಸಮಕಾಲೀನ ಸಂಗತಿಗಳ ಪರಾಮರ್ಶೆ)
ಲೇ: ಡಾ। ಅ.ನ. ಯಲ್ಲಪ್ಪರೆಡ್ಡಿ
ಸಂ : ಎಂ.ಆರ್ ರಕ್ಷಿತ್ ಸುಚರಿತ ಚಂದ್ರ
ಅನು : ನಿರಂಜನ ಪರಾಂಜಪೆ
ಪ್ರ: ಜನ ಪ್ರಕಾಶನ, ಬೆಂಗಳೂರು
ಬೆಲೆ : ರೂ 120/-

3



ಅಘೋರಿಗಳ ಲೋಕದಲ್ಲಿ
(ನಿಷಿದ್ಧ ಪ್ರಪಂಚದ ಅನುಭವ)
ಲೇ: ಸಂತೋಷಕುಮಾರ ಮೆಹೆಂದಳೆ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 350/-

4



ನನ್ನೂರಿನ ಶ್ರೀಸಾಮಾನ್ಯರು
(ಮಲೆನಾಡು ಪರಿಸರದ ವ್ಯಕ್ತಿ ಚಿತ್ರಗಳು)
ಲೇ: ಕಡಿದಾಳ್ ಪ್ರಕಾಶ್
ಪ್ರ: ಅಭಿರುಚಿ ಪ್ರಕಾಶನ, ಮೈಸೂರು
ಬೆಲೆ : ರೂ 175/-

5



ನುಡಿತೇರನೆಳೆದವರು - ಬಾನುಲಿ ಕಲಿಗಳು
(ಪ್ರಸಿದ್ಧ ಕನ್ನಡ ಬಾನುಲಿ ಕಲಿಗಳ ಸಿದ್ಧಿ ಸಾಧನೆಗಳ ಪರಿಚಯ)
ಲೇ: ಬಿ.ಕೆ. ಸುಮತಿ
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು
ಬೆಲೆ : ರೂ 390/-

6



ದುಡಿತವೇ ನನ್ನ ದೇವರು
(ಆತ್ಮಕಥನ)
ಲೇ: ಕಯ್ಯಾರ ಕಿಞ್ಞಣ್ಣ ರೈ
ಪ್ರ: ಕವಿತಾ ಕುಟೀರ, ಪೆರಡಾಲ
ಬೆಲೆ : ರೂ 300/-

7



ಜಪಾನಿನಲ್ಲಿ ರಂಗ
(ಜಪಾನ್ ಪ್ರವಾಸಕಥನ)
ಲೇ: ರಂಗಸ್ವಾಮಿ ಮೂಕನಹಳ್ಳಿ
ಪ್ರ: ಸೀಮಾ ಪ್ರಕಾಶನ, ಬೆಂಗಳೂರು
ಬೆಲೆ : ರೂ 180/-

8



ಲೈಫ್ 360
(ಬದುಕು ಶೂನ್ಯವಲ್ಲ)
ಲೇ: ಎಸ್.ಡಿ. ಕುಮಾರ್, ಅನಂತ ಕುಣಿಗಲ್
ಪ್ರ: ವೀರಲೋಕ, ಬೆಂಗಳೂರು
ಬೆಲೆ : ರೂ 250/-

9



ಬೆಳುದಿಂಗಳ ನೋಡ....
(ಬೇಂದ್ರೆ, ಕೆಲವು ಪ್ರಸಂಗಗಳು)
ಲೇ: ಡಾ। ಎಚ್.ಎಸ್. ಸತ್ಯನಾರಾಯಣ
ಪ್ರ: ಅಮೂಲ್ಯ ಪುಸ್ತಕ, ಬೆಂಗಳೂರು
ಬೆಲೆ : ರೂ 150/-

10

ಮಾಗಧ
(ಸಾಮ್ರಾಟ್ ಅಶೋಕನ ಕಾಲದ ರಾಜಕೀಯ-ಧಾರ್ಮಿಕ ಸ್ಥಿತಿಗತಿಗಳ ಚಿತ್ರಣ)
ಲೇ: ಸಹನಾ ವಿಜಯಕುಮಾರ್
ಪ್ರ: ಸಾಹಿತ್ಯ ಭಂಡಾರ, ಬೆಂಗಳೂರು
ಬೆಲೆ : ರೂ 915/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755
ಮೊಬೈಲ್ ನಂ: 9019190502

ಲವಲವಿಕೆ ತುಂಬಿದ ಬರಹಗಳು

» ಶಶಾಂಕ್ ಮುದೂರಿ

ಮೂವತ್ತು ಪ್ರಬಂಧಗಳನ್ನೊಳಗೊಂಡ, ಬಿ.ಕೆ.ಮೀನಾಕ್ಷಿಯವರ 'ನಗುವಿನಿಬ್ಬನಿ ಮಿನುಗುತಿರಲಿ' ಸಂಕಲನವು ಸುಲಲಿತವಾಗಿ ಓದಿಸಿಕೊಂಡುಹೋಗುವ ಗುಣವನ್ನು ಹೊಂದಿರುವುದು ವಿಶೇಷ ಎನಿಸಿದೆ. ತಿಳಿ ಹಾಸ್ಯವು ಇಲ್ಲಿನ ಪ್ರಬಂಧಗಳ ಪ್ರಧಾನಗುಣ. ಆದ್ದರಿಂದಲೇ ಇರಬಹುದು, ಓದುಗರಿಗೆ ಈ ಪ್ರಬಂಧಗಳು ಹಲವು ರಸಗಳ ಔತಣವನ್ನೇ ಒದಗಿಸುತ್ತವೆ ಎನ್ನಬಹುದು. ಈ ಪ್ರಬಂಧ ಸಂಕಲನಕ್ಕೆ ಮುನ್ನುಡಿ ಬರೆದಿರುವ ಡಾ. ಸಿ.ನಾಗಣ್ಣ ಅವರ ಮಾತುಗಳು ಇಲ್ಲಿನ ಪ್ರಬಂಧಗಳ ವೈಶಿಷ್ಟ್ಯವನ್ನು ಸೂಕ್ತವಾಗಿ ಸೆರೆಹಿಡಿದಿವೆ.

ತಿಳಿಹಾಸ್ಯವನ್ನು ಒಳಗೊಂಡ ಇಲ್ಲಿನ ಪ್ರಬಂಧಗಳು ಸುಲಲಿತವಾಗಿ ಓದಿಸಿಕೊಂಡು ಹೋಗುವುದು ವಿಶೇಷ.

''ಮೀನಾಕ್ಷಿಯವರ ಬರಹಗಳ ಮೊತ್ತವನ್ನು ಗಮನಿಸಿದರೆ ಪ್ರಬಂಧ ಅವರ ಒಲವಿನ ಪ್ರಕಾರವೆಂಬುದು ಸ್ಪಷ್ಟವಾಗುತ್ತದೆ. . . ಬಿ.ಕೆ.ಮೀನಾಕ್ಷಿಯವರು ಶಿಕ್ಷಕರು. ದಶಕಗಳ ಕಾಲ ಚಿಕ್ಕ ಮಕ್ಕಳಿಗೆ ಪಾಠ ಹೇಳುತ್ತ ಹೇಳುತ್ತಲೇ ತಮ್ಮ ಬರಹವನ್ನು ಸೂಕ್ಷ್ಮಗೊಳಿಸಿಕೊಂಡವರು. ತಮ್ಮ ವೃತ್ತಿ ಜೀವನದ ಅನುಭವಗಳನ್ನು ಯುಕ್ತವಾದ ರೀತಿ ಹೆಕ್ಕಿತೆಗೆದು ಅವುಗಳನ್ನು ಸಮಯೋಚಿತವಾಗಿ ಸಂಯೋಜನೆಗೊಳಿಸಿ, ತಮ್ಮ ಪ್ರಬಂಧಗಳಿಗೆ ಜೀವ ತುಂಬಿದ್ದಾರೆ. ಅವರ ಪ್ರಬಂಧಗಳಲ್ಲಿ ಹಾಸ್ಯ ಹಾಸುಹೊಕ್ಕಾಗಿದೆ. ಕೆಲವರಿಗೆ ನೋಡಿದೆಡೆಯಲ್ಲೆಲ್ಲ ಕಾಣುತ್ತದೆ ಅಥವಾ ಅವರ ಕಣ್ಣಿಗೆ ಕಂಡದ್ದೆಲ್ಲಾ ಹಾಸ್ಯಮಯವಾಗಿ ರೂಪ ತಾಳುತ್ತದೆ. ಮಳ್ಳಿ ಸೊಳ್ಳೆಯ ಮರ್ಕಟದಾಟಗಳು, ಮೂಗು ತೂರಿಸೋದು, ಹೆಸಲ್ಲೇನಿದೆ?, ಹೋಟೆಲ್ ದೇವ್ರೇಗತಿ, ಸುಮಪನಾತು ಸುಳ್ಳುಗಳಲಿ ಅದೇನಾನಂದ!, ಜಾರು ಏಣಿಯಲ್ಲಿ ಏರಿ ಹೋಗಿದ್ದೀರಾ?, ಬಂದ ದಾರಿಗೆ ಸುಂಕವಿಲ್ಲ, ಯಮುನೋತ್ರಿಯ ಹಾದಿಯಲ್ಲಿ ಇತ್ಯಾದಿ ಒಟ್ಟು 30 ಪ್ರಬಂಧಗಳು ಇಲ್ಲಿ ಸಂಕಲಿತವಾಗಿವೆ. .. .. .. ಒಟ್ಟಿನಲ್ಲಿ ಈ ಪ್ರಬಂಧಗಳಲ್ಲಿ ಲವಲವಿಕೆಯಿದೆ, ಉಲ್ಲಾಸವಿದೆ, ಸಮಾಜದ ಅಂಕು ಡೊಂಕನ್ನು ತಿದ್ದುವ ಇರಾದೆಯಿದ್ದರೂ ಎಲ್ಲೂ ಕುಹುಕದ ಕಹಿಯಿಲ್ಲ; ಔದಾರ್ಯದ ಮಸ್ಲಿನ್ ಬಟ್ಟೆಯನ್ನು ಎಲ್ಲರ ಮೇಲೂ ಹೊದಿಸಿದ ಅನುಭವವಾಗುತ್ತದೆ.. . '' (ಮುನ್ನುಡಿಯಲ್ಲಿ ಡಾ. ಸಿ. ನಾಗಣ್ಣ)

ಬಿ.ಕೆ.ಮೀನಾಕ್ಷಿಯವರು ಪ್ರಬಂಧಗಳನ್ನು ಬರೆದಷ್ಟೇ ಸಲೀಸಾಗಿ ಸಣ್ಣ ಕಥೆಗಳನ್ನೂ ಬರೆಯಬಲ್ಲರು ಎಂಬುದಕ್ಕೆ, ಅವರು ಈಗಾಗಲೇ ಹೊರತಂದಿರುವ ಕಥಾ ಸಂಕಲನಗಳೇ ಸಾಕ್ಷಿ. ವೈವಿಧ್ಯಮಯ ಗದ್ಯ ರಚನೆಗಳನ್ನು ಸುಗಮವಾಗಿ ಬರೆಯಬಲ್ಲ ಬಿ.ಕೆ.ಮೀನಾಕ್ಷಿಯವರಿಂದ ಇನ್ನಷ್ಟು ಪ್ರಬಂಧಗಳನ್ನು, ಕಥೆಗಳನ್ನು ನಿರೀಕ್ಷಿಸಬಹುದು.



ನಗುವಿನಿಬ್ಬನಿ ಮಿನುಗುತಿರಲಿ
ಪ್ರಬಂಧ ಸಂಕಲನ
ಲೇ: ಬಿ.ಕೆ.ಮೀನಾಕ್ಷಿ
ಪ್ರ: ಸುಮಾ ಪ್ರಕಾಶನ ಬೆಂಗಳೂರು
9342981536
ಬೆಲೆ ರು.200/-

ಗ್ರಾಮೀಣ ಚಿತ್ರಣಗಳು

» ಮಾಯಾ ಬಾಲಚಂದ್ರ

ಸಾಹಿತಿ ಎನ್ ಶಂಕರೇಗೌಡ ಅವರ 'ಭಾವ ಬೆಸುಗೆ' ಸುಲಲಿತವಾಗಿ ಓದಿಸಿಕೊಂಡು ಹೋಗುವ ಲಲಿತ ಪ್ರಬಂಧಗಳ ಸಂಕಲನ. ಇಲ್ಲಿನ ಪ್ರಬಂಧಗಳಲ್ಲಿ ಲಾಲಿತ್ಯವೇ ಪ್ರಧಾನವಾಗಿದೆ. ಒಟ್ಟು 24 ಪ್ರಬಂಧಗಳ ಸಂಕಲನ ಇದಾಗಿದೆ. ಕೋಲಾರ ಜಿಲ್ಲೆಯ ಗಡಿನಾಡ ಗ್ರಾಮೀಣ ಭಾಗದ ಜೀವನ ಶೈಲಿ, ಶಾಲೆ, ಕಾಲೇಜುಗಳ ಚಿತ್ರಣ ಎಲ್ಲವೂ ಇವರ ಪ್ರಬಂಧಗಳಲ್ಲಿ ಪಡಿಮೂಡಿವೆ. ಕನ್ನಡ ಉಪನ್ಯಾಸಕರಾದ ಇವರ ಬರಹಕ್ಕೆ ವಸ್ತುವಿನ ಮಿತಿ ಇಲ್ಲ. ತಮ್ಮ ಸಹೋದ್ಯೋಗಿಗಳೊಂದಿಗಿನ ಬಾಂಧವ್ಯ, ತಮ್ಮ ವಿದ್ಯಾರ್ಥಿಗಳ ಜಾಣತನ – ತುಂಟತನ, ಕುಟುಂಬ ಸದಸ್ಯರ, ಬಂಧುಗಳ ಒಡನಾಟ ಎಲ್ಲವನ್ನೂ ಒಂದಿಷ್ಟೂ ವೈಭವೀಕರಿಸದೆ, ಸರಳವಾಗಿ ಬರಹಕ್ಕಿಳಿಸಿದ್ದಾರೆ ಲೇಖಕರು. ಮುಖ್ಯವಾಗಿ ಎಲ್ಲಾ ಪ್ರಬಂಧಗಳಲ್ಲೂ ನಾವು ಕಾಣಬಹುದಾದ ಸಾಮಾನ್ಯ ಸಂಗತಿ ಎಂದರೆ ಲೇಖಕರ ಪ್ರಾಮಾಣಿಕತೆ. ಜನರ ಬದುಕನ್ನು ತಾವು ಕಂಡಂತೆಯೇ ನಿರೂಪಿಸುತ್ತಾ, ಹಾಸ್ಯಮಯ ಸನ್ನಿವೇಶಗಳನ್ನು ನಗೆತರಿಸುವಂತೆ ನವಿರಾಗಿ ಚಿತ್ರಿಸಿದ ಇವರು ಎಲ್ಲಿಯೂ ವ್ಯಂಗ್ಯದ ಧ್ವನಿ ಹೊರಡಿಸಿಲ್ಲ. ತಾವು ಓದಿದ ಹಲವಾರು ಸಾಹಿತಿಗಳ ಲೇಖನ, ಕಾದಂಬರಿ, ಕಾವ್ಯಗಳ ಅನೇಕ ಸಾಲುಗಳನ್ನು ಉಲ್ಲೇಖಿಸುತ್ತಾ, ತಮ್ಮ ಲೇಖನವನ್ನು ಪುಷ್ಟಿಗೊಳಿಸುವ ಇವರ ಶೈಲಿ ವಿಶೇಷವಾಗಿದೆ.

ಜೀವನದ ದೊಡ್ಡ ದೊಡ್ಡ ಘಟನೆಗಳನ್ನು ಸಹ ಸ್ಮರಣ ಸಂಗ್ರಹಕ್ಕೆ ಇಳಿಸದವರಿಗೆ, ಅವುಗಳನ್ನು ಸಂಭ್ರಮಿಸದವರಿಗೆ, ದಿನನಿತ್ಯದ ಚಿಕ್ಕ ಪುಟ್ಟ ಘಟನೆಗಳನ್ನು ನೆನಪಿನ ಭಂಡಾರದಲ್ಲಿ ಶೇಖರಿಸಿಡುವ, ಹಿರಿಕಿರಿದೆನ್ನದೆ ಎಲ್ಲವನ್ನೂ ಸಂಭ್ರಮಿಸುವ ಇವರ ಶೈಲಿ ಪಾಠದಂತಿದೆ. ಇಲ್ಲಿ ಭಾವಗಳದ್ದೇ ಮೇಲಾಟ. ಗ್ರಾಮ, ನಗರಗಳೆನ್ನುವ ಭೇದವಿಲ್ಲದೆ ವ್ಯಾಪಿಸಿರುವ ವ್ಯಾವಹಾರಿಕತೆಯು ಬಾಂಧವ್ಯಗಳನ್ನು ನುಂಗಿರುವ ಈ ಸಂದರ್ಭದಲ್ಲಿ, ತಾವು ಭೇಟಿಯಾದ ಪ್ರತಿ ವ್ಯಕ್ತಿಯೊಂದಿಗೂ ಭಾವಪೂರ್ಣವಾಗಿ ಬೆಸೆದುಕೊಂಡ ಸಾಹಿತಿ ವಿಭಿನ್ನ ನೆಲೆಯಲ್ಲಿ ಕಾಣಿಸಿಕೊಳ್ಳುತ್ತಾರೆ.ಯಾರ ಗಮನಕ್ಕೂ ಬಾರದ ಸಂಗತಿಗಳನ್ನು ಮುನ್ನೆಲೆಗೆ ತಂದು ಪ್ರಬಂಧವಾಗಿಸುವ ಇವರ ಲೇಖನಿ ನಿಜಕ್ಕೂ ವಿಶಿಷ್ಟವೇ.

ಭಾವ ಬೆಸುಗೆ
ಲಲಿತ ಪ್ರಬಂಧಗಳ ಸಂಕಲನ
ಲೇ: ಎನ್ ಶಂಕರೇಗೌಡ
ಪ್ರ: ಶ್ರೀ ಪೃಥ್ವಿ ಪ್ರಕಾಶನ
ಬೆಲೆ ರು.150/-

ಹೊರನಾಡಿನ ಸಂವೇದನೆಗಳು

» ರವಿ ದುಡ್ಡಿನಜಡ್ಡು

ದೂರದ ಮುಂಬಯಿಯಲ್ಲಿ ದೀರ್ಘಕಾಲದಿಂದ ನೆಲೆಸಿದ್ದರೂ, ಕಥೆಗಾರ್ತಿ ಮಿತ್ರಾ ವೆಂಕಟ್ರಾಜ ಅವರ ಭಾಷೆ ಒಂದಿಷ್ಟೂ ಬದಲಾಗಿಲ್ಲ. ಅವರದು ಆಕರ್ಷಕ ಕಥನಶೈಲಿ. ಬಿಟ್ಟು ಹೋಗಿರುವ ನೆಲದ ಬೇರುಗಳು ಇನ್ನೂ ಆಳಕ್ಕಿಳಿದಿವೆ. ಜತೆಗೆ, 'ಕುಂದಾಪುರ ಕನ್ನಡ'ದಲ್ಲಿ ಕಥೆಗಳನ್ನು ರಚಿಸುವ ಕೌಶಲವನ್ನು ಇವರು ರೂಢಿಸಿಕೊಂಡಿರುವುದು ವಿಶೇಷ. 'ನನ್ನಕ್ಕ ನಿಲೂಫರ್' ಸಂಕಲನದಲ್ಲಿ ಎಂಟು ಕಿರುಕಥೆಗಳನ್ನೂ ಒಳಗೊಂಡಂತೆ ಒಟ್ಟು 16 ಸಣ್ಣಕಥೆಗಳಿವೆ. ಮುಂಬಯಿ ಮತ್ತು ಹೊರರಾಜ್ಯದ ಬದುಕಿನ ತಲ್ಲಣಗಳು ಮತ್ತು ಸಂವೇದನೆಗಳು ಇಲ್ಲಿನ ಕಥೆಗಳಲ್ಲಿ ಮೂಡಿಬಂದಿರುವ ಪರಿ ಅನನ್ಯ. ಜತೆಗೆ ಸ್ತ್ರೀ ಸಂವೇದನೆಯು ಇಲ್ಲಿನ ಕಥೆಗಳಲ್ಲಿ ವ್ಯಾಪಕವಾಗಿ ಹಾಸುಹೊಕ್ಕಾಗಿದೆ. ಈ ಕಥಾಸಂಕಲನದ ಒಂದು ವಿಶೇಷವೆಂದರೆ, ಇದರ ಮುಖಪುಟದಲ್ಲಿ ವೆಂಕಟ್ರಾಜ ಅವರು ರಚಿಸಿದ ಚಿತ್ರವಿದೆ. ಬಹುಪಾಲು ಕಥೆಗಳು ವಿವಿಧ ಪತ್ರಿಕೆಗಳಲ್ಲಿ, ವಿಶೇಷಾಂಕಗಳಲ್ಲಿ ಪ್ರಕಟಗೊಂಡಿವೆ.

ಇದು ಮಿತ್ರಾ ವೆಂಕಟ್ರಾಜ ಅವರ ನಾಲ್ಕನೆಯ ಕಥಾ ಸಂಕಲನ. ಇವರು ತಮ್ಮ ಕಥೆಗಳಲ್ಲಿ ಅನ್ವೇಷಿಸುವ ವಿಷಯಗಳು, ಪಾತ್ರಗಳ ಸಾಮಾಜಿಕ ಕೌಟುಂಬಿಕ ನೆಲೆಗಳು ಮತ್ತು ಬದಲಾಗುವ ಸಾಮಾಜಿಕ ಪರಿವರ್ತನೆಯ ಪ್ರಭಾವಗಳು ಬೆರಗುಗೊಳಿಸುವಷ್ಟು ವೈವಿಧ್ಯಮಯ. ಸ್ತ್ರೀ ಪ್ರಧಾನ ಕಥೆಗಳು ಇಲ್ಲಿನ ವಿಶೇಷ. ಕಥೆಗಳು ಮುಗಿದರೂ ಕಥಾವಸ್ತು ಮನಸ್ಸಿನಿಂದ ಮಾಸುವುದೇ ಇಲ್ಲ. ಇದು ಅವರ ಕಥನಗಾರಿಕೆಯ ಶಕ್ತಿ. ಹೊರರಾಜ್ಯದಲ್ಲಿ ನೆಲೆಸಿದ್ದರೂ ಕನ್ನಡ ಕಥಾ ಪ್ರಪಂಚವನ್ನು ವಿಸ್ತರಿಸುತ್ತಿರುವ ಕೆಲವೇ ಲೇಖಕಿಯರಲ್ಲಿ ಒಬ್ಬರು ಮಿತ್ರಾ ವೆಂಕಟ್ರಾಜ.

ನನ್ನಕ್ಕ ನಿಲೂಫರ್
ಲೇ: ಮಿತ್ರಾ ವೆಂಕಟ್ರಾಜ
ಪ್ರ: ಅಂಕಿತ ಪುಸ್ತಕ
ಬೆಲೆ ರು.195/-

ಕಾಶ್ಮೀರ ಕಣಿವೆಯ ಕಥನ

» ಅಜಯ್ ಅಂಚೆಪಾಳ್ಯ

ಕಾಶ್ಮೀರ ಕಣಿವೆಯಲ್ಲಿ ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ನಡೆದ ಭೀಕರ ಹತ್ಯಾಕಾಂಡ ಮತ್ತು ಎಥ್ನಿಕ್ ಕ್ಲೀನ್ಸಿಂಗ್ ಕುರಿತು ಈಚಿನ ವರ್ಷಗಳಲ್ಲಿ ಹಲವು ಪುಸ್ತಕಗಳು ಹೊರಬಂದಿವೆ. ಇವುಗಳ ನಡುವೆ, 'ಕಣ್ಣೀರ ಕಣಿವೆ : ಕಾಶ್ಮೀರದ ನೆಲದಿಂದ ನೆಲೆ ಕಳೆದುಕೊಂಡವರ ಕಥೆ' ವಿಭಿನ್ನವಾಗಿ ಕಾಣುವುದು, ಅದರಲ್ಲಿನ ಗಟ್ಟಿ ಅನುಭವದಿಂದ ಮತ್ತು ಪ್ರಥಮದರ್ಶಿ ಬರಹದಿಂದ. '1990ರ ದಶಕದ ಮೊದಲ ವರ್ಷಗಳಲ್ಲಿ ಕಾಶ್ಮೀರ ಕಣಿವೆಯಿಂದ ಜನರ ಸಮೂಹ ಪಲಾಯನಕ್ಕೆ ಕಾರಣವಾದ ಪರಿಸ್ಥಿತಿಗಳ ಕಥಾನಕಗಳನ್ನು ಈ ಪುಸ್ತಕ ತೆರೆದಿಡುತ್ತದೆ' ಎಂದು ಕೃತಿಯ ಮೂಲ ಲೇಖಕರಾದ ರಾಹುಲ್ ಮ್ಯಾಗಝಿನ್ ಅವರು ತಮ್ಮ ಅರಿಕೆಯಲ್ಲಿ ಹೇಳಿಕೊಂಡಿದ್ದಾರೆ. ಅವರು ಸ್ವತಃ ಸಂತ್ರಸ್ತರು ಮತ್ತು ಕಾಶ್ಮೀರದಿಂದ ವಲಸೆ ಬಂದವರ ಅನುಭವಗಳನ್ನು ಕೇಳಿ, ದಾಖಲಿಸಿಕೊಂಡಿದ್ದಾರೆ. ಅಂತಹ ಅನುಭವಗಳನ್ನು ಬರೆದಿಡುವುದು 'ಅತ್ಯಗತ್ಯವಾಗಿದೆ ಮತ್ತು ಅನಿವಾರ್ಯವಾಗಿದೆ' ಎಂದು ಅರಿತ ರಾಹುಲ್ ಮ್ಯಾಗಝಿನ್ ಅವರು, ಅವನ್ನೆಲ್ಲಾ ಆಧರಿಸಿ ಈ ಪುಸ್ತಕವನ್ನು ರೂಪಿಸಿದ್ದಾರೆ. 'ಕಾಶ್ಮೀರಿ ಹಿಂದೂಗಳು ಪ್ರತೀಕಾರವಾಗಿ ಶಸ್ತ್ರಾಸ್ತ್ರಗಳನ್ನು ಎತ್ತಿಕೊಳ್ಳಲಿಲ್ಲ. ಅದು ಅವರ ಸಂಸ್ಕೃತಿಯಲ್ಲ, ಆದರೆ ಪೆನ್ನನ್ನೂ ಎತ್ತಿಕೊಳ್ಳದಿರುವುದು ಹೇಡಿತನ ಎಂದು ನಾನು ಯೋಚಿಸಿದೆ. . . ಅವರ ಕತೆಗಳನ್ನು ಹೇಳಬೇಕೆಂದು, ಎಲ್ಲಕ್ಕಿಂತ ಮಿಗಿಲಾಗಿ ಸತ್ಯವನ್ನು ಹೇಳಬೇಕೆಂದು ನಿರ್ಧರಿಸಿದೆ' ಎಂದು ಮೂಲ ಲೇಖಕರು ಹೇಳಿಕೊಂಡಿದ್ದು, ಆ ಕಾರಣದಿಂದಾಗಿ ಈ ಪುಸ್ತಕವನ್ನು ಬರೆದೆ ಎಂದು ಪೀಠಿಕೆಯಲ್ಲಿ ಹೇಳಿದ್ದಾರೆ.

'ಡಾ. ರಾಹುಲ್ ಮ್ಯಾಗ್ಝಿನ್ ಇವರು ಕಾಶ್ಮೀರ ಕಣಿವೆಯ ಮೂಲನಿವಾಸಿಗಳು. ತಮ್ಮ ಮಾತೃಭೂಮಿಯಿಂದ ಪಲಾಯನ ಮಾಡಿದ ಲಕ್ಷಗಟ್ಟಲೆ ಕಾಶ್ಮೀರಿ ಪಂಡಿತರಲ್ಲಿ ಇವರ ಕುಟುಂಬವೂ ಒಂದು. ತಾವು ಅನುಭವಿಸಿದ ಭೀಕರ ಹಿಂಸೆ ಹಾಗೂ ತಾವು ಕಂಡ ಭೀಕರ ಅಮಾನುಷ ಕಗ್ಗೊಲೆಗಳ ಮೂಕಪ್ರೇಕ್ಷಕರಾಗಿದ್ದ ಇವರು ಈ ಕೃತಿಯನ್ನು (ದ ವ್ಯಾಲಿ ರಿಮೈನ್ಸ್ಡ್ ಸೈಲೆಂಟ್) ಬರೆದಿದ್ದಾರೆ.' ಎಂದು ಕೃತಿಯ ಹಿನ್ನುಡಿಯಲ್ಲಿ ಪರಿಚಯಿಸಲಾಗಿದೆ. 1980 ಮತ್ತು 1990ರ ದಶಕದಲ್ಲಿ ಕಾಶ್ಮೀರ ಕಣಿವೆಯಲ್ಲಿ ನಡೆದ ವಿದ್ಯಮಾನಗಳನ್ನು, ಜನಾಂಗೀಯ ಕ್ಲೀನ್ಸಿಂಗ್‌ನ್ನು ಈ ಕೃತಿಯು ವಿವರವಾಗಿ ತಿಳಿಸುತ್ತದೆ. ಇದನ್ನು ಅನುವಾದಿಸಿದವರು, ನಿವೃತ್ತ ಪ್ರಾಧ್ಯಾಪಕರಾದ ಉದಯಕುಮಾರ್ ಹಬ್ಬು ಅವರು.

ಕಾಶ್ಮೀರದ ಕುರಿತು ಈಚಿನ ವರ್ಷಗಳಲ್ಲಿ ಹಲವು ಪುಸ್ತಕಗಳು ಹೊರಬಂದಿದ್ದು, ಅವುಗಳ ನಡುವೆ ಈ ಪುಸ್ತಕವು ವಿಭಿನ್ನವಾಗಿ ಕಾಣಿಸುತ್ತಿದೆ.



ಕಣ್ಣೀರ ಕಣಿವೆ
ಲೇ: ರಾಹುಲ್ ಮ್ಯಾಗಝಿನ್
ಅನು: ಉದಯಕುಮಾರ್ ಹಬ್ಬು
ಪ್ರ: ಅಯೋಧ್ಯಾ ಪಬ್ಲಿಕೇಷನ್ಸ್ ಪ್ರೈ ಲಿ.
9620916996
ಬೆಲೆ ರು.299/-

ಜಗತ್ತಿನ ಅತಿ ದೊಡ್ಡ ಜನಮೇಳ!

» ವಿನಾಯಕ ಎಲ್. ಪಟಗಾರ ಬೆಟ್ಕುಳಿ

ಪ್ರಯಾಗರಾಜ್‌ನಲ್ಲಿ ಈಗ ನಡೆಯುತ್ತಿರುವ ಕುಂಭಮೇಳವು ಒಂದು ದಾಖಲೆ ಬರೆದಿದೆ. ಜಗತ್ತಿನಲ್ಲೆಲ್ಲೂ ಇಷ್ಟೊಂದು ಜನ ಸೇರುವುದಿಲ್ಲ! ಕೋಟಿ ಎಷ್ಟೇ ಆಗಿರಲಿ, ಅದು ವಿಶ್ವದಾಖಲೆ! ನಿರಂತರವಾಗಿ ಹರಿದು ಬರುತ್ತಿರುವ ಈ ಜನಸಾಗರವು, ಅಲ್ಲಿನ ನದಿಯಲ್ಲಿ ಮಿಂದು ಸುರಕ್ಷಿತವಾಗಿ ವಾಪಸಾಗುವಂತೆ ನೋಡಿಕೊಳ್ಳುವುದು ಅಲ್ಲಿನ ಸರಕಾರದ ಜವಾಬ್ದಾರಿಯಾಗಿದೆ. ಸಾಲಾಗಿ ಬಿಡಾರ ಹೂಡಿರುವ ನಾನಾ ರೀತಿಯ ಸನ್ಯಾಸಿಗಳೇ ಒಂದು ಬೆರಗು. ಕುಂಭಮೇಳದಲ್ಲಿ ಭಾಗವಹಿಸಿ ಬಂದವರೊಬ್ಬರ ಅನುಭವ ಇಲ್ಲಿದೆ.

ಸನ್ಯಾಸಿಗಳಲ್ಲೂ ಸಿರಿವಂತ ಮತ್ತು ಬಡವರಿದ್ದಾರೆ!

ವಿಶ್ವದ ಅತಿ ದೊಡ್ಡ ಇವೆಂಟ್ ಅನಿಸಿಕೊಳ್ಳುತ್ತಿರುವ ಮಹಾಕುಂಭ ಮೇಳದಲ್ಲಿ ಭಾಗವಹಿಸಬೇಕೆಂಬ ಆಸೆ ಇತ್ತೀಚೆಗೆ ನೆರವೇರಿತು. ಟ್ರಾವೆಲ್ ಏಜೆನ್ಸಿಯವರು ಕೈಗೆಟಕುವ ದರದಲ್ಲಿ ಪ್ರಯಾಗರಾಜ ಮಹಾಕುಂಭ ಮೇಳಕ್ಕೆ ಕರೆದುಕೊಂಡು ಹೋಗುವ ಅವಕಾಶ ಮಾಡಿಕೊಟ್ಟಿದ್ದರು. ಎಕ್ಸಪ್ರೆಸ್ ಹೈವೆಗಳ ಪ್ರಯಾಣದ ಅನುಭವ ಪಡೆಯುತ್ತ 36 ಗಂಟೆಗಳ ನಂತರ ಪ್ರಯಾಗರಾಜ್ ತಲುಪಿದಾಗ ಮಧ್ಯರಾತ್ರಿ 2 ರ ಸಮಯ. ನಮಗೆ ಪಾರ್ಕಿಂಗ್ ಸಿಕ್ಕಿದ್ದು ಕುಂಭ ಮೇಳ ನಡೆಯುವ ಸ್ಥಳದಿಂದ ಸುಮಾರು 10 ಕಿ.ಮಿ ದೂರದಲ್ಲಿ.

ಅಲ್ಲಿಂದ ಮೇಳ ನಡೆಯುವ ಪ್ರವೇಶ ದ್ವಾರದವರೆಗೆ ಇ-ರಿಕ್ಷಾ ವ್ಯವಸ್ಥೆ ನಮಗೆ ಸಿಕ್ಕಿತು. ರಿಕ್ಷಾ ದರ ಚೌಕಶಿ ನಮ್ಮಲ್ಲಿ ಹಾಗೆನೇ. ಮಧ್ಯರಾತ್ರಿ ಆದ್ದರಿಂದ ಜೆಬಿಗೆ ತುಸು ಬಾರ ಎನಿಸಿತು. ಪ್ರವೇಶದ್ವಾರದಿಂದ ಮುಂದಕ್ಕೆ ಯಾವುದೇ ರೀತಿಯ ವಾಹನಗಳಿಗೆ (ತುರ್ತು ಅಗತ್ಯ ವಾಹನಗಳು ಮತ್ತು ಸರಕಾರಿ ವಾಹನಗಳನ್ನು ಹೊರತುಪಡಿಸಿ) ಪ್ರವೇಶವಿರಲಿಲ್ಲ. ಇಲ್ಲಿಂದ ನಮ್ಮ ಕಾಲ್ನಡಿಗೆಯ ಪ್ರಯಾಣ ಸುರು.

ನಾವು ಹೋದ ಸಂದರ್ಭದಲ್ಲಿ ಚಳಿ ಇತ್ತಾದರೂ ಸಾಮಾಜಿಕ ಜಾಲತಾಣದಲ್ಲಿ ಕೆಲವರು ಹೆದರಿಸಿದಂತೆ, ವಿಪರೀತ ಚಳಿ ಇರಲಿಲ್ಲ. ಅಥವಾ ಅಲ್ಲಿಯ ಜನಸಾಗರದಿಂದಾಗಿ ಚಳಿಯ ಅನುಭವ ಆಗಿಲ್ಲವಾ ಗೊತ್ತಾಗಲಿಲ್ಲ.

ನಡೆಯುವ ರಸ್ತೆಗಳು ತುಂಬಾ ವಿಶಾಲವಾಗಿದ್ದರೂ ಒಮ್ಮೊಮ್ಮೆ ಉಂಟಾಗುವ ಜನರ ಪ್ರವಾಹಕ್ಕೆ ಆ ವಿಶಾಲ ರಸ್ತೆಗಳು ಸಹ ಇಕ್ಕಟ್ಟಿನಂತೆ ಕಾಣಿಸುತ್ತದೆ. ಜನ ಇಲ್ಲದ ಜಾಗ ಇಲ್ಲ. ರಸ್ತೆ ಅಕ್ಕ ಪಕ್ಕದಲ್ಲಿ ಉತ್ತರ ಪ್ರದೇಶ ಸರಕಾರ ಮತ್ತು ಕೇಂದ್ರ ಸರಕಾರದ ವಿವಿಧ ಇಲಾಖೆಗಳ ಮಾಹಿತಿ ಒದಗಿಸುವ ಮಾಹಿತಿ ಕೇಂದ್ರಗಳು ಮಾರಾಟ ಮಳಿಗೆಗಳ ವ್ಯವಸ್ಥೆ ತುಂಬಾ ಅಚ್ಚುಕಟ್ಟಾಗಿದೆ. ಸರಕಾರಿ ಮಾಹಿತಿ ಫಲಕ ಮತ್ತು ಜಾಹೀರಾತು ಫಲಕಗಳಲ್ಲಿ ಯೋಗಿ ಮತ್ತು ಮೋದಿ ಪೋಟೋ ಬಿಟ್ಟರೆ ಇನ್ನುಳಿದ ನೇತಾರರ ಪೋಟೋಗಳನ್ನು ದುರ್ಬೀನು ಹಾಕಿ ಹುಡುಕಬೇಕು.

ಈ ಮಹಾಕುಂಭಮೇಳದಲ್ಲಿ ಕೋಕೋ ಕೋಲಾ, ಡೋಮಿನ್ ಪಿಜ್ಜಾ ಬರ್ಗರ್ ಕಂಪನಿಯವರಗೆ ಏನು ಕೆಲಸ ಅಂತ ನೋಡಿದರೆ ಬೃಹತ ಪುಡ್ ಕೊರ್ಟ್‌ಗಳನ್ನು ಹಾಕಿಕೊಂಡು ಭರ್ಜರಿ ವ್ಯಾಪಾರ ಮಾಡುತ್ತಿವೆ!

ಕುಂಭಮೇಳದ ದ್ವಾರದಿಂದ ಕನಿಷ್ಠವೆಂದರೂ ಸ್ನಾನ ಮಾಡುವ ನದಿಯ ತೀರಕ್ಕೆ ಹೋಗಲು ಕನಿಷ್ಠವೆಂದರೂ ಐದರಿಂದ ಏಳು ಕಿ.ಮೀ. ನಡಿಗೆ ಕಡ್ಡಾಯ. ಅಕ್ಕ ಪಕ್ಕದಲ್ಲಿ ಸಾಕಷ್ಟು ಸಂಖ್ಯೆಯ ತಾತ್ಕಾಲಿಕ ಶೌಚಾಲಯಗಳು ನಿರ್ಮಾಣ ಮಾಡಿದ್ದಾರೆ. ಅವುಗಳ ಸ್ವಚ್ಛತೆಗೆ ಆದ್ಯತೆ ನಿಡಿರುವುದು ಕಂಡು ಬರುತ್ತದೆ. ಮಧ್ಯ ರಾತ್ರಿಯ ಸಂದರ್ಭದಲ್ಲೂ ಸ್ವಚ್ಛತಾ ಕೆಲಸಗಾರರೂ ರಸ್ತೆ ಮತ್ತು ಶೌಚಾಲಯಗಳ ಕ್ಲಿನಿಂಗನಲ್ಲಿ ನಿರಂತರವಾಗಿದ್ದನ್ನು ಕಾಣಬಹುದಾಗಿತ್ತು.

ಸುರಕ್ಷತೆಗಾಗಿ ಸರಪಣಿ

ಮಧ್ಯರಾತ್ರಿಯ ವೇಳೆಯಲ್ಲಿ ಕುಂಭಮೇಳದ ಸ್ನಾನಘಟ್ಟದ ಕಡೆ ನಾವು ನಡೆಯುತ್ತಿದ್ದರೆ ಅದಾಗಲೇ ಸ್ನಾನ ಮುಗಿಸಿ ಹೋರಟವರು ಅಷ್ಟೇ ಇದ್ದರು. ಹಗಲು ಹೊತ್ತಿನಲ್ಲಿ ಇದ್ದಷ್ಟು ಜನಸಂದಣಿ ರಾತ್ರಿ ಇರುವುದಿಲ್ಲವಾದರಿಂದ ಸ್ವಲ್ಪ ನಿರಾಳವಾಗಿ ಓಡಾಡಬಹುದು. ನದಿಯ ದಡ ಹತ್ತಿರವಾಗುತ್ತಿದ್ದಂತೆ ಜನರ ದಟ್ಟಣೆ ಹೆಚ್ಚಾಗುತ್ತಾ ಹೋಗುತ್ತದೆ. 'ತ್ರಿವೇಣಿ ಸಂಗಮ ಯಾವುದು?' ಎಂದು ಕೇಳಿದರೆ ಎಲ್ಲಾ ಸ್ನಾನ ಘಟ್ಟಗಳನ್ನು ತ್ರಿವೇಣಿ ಸಂಗಮ ಎಂದೇ ಹೇಳುತ್ತಾರೆ. ಒಂದು ವರ್ಷದ ಮಗುವಿನಿಂದ ಹಿಡಿದು ವಯಸ್ಸಾದವರೆಗಿನ ಎಲ್ಲ ಎಲ್ಲ ವಯೋಮಾನದ ಜನಸಾಗರವನ್ನೇ ಇಲ್ಲಿ ಕಾಣಬಹುದು. ಗುಂಪಿನಿಂದ ತಪ್ಪಿಸಿಕೊಳ್ಳಬಾರದೆಂದು ವಿವಿಧ ಮಾದರಿಯ ಸರಪಣಿಯಲ್ಲಿ ತಮ್ಮವರನ್ನು ಕಾಪಾಡಿಕೊಳ್ಳುತ್ತಾ ಜನ ಸಾಗುವುದನ್ನು ನೋಡುವುದೇ ಚೆಂದ.

ಬೆಳಗಿನ ಜಾವದಲ್ಲೂ ಜನ

ದಾರಿಯುದ್ದಕ್ಕೂ ಸ್ನಾನ ಮಾಡಲು ಬೇಕಾಗುವ ವಸ್ತುಗಳನ್ನು ಮಾರುವವರು, ಹಣೆಗೆ ಗಂಧ ಹಚ್ಚಿ ತಿಲಕ ಇಡುವವರು ಇದ್ದರು. ಕುಂಭಮೇಳವು ಹೀಗೆ ಹಲವು ಜನರ ಹೊಟ್ಟೆ ತುಂಬಿಸುತ್ತಿದೆ. ಸ್ನಾನ ಮಾಡುವ ನದಿಯ ದಡದ ಉದ್ದಕ್ಕೂ ಸದಾ ಜನ ಇರುತ್ತಾರೆ. ನಾವು ನದಿ ದಡ ತಲುಪಿದಾಗ ಬೆಳಗ್ಗಿನ ಜಾವ ನಾಲ್ಕು ಗಂಟೆ. ಅದಾಗಲೇ ಸ್ನಾನಕ್ಕೆ ನಗದಿಪಡಿಸಿದ ಸ್ಥಳಗಳಲ್ಲಿ ಸಾವಿರಾರು ಜನ ಹರ್ ಹರ್ ಮಹಾದೇವ ಎಂದು ಮುಳುಗೇಳುತ್ತಿದ್ದರು. ಸಾಕಷ್ಟು ಮಹಿಳೆಯರು ನದಿಯ ದಡದಲ್ಲಿ ಹೂವು ಇಟ್ಟು ಆರತಿ ಬೆಳಗಿ ಪೂಜೆ ಮಾಡುತ್ತಿದ್ದರು. ಹೆಚ್ಚಾಗಿ ಉತ್ತರಭಾರತೀಯ ಮಹಿಳೆಯರು ಇಂತಹ ಪೂಜೆಯಲ್ಲಿ ತೊಡಗಿರುವುದು ಕಂಡು ಬಂದಿತ್ತು. ಮೊಬೈಲ್ ಪೋಟೊ ಪೋಸ್ ಕೊಟ್ಟು ಸಂಗಮ ನೀರಿನಲ್ಲಿ ಮುಳುಗೇಳುವವರೂ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬಂದರು.

ಸುರಕ್ಷತಾ ದೃಷ್ಟಿಯಿಂದ ಸ್ನಾನ ಮಾಡುವ ಸ್ಥಳಗಳಲ್ಲಿ ಎಲ್ಲಿಯೂ ಮೊಣಕಾಲಕ್ಕಿಂತ ಹೆಚ್ಚಿನ ನೀರು ಇಲ್ಲ. ನೀರು ಕಡಿಮೆ ಇದ್ದರೂ ನೀರಿನ ಹರಿವಿನ ಸೆಳೆತ ಜೋರಾಗಿರುವುದು ಕಂಡುಬಂದಿತ್ತು. ಗುಂಪು ಗುಂಪಾಗಿ ಜನ ಒಂದೆಡೆ ತಮ್ಮ ಲಗೇಜ್‌ಗಳನ್ನು ಇಟ್ಟು ಪರಸ್ಪರ ಕಾಯುತ್ತ, ಮೊಬೈಲ್ ಪೋಟೊ ತೆಗೆದುಕೊಳ್ಳುತ್ತ ಸಂಗಮದಲ್ಲಿ ಮುಳುಗಿ ಏಳುತ್ತಿದ್ದರು. ಗುಂಪು ಜನರ ಘೋಷಣೆಗಳ ಮಧ್ಯೆ ತ್ರಿವೇಣಿ ಸಂಗಮದಲ್ಲಿ ಮುಳಗಿ ಏಳುವಾಗ ಯಾವ ಚಳಿಯೂ ತಾಗುವುದಿಲ್ಲ. ಮುಂಜಾವಿನ ಐದೂವರೆಗೆ ಸುಮಾರಿಗೆ ತ್ರಿವೇಣಿ ಸಂಗಮದಲ್ಲಿ ನಾವು ಎಲ್ಲರಂತೆ ಮೂರು ಸಲ ಮುಳಗಿ ಎದ್ದಾಗ ಸಾವಿರಾರೂ ಕಿ.ಮೀ. ದೂರ ಪಯಣಿಸಿದ ಸುಸ್ತು ಒಂದು ಕ್ಷಣ ಮಾಯವಾಗಿ, ಸಾರ್ಥಕತೆಯ ಭಾವ ಮೂಡುವುದು ಸುಳ್ಳಲ್ಲ. ಸ್ನಾನದ ನಂತರ ಮಹಿಳೆಯರಿಗೆ ಬಟ್ಟೆ ಬದಲಾಯಿಸುವ ವಿಚಾರದಲ್ಲಿ ಒಂದಿಷ್ಟು ಹೆಚ್ಚಿನ ಸಂಖ್ಯೆಯಲ್ಲಿ ತಾತ್ಕಲಿಕ ಕೊಠಡಿಗಳನ್ನು ಹೆಚ್ಚಿಸಬಹುದಿತ್ತು ಅನಿಸಿತ್ತು.

ಒಣ ಹುಲ್ಲಿನ ಹಾಸು

ಸ್ನಾನದ ನಂತರ ಜನರಲ್ಲಿನ ಒಂದಿಷ್ಟು ನಿರಾಳತೆ ಭಾವನೆ, ಎಷ್ಟೋ ವರ್ಷಗಳ ಕಾಯುವಿಕೆಯ ಸಿಕ್ಕ ಪ್ರತಿಫಲವೆಂಬಂತೆ ಸಂತೋಷ ಮುಖದಲ್ಲಿ ಕಂಡು ಬರುತ್ತಿತ್ತು. ಸ್ನಾನದ ಘಟ್ಟದ ಸ್ಥಳದಲ್ಲಿ ನೆಲ ಒದ್ದೆಯಾಗದಂತೆ ಒಣ ಹುಲ್ಲುಗಳನ್ನು ಹಾಸಿರುವುದು ಕಂಡು ಬಂದಿತ್ತು. ನೆಲ ರಾಡಿಯಾಗದಂತೆ ಒಣ ಹುಲ್ಲು ತಡೆದಿದೆ. ಬೆಳಗ್ಗಿನ ಆ ತಣ್ಣಗಿನ ಚಳಿಯಲ್ಲಿ ಕುಂಭ ಸ್ನಾನ ಮುಗಿಸಿದ ನಂತರ, ಸಾಕಷ್ಟು ಮಹಿಳೆಯರು ತುಟಿಗೆ ಲಿಪ್ಸ್ಟಿಕ್ ಬಳಿಯುವದರಲ್ಲಿ ತಲ್ಲೀನರಾಗಿದ್ದು ಸೋಜಿಗವೆನಿಸಿತು. ಆ ಹೆಣ್ಣುಮಕ್ಕಳ ಸೌಂದರ್ಯ ಪ್ರಜ್ಞೆಗೆ ಒಂದು ನಮಸ್ಕಾರ.

ಕುಂಭ ಸ್ನಾನ ಮುಗಿಸಿದವರು ಬಹುತೇಕ ಜನ ಅಲ್ಲೇ ಹತ್ತಿರದಲ್ಲಿರುವ ಹನುಮಾನ ದೇವಸ್ಥಾನಕ್ಕೆ ಭೇಟಿ ನೀಡುವುದು ಪದ್ಧತಿ. ಈ ಹನುಮಾನ ದೇವಸ್ಥಾನ ನಮ್ಮ ಊರ ಕಡೆ ಇರುವ ದೇವಸ್ಥಾನದಂತೆ ಇದೆ. ದೇವರ ದರ್ಶನಕ್ಕೆ ಕನಿಷ್ಠ ಎರಡು ತಾಸಾದರೂ ಸಾಲಿನಲ್ಲಿ ನಿಲ್ಲವುದು ಅನಿವಾರ್ಯ. ಇಲ್ಲಿಯೂ ಸರದಿ ಸಾಲಿನಲ್ಲಿ ವಿಐಪಿ ಸಂಸ್ಕೃತಿ ಕಂಡು ಬರುತ್ತದೆ. ಇಲ್ಲಿಯ ಹನುಮಾನ ದೇವರು ನೆಲದ ಮೇಲೆ ಮಲಗಿರುವುದು ವಿಶೇಷ.

ಅಖಾಡಾಕ್ಕೆ ಭೇಟಿ

ಪ್ರಯಾಗರಾಜ ಮಹಾಕುಂಭ ಮೇಳದಲ್ಲಿ ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡುವುದು ಒಂದು ಭಾಗವಾದರೆ ಸಾಧುಗಳು, ಸ್ವಾಮಿಗಳು ಇರುವ ಅಖಾಡಕ್ಕೆ ಭೇಟಿ ಕೊಡುವುದು ಇನ್ನೊಂದು ಭಾಗ. ನದಿಯ ಇನ್ನೊಂದು ದಡದಲ್ಲಿ ನೂರಾರು ಏಕರೆ ಪ್ರದೇಶದಲ್ಲಿ ಹೊಸ ಪ್ರಪಂಚವನ್ನೇ ತೆರೆಯಲಾಗಿದೆ. ಒಂದೆರಡು ಕಿ.ಮೀ.ಗಳಷ್ಟು ಉದ್ದದ ಬ್ರಿಡ್ಜನ್ನು ದಾಟಿ ಹೋದರೆ ಸಾಧುಗಳಿರುವ ವಿಶಾಲವಾದ ಅಖಾಡಗಳ ನಗರಕ್ಕೆ ಪ್ರವೇಶ ಮಾಡಬಹುದು. ಇಲ್ಲಿ ಎಲ್ಲಿ ನೋಡಿದರೂ ತರಹೇವಾರಿ ಗುರುಗಳ (ಸ್ವಾಮಿಗಳ) ಪೋಟೊ ಸಮೇತ ಬ್ಯಾನರಗಳ ಹಾವಳಿ! ಚುನಾವಣೆಯ ಸಂದರ್ಭದಲ್ಲಿ ರಾಜಕಾರಣಿಗಳ ಬ್ಯಾನರಗಳ ಹೇಗೆ ಕಾಂಪಿಟೆಷನ್ ರೀತಿ ಹಾರಾಡುತ್ತೋ ಹಾಗೇ ಅಖಾಡಗಳ ನಗರಿಯಲ್ಲಿ ವಿವಿಧ ಸ್ವಾಮಿಗಳ, ಅವರ ಪಂಗಡಗಳ, ಬ್ಯಾನರಗಳು ಹಾರಾಡುತ್ತಿದ್ದವು. ಅಲ್ಲಿಯೂ ಸಹ ಯೋಗಿ ಮತ್ತು ಮೋದಿ ಅವರ ಪೋಟೊಗಳಿದ್ದವು. ಎಲ್ಲವೂ ಕೇಸರಿಮಯ.

ಸನ್ಯಾಸಿಗೆ ಪೊಲೀಸ್ ರಕ್ಷಣೆ!

20 ಕ್ಕೂ ಹೆಚ್ಚಿನ ಅಖಾಡಗಳ ಇದ್ದು ಕೆಲವೊಂದು ವಿಶಾಲವಾಗಿದ್ದವು. ನನಗೆ ನಾಲ್ಕೈದು ತಾಸಿನಲ್ಲಿ ಒಂದೆರಡು ಅಖಾಡಕ್ಕೆ ಭೇಟಿ ನೀಡಲು ಸಾಧ್ಯವಾಯಿತು. ಜನಸಾಮಾನ್ಯರಲ್ಲಿ ಭಿಕ್ಷುಕನಿಂದು ಹಿಡಿದು ಬಡವ, ಮಧ್ಯಮ, ಶ್ರೀಮಂತ, ಹೈಫೈ ಜೀವನ ಮಾಡುವವರು ಇದ್ದಾರೋ ಹಾಗೇ ಅಖಾಡದಲ್ಲಿ ಬಿಕ್ಷುಕ ಸನ್ಯಾಸಿಗಳಿಂದ ಹಿಡಿದು ಶ್ರೀಮಂತ ಸ್ವಾಮಿಗಳು, ಬಾಬಾಗಳು ಇದ್ದರು. ಕೆಲವೊಂದು ಅಖಾಡಗಳಲ್ಲಿ ವಿಶೇಷ ಪೋಲಿಸ್ ರಕ್ಷಣೆಯ ಸ್ವಾಮಿಗಳ ಬಿಡಾರಗಳೂ ಇದ್ದವು! ಅಲ್ಲಿಗೆ ಜನಸಾಮಾನ್ಯರ ಪ್ರವೇಶ ಇಲ್ಲ.

ಬೆತ್ತಲೆ ಸಾಧುಗಳು

ನಾಗಾ ಸಾಧುಗಳ ಅಖಾಡಗಳು, ಅವರ ವೇಷ ಭೂಷಣಗಳು, ವಿಚಿತ್ರ ಆಚರಣೆಗಳು ನಮಗೆ ಸೋಜಿಗವೆನಿಸುತ್ತದೆ. ನಾಗಾ ಸಾಧುಗಳ ಅಖಾಡಗಳ ಬಿಡಾರದಲ್ಲಿ ಸುತ್ತಾಡುವಾಗ ಬೂದಿ ಬಳಿದುಕೊಂಡು ಬೆತ್ತಲೆಯಾಗಿ ಗಾಂಜಾ ಸೇದುತ್ತಿರುವ ಸಾಕಷ್ಟು ಸಾಧುಗಳು ಕಂಡುಬಂದರು. ನಾವು ನೀಡುವ ಹಣಕ್ಕೆ ಅನುಗುಣವಾಗಿ ಆರ್ಶೀವಾದದ ರೀತಿ, ನೀತಿ ಕಂಡು ಬಂದಿತು. ಕೆಲ ಕಡೆ ಹಣ ನೀಡದೇ ಪೋಟೋ ತೆಗೆಯಲು ಹೋದರೆ, ಗುರ್ ಎಂದಿದ್ದು ಇದೆ. ಸಾಕಷ್ಟು ಕಡೆ ಸತ್ಸಂಗ್‌ಗಳು, ಊಟ, ತಿಂಡಿ ವ್ಯವಸ್ಥೆ ಸಹ ಇದೆ.

ಇಲ್ಲಿಯ ಸೇವೆಗಳು, ದರ್ಶನಗಳು ಭಕ್ತರ ಅಂತಸ್ತಿಗೆ ತಕ್ಕಂತೆ ಇದ್ದಂತೆ ನನಗೆ ಭಾಸವಾಯಿತು. ಮುಖ್ಯವಾಗಿ ಸರಿಯಾದ ಮಾಹಿತಿಯೊಂದಿಗೆ ಓಡಾಡಬೇಕೆಂದರೆ ಒಬ್ಬ ಸ್ಥಳಿಯ ಗೈಡ್ ಸಹಕಾರ ಅಗತ್ಯ ಅನಿಸಿತು. ಇದರಿಂದಾಗಿ ಕಡಿಮೆ ಸಮಯದಲ್ಲಿ ಹೆಚ್ಚಿನದನ್ನು ನೋಡಬಹುದಾಗಿದೆ.

ನಾನಾ ರೀತಿಯ ಇಲ್ಲಿನ ಅಖಾಡಗಳು, ನಮಗೆ ಸರಿಯಾಗಿ ಅರ್ಥವಾಗಬೇಕಾದರೆ ಕನಿಷ್ಠ ಒಂದು ವಾರವಾದರೂ ಬೇಕಾಗುತ್ತದೆ. ನನಗೆ ಮೇಲ್ನೋಟ ಮಾತ್ರ ದಕ್ಕಿತು; ನನ್ನ ಭಾವಕ್ಕೆ ಸಿಕ್ಕಿದು ಇಷ್ಟೇ ಇಷ್ಟು. ನನ್ನ ಭಾವಕ್ಕೆ ನಿಲುಕಿದ್ದು ತೃಣದಲ್ಲಿ ತೃಣ ಮಾತ್ರ.

ಕುಂಭ ಮೇಳವು ಭಾರತದಲ್ಲಿ ಧಾರ್ಮಿಕ ಪ್ರವಾಸಕ್ಕೆ ಒಂದು ಬೂಸ್ಟ್ ನೀಡಿದೆ ಎಂದರೆ ತಪ್ಪಾಗಲಾರದು. ಜಗತ್ತಿನಲ್ಲಿ ಎಲ್ಲೂ ಕಾಣದಂತಹ ಅತಿ ದೊಡ್ಡ ಆಧ್ಯಾತ್ಮಿಕ ಇವೆಂಟಾಗಿ ಇವತ್ತು ಮಹಾಕುಂಭ ಮೇಳ ನಡೆಯುತ್ತಿರುವುದು ನಿಜ. ಅದೆಷ್ಟೋ ಕೋಟಿ ಜನರು ಇಲ್ಲಿ ಸೇರುವುದು ಒಂದು ಅದ್ಭುತ! ಜಗತ್ತಿನ ಯಾವ ಜಾಗದಲ್ಲೂ ಇಷ್ಟೊಂದು ಜನ ಸೇರುವುದಿಲ್ಲ; ಅದಂತೂ ನಿಜ. ಈ ಜನಸಾಗರವನ್ನು ನಿಭಾಯಿಸುವ ಶಕ್ತಿ ಅಲ್ಲಿನ ಆಡಳಿತ ವ್ಯವಸ್ಥೆಗೆ ಇರುವ ವಿಚಾರವು ಹೊರ ಜಗತ್ತಿಗೆ ಹೊಸದು. ಅದನ್ನು ಭಾರತ ಸಾಧಿಸಿದೆ. ಭಾರತದ ಆಧ್ಯಾತ್ಮಿಕ ಲೋಕವನ್ನು ಜಗತ್ತು ಬೆರಗುಗಣ್ಣುಗಳಿಂದ ನೋಡುತ್ತಿದೆ.

ಲಹರಿ

» ನಳಿನಿ ಟಿ. ಭೀಮಪ್ಪ
ಧಾರವಾಡ

ಕಪ್ಪಿಗರ ಕಾವ್ಯ

ಇತ್ತೀಚೆಗೆ ಸ್ನೇಹಿತೆಯರೆಲ್ಲ ಸೇರಿ ಭರ್ಜರಿ ಶಾಪಿಂಗ್ ಮಾಡಿಕೊಂಡು, ಹತ್ತಿರವಿದ್ದ ದರ್ಶಿನಿಗೆ ದಾಂಗುಡಿಯಿಟ್ಟು ಬೆಣ್ಣೆದೋಸೆ ತಿಂದು ಕಾಫಿಗೆ ಆರ್ಡರ್ ಮಾಡಿ ಕೂತೆವು. ಅವನು ತಂದಿಟ್ಟ ಕಾಫಿಲೋಟ ನೋಡುತ್ತಿದ್ದಂತೆ ಗಾಬರಿಯಾಯಿತು. ಸೊಂಟಹಿಡಿದರೆ ಉಳುಕುವ, ಕಂಠ ಹಿಡಿದರೆ ತುಳುಕುವ ಎರಡು ಇಂಚು ಉದ್ದದ ಪೇಪರ್ ಕಪ್ಪಿನಲ್ಲಿದ್ದ ಕಾಫಿಯನ್ನು ಎರಡು ಸಿಪ್ ಗುಟುಕರಿಸುತ್ತಿದ್ದಂತೆ, ಉಸುಕಿನ ಮೇಲೆ ನೀರು ಚೆಲ್ಲಿದಂತೆ, ಗಂಟಲುತನಕ ಹೋಗಲು ತ್ರಾಣವಿಲ್ಲದೆ ನಾಲಿಗೆಯಲ್ಲೇ ಇಂಗಿ ಹೋಗಿತ್ತು. ಒಂದಿಷ್ಟು ಹಣ ಹೆಚ್ಚಾದರೂ ಪರವಾಗಿಲ್ಲ, ದಸರಾ ಗೊಂಬೆಗಳ ಜೊತೆಯಲ್ಲಿಡುವಂತಿರುವ ಕಪ್ಪುಗಳ ಅಳತೆಯನ್ನು ಒಂದೀಟು ದೊಡ್ಡದು ಮಾಡಪಾ ಎನ್ನುವ ಪುಕ್ಕಟೆ ಸಲಹೆ ಆ ಹೋಟೆಲ್ಲಿನ ಮಾಲೀಕನಿಗೆ ನೀಡಿ, ಹಸುಗಳಂತೆ ನಾಲಗೆಯನ್ನು ತುಟಿ ಸುತ್ತಲೂ ಸವರ್‍ಯಾಡಿಕೊಂಡು ಹೊರಬಿದ್ದಿದಾಯಿತು.

ಸ್ವಲ್ಪ ಹಿಂದಿನ ಕಾಲಕ್ಕೆ ಹೋದರೆ ಲೋಟಗಳು ಎಂದರೆ, ಸ್ಟೀಲಿನದೋ, ಅಲ್ಯುಮಿನದೋ, ಕಂಚಿನದೋ, ಬೆಳ್ಳಿಯದೋ ಒಟ್ಟಿನಲ್ಲಿ ಕಾಲು ಲೀಟರಿಗಿಂತ ಸ್ವಲ್ಪ ಹೆಚ್ಚೇ ನೀರು ಹಿಡಿಯುವಷ್ಟು ದಪ್ಪ, ಎತ್ತರ ಇರುತ್ತಿದ್ದವು. ಜೊತೆಗೆ ಅವರಿವರು ಉಡುಗೊರೆ ಕೊಟ್ಟಿದ್ದ ಹೆಚ್ಚು ಕಡಿಮೆ ಅದೇ ಪ್ರಮಾಣದ ಅಳತೆಯ, ಸ್ವಲ್ಪ ಬೇರೆ ವಿನ್ಯಾಸದ ಲೋಟಗಳೂ ಸೇರಿ ಸಮ್ಮಿಶ್ರ ವಾತಾವರಣದ ರಚನೆಯಾಗುತ್ತಿತ್ತು ಸಣ್ಣ ಕೊಡದಳತೆಯಿದ್ದ ಚೊಂಬಿನಲ್ಲಿ ಕಾಫಿ ಕಾಯಿಸಿ, ದೊಡ್ಡ ದೊಡ್ಡ ಲೋಟಗಳಿಗೆ ಮುಕ್ಕಾಲುಭಾಗ ತುಂಬುವಂತೆ ಸುರಿದು ಕೊಡುತ್ತಿದ್ದರು. ಅದರ ಸೊಂಟವನ್ನು ಸುತ್ತಿಹಿಡಿಯಲೂ ಬೆರಳುಗಳಿಗೆ ಸಾಲುತ್ತಿರಲಿಲ್ಲ. ಪುಟ್ಟಮಕ್ಕಳಂತೂ ಎರಡೂಕೈಗಳಿಂದ ಹಿಡಿದುಕೊಂಡು ಎತ್ತಿ ಕುಡಿಯಬೇಕಿತ್ತು. ಅದರ ಸುಡುವ ನಡುವನ್ನು ಹಿಡಿಯಲಾಗದೆ, ಬಿಸಿಯ ಅಂಚನ್ನು ತುಟಿಗಳಿಗೆ ತಾಗಿಸಲಾಗದಷ್ಟು ಹೊಗೆಹಾಯುತ್ತಿದ್ದ, ಗಂಟಲುಸುಡುವಂತಹ ಬಿಸಿ ಪಾನೀಯವನ್ನು ಕುಡಿಯುವ ಅಭ್ಯಾಸವಿದ್ದವರಲ್ಲಿ, ಹೆಣ್ಣುಮಕ್ಕಳಾದರೆ ತಮ್ಮ ಸೆರಗಿನ ತುದಿಯನ್ನು ಕಪ್ಪಿನ ಸುತ್ತ ಬೆಚ್ಚಗೆ ಸುತ್ತಿ, ಗಂಡುಮಕ್ಕಳಾದರೆ ಹೆಗಲಿಗೆ ಹಾಕಿಕೊಂಡಿದ್ದ ಟವೆಲ್ಲನ್ನು ಕೊಡವಿ, ಅದರೊಳಗೆ ಇಟ್ಟುಕೊಂಡು ಸೊರ್ ಎಂದು ಹೀರುತ್ತಿದ್ದರು.

ಪಿಂಗಾಣಿ ಕಪ್

ಸ್ವಲ್ಪ ಬೆಚ್ಚಗೆ ಬೇಕೆನ್ನುವರು, ಇನ್ನೊಂದು ಅಷ್ಟೇ ಅಳತೆಯ ಲೋಟವನ್ನು ಇಟ್ಟುಕೊಂಡು, ಎರಡೂ ಲೋಟಕ್ಕೆ ಎತ್ತಿಹಾಕುತ್ತಲೋ ಅಥವಾ ಇಷ್ಟಿಷ್ಟೇ ಮತ್ತೊಂದು ಕಪ್ಪಿಗೆ ನೊರೆ ಬರುವಂತೆ ಹಾಕಿಕೊಂಡು ಗರಗರ ತಿರುಗಿಸಿಯೋ ಬೆಚ್ಚಗೆ ಮಾಡಿಕೊಂಡು ಕುಡಿಯುವುದಿತ್ತು. ಹಾಲು, ನೀರು, ಪಾನಕ, ಮಜ್ಜಿಗೆ, ಪಾಯಸ, ಗಂಜಿ ಎಲ್ಲದಕ್ಕೂ ಅವೇ ಅಮಿತಾಭ್ ಲೋಟಗಳೇ ಗತಿ. ಬಟ್ಟಲುಗಳನ್ನು ಬಟ್ಟಲುಗಣ್ಣುಬಿಟ್ಟುಕೊಂಡು ನೋಡುತ್ತಿದ್ದ ಕಾಲವದು. ಹೋಟೆಲ್ಲುಗಳಿಗೆ ಹೋದಾಗ ಬೆಳ್ಳನೆ ಹೊಳೆಯುತ್ತಿದ್ದ ಪಿಂಗಾಣಿಯ ಕಪ್ಪು ಸಾಸರ್‌ಗಳು, ಫಿಲ್ಟರ್ ಕಾಫಿಯನ್ನು ಹಾಕಿಕೊಡುತ್ತಿದ್ದ ಸ್ಟೀಲ್ ಬಟ್ಟಲು ಲೋಟಗಳ ಚೆಲುವಿಗೆ ಮಾರುಹೋದರೆ, ಅವುಗಳ ಅಳತೆಗೆ ಮಾತ್ರ ಮೂಗು ಮುರಿಯುತ್ತಿದ್ದರು. ಕಾಕಾನ ಹೋಟೆಲ್ಲಿನ ಗಾಜಿನ ದೊಡ್ಡ ಲೋಟದಲ್ಲಿ ಸಿಗುತ್ತಿದ್ದ ಟೀ ಮತ್ತು ಬಾರ್‌ನಲ್ಲಿ ಮದ್ಯ ಮಾತ್ರ ಗಾಜಿನಲ್ಲಿ ಸರಬರಾಜು ಆಗುತ್ತಿದ್ದುದು ಹೆಚ್ಚು. ಮನೆಯಲ್ಲೇ ಹೆಂಡ ಕುಡಿಯುವ ಅಭ್ಯಾಸವಿದ್ದವರೂ ಸಹ ಮತ್ತೆ ಮನೆಯಲ್ಲಿರುವ ಲೋಟಗಳಿಗೇ ಮೊರೆಹೋಗುತ್ತಿದ್ದರು. ನಂತರ ನೋಡಲು ಅಷ್ಟೇ ಅಳತೆ ಆದರೆ ಪ್ರಮಾಣ ಕಡಿಮೆ ಹಿಡಿಸುವ, ಹಿಡಿದರೂ ಬಿಸಿತಾಗದ, ಹೆಣ್ಣುಹೈಕಳು ಹೀಲ್ಸ್ ಹಾಕಿಕೊಂಡಂತಹ ದಪ್ಪತಳದ ಡಬಲ್ ಲೇಯರ್‌ನ ಹಿಡಿಕೆಯುಳ್ಳ ಸ್ಟೀಲ್ ಲೋಟಗಳು ಕಾಲಿಟ್ಟದ್ದವು. ಯಾವುದೇ ಭೇದಭಾವವಿಲ್ಲದೆ ಅತಿಥಿಗಳಿಗೂ ಮನೆಯವರಿಗೂ ಅವೇ ಲೋಟಗಳು.

ಕಪ್ಪು ಯಾವುದಾದರೇನು, ಒಳಗಿರುವ ದ್ರವದ ರುಚಿಯೇ ಮುಖ್ಯ ಎಂದು ಹೇಳುವುದುಂಟು; ಆದರೆ, ದ್ರವವನ್ನು ಹಿಡಿದಿಡುವ ಕಪ್ಪು ವೈವಿಧ್ಯಮಯವಾಗಿರಬೇಕು! ಚಂದವಾಗಿರಬೇಕು! ಎನ್ನುವವರ ಸಂಖ್ಯೆಯೂ ಹಿರಿದು.

ಕಪ್ಪುಗಳ ಸೆಟ್

ಈಗ ಸೆಟ್ ಕಾಲ. ಯಾವ ಅಳತೆಯ, ವಿನ್ಯಾಸದ ಲೋಟಗಳನ್ನು ತೆಗೆದುಕೊಂಡರೂ ಅರ್ಧ ಡಜನ್ ಅಥವಾ ಡಜನ್ ಲೆಕ್ಕದಲ್ಲಿಯೇ ಕೊಳ್ಳುವುದು.ಬೆಳಿಗ್ಗೆ ಕಾಫೀ ಕುಡಿಯಲು ಹೆಚ್ಚಾನುಹೆಚ್ಚು ಮೀಡಿಯಮ್ ಅಳತೆಯ ಸ್ಟೀಲ್ ಅಥವಾ ಪಿಂಗಾಣಿ ಲೋಟಗಳು, ಟಿಫಿನ್ನಿನ ನಂತರ ಕುಡಿಯಲು ಸ್ವಲ್ಪ ಮಿನಿ ಅಳತೆಯವು, ಕುಡಿಯುವ ನೀರಿಗೆ ಮತ್ತೆ ಬೇರೆಯವು, ಹೀಗೆ ದಿನಕ್ಕೆ ನಾಲ್ಕು ಬಾರಿ ಗುಂಜುನಾರಿನಿಂದ ಮೈಯುಜ್ಜಿಸಿಕೊಂಡು, ಮೈತುಂಬ ಗೆರೆಗಳನ್ನು ಮೂಡಿಸಿಕೊಂಡು ಮಬ್ಬಾಗಿ, ಪಿಂಗಾಣಿಯವಾದರೆ ಬಣ್ಣ ಮಾಸಿ, ಅಲ್ಲಲ್ಲಿ ಸಿಳುಕು ಬಿಟ್ಟರೂ ಉಪಯೋಗಿಸುವುದು ಸಾಮಾನ್ಯ. ಪಾಳಾಗುವವರೆಗೂ ಅವುಗಳನ್ನು ಹೊರಹಾಕುವುದಿಲ್ಲವೆಂತ ತತ್ವ ಹೆಚ್ಚಿನವರದು.

ಒಮ್ಮೊಮ್ಮೆ ಶೆಲ್ಫಿನ ಮೇಲೆ ಹೋಗಿ ಕೂರುವುದಕ್ಕೂ ಪುರುಸೊತ್ತಿಲ್ಲದೆ, ತೊಳೆದು ಹಾಕಿದ ಟಬ್ಬಿನಿಂದ ಕುಡಿಯಲು, ಕುಡಿದ ನಂತರ ತೊಳೆದು ಟಬ್ಬಿಗೆ ಥೇಟ್ ಮಂಗನಂತೆ ಹಾರಾಡುತ್ತಿರುತ್ತವೆ. ಅತಿಥಿಗಳು ಮನೆಗಿಳಿದಾಗ ಮಾತ್ರ ಬಹುತೇಕ ಮನೆಗಳಲ್ಲಿ ಥಳಥಳ ಹೊಳೆಯುವ ಲೋಟಗಳೂ ಶೆಲ್ಫಿನಿಂದ ಕೆಳಗಿಳಿಯುವುದಿದೆ. ಜ್ಯೂಸ್‌ಗಾಗಿ, ಕಾಫಿಗಾಗಿ, ನೀರಿಗಾಗಿ ಎಂದೆಲ್ಲ ವೆರೈಟಿ ಡಿಸೈನಿನ ಕಪ್ಪುಗಳು, ಅವುಗಳನ್ನು ಸರ್ವ್ ಮಾಡಲು ಚಂದ ಚಂದದ ಟ್ರೇಗಳೂ ಜೊತೆಯಾಗುವುದಿದೆ. ಅತಿಥಿಗಳ ಕಾಲ್ಗುಣದಿಂದ, ಕುಟುಂಬ ಸದಸ್ಯರಿಗೂ ಅಂದು ಆ ಕಪ್ಪುಗಳಲ್ಲಿ ಸೇವಿಸುವ ಭಾಗ್ಯ ದೊರೆಯುವುದು. ಉಡುಗೊರೆಯಾಗಿಯೂ ಕೂಡ ಪ್ಲಾಸ್ಟಿಕ್, ಫೈಬರ್, ಗಾಜು ಹೀಗೆ ಎಲ್ಲ ರೀತಿಯ ಕಪ್ಪುಗಳ ಸೆಟ್ಟುಗಳನ್ನು ಹೆಚ್ಚಾಗಿ ಕೊಡುವುದಿದೆ. ಆದರೆ ಸ್ಟೀಲ್ ಲೋಟಕ್ಕೆ ಮನ್ನಣೆ ಕಡಿಮೆ.

ಕಪ್ಪುಗಳ ನಂಟು ಕುಡಿಯಲು ಮಾತ್ರ ಸೀಮಿತವಾಗಿಲ್ಲ. ಕಣ್ಣಿನ ಸೌಂದರ್ಯವನ್ನು ಕಣ್ಣುಸುತ್ತಲಿನ ಕಪ್ಪು ಕುಂದಿಸಿದರೂ, ಕಣ್ಕಪ್ ಎತ್ತಿಹಿಡಿಯುವುದಿದೆ. ಕಣ್ಣಲ್ಲಿ ಬಿದ್ದ, ಕಸ, ಧೂಳನ್ನು ಸ್ವಚ್ಛಗೊಳಿಸಲು ಐಕಪ್ ಎನ್ನುವ ಸಾಧನಗಳೂ ಇವೆ. ಶೂಟಿಂಗ್, ಸಂಗೀತದ ರೆಕಾರ್ಡಿಂಗ್ ಅಥವಾ ಕೇಳಿಸಿಕೊಳ್ಳಲೂ, ಹೊರಗಿನ ಜಗತ್ತಿನ ಶಬ್ದಗಳಿಗೆ ಕಿವಿ ಕೆಪ್ಪಾಗುವಂತೆ, ಕಿವಿ ಕಪ್ಪುಗಳು ಲಭ್ಯವಿವೆ. ಹಾಗೆಯೇ ಮೂಗಿನ ಕಪ್ಪುಗಳೂ ಇವೆಯಂತೆ. ಮಹಿಳೆಯರ ಸೌಂದರ್ಯ ಹೆಚ್ಚಿಸಲು ಎದೆಭಾಗದಲ್ಲಿ ವಿಶಿಷ್ಠ ಬಗೆಯ ಕಪ್ಪುಗಳನ್ನು ಸೇ(ತೂ)ರಿಸಿ ಹೊಲಿಯುವುದಿದೆ. ಮುಟ್ಟಿನ ಬಗ್ಗೆ ಈಗಲೂ ಸಾಕಷ್ಟು ಮಟ್ಟಿಗಿನ ಮಡಿವಂತಿಕೆ ಇದ್ದರೂ ಮುಟ್ಟಿನ ಕಪ್ ಎನ್ನುವ ಸಾಧನ ಎಷ್ಟೋ ಮಹಿಳೆಯರಿಗೆ ಹಾಗೂ ಪರಿಸರಕ್ಕೆ ವರದಾನವಾಗಿದೆ ಎನ್ನಬಹುದು.

ಕ್ರೀಡೆಗಳಲ್ಲಿ ಆಟಗಾರರ ಕಪ್ಪುಗಳ ಆಕರ್ಷಣೆ ಮತ್ತೊಂದು ರೀತಿಯದು. ಅವರು ಗೆದ್ದ ನಂತರ ಟ್ರೋಫಿಯೆಂಬ ಕಪ್ಪುಗಳನ್ನು ಎತ್ತಿ ಹಿಡಿಯುತ್ತಿದ್ದಂತೆ, ಬಹುತೇಕ ಅಭಿಮಾನಿಗಳು ಮದ್ಯದ ಕಪ್ಪನ್ನು ಎತ್ತಿ ಸಂಭ್ರಮಿಸುವುದು ಸಹಜ. ಕ್ರಿಕೆಟ್ ಆಟದಲ್ಲಂತೂ ಈಸಲ ಕಪ್ ನಮ್ದೇ ನಮ್ದೇ ಎಂದು ಅಭಿಮಾನಿಗಳು ಪ್ರತಿವರ್ಷ ಆಟಗಾರರು ಗೆಲ್ಲುವ ಕಪ್ಪಿಗಾಗಿ, ಮುಖ ಕಪ್ಪಡರಿಸಿಕೊಂಡು ನೋಡುವ, ಸೋತರೆ ಕೆಂಪೇರಿಸಿಕೊಂಡು ಬೈಯ್ಯುವ ವರ್ಗವೇ ಇದೆ.

ಆದರೆ ಕುಡಿಯುವ ಕಪ್ಪುಗಳು ಕಂಡಷ್ಟು ಪರಿವರ್ತನೆ ಬೇರೆ ಕಪ್ಪುಗಳು ಕಂಡದ್ದು ಕಡಿಮೆ. ಈಗ ಎಲ್ಲ ಯೂಸ್ ಅಂಡ್ ಥ್ರೋ ಕಪ್ಪುಗಳ ಕಾಲ. ನೀರಿಗಾಗಿ ನಾಜೂಕಿನ ಪ್ಲಾಸ್ಟಿಕ್ ಕಪ್ಪುಗಳು, ಚಹಾ ಕಾಫಿ, ಜ್ಯೂಸ್ ಕುಡಿಯಲು ಬೆಲೆಗೆ ತಕ್ಕಂತೆ ಬೆಳೆಯುವ ಅಳತೆಯ ಪೇಪರ್‌ಕಪ್ಪುಗಳು. ಇಂದಿನ ಕಾಲದ ಆರೋಗ್ಯ ಸಮಸ್ಯೆಗಳಿಗೆ ಹೆದರಿ ಚಹಾ, ಕಾಫಿಯಿಂದ ಹೆಚ್ಚಾನುಹೆಚ್ಚು ಜನ ಅಂತರ ಕಾಯ್ದುಕೊಳ್ಳುತ್ತ, ಕುಡಿಯಬೇಕು ಕುಡಿಯದಂತಿರಬೇಕು ಎನ್ನುವಂತೆ, ನೈವೇದ್ಯಕ್ಕೆ ಇಡುವ ಅಳತೆಯ ಕಪ್ಪುಗಳಲ್ಲಿ ಕುಡಿದು ಸಮಾಧಾನಪಟ್ಟುಕೊಳ್ಳುವಂತಾಗಿದೆ. ಕಪ್ಪು ಯಾವುದೇ ಇರಲಿ, ಒಪ್ಪುವಂತಿರಬೇಕು ಎನ್ನುವ ಕಾಲ.

ಕೋಟಾ ನೋಟು ಕಂಡುಹಿಡಿದೆ!

ಶಾಲಾ ಬಾಲಕ ಎರಡು ತಿಂಗಳ ಮಟ್ಟಿಗೆ ಪೋಸ್ಟ್ ಮಾಸ್ಟರ್! ಮನಿ ಆರ್ಡರ್ ಮಾಡಲು ಶೇರೂಗಾರರು ತಂದಿದ್ದ ನೋಟು ನಿಜವಾಗಿಯೂ ಕೋಟಾ ನೋಟೇ?

ಪಾವಲಿಯೊಂದನ್ನು ಮುಂದಿಡುತ್ತ ''ಇಕಳಿ ಮೇಷ್ಟ್ರೆ, ಕಾಫಿ ಕುಡಿನಿ'' ಎಂದಿದ್ದರು ಕೆರೇಗದ್ದೆಯ ಶೇರೂಗಾರರು. ಆ ಫಳ-ಫಳ ಹೊಳೆಯುವ ಪಾವಲಿ ನಾಣ್ಯ, ಮೇ ತಿಂಗಳ ಬೇಸಿಗೆಯ ಸಂಜೆ ಹೊತ್ತು ಉಬ್ಬಸ ಬಿಡುತ್ತ ಓಡಿ ಬಂದ ಶೇರೂಗಾರರು, ಶೇರೂಗಾರರಿಗೆ ಆಗಬಹುದಾದ ನಷ್ಟದಿಂದ ನಾನು ಪಾರು ಮಾಡಿದೆನೆಂಬ ಹೆಮ್ಮೆ, ಎಲ್ಲವೂ

ಸುಲಲಿತ ಪ್ರಬಂಧ

» ಶಂಕರ ಹೆಗಡೆ, ಯು.ಎಸ್.

ನನಗಿನ್ನೂ ಹಚ್ಚ ಹಸುರಾಗಿ ನೆನಪಿದೆ. ಇದು ನಡೆದದ್ದು ಅರ್ಧ ಶತಮಾನಕ್ಕೂ ಹಿಂದೆ. ನಾನು ಎರಡು ತಿಂಗಳ ಮಟ್ಟಿಗೆ ಹಂಗಾಮಿ ಪೋಸ್ಟ್ ಮಾಸ್ಟರನಾಗಿದ್ದಾಗ.

ನನ್ನ ಹದಿನಾರನೆ ವಯಸ್ಸಿನಲ್ಲಿ ಸಂಬಳ ಪಡೆದು ಮಾಡಿದ ನನ್ನ ಜೀವನದ ಮೊಟ್ಟ ಮೊದಲನೆ ನೌಕರಿಯ ಅನುಭವ. ಆಗಿನ ಕಾಲದಲ್ಲಿ ನಮ್ಮೂರ ಅಡಿಕೆ ತೋಟಗಳಲ್ಲಿ ಕೆಲಸ ಮಾಡಲು ಕುಂದಾಪುರದ ಕಡೆಯಿಂದ ಕೂಲಿಯವರು ಬರುತ್ತಿದ್ದರು. ಶೇರೂಗಾರ ಅಂದರೆ 20–25 ಕೂಲಿಕಾರರ ತಂಡದ ಗುಂಪಿಗೆ ಮುಖ್ಯಸ್ಥ. ತೋಟದ ಮಾಲಿಕರೊಡನೆ ಹಣಕಾಸಿನ ವ್ಯವಹಾರವೆಲ್ಲ ಶೇರೂಗಾರರದು.

ನಾನು ಹುಟ್ಟಿ ಬೆಳೆದದ್ದು ಶಿರಸಿಯ ಹತ್ತಿರದ ಏಳು ಮನೆಗಳ ಒಂದು ಹಳ್ಳಿ. ಎರಡೂವರೆ ಮೈಲು ದೂರದ ಹೇರೂರು, ಒಂದು ಪುರಾತನ ದೇವಸ್ಥಾನ, ಮಸೀದಿ, 2–3 ಚಿಕ್ಕ ಅಂಗಡಿಗಳಿರುವ ಸಣ್ಣ ಪೇಟೆ. ಈ ಘಟನೆಯ ಎರಡು ವರ್ಷದ ಮೊದಲಷ್ಟೇ ಹೇರೂರಿಗೆ ಒಂದು ಬ್ರಾಂಚ್ ಪೋಸ್ಟ್ ಆಫೀಸ್ ಬಂತು. ನಮ್ಮ ಸರಕುಳಿ ಶಾಲೆಯ ನಾಯಕ ಮಾಸ್ತರರು ಹೇರೂರು ಬ್ರಾಂಚ್ ಆಫೀಸನ್ನು ನಡೆಸುವ ಜವಾಬ್ದಾರಿ ಹೊತ್ತಿದ್ದರು. ಸಂಜೆ ಒಂದೆರಡು ತಾಸುಗಳ ಮಟ್ಟಿಗೆ ಮಾತ್ರ ಪೋಸ್ಟ್ ಆಫೀಸು ತೆರೆಯಲ್ಪಡುತ್ತಿತ್ತು. ನಾಯಕ ಮಾಸ್ತರರು ಕುಮಟೆಯ ಕಡೆಯವರು. ಆಗಿನ ಕಾಲದಲ್ಲಿ, ಶಿಕ್ಷಕರೆಲ್ಲ ಜಿಲ್ಲೆಯ ಕರಾವಳಿ ಪ್ರದೇಶಗಳಿಂದ ಬರುತ್ತಿದ್ದರು. ಕುಟುಂಬವನ್ನು ತಮ್ಮೂರಿನಲ್ಲಿಯೆ ಬಿಟ್ಟು ಬಂದು, ಹಳ್ಳಿಯ ಮನೆಯೊಂದರಲ್ಲಿ ಅತಿಥಿಯಾಗಿ ಉಳಿದುಕೊಳ್ಳುತ್ತಿದ್ದರು.

1960ರ ಬೇಸಿಗೆ ರಜೆ. ನಾನು ಆಗ ತಾನೆ ಒಂಭತ್ತನೆ ಇಯತ್ತೆ ಪರೀಕ್ಷೆ ಮುಗಿಸಿದ್ದೆ. ಜಾಣ ವಿದ್ಯಾರ್ಥಿ ಎಂದು ಹೆಸರು ಗಳಿಸಿದ್ದೆ. ನಾಯಕ ಮಾಸ್ತರರಿಗೆ ಬೇಸಿಗೆ ಸೂಟಿಗೆ ಊರಿಗೆ ಹೋಗಬೇಕಿತ್ತು. ಶಾಲೆಗೆ ರಜೆ ಇದ್ದರೂ ಪೋಸ್ಟ್ ಆಫೀಸಿಗೆ ರಜೆ ಇಲ್ಲವಷ್ಟೇ! ನಾಯಕ ಮಾಸ್ತರರು ಎರಡು ತಿಂಗಳ ಮಟ್ಟಿಗೆ ಪೋಸ್ಟ್ ಆಫೀಸಿನ ಕೆಲಸವನ್ನು ನನಗೆ ಒಪ್ಪಿಸಿದಾಗ ನಾನೂ ಪೋಸ್ಟ್ ಮಾಸ್ಟರನಾದೆ!

ಪೋಸ್ಟ್ ಆಫೀಸು ಇರುವದು ಉಸ್ಮಾನ ಸಾಹೇಬರ ಜವಳಿ ಅಂಗಡಿಯ ಅಟ್ಟದ ಮೇಲಿನ ಕೊಠಡಿಯಲ್ಲಿ. ಆಗಿನ್ನೂ ನಮ್ಮೂರಿಗೆ ವಿದ್ಯುತ್ ಸೌಕರ್ಯ ಒದಗಿರಲಿಲ್ಲ. ನಾನು ದಿನಾಲು ಸುಮಾರು ಮಧ್ಯಾನ್ಹ ಮೂರು–ಮೂರುವರೆಯ ಹೊತ್ತಿಗೆ ಹೋಗಿ, ಕತ್ತಲೆ ಆಗುವದರೊಳಗೆ ಪೋಸ್ಟ್ ಆಫೀಸ್ ಮುಚ್ಚಿ, ಬಾಗಿಲ ಚಿಲಕ ಎಳೆದು, ಬೀಗ ಹಾಕಿ ಮನೆಗೆ ಬರುತ್ತಿದ್ದೆ. ಕೆಲವು ದಿನ ತೋಟ ಗದ್ದೆಗಳ ನಡುವೆ ನಡೆದು ಹೋಗುತ್ತಿದ್ದೆ. ಕೆಲವು ದಿನ ಕಲ್ಲು–ಮಣ್ಣಿನ ರಸ್ತೆಯಲ್ಲಿ ಸೈಕಲ್ ಮೇಲೆ ಹೋಗುತ್ತಿದ್ದೆ.

ನಾವು ಮೂವರು ಕೆಲಸಗಾರರು. ಪೋಸ್ಟ್ ಮಾಸ್ಟರನಾದ ನನಗೆ ತಿಂಗಳಿಗೆ ಮೂವತ್ತು ರೂಪಾಯಿ ಸಂಬಳ. ಗುಡಿಗಾರರ ನಾಗೇಶ ಪೋಸ್ಟ್ ಮ್ಯಾನ್. ಸೈಕಲ್ ಅಂಗಡಿಯ ಸುಲೇಮಾನ್ ರನ್ನರ್. ಅವರಿಬ್ಬರಿಗೂ ತಲಾ ಮೂವತ್ತೈದು ರುಪಾಯಿ ಸಂಬಳ. ನಾಗೇಶ ಮತ್ತು ಸುಲೇಮಾನ್ ಇಬ್ಬರೂ ನನಗಿಂತ ಹಿರಿಯರು. ಇಪ್ಪತ್ನಾಲ್ಕು–ಇಪ್ಪತ್ತೈದು ವಯಸ್ಸಿರಬಹುದು. ಸುಲೇಮಾನನ ಕೆಲಸ ಪ್ರತಿದಿನ ಬೆಳಿಗ್ಗೆ, ಹೇರೂರಿನಿಂದ ಹೊರಹೋಗುವ ಅಂಚೆಗಳ ಸೀಲಾದ ಬ್ಯಾಗನ್ನು ಏಳು ಮೈಲು ದೂರದ ಮುಖ್ಯ ಕಚೇರಿ ಸಂಪಖಂಡಕ್ಕೆ ಸೈಕಲ್ ಮೇಲೆ ಒಯ್ಯುವದು, ಮತ್ತು ಅಲ್ಲಿಂದ ಹೇರೂರು ಆಫೀಸಿಗೆ ಒಳಬರುವ ಅಂಚೆ ಬ್ಯಾಗನ್ನು ತರುವದು. ಗುಡಿಗಾರ ನಾಗೇಶನ ಕೆಲಸ ಸುತ್ತಲಿನ ಹಳ್ಳಿಗಳಿಗೆ ತಿರುಗಿ ಅಂಚೆ ಹಂಚುವದು. ನನ್ನ ಕೆಲಸ ಆಫೀಸಿನಲ್ಲಿ ಕುಳಿತು ಬಂದ ಗ್ರಾಹಕರಿಗೆ ಸಹಾಯ ಮಾಡುವದು, ಮುಖ್ಯ ಕಚೇರಿಯಿಂದ ಬಂದ ಅಂಚೆ ಬ್ಯಾಗಿನ ಸೀಲು ಒಡೆದು ತೆರೆದು, ವಿತರಣೆಗಾಗಿ ಗುಡಿಗಾರ ನಾಗೇಶನಿಗೆ ಒಪ್ಪಿಸುವದು. ಹೊರಗೆ ಹೋಗುವ ಅಂಚೆಗಳನ್ನು ಬ್ಯಾಗಿನಲ್ಲಿ ತುಂಬಿ ಸೀಲು ಮಾಡಿ ಸುಲೇಮಾನನಿಗೆ ಒಪ್ಪಿಸುವದು.

ಅರಗಿನ ಸೀಲು: ಸೀಲು ಮಾಡಲು ಪೋಸ್ಟ್ ಆಫೀಸು ಚಿನ್ನದ ಕಂಚಿನ ಒಂದು ಮೊಹರು ಮತ್ತು ಕೆಂಪು ಬಣ್ಣದ ಅರಗಿನ ಸ್ಟಿಕ್ ಇತ್ತು. ಬ್ಯಾಗಿನ ಬಾಯಿಯ ಸುತ್ತ ಇರುವ ಉಂಗುರಗಳ ಮಧ್ಯ ಪೋಣಿಸಿದ ಪ್ಲಾಸ್ಟಿಕ್ ದಾರವನ್ನು ಎಳೆದು ಗಂಟು ಹಾಕಿ, ಗಂಟಿನ ಮೇಲೆ, ಅರಗಿನ ಸೀಲು ಹಾಕಬೇಕು. ಚಿಮಣಿ ದೀಪದ ಕಾವಿನಿಂದ ಅರಗನ್ನು ಗಂಟಿನ ಮೇಲೆ ಕರಗಿಸಿ, ಮೊಹರನ್ನು ಒತ್ತಿ ಸೀಲು ಮಾಡಬೇಕು. ಸ್ವಲ್ಪ ಕಷ್ಟದ ಕೆಲಸ. ಅಂಚೆ ಬ್ಯಾಗನ್ನು ನಾನು ತೆರೆಯುವಾಗ, ಹೊರಹೋಗುವ ಅಂಚೆಗಳ ಬ್ಯಾಗನ್ನು ಸೀಲು ಮಾಡುವಾಗ, ನಾಗೇಶ ಸಾಕ್ಷಿಯಾಗಿ ನಿಂತು, ನನಗೆ ಸಹಾಯ ಮಾಡುತ್ತಿದ್ದ. ಸೀಲು, ಅರಗು, ಮತ್ತು ಕಾಗದ–ಪತ್ರಗಳನ್ನ ಇಟ್ಟುಕೊಳ್ಳಲು ಒಂದು ಚಿಕ್ಕ ಕಪಾಟು ಕೂಡ ಇತ್ತು. ಸೀಲು ಮಾಡಿ ಮುಗಿಯುವ ಹೊತ್ತಿಗೆ ಸುಲೇಮಾನ್ ಬಂದು ಬ್ಯಾಗನ್ನು ಒಯ್ಯುತ್ತಿದ್ದ. ರಾತ್ರಿ ಮನೆಯಲ್ಲಿಯೆ ಇಟ್ಟುಕೊಂಡು, ಮರುದಿನ ದಿನ ಬೆಳಿಗ್ಗೆ ಸಂಪಖಂಡಕ್ಕೆ ಒಯ್ಯುತ್ತಿದ್ದ. ಹೆಚ್ಚು ಜಾಗರೂಕತೆಯ ಕೆಲಸ ಹಣಕಾಸಿನದು. ಹೊರಗಿನಿಂದ ಬರುವ ಮನಿಯಾರ್ಡರುಗಳು ಕಡಿಮೆ. ಆದರೆ ಹೊರಗೆ ಹೋಗುವ ಮನಿಯಾರ್ಡರುಗಳು ತಕ್ಕಮಟ್ಟಿಗೆ ಇರುತ್ತಿದ್ದವು. ಹಣಕ್ಕೂ, ಮನಿಯಾರ್ಡರ್ ಫಾರ್ಮಗಳಿಗೂ ತುಲನೆ ಮಾಡಿ ಸರಿ ಇದೆ ಎಂದು ಖಾತ್ರಿ ಮಾಡಿಕೊಳ್ಳಬೇಕಿತ್ತು. ನಾಗೇಶನಿಗೆ ವಿತರಣೆಗೆ ಕೊಡುವಾಗಲೂ, ತುಲನೆಯ ಅವಶ್ಯಕತೆ ಇತ್ತು. ಬಹಳಷ್ಟು ಜನ ಪೋಸ್ಟಾಫಿಸಿಗೇ ಬಂದು ಹಣ ಪಡೆಯುತ್ತಿದ್ದುದರಿಂದ ನಾಗೇಶನಿಗೆ ಹೆಚ್ಚು ಮನಿಯಾರ್ಡರುಗಳನ್ನು ಒಯ್ಯಬೇಕಾಗುತ್ತಿರಲಿಲ್ಲ.ಎಲ್ಲವೂ ಕ್ಯಾಶ್ ವ್ಯವಹಾರ. ನಮ್ಮ ಪಗಾರು ಕೂಡ ತಿಂಗಳ ಕೊನೆಯಲ್ಲಿ ಅಂಚೆ ಬ್ಯಾಗಿನಲ್ಲೇ ಬರುತ್ತಿತ್ತು.

ಒಂದಾಣೆ ಭಕ್ಷೀಸು

ಆಗಿನ ಕಾಲದ ಹಳ್ಳಿಯ ಪೋಸ್ಟ್ ಮಾಸ್ಟರರ ಇನ್ನೊಂದು' ಕೆಲಸವೆಂದರೆ, ಅಷ್ಟೇನೂ ಓದು ಬರೆಯಲು ಬಾರದ ಗ್ರಾಹಕರಿಗೆ ಸಹಾಯ ಮಾಡುವದು. ಮನಿಯಾರ್ಡರ್ ಫಾರ್ಮ್ ತುಂಬಿ ಕೊಡುವದು, ವಿಳಾಸ ಬರೆದು ಸ್ಟಾಂಪು ಅಂಟಿಸುವದು, ಹಲವೊಮ್ಮೆ ಇಡೀ ಪತ್ರವನ್ನೇ ಬರೆದು ಕೊಡುವದು ಮತ್ತು ಓದಿ ಹೇಳುವದು. ಹಾಗೆ ನೋಡಿದರೆ, ನನ್ನ ಮಾಮೂಲಿ ಕೆಲಸಕ್ಕಿಂತ, ಈ ಕೆಲಸವೇ ಹೆಚ್ಚಾಗಿದ್ದು, ತುಂಬ ಸಂತೋಷಕರವೂ, ಹೆಮ್ಮೆಯ ಕೆಲಸವೂ ಆಗಿತ್ತು. ಇವುಗಳಿಂದ ನನಗೆ ಒಂದಾಣೆ, ಎರಡಾಣೆ ಬಕ್ಷೀಸು ಕೂಡ ಸಿಗುತ್ತಿತ್ತು. ತಂಡದವರು ತಮ್ಮ ಹೆಂಡಿರು–ಮಕ್ಕಳಿಗೆ ನಿಯತ್ತಾಗಿ ಹತ್ತೋ–ಇಪ್ಪತ್ತೋ ರೂಪಾಯಿ ಹಣ ಕಳಿಸುತ್ತಿದ್ದರು. ಹೇರೂರಿನ ಸುತ್ತ–ಮುತ್ತಲಿನ ಹಳ್ಳಿಗಳಿಂದ ದಿನಾಲೂ ಒಂದೆರಡು ಜನರಾದರೂ ಮನಿಯಾರ್ಡರ್ ಮೂಲಕ ಹಣ ಕಳಿಸಲು ಬರುತ್ತಿದ್ದರು. ಆಗೀಗ ಶೇರೂಗಾರರೇ ಬಂದು ನೂರಿನ್ನೂರು ರೂಪಾಯಿಗಳ ದೊಡ್ಡ ಮೊತ್ತದ ಮನಿಯಾರ್ಡರ್ ಮಾಡುತ್ತಿದ್ದುದುಂಟು.

ಒಂದು ಮಧ್ಯಾನ್ಹ ಕೆರೆಗದ್ದೆ ಊರಿನ ಶೇರೂಗಾರರು ಬಂದು ಎರಡು ನೂರು ರೂಪಾಯಿ ಮರಿಯಾರ್ಡರ್ ಮಾಡಬೇಕೆಂದರು. ಸರಿ, ಫಾರ್ಮ್ ತುಂಬಿ ಆದ ಮೇಲೆ ಶೇರುಗಾರರು ನೂರು ರೂಪಾಯಿಗಳ ಎರಡು ನೋಟುಗಳನ್ನು ಕೊಟ್ಟರು. ದೊಡ್ಡ ಮೊತ್ತದ ಹಣ ತೆಗೆದುಕೊಳ್ಳುವಾಗ ಪರೀಕ್ಷಿಸಬೇಕೆಂದು ನಾಯಕ ಮಾಸ್ತರರು ಮೊದಲೇ ಎಚ್ಚರಿಕೆ ಕೊಟ್ಟಿದ್ದರು. ಎರಡೂ ನೋಟುಗಳನ್ನು ಬೆಳಕಿಗೆ ಹಿಡಿದು ತುಂಬ ಕಾಳಜಿಯಿಂದ ನೋಡಿದೆ. ಒಂದರಲ್ಲಿ, ಮಧ್ಯದಲ್ಲಿ ಅಡಗಿದ ಗೆರೆ ಕಾಣಿಸಿತು. ಇನ್ನೊಂದರಲ್ಲಿ ಕಾಣಿಸಲಿಲ್ಲ. ಹೆದರಿಕೆಯಾಯಿತು. 'ಇದು ಖೋಟಾ ನೋಟು, ಶೇರೂಗಾರರೇ' ಎಂದೆ. ಆಗ ನೋಡಬೇಕಿತ್ತು, ಶೇರೂಗಾರರ ಮೋರೆ. ಅವರದು ದೊಡ್ಡ, ದಪ್ಪ ಶರೀರ. ಮೇ ತಿಂಗಳ ಉರಿ ಬಿಸಿಲಿನಲ್ಲಿ ನಾಲ್ಕು ಮೈಲು ನಡೆದು ಬಂದಾಗಲೇ ಹಣೆಯ ಮೇಲಿನ ಬೆವರು ಮೋರೆಯ ಮೇಲೆಲ್ಲ ಹರಿಯುತ್ತಿತು. ಈಗಂತೂ ಮತ್ತಷ್ಟು ಬೆವರಿ ಕಪ್ಪಿಟ್ಟರು. 'ಹೆಗಡೇರಿಂದ ಗುತ್ತಿಗೆ ಹಣ ತಕಂಡ್ ಸೀದ ಇಲ್ಲೇ ಬಂದೆವ್ನಿ. ಹೆಗಡೇರು ಮೋಸ ಮಾಡಿದ್ರ, ಕಾಣ್ತೆ' ಎನ್ನುತ್ತ ಎರಡೂ ನೋಟುಗಳನ್ನು ತಿರುಗಿ ಪಡೆದು, ದಾಪುಗಾಲಿನಲ್ಲಿ ತಕ್ಷಣ ನಡೆದೇಬಿಟ್ಟರು. ಆಗಲೇ ಸಂಜೆಯಾದ್ದರಿಂದ ಅಂದಿನ ಕೆಲಸ ಮುಗಿಸಿ, ಮನೆಗೆ ಬಂದೆ.

ಸುಮಾರು ಏಳೂವರೆ ಗಂಟೆಯ ಹೊತ್ತಿಗೆ, ಶೇರೂಗಾರರು ಏದುಸಿರು ಬಿಡುತ್ತ, ನಮ್ಮ ಮನೆಗೇ ಬಂದು ಎರಡು ನೋಟುಗಳನ್ನು ಕೈಯಲ್ಲಿಟ್ಟು ನೋಡಿಕೊಳ್ಳಿ ಎಂದರು. ಚಿಮಣಿ ದೀಪದ ಬೆಳಕಿಗೆ ಅಡ್ಡ ಹಿಡಿದು ನೋಡಿ, ಎರಡರಲ್ಲೂ ಗೆರೆ ಇದೆ ಎಂದು ಖಾತ್ರಿ ಮಾಡಿಕೊಂಡು, ಸರಿ ಇದೆ ಎಂದೆ. ಶೇರೂಗಾರರಿಗೆ ಸಂತೋಷವಾಯಿತು. ನನ್ನಮ್ಮ ಕೊಟ್ಟ ಪಾನಕ ಕುಡಿದು, ಸಮಾಧಾನದ ನಿಟ್ಟುಸಿರು ಬಿಟ್ಟು, ನನ್ನ ಮುಂದೆ ನಾಲ್ಕಾಣೆಯ ನಾಣ್ಯ ಇಟ್ಟು, 'ಉಪಕಾರ ಆಯಿತು, ಇಕಳಿ ಮೇಷ್ಟ್ರೆ, ಕಾಫಿ ಕುಡಿನಿ' ಎಂದರು. ನನಗೆ ಮಾಮೂಲಿಯ ಚವಲಿಗಿಂತ ದುಪ್ಪಟ್ಟು ಭಕ್ಷೀಸ್ ನೋಡಿ ಖುಶಿಯಾಯಿತು. ಮಾರನೆ ದಿನ ಹಣವನ್ನು ಪೋಸ್ಟ್ ಆಫಿಸಿಗೆ ಒಯ್ದು ಅವರ ಮನಿಯಾರ್ಡರ್ ಕಳಿಸಿದೆ. ಅದು ನಿಜವಾಗಿಯೂ ಖೋಟಾ ನೋಟೇ ಆಗಿತ್ತೋ, ಇಲ್ಲವೋ ಇಂದಿಗೂ ನಾನರಿಯೆ. ಈ ಎರಡು ತಿಂಗಳ ಅನುಭವ ನನಗೆ ಕಲಿಸಿದ ಜೀವನ ಪಾಠ ನನ್ನ ಮನದಲ್ಲಿ ಹಚ್ಚಹಸುರಾಗಿ ಉಳಿದಿದೆ.

ಆಲೆ ಮನೆ ಅಜ್ಜನ ಮನೆ!

» ಅಶ್ವಿನಿ ಭಟ್

ಅರಣ್ಯ ಇಲಾಖೆಯಲ್ಲಿ ನೌಕರರಾಗಿದ್ದ ಅಪ್ಪ ಮೂರು ನಾಲ್ಕು ವರ್ಷಕ್ಕೊಮ್ಮೆ ವರ್ಗಾವಣೆ ಎಂದು ತಮ್ಮ ಪುಟ್ಟ ಗುಬ್ಬಚ್ಚಿ ಗೂಡನ್ನು ಬೇರೆ ಬೇರೆ ಊರುಗಳಿಗೆ ಸಾಗಿಸುತ್ತಿದ್ದದಂತೂ ನಮ್ಮ ಪಾಲಿಗೆ ಇಂದಿಗೂ ನೆನೆದು ಸಂಭ್ರಮಿಸುವ ರಸದೌತಣವಾದ್ದದ್ದು ಪುಣ್ಯವೆಂದೇ ಹೇಳಬೇಕು. ನನ್ನ ಪ್ರಾಥಮಿಕ ಶಿಕ್ಷಣದ ಸಮಯದಲ್ಲಿ ವಾಸವಾಗಿದ್ದ ಇಂದ್ರಪ್ರಸ್ಥವೇ ರಿಪ್ಪನ್ ಪೇಟೆ ಸಮೀಪದ ಅರಸಾಳು ಎಂಬ ಕುಗ್ರಾಮ. ಗ್ರಾಮ ಪಂಚಾಯಿತಿ ಕಚೇರಿ, ರೇಂಜ್ ಫಾರೆಸ್ಟ್ ಆಫೀಸ್, ಚರ್ಚ್, ಇನ್ನೊಂದು ಭಾಗದಲ್ಲಿದ್ದ ರೈಲ್ವೆ ಸ್ಟೇಷನ್ ಆ ಊರಿನ ಹೆಗ್ಗುರುತಾಗಿತ್ತು. ಬ್ಯಾಂಕು, ಹೋಟೆಲ್ಲು ವೈದ್ಯಕೀಯ ಸೌಲಭ್ಯಗಳಂತೂ ದೂರದ ಮಾತಾಗಿತ್ತು. ಸುತ್ತಮುತ್ತಲಿನ ಹಳ್ಳಿಯ ಮಕ್ಕಳು ಅಲ್ಲಿನ ಪ್ರಾಥಮಿಕ ಶಾಲೆಗೆ ನಡೆದು ಬರುತ್ತಿದ್ದರು.

1994ರಲ್ಲಿ ಅಪ್ಪ ಈ ಊರಿಗೆ ಬಂದಾಗ ಶಂಕರನಾಗ್ ಮತ್ತವರ ತಂಡದವರು ಬಂದು 'ಮಾಲ್ಗುಡಿ ಡೇಸ್' ಚಿತ್ರೀಕರಣ ಮಾಡಿದ್ದು ಜನರ ಮನಸ್ಸಿನಲ್ಲಿ ಹಸಿರಾಗಿದ್ದು, ಹೆಮ್ಮೆಯಿಂದ ಹೇಳಿಕೊಳ್ಳುವ ಮಾತಾಗಿತ್ತು.

ಕಾಡುಗಳಿಂದ ಸುತ್ತುವರಿದ ಈ ಪುಟ್ಟ ಹಳ್ಳಿಗೆ ಕುಂದಾಪುರದಿಂದ ಶಿವಮೊಗ್ಗಕ್ಕೆ ದಿನವೂ ಬರುತ್ತಿದ್ದ ಗಜಾನನ ಬಸ್ಸಿನಲ್ಲಿ ಬಂದಿಳಿದಿತ್ತು ಅಪ್ಪನ ಸಂಸಾರ. ರೇಂಜ್ ಫಾರೆಸ್ಟ್ ಆಫೀಸಿನ ಕಾಂಪೌಂಡಿನಲ್ಲಿದ್ದ ನಮ್ಮ ಮನೆಯ ಬೀಗ ತೆಗೆಯುವಾಗಲಂತೂ, ಅಲ್ಲಿ ಮೊದಲಿದ್ದ ಕುಟುಂಬವೊಂದು ಪೋಷಿಸಿದ್ದ ಮನೆಯ ಮುಂದಿನ ಹೂವಿನ ತೋಟ ಮನಸ್ಸಿಗೆ ನೀಡಿದ ಖುಷಿ ಇಂದು ಲಾಲ್ ಬಾಗಿನ ಗುಲಾಬಿ ತೋಟವನ್ನು ನೋಡಿದಾಗಲೂ ಸಿಗದು. ಅಲ್ಲಿಂದ ಪ್ರಾರಂಭವಾಗಿ ಮುಂದಿನ ಐದು ವರ್ಷಗಳು, ಇಂದು ನಾನು ಆಗಾಗ ನೆನೆಪಿಸಿಕೊಂಡು ಖುಷಿ ಪಡುವ ಸಂಭ್ರಮದ ಗಳಿಗೆಗಳು.

ಮಲೆನಾಡಿನ ಚಳಿ ಗೊತ್ತಲ್ಲ! ಕರಾವಳಿಯವರಾದ ನಮಗೆ ಕಂಬಳಿಯ ಪರಿಚಯ ಮಾಡಿಸಿದ್ದೇ ಅದು. ಶಿವರಾತ್ರಿಯ ನಂತರ ಊರಿಗೆ ಊರೇ ನಿಧಾನಕ್ಕೆ ಚಳಿಯ ಹೊದಿಕೆ ಸರಿಸಿ ಮೈ ಮುರಿದು ಬೇಸಿಗೆ ತೆರೆದುಕೊಳ್ಳುತ್ತಿತ್ತು. ನಮಗೆ ದೊಡ್ಡ ಪರೀಕ್ಷೆಗೆ ತಯಾರಾಗುವ ಸನ್ನಾಹ. ಪರೀಕ್ಷೆಯ ಯಾವ ಒತ್ತಡವು ಇದ್ದ ನೆನಪಿಲ್ಲ. ಪರೀಕ್ಷೆ ಮುಗಿದ ಮೇಲೆ ಪಾಸು ಫೇಲ್ ಹೇಳುವ ದಿನದವರೆಗೂ 6 ಮತ್ತು 7ನೇ ತರಗತಿಯ ಮಕ್ಕಳಿಗೆ ಕೈ ತುಂಬಾ ಕೆಲಸ. ಟೀಚರ್ ಮೌಲ್ಯಮಾಪನ ಮಾಡಿದ ಉತ್ತರ ಪತ್ರಿಕೆಗಳ ಅಂಕವನ್ನು ಅಂಕಪಟ್ಟಿಯಲ್ಲಿ ಬರೆದುಕೊಡುವುದು, ಶಾಲಾ ಗ್ರಂಥಾಲಯದ ಪುಸ್ತಕಗಳನ್ನೆಲ್ಲ ಒಮ್ಮೆ ಕೊಡವಿ ಲೆಡ್ಜರ್‌ನಲ್ಲಿರುವ ಲೀಸ್ಟನಂತೆ ಇವೆ ಎಂದು ಖಾತ್ರಿಪಡಿಸಿ ಇಡುವುದು, ಬಾಲವಾಡಿ ಒಂದನೇ ತರಗತಿ ಎರಡನೇ ತರಗತಿಯ ಮಕ್ಕಳ ಮೇಲ್ವಿಚಾರಣೆ ಹೀಗೆ.... ಒಟ್ಟಿನಲ್ಲಿ ನಮ್ಮ ಹಿರಿತನವನ್ನು ಗುರುಗಳಿಗೆ ತೋರಿಸುವ, ಭವಿಷ್ಯದ ತರಬೇತಿ ಪಡೆಯುವ ಪುಟ್ಟ ಪುಟ್ಟ ಅವಕಾಶಗಳು.

ಕಬ್ಬಿನ ಹಾಲು ಬಿಸಿ ಬೆಲ್ಲ: ಇದೇ ಸಂದರ್ಭದಲ್ಲಿ ಸುತ್ತಲಿನ ಹಳ್ಳಿಯಿಂದ ಬರುತ್ತಿದ್ದ ಸ್ನೇಹಿತೆಯರು ಅವರೂರಿನ ಆಲೆಮನೆಗೆ ಆಹ್ವಾನ ನೀಡುವುದು ಪ್ರತಿ ವರ್ಷದ ಅಲಿಖಿತ ಸಂಪ್ರದಾಯ. ಏಪ್ರಿಲ್ 11 ಅಂದರೆ ಪಾಸು ಫೇಲಿನ ಮರುದಿನವೇ ನಮ್ಮ ಮೊದಲ ಪ್ರವಾಸ; ಒಂದು ಟಿಫನ್ ಕ್ಯಾರಿಯರ್ ಹಿಡಿದು ಸ್ನೇಹಿತೆಯರನ್ನು ಹಿಂಬಾಲಿಸಿ ಕಾಡು ಬ್ಯಾಣ ದಾರಿಯಲ್ಲಿ ಕವಳಿ ಕಾಯಿ, ಪರಂಗಿ ಕಾಯಿ ಸವಿಯುತ್ತಾ, ಊರಿನ ರಂಗು ರಂಗಿನ ಕಥೆ ಕೇಳುತ್ತ ಸಾಗುತ್ತಿತ್ತು 8–10 ಮಕ್ಕಳ ಗುಂಪು. ಆಲೆಮನೆ ಸೇರಿದ ಮೇಲಂತೂ ಅಲ್ಲಿಯ ಹಿರಿಯರ ಸಂಭ್ರಮ ನೋಡಬೇಕು! ಬೇಕೆಂದಷ್ಟು ಕಬ್ಬಿನ ಹಾಲನ್ನು ಕುಡಿಯಲು ಕೊಟ್ಟು,' ಕ್ಯಾರಿಯರ್ ತುಂಬಾ ತುಂಬಿಸಿ, ಮುತ್ತುಗದ ಎಲೆಯಲ್ಲಿ ಒಂದಷ್ಟು ಬೆಲ್ಲವನ್ನು ಕಟ್ಟಿ ಮೂರು ನಾಲ್ಕು ಕಬ್ಬಿನ ಜಲ್ಲೆಯನ್ನು ಕೈಗೆ ಕೊಟ್ಟು ಕಳಿಸುತ್ತಿದ್ದರು.

ನರ್ಸರಿಗೆ ಪ್ರವಾಸ: ಇನ್ನು ನಮ್ಮ ಎರಡನೆಯ ಪ್ರವಾಸ ಕ್ವಾಟ್ರಸ್ ನ ಗೆಳೆಯ ಗೆಳತಿಯರೊಂದಿಗೆ. ಅರಸಾಳಿನಿಂದ ಒಂದು ಕಿಲೋಮೀಟರ್ ದೂರದಲ್ಲಿದ್ದ ಎಂಟನೇ ಮೈಲಿ ಸಮೀಪದ ದೊಡ್ಡ ನರ್ಸರಿಗೆ. ಅರಣ್ಯ ಇಲಾಖೆಯು ಅಲ್ಲೊಂದು ನರ್ಸರಿ ಮಾಡಿ ಸಸ್ಯಗಳನ್ನು ಬೆಳೆಸುತಿತ್ತು. ಸಮೀಪದಲ್ಲಿಯೇ ಕುಮುದ್ವತಿಯು ಸೊರಗಿ ಹರಿಯುತ್ತಿದ್ದಳು. ನಮಗೋ ನೀರಿನಲ್ಲಿ ಆಟವಾಡುವ ಸಂಭ್ರಮ. ಇದೆಲ್ಲಕ್ಕಿಂತ ಮಿಗಿಲಾಗಿ ನಾವು ದೊಡ್ಡ ನರ್ಸರಿಗೆ ಹೋಗುವ ದಾರಿಯೇ ಸಖತ್ ಥ್ರಿಲ್ಲಿಂಗ್. ಅರಸಾಳು ಗ್ರಾಮವನ್ನು ಇಬ್ಭಾಗ ಮಾಡುತ್ತಿದ್ದ ಶಿವಮೊಗ್ಗ–ತಾಳಗುಪ್ಪ ರೈಲು ಮಾರ್ಗವದು. ಅಂದಾಜು ಒಂದು ಕೈಲೋಮೀಟರ್ ರೈಲು ಹಳಿಯ ಮೇಲೆ ನಡೆಯುತ್ತಾ, ಯಾರು ಎಷ್ಟೆಷ್ಟು ಬಾರಿ ಕೆಳಗೆ ಇಳಿದರು, ಕೊನೆಯಲ್ಲಿ ಯಾರು ವಿಜಯಶಾಲಿಗಳಾದರು ಎಂದು ಲೆಕ್ಕ ಹಾಕುತ್ತಾ ಸಾಗುತ್ತಿತ್ತು ನಮ್ಮ ಗುಂಪು. ನರ್ಸರಿ ತಲುಪಿದ ಮೇಲೆ ಮೊದಲೇ ಅಪ್ಪನಿಂದ ಸುದ್ದಿ ತಿಳಿದಿದ್ದ ಕೆಲಸಗಾರರು, ಸಾಹೇಬರ ಮಕ್ಕಳೆಂದು ಗಿಡಮರಗಳ ಪರಿಚಯ ಮಾಡಿಸಿ ಕುಡಿಯಲು ತಂಪಾದ ನೀರು ಕೊಟ್ಟು ಅಲ್ಲಿ ಬೆಳೆದ ತೋತಾಪುರಿ, ನೇರಳೆ ಹಣ್ಣನ್ನು ಕಿತ್ತುಕೊಟ್ಟು ರಾಜೋಪಚಾರ ಮಾಡುತ್ತಿದ್ದರು. ನಾವು ಮನೆಯಿಂದ ಒಯ್ದಿದ್ದ ಉಪ್ಪು– ಖಾರದೊಂದಿಗೆ ಅವುಗಳನ್ನು ತಿಂದು, ತಣ್ಣನೆಯ ಕುಮುದ್ವತಿಯಲ್ಲಿ ಮಿಂದು ಮನೆಗೆ ಬರುತ್ತಿದ್ದೆವು.

ಹೀಗೆ ನಮ್ಮ ಬೇಸಿಗೆಯ ರಜಾ ಅಬ್ಬರದಿಂದ ಪ್ರಾರಂಭವಾದರೆ ಅತ್ತ ಅಮ್ಮ ವರ್ಷಕ್ಕಾಗುವಷ್ಟು ಉಪ್ಪಿನಕಾಯಿ, ಹಪ್ಪಳ, ಸಂಡಿಗೆಯ ತಯಾರಿಯಲ್ಲಿರುತ್ತಿದ್ದಳು. ಕ್ವಾರ್ಟರ್ಸ್‌ನ ಯಾರದೇ ಮನೆಯಲ್ಲಿ ಹಪ್ಪಳ ಸಂಡಿಗೆಯ ಕಾರ್ಯಕ್ರಮವಿದ್ದರೂ ಮನೆಗೊಬ್ಬರಂತೆ ಹೋಗಿ ಕೈಜೋಡಿಸುವ ರೂಢಿ. ದೊಡ್ಡವರು ಹಿಟ್ಟನ್ನು ಬೇಯಿಸುವ, ಲಟ್ಟಿಸುವ ಕಾಯಕ ಮಾಡಿದರೆ ಮಕ್ಕಳದು ಬಿಸಿಲಿನಲ್ಲಿ ಒಣಗಿಸಿದ್ದನ್ನು ಕಾಯುವ ಕೆಲಸ. ನಮ್ಮ ನೆರಮನೆಯು ನಾಗರಾಜಪ್ಪನವರದ್ದು. ಅವರ ಹೆಂಡತಿ ಮೀನಾಕ್ಷಮ್ಮ 10–15 ಕೋಳಿಗಳ ಒಡತಿ. ಅವುಗಳ ಕಾಟದಿಂದ ನಮ್ಮ ಹಪ್ಪಳ ಸಂಡಿಗೆ ಹಾಳಾಗದಂತೆ ಕಾಯುವ ಕೆಲಸ ಬಹು ಜವಾಬ್ದಾರಿಯದ್ದು! ಮೀನಾಕ್ಷಮ್ಮನ ಕವಳ ತುಂಬಿದ ಹರಕಲು ಬಾಯಿಗೆ ಅಂಜಿ ಕೋಳಿಗಳನ್ನು ಗೂಡಿನಲ್ಲಿಟ್ಟುಕೋ ಎಂದು ಹೇಳುವ ಧೈರ್ಯ ಯಾರಿಗೂ ಇರಲಿಲ್ಲ! ಹೇಗಿದ್ದರೂ ನಾವು ಮಕ್ಕಳಿದ್ದೆವಲ್ಲ, ಕಣ್ಣಲ್ಲಿ ಕಣ್ಣಿಟ್ಟು ಸರತಿಯಂತೆ ಕಾದು ಹಿರಿಯರಿಗೆ ಹಪ್ಪಳ ಸಂಡಿಗೆ ಮಾಡಲು ಸಹಕರಿಸಿ ಬೇಸಿಗೆ ರಜೆಯ ಮುಂದಿನ ಮುಖ್ಯ ಭಾಗಕ್ಕೆ ತಯಾರಿ ನಡೆಸುತ್ತಿದ್ದೆವು.

ಅಜ್ಜನ ಮನೆಗೆ ಲಗ್ಗೆ: ಪ್ರತಿ ವರ್ಷ ಬೇಸಿಗೆಯಲ್ಲಿ ಅಮ್ಮ ಮತ್ತವರ ತಂಗಿಯರು ಮೈಸೂರಿನ ತಾಯಿಯ ಮನೆಯಲ್ಲಿ ಒಂದೂವರೆ ತಿಂಗಳು ಮಕ್ಕಳೊಂದಿಗೆ ಇದ್ದು ಬರುವ ರೂಢಿಯಿತ್ತು. ಅಲ್ಲಿ ಚಿಕ್ಕಮ್ಮಂದಿರ, ಮಾವಂದಿರ ಮಕ್ಕಳೊಂದಿಗೆ ಸೇರಿ ಇಡೀ ಮನೆಯನ್ನು ಮೇಲೆ ಕೆಳಗೆ ಮಾಡಿ, ಈ ಮೊಮ್ಮಕ್ಕಳ ಕಾಟ ತಾತನ ಕಣ್ಣನ್ನು ಕೆಂಪಾಗಿಸುವುದು, ರಜೆ ಮುಗಿದು ಹೊರಡುವಾಗ ಅದೇ ಕಣ್ಣುಗಳು ಹನಿಗೂಡುವುದು ಮತ್ತೊಂದು ಕಥೆ.

ನಾವು ನಮ್ಮ ಬಾಲ್ಯವನ್ನು ನಮ್ಮಿಷ್ಟದಂತೆ ಕಳೆಯುತ್ತಿದ್ದೆವು. ಮನೆಯ ಹೊರಗೆ ನಮ್ಮನ್ನು ಆಕರ್ಷಿಸುವ ಬ್ರಹ್ಮಾಂಡವೇ ಇತ್ತು. ಆದರೆ ಇಂದಿನ ಮಕ್ಕಳಿಗೆ ಮನೆಯ ಒಳಗೆ ಕುಳಿತು ಮೊಬೈಲ್, ಟಿವಿ ನೋಡುವ ಆಕರ್ಷಣೆಯೇ ಹೆಚ್ಚು. ಅದಿಲ್ಲದಿದ್ದರೆ ತಂದೆ ತಾಯಿಯ ಒತ್ತಾಯದ ಮೇರೆಗೆ ಹೋಗುವ ಒಂದಿಷ್ಟು ಸಮ್ಮರ್ ಕ್ಯಾಂಪುಗಳು. ಏನೇ ಇರಲಿ, ಬೇಸಿಗೆಯ ರಜೆಯು ಪ್ರತಿ ಮಗುವಿನ ಮಹೋನ್ನತ ಗಳಿಗೆಯಾಗಲಿ ಎಂಬುದಷ್ಟೆ ಆಶಯ.

ವಿದೇಶದಲ್ಲಿ ಉದ್ಯೋಗದಲ್ಲಿರುವವರೆಲ್ಲಾ ಶ್ರೇಷ್ಠರೇ?

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ಕೆ.ಎಂ.ವಿನೋದ, ಬೆಂಗಳೂರು

● **ಸಂಪಾದಕರೇ, ನಾವು ಮೂವರು ಸಹೋದರರು. ನಾನು ಮಧ್ಯದವನು. ನನ್ನ ಅಣ್ಣ ಮತ್ತು ತಮ್ಮ ವಿದೇಶದಲ್ಲಿದ್ದಾರೆ. ನಾನು ಖಾಸಗಿ ಕಂಪನಿಯಲ್ಲಿ ಬೆಂಗಳೂರಿನಲ್ಲಿ ಉದ್ಯೋಗದಲ್ಲಿದ್ದೇನೆ. ನನ್ನ ಸಮಸ್ಯೆ ಅಂದ್ರೆ ನಮ್ಮ ಫ್ಯಾಮಿಲಿಯಲ್ಲಿ ನನ್ನನ್ನು ಎಲ್ಲರೂ ನಿಕೃಷ್ಟವಾಗಿ ನೋಡುತ್ತಾರೆ. ನಾನು ನನ್ನ ಸಹೋದರರಂತೆ ವಿದೇಶದಲ್ಲಿ ಇಲ್ಲದಿರುವುದೂ ಕಾರಣವಾಗಿರಬಹುದು. ಇದರಿಂದ ನಾನು ಆಗಾಗ ಮಾನಸಿಕ ಖಿನ್ನತೆಗೆ ಒಳಗಾಗುತ್ತೇನೆ. ನನಗೆ ನಿಮ್ಮ ಸಾಂತ್ವನದ ಮಾತುಗಳು ಬೇಕು.**

–ವಿನೋದ ಅವರೇ, ವಿದೇಶದಲ್ಲಿದ್ದವರೆಲ್ಲ ಗ್ರೇಟ್ ಅಲ್ಲ, ನಮ್ಮೂರಿನಲ್ಲಿರುವವರು ನಿಕೃಷ್ಟರು ಅಲ್ಲ. ಯಾರಿಗೆ ಆಗಲಿ, ಅವರು ವಿದೇಶದಲ್ಲಿದ್ದಾರೆ ಎಂಬ ಕಾರಣಕ್ಕೆ ಗೌರವ ಸಿಗುವುದಿಲ್ಲ. ನೀವು ಹಳ್ಳಿಯಲ್ಲಿದ್ದರೂ ಗೌರವ, ಘನತೆ ಸಂಪಾದಿಸಬಹುದು. ವಿದೇಶದಲ್ಲಿದ್ದವರಿಗೆ ವಿಶೇಷ ಕೋಡುಗಳೇನೂ ಮೂಡುವುದಿಲ್ಲ. ವಿದೇಶದಲ್ಲಿದ್ದವರನ್ನು ಮಹಾನ್ ವ್ಯಕ್ತಿಗಳೆಂದು ನೋಡುವ ಕಾಲವೂ ಇತ್ತು. ಈಗ ಕಾಲ ಬದಲಾಗಿದೆ.

ನೀವು ತಪ್ಪು ಭಾವಿಸಿದ್ದೀರಿ, ವಿದೇಶದಲ್ಲಿದ್ದಾರೆ ಎಂಬ ಕಾರಣಕ್ಕೆ ಯಾರಿಗೂ ಗೌರವ ಸಿಗುವುದಿಲ್ಲ. ಪ್ರತಿಯೊಬ್ಬರಿಗೂ ಅವರ ವ್ಯಕ್ತಿತ್ವ, ಗುಣ, ಸ್ವಭಾವ, ಸಾಧನೆಯಿಂದ ಗೌರವ ಪ್ರಾಪ್ತವಾಗುತ್ತದೆ. ಹಳ್ಳಿಯಲ್ಲಿದ್ದವರಲ್ಲಿ ಈ ಅಂಶಗಳಿದ್ದರೆ, ಅವರು ಗೌರವ, ಪ್ರಶಂಸೆಗೆ ಪಾತ್ರರಾಗುತ್ತಾರೆ. ನೀವು ವಿದೇಶದಲ್ಲಿ ಇಲ್ಲ ಎಂಬ ಕಾರಣಕ್ಕೆ ನಿಮ್ಮ ಫ್ಯಾಮಿಲಿಯವರು ನಿಮ್ಮನ್ನು ನಿಕೃಷ್ಟರಾಗಿ ಕಾಣುತ್ತಾರೆ ಎಂದು ನೀವು ಭಾವಿಸಬೇಕಿಲ್ಲ. ನೀವು ಉತ್ತಮ ಸಾಧನೆ ಮಾಡಿದರೆ, ಉತ್ತಮ ವ್ಯಕ್ತಿ ಎಂದು ಅನಿಸಿಕೊಂಡರೆ, ಯಾರು ನಿಮ್ಮನ್ನು ನಿಕೃಷ್ಟರಾಗಿ ನೋಡಿದ್ದಾರೋ, ಅವರೇ ನಿಮಗೆ ಪರಾಕು ಹಾಕುತ್ತಾರೆ.

ನಮಗೆ ಗೌರವ ಸಿಗಲು ನಾವು ಎಲ್ಲಿದ್ದೇವೆ ಎಂಬುದು ಮುಖ್ಯವಲ್ಲ. ನಾವು ಎಲ್ಲಿದ್ದರೂ ಹೇಗಿದ್ದೇವೆ ಎಂಬುದು ಮುಖ್ಯ. ಆರೂವರೆ ಕೋಟಿ ಕನ್ನಡಿಗರಲ್ಲಿ ಶೇ.ಐದರಷ್ಟು ಮಂದಿ ವಿದೇಶಗಳಲ್ಲಿ ಇರಬಹುದು. ಉಳಿದವರು ಇಲ್ಲಿಯೇ ಇದ್ದಾರಲ್ಲ? ಹಾಗಂತ ಅವರಿಗೆ ಮರ್ಯಾದೆ ಸಿಗುತ್ತಿಲ್ಲವೇ? ನಿಮ್ಮ ಯೋಚನೆಯ ಗತಿಯನ್ನು ಬದಲಿಸಿಕೊಳ್ಳಿ. ನೀವು ಇಲ್ಲಿಯೇ ಇದ್ದು ಅಗಾಧ ಸಾಧನೆ ಮಾಡಿ ತೋರಿಸಬಹುದು. ನಿಮ್ಮ ಕುಟುಂಬದ ಸದಸ್ಯರ ಗೌರವಕ್ಕೆ ಪಾತ್ರರಾಗಬಹುದು.

ಸಹನಾ ಹೆಗಡೆ, ಬೆಂಗಳೂರು

● **ಭಟ್ರೇ, ಪತ್ರಿಕೆಗಳನ್ನು ಓದಿದ ಬಳಿಕ ಅವುಗಳನ್ನು ರದ್ದಿಗೆ ಹಾಕಲು ಮನಸ್ಸೇ ಬರುವುದಿಲ್ಲ. ಹಾಗಂತ ಅವನ್ನೆಲ್ಲ ಇಟ್ಟುಕೊಳ್ಳಲೂ ಆಗುವುದಿಲ್ಲ. ಈ ಸಮಸ್ಯೆಗೆ ಏನು ಮಾಡುವುದು? ನೀವು ಈ ವಿಷಯದಲ್ಲಿ ಕಂಡುಕೊಂಡ ಮಾರ್ಗ ಯಾವುದು?**

–ಸಹನಾ ಅವರೇ, ಯಾವ ಪತ್ರಿಕೆಯೂ ಕಸ ಅಲ್ಲ, ರದ್ದಿಗೆ ಹಾಕುವಷ್ಟು ಕಳಪೆಯೂ ಅಲ್ಲ. ಪ್ರತಿ ದಿನದ ಪತ್ರಿಕೆಯನ್ನು ಓದಿದ ಬಳಿಕ, ನಮಗೆ ಇಷ್ಟವಾದ ಲೇಖನ, ವರದಿಗಳನ್ನು ಕತ್ತರಿಸಿಟ್ಟುಕೊಳ್ಳುವುದು ಒಳ್ಳೆಯ ಅಭ್ಯಾಸ. ನಾನು ಕಳೆದ ನಲವತ್ತು ವರ್ಷಗಳಿಂದ ಇದನ್ನು ಒಂದು ವ್ರತದಂತೆ ಪಾಲಿಸಿಕೊಂಡು ಬಂದಿದ್ದೇನೆ. ನಾನು ಪತ್ರಿಕೆಯನ್ನು ಸುಮ್ಮನೆ ಓದುವುದಿಲ್ಲ. ಅದನ್ನು ಟೇಬಲ್ ಮೇಲೆ ಹರವಿಕೊಂಡು, ಮಾರ್ಕರ್ ಪೆನ್ನಿನಲ್ಲಿ ಅಂಡರ್ ಲೈನ್ ಮಾಡಿ, ನಂತರ ನನಗೆ ಬೇಕಾದ ಲೇಖನ, ವರದಿಗಳನ್ನು ಕತ್ತರಿಸಿ, ಅವನ್ನು ವರ್ಗೀಕರಿಸಿ, ಆಯಾ ವಿಷಯದ ಫೈಲ್‌ಗಳಲ್ಲಿ ಸೇರಿಸಿಡುತ್ತೇನೆ. ನಾವು ಬಯಸಿದಾಗ ತಕ್ಷಣ ಸಿಗುವಂತೆ ವರ್ಗೀಕರಿಸಿ ಇಡುವುದು ಇನ್ನೊಂದು ಕಲೆ. ಇಲ್ಲದಿದ್ದರೆ ನಾಯಿ ಕೆಚ್ಚಲಲ್ಲಿ ಹಾಲಿದ್ದಂತೆ.

ನೀವು ಹೇಳಿದಂತೆ, ಈ ಪೇಪರ್ ಕಟಿಂಗ್‌ಗಳನ್ನು ಇಡುವುದಕ್ಕೆ ಮನೆಯಲ್ಲಿ ಸಾಕಷ್ಟು ಜಾಗ ಬೇಕು. ಇವನ್ನು ಕಪಾಟಿನಲ್ಲಿಡದಿದ್ದರೆ ಧೂಳು ತಿನ್ನುತ್ತದೆ. ಕಪಾಟಿನಲ್ಲಿ ಎಷ್ಟು ಅಂತ ಇಡುವುದು? ಕಾರಣ ಇದು ದಿನವೂ ಸಂಗ್ರಹವಾಗುತ್ತಲೇ ಹೋಗುತ್ತದೆ. ಕತ್ತರಿಸಲು ಮತ್ತು ಅವನ್ನೆಲ್ಲ ವರ್ಗೀಕರಿಸಿ ಇಡಲು ಸಾಕಷ್ಟು ಸಮಯವೂ ಹಿಡಿಯುತ್ತದೆ. ಇವನ್ನೆಲ್ಲ ಮಾಡದಿದ್ದರೆ, ಎಷ್ಟೋ ಅಮೂಲ್ಯ ಲೇಖನ, ವರದಿ, ಮಾಹಿತಿ ರದ್ದಿಯಾಗಿ ಹೋಗುತ್ತದೆ. ಅದಕ್ಕಿಂತ ಅವನ್ನೆಲ್ಲ ಸರಿಯಾಗಿ ಕಾಪಿಡುವುದು ಒಳ್ಳೆಯದು.

ಈಗಿನ ದಿನಗಳಲ್ಲಿ ಪೇಪರ್ ಕ್ಲಿಪಿಂಗ್‌ಗಳನ್ನು ಜೋಡಿಸಿಡುವುದು ಕಷ್ಟವಲ್ಲ. ನೀವು ಪೇಪರ್ ಓದಿದ ಬಳಿಕ, ಅದನ್ನು ಸ್ಕ್ಯಾನ್ ಮಾಡಲು ಸಾಕಷ್ಟು ಆ್ಯಪ್‌ಗಳಿವೆ. ಇಲ್ಲದಿದ್ದರೆ ನೀವು ಸಂಗ್ರಹಿಸಿಡಲು ಬಯಸುವ ಲೇಖನದ ಫೋಟೋ ತೆಗೆದು, ಅದನ್ನು ಪಿಡಿಎಫ್ ಫಾರ್ಮ್ಯಾಟ್‌ಗೆ ಪರಿವರ್ತಿಸಿ, ಅದಕ್ಕೊಂದು ಹೆಸರಿಟ್ಟು ಮೊಬೈಲ್ ಅಥವಾ ಕಂಪ್ಯೂಟರಿನಲ್ಲಿ ಸಂಗ್ರಹಿಸಿಡಬಹುದು. ಕೀ ವರ್ಡ್‌ನ್ನು ಟೈಪ್ ಮಾಡಿದರೆ ತಕ್ಷಣ ನಮಗೆ ಬೇಕಾದ ಲೇಖನ, ವರದಿಯನ್ನು ತಕ್ಷಣ ಪಡೆಯುವುದು ಸಾಧ್ಯ. ಈ ಮಾದರಿಯನ್ನು ಅನುಸರಿಸಿದರೆ, ಪೇಪರ್‌ಗಳನ್ನು ಕತ್ತರಿಸಬೇಕಿಲ್ಲ, ಫೈಲ್ ಮಾಡಬೇಕಿಲ್ಲ. ಅದಕ್ಕಾಗಿ ಜಾಗವೂ ಬೇಕಾಗಿಲ್ಲ. ನಾನು ಸಹ ಕಳೆದ ಹತ್ತು ವರ್ಷಗಳಿಂದ ಈ ವಿಧಾನವನ್ನು ಅನುಸರಿಸುತ್ತಿದ್ದೇನೆ. ಇದರಿಂದ ನನಗೆ ಸಮರ್ಪಕವಾಗಿ organise ಮಾಡಿಕೊಳ್ಳಲು ಸಾಧ್ಯವಾಗಿದೆ.

ಇದಕ್ಕಿಂತ ಉತ್ತಮ ಮಾದರಿ ಇದ್ದರೂ ಇರಬಹುದು. ಆದರೆ ಇದು ನಾನು ಕಂಡುಕೊಂಡಿರುವ ಸುಲಭ ಮಾರ್ಗ.

ವಿ.ರಮೇಶ ಕೃಷ್ಣಯ್ಯ, ನಾಯಂಡಹಳ್ಳಿ

● **ಭಟ್ರೇ, ನನ್ನ ಮನೆಯಿರುವುದು ಬೆಂಗಳೂರಿನ ನಾಯಂಡಹಳ್ಳಿಯಲ್ಲಿ. ನಾನು ಕೆಲಸ ಮಾಡುವುದು ಮೈಸೂರಿನಲ್ಲಿ. ಕಳೆದ ಹದಿನೇಳು ವರ್ಷಗಳಿಂದ ನಾನು ಬೆಂಗಳೂರು–ಮೈಸೂರು ಮಧ್ಯೆ ಭಾನುವಾರ ಮತ್ತು ಇನ್ನಿತರ ರಜಾ ದಿನಗಳನ್ನು ಬಿಟ್ಟು ಉಳಿದೆಲ್ಲ ದಿನ ರೈಲಿನಲ್ಲಿ ಸಂಚರಿಸುತ್ತಿದ್ದೇನೆ. ದಿನವೂ ಓಡಾಡಿ ಓಡಾಡಿ ಬೇಸರ ಬಂದುಬಿಟ್ಟಿದೆ. ಇನ್ನು ಎಷ್ಟು ದಿನ ಹೀಗೆ ಸಂಚರಿಸುವುದೋ ಗೊತ್ತಿಲ್ಲ. ಜೀವನದಲ್ಲಿಯೇ ಜುಗುಪ್ಸೆ ಬಂದುಬಿಟ್ಟಿದೆ. ಇತ್ತೀಚೆಗೆ ಕೆಲಸಕ್ಕೆ ಹೋಗಲು ಮನಸ್ಸಾಗುತ್ತಿಲ್ಲ. ಏನು ಮಾಡಲಿ?**

–ರಮೇಶ ಕೃಷ್ಣಯ್ಯ ಅವರೇ, ನೀವು ಯಾವುದನ್ನೇ ಆಗಲಿ ಒತ್ತಾಯಪೂರ್ವಕವಾಗಿ ಮಾಡಿದರೆ ಹೀಗೇ ಆಗುತ್ತದೆ. ಸಂತೋಷದಿಂದ, ಖುಷಿ ಖುಷಿಯಾಗಿ ಮಾಡಿದರೆ, ಮತ್ತಷ್ಟು ಮಾಡಬೇಕು ಎಂದೆನಿಸುತ್ತದೆ. ನಾವು ಮಾಡುವ ಕೆಲಸವನ್ನು ಒಂದು ಕ್ರೀಡೆ ಎಂದು ಭಾವಿಸಿ ಮಾಡಿದರೆ, ಅದನ್ನು ಮತ್ತಷ್ಟು ಉತ್ಪಾದಕವಾಗಿ ಮಾಡಬಹುದು. ಕ್ರಿಕೆಟ್ ಆಟಗಾರರು ಮೈದಾನಕ್ಕಿಳಿಯುವಾಗ ಇಡೀ ಇನ್ನಿಂಗ್ಸ್‌ನ್ನು ನಾನೇ ಆಡಬೇಕು ಎಂಬ ಮನಸ್ಥಿತಿಯಿಂದ ಬರುತ್ತಾರೆ. ಒಂದಲ್ಲ, ಎರಡು ದಿನ ಬ್ಯಾಟ್ ಮಾಡಿದರೂ ಅವರಿಗೆ ಸುಸ್ತಾಗುವುದಿಲ್ಲ. ಐವತ್ತು ಓವರುಗಳ ಪಂದ್ಯದಲ್ಲಿ ಕೊನೆ ತನಕವೂ ನಾನೇ ಬ್ಯಾಟ್ ಮಾಡಬೇಕು ಅಂದುಕೊಳ್ಳುತ್ತಾರೆ. ಆಗ ಅವರಿಗೇಕೆ ಸುಸ್ತಾಗುವುದಿಲ್ಲ? ನಾನೊಬ್ಬನೇ ಐವತ್ತು ಓವರ್ ಆಡಬೇಕಾ ಎಂದು ಅವರು ಅಲವತ್ತುಕೊಳ್ಳುವುದಿಲ್ಲ ಅಥವಾ ಕ್ಯಾಪ್ಟನ್ ಮುಂದೆ ಗೋಳು ಹೇಳಿಕೊಳ್ಳುವುದಿಲ್ಲ, ಏಕೆ? ಸ್ವಲ್ಪ ಯೋಚಿಸಿ.

ನೀವೂ ಸಹ ನಿಮ್ಮ ಕೆಲಸವನ್ನು ಈ ಮನೋಭಾವದಿಂದ ಸ್ವೀಕರಿಸಿದರೆ, ಕೆಲಸದ ಬಗ್ಗೆ ನಿಮ್ಮ ಧೋರಣೆಯೇ ಬದಲಾಗುತ್ತದೆ. ಹದಿನೇಳು ವರ್ಷಗಳ ಕಾಲ ನೀವು ಬೆಂಗಳೂರಿನಿಂದ ಮೈಸೂರಿಗೆ ಹೋಗಿ ಸಾಯಂಕಾಲ ಅಲ್ಲಿಂದ ಇಲ್ಲಿಗೆ ಪ್ರಯಾಣ ಮಾಡಿದ್ದೀರಿ. ಆಗ ಇಲ್ಲದ ಭಾವನೆ ಈಗ ಕಾಡುತ್ತಿರುವುದು ಯಾಕೋ? ನೀವು ನಿಮ್ಮ ಪ್ರಯಾಣವನ್ನು ಪ್ರಯಾಸವೆಂದು ಭಾವಿಸಿದರೆ ಹಾಗೆ ಅನಿಸುವುದು ಸಹಜ. ಆ ಪ್ರಯಾಣದ ಅವಧಿಯನ್ನು ನೀವು ಚೆನ್ನಾಗಿ ದುಡಿಸಿಕೊಳ್ಳಬಹುದು. ರೈಲು ಪ್ರಯಾಣದಲ್ಲಿ ನಿಮ್ಮ ಅಕ್ಕಪಕ್ಕದವರ ಜತೆ ಮಾತಾಡಬಹುದು, ಹೊಸ ಹೊಸ ಜನರನ್ನು ಪರಿಚಯಿಸಿಕೊಳ್ಳಬಹುದು, ಪತ್ರಿಕೆ–ಪುಸ್ತಕಗಳನ್ನು ಓದಬಹುದು, ಸಿನಿಮಾ, ಸಾಕ್ಷ್ಯಚಿತ್ರಗಳನ್ನು ನೋಡಬಹುದು. ಅಂದರೆ ಆ ಅವಧಿಯನ್ನು productive ಆಗಿ ಬಳಸಿಕೊಳ್ಳಬಹುದು. ಇವ್ಯಾವವೂ ಇಲ್ಲ ಅಂದ್ರೆ ಚೆನ್ನಾಗಿ ನಿದ್ರಿಸಬಹುದು.

ಸುಮಾರು ಇಪ್ಪತ್ತೆಂಟು ವರ್ಷಗಳ ಕಾಲ ಲಂಡನ್ ನಗರದಿಂದ ಪ್ರತಿದಿನ ಆಕ್ಸ್ ಫರ್ಡ್‌ಗೆ ಹೋಗಿ ವಾಪಸ್ ಬರುತ್ತಿದ ಪ್ರಾಧ್ಯಾಪಕರೊಬ್ಬರು ತಮ್ಮ ರೈಲು ಪ್ರಯಾಣದ ಅನುಭವಗಳನ್ನು ಸೇರಿಸಿ ಒಂದು ಪುಸ್ತಕ ಬರೆದಿದ್ದಾರೆ. ಆ ಅವಧಿಯಲ್ಲಿ ತಾವು ಕಂಡ ವ್ಯಕ್ತಿಗಳು, ಅನುಭವಗಳನ್ನೆಲ್ಲ ಆ ಪುಸ್ತಕದಲ್ಲಿ ಸೇರಿಸಿದ್ದಾರೆ. ತಮ್ಮ ರೈಲು ಪ್ರಯಾಣವನ್ನು ಅವರು ಗಾಢವಾಗಿ ಅನುಭವಿಸಿದ ರೋಚಕ ಸಂಗತಿಗಳನ್ನು ಕಟ್ಟಿಕೊಟ್ಟಿದ್ದಾರೆ. ಅಂದರೆ ನಾವು ಸೂಕ್ಷ್ಮವಾಗಿ ನೋಡಿದರೆ, ನಾವು ಪ್ರತಿದಿನ ಸಹಜವಾಗಿ ಮಾಡುವ ಕಾರ್ಯಗಳಲ್ಲಿ ಹೊಸತನವನ್ನು ಕಾಣುವುದು ಸಾಧ್ಯ ಎಂಬುದನ್ನು ಆ ಕೃತಿ ತೋರಿಸುತ್ತದೆ.

ನಿಮಗೆ ಪ್ರತಿದಿನ ಮೈಸೂರಿಗೆ ಹೋಗಿ ಬರುವುದು ಕಷ್ಟವೆಂದು ಅನಿಸಲಾರಂಭಿಸಿದರೆ, ಬೆಂಗಳೂರಿನಲ್ಲಿಯೇ ಬೇರೆ ಕೆಲಸವನ್ನು ಹುಡುಕಬಹುದಲ್ಲ? ಕೆಲಸದ ಅಗತ್ಯ ಇಲ್ಲವೆಂದು ಅನಿಸಿದರೆ ಮನೆಯಲ್ಲಿಯೇ ಹಾಯಾಗಿ ಇರಲೂಬಹುದು. ಕೆಲಸದ ಅಗತ್ಯ ಇದ್ದರೆ, ಬೆಂಗಳೂರಿನಲ್ಲಿ ಕೆಲಸ ಸಿಗದಿದ್ದರೆ, ಈಗ ಕೈಯಲ್ಲಿರುವ ಉದ್ಯೋಗಕ್ಕಾಗಿ ಮೈಸೂರಿಗೆ ನಿತ್ಯ ಹೋಗಿ ಬರುವುದು ಅನಿವಾರ್ಯ. ಅದಕ್ಕಾಗಿ ಗೊಣಗುವುದರಲ್ಲಿ, ಜುಗುಪ್ಸೆ ಪಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ. ನೀವು ಮಾಡುವ ಉದ್ಯೋಗವನ್ನು ಹೆಚ್ಚು ಹೆಚ್ಚು ಪ್ರೀತಿಸಿದರೆ, ಉದ್ಯೋಗದಲ್ಲಿ ನಿಮ್ಮನ್ನು ಹೆಚ್ಚು ಹೆಚ್ಚು ತೊಡಗಿಸಿಕೊಂಡರೆ, ನೀವು ಮಾಡುತ್ತಿರುವ ಕೆಲಸವನ್ನು ಮತ್ತಷ್ಟು ಇಷ್ಟಪಡಲು ಸಾಧ್ಯವಾಗಬಹುದು. ಇಂಥ ವಿಷಯದಲ್ಲಿ ವಾಸ್ತವ ಚಿಂತನೆ ಅಗತ್ಯ. ನಿಮಗೆ ನಿಮ್ಮ ಉದ್ಯೋಗ ಇಷ್ಟವಾಗದಿದ್ದರೆ, ನಿಮ್ಮ ಮನೆ ಪಕ್ಕದಲ್ಲಿಯೇ ಆಫೀಸು ಇದ್ದರೂ, ಹೋಗಲು ಬೇಸರವಾಗಬಹುದು.

ನಾವು ಬಹಳ ಕಷ್ಟಪಟ್ಟು ಉದ್ಯೋಗ ಗಿಟ್ಟಿಸುತ್ತೇವೆ, ಅದು ಸಿಕ್ಕ ನಂತರ ನಮ್ಮ ಅನುಕೂಲದ ಬಗ್ಗೆ ಯೋಚಿಸುತ್ತೇವೆ. ಅದು ಸರಿಯಲ್ಲ. ನಿಮ್ಮ ಧೋರಣೆಯನ್ನು ಬದಲಿಸಿಕೊಳ್ಳಿ.

ಸುಧಾ, (ಇಮೇಲ್ ಮೂಲಕ)

● **ಸಂಪಾದಕರೇ, ನನಗೆ ನಲವತ್ತೂರು ವರ್ಷ. ನನಗೆ ಇಬ್ಬರು ಮಕ್ಕಳಿದ್ದಾರೆ. ನನ್ನ ಗಂಡನಿಗೆ ಒಳ್ಳೆಯ ಕೆಲಸವಿದೆ. ಇತ್ತೀಚಿನ ದಿನಗಳಲ್ಲಿ ನನ್ನ ಗಂಡ ಬೇರೆಯವರ ಸಹವಾಸ ಮಾಡುತ್ತಿರಬಹುದಾ ಎಂಬ ಸಂದೇಹ ನನಗೆ. ನನ್ನ ಮೇಲೆ ಅವರ ಮಮತೆ ಕಮ್ಮಿಯಾದಂತೆ ತೋರುತ್ತಿದೆ. ಅವರ ಮನಸ್ಸಿನಲ್ಲಿ ಬೇರೊಬ್ಬಳು ಸೇರಿಕೊಂಡಿರಬಹುದು ಎಂಬ ಸಂದೇಹ ನನ್ನನ್ನು ಕಾಡುತ್ತಿದೆ. ಇವನ್ನೆಲ್ಲ ಯೋಚಿಸಿದಾಗ ಮನಸ್ಸು ವಿಚಿತ್ರವಾಗಿ ವರ್ತಿಸುತ್ತದೆ. ಆಗ ನಾನು ಮಕ್ಕಳ ಮೇಲೆ ವಿನಾಕಾರಣ ರೇಗುತ್ತೇನೆ. ಮನೆಯಲ್ಲಿ ಅಶಾಂತಿ, ಜಗಳ. ಇದಕ್ಕೆ ಏನು ಪರಿಹಾರ ಸೂಚಿಸುತ್ತೀರಿ?**

–ಸುಧಾ ಅವರೇ, ಇಲ್ಲದ ಭೂತವನ್ನು ಮನಸ್ಸಿನಲ್ಲಿ ಸೃಷ್ಟಿಸಿಕೊಂಡು, ನೆರಳು ಕಂಡರೂ ಭೂತ...ಭೂತ.... ಎಂದು ಹೆದರುತ್ತಿದ್ದೀರಿ. ಒಮ್ಮೆ ಸಂಶಯ ಪಿಶಾಚಿ ಮನಸ್ಸಿನಲ್ಲಿ ಹೊಕ್ಕರೆ ಅದನ್ನು ಓಡಿಸುವುದು ಕಷ್ಟ. ಆ ಪಿಶಾಚಿ ಬಾಡಿಗೆ ಕೊಡದೇ ನಮ್ಮ ಮನಸ್ಸಿನಲ್ಲಿ ಪುಕ್ಕಟೆಯಾಗಿ, ಖಾಯಂ ಉಳಿದುಬಿಡುತ್ತದೆ. ಈಗ ನಿಮ್ಮ ವಿಷಯದಲ್ಲೂ ಅದೇ ಆಗುತ್ತಿದೆ. ಎಲ್ಲವನ್ನೂ ನೀವು ಊಹಿಸಿಕೊಳ್ಳುತ್ತಿದ್ದೀರಿ. ನಿಮ್ಮ ಬಳಿ ಯಾವ ಸಾಕ್ಷ್ಯವೂ ಇಲ್ಲ. ವಿನಾಕಾರಣ ನಿಮ್ಮ ಸಂಸಾರವನ್ನು ನೀವೇ ಹಾಳು ಮಾಡಿಕೊಳ್ಳುತ್ತಿದ್ದೀರಿ.

ಒಂದು ವೇಳೆ ನಿಮ್ಮ ಯಜಮಾನರು ಬೇರೆ ಹೆಂಗಸಿನ ಸಹವಾಸಕ್ಕೆ ಬಿದ್ದಿದ್ದು ನಿಜ ಎಂಬುದು ಖಾತ್ರಿಯಾದ ನಂತರ ತಲೆಕೆಡಿಸಿಕೊಳ್ಳಿ. ಈಗಲೇ ಆ ಬಗ್ಗೆ ಯೋಚನೆ ಮಾಡಬೇಡಿ. ಗಂಡಸರಿಗೆ ತಮ್ಮ ಉದ್ಯೋಗ, ಮಕ್ಕಳ ಶಿಕ್ಷಣ, ಭವಿಷ್ಯ, ಆಫೀಸಿನ ಒತ್ತಡ... ಮುಂತಾದ ಕಾರಣಗಳಿಂದ ಮೊದಲಿನಷ್ಟು ನಿಮಗೆ ಸಮಯ ಕೊಡಲು ಸಾಧ್ಯವಾಗದೇ ಹೋಗಬಹುದು. ಅಷ್ಟಕ್ಕೇ ಬೇರೆ ಹೆಂಗಸಿನ ಸಹವಾಸಕ್ಕೆ ಬಿದ್ದಿದ್ದಾನೆ ಎಂದು ಭಾವಿಸುವುದು ಶತಮೂರ್ಖತನ.

ಒಂದು ವೇಳೆ ನಿಮ್ಮ ಗಂಡ ಬೇರೆ ಹೆಂಗಸಿನ ಸಹವಾಸ ಮಾಡುತ್ತಿರುವುದು ನಿಜ ಎಂಬುದು ನಿಮಗೆ ಪಕ್ಕಾ ಆಯಿತು ಎನ್ನಿ. ಆಗಲೂ ಜಗಳ–ರಂಪ ಮಾಡಲು ಹೋಗಬೇಡಿ. ಕೆಲ ದಿನಗಳ ಬಳಿಕ, ನಿಮ್ಮ ಗಂಡ ನಿಮ್ಮ ಬಳಿಯೇ ಬರುತ್ತಾನೆ ಮತ್ತು ಮೊದಲಿಗಿಂತಲೂ ಹೆಚ್ಚು ನಿಮ್ಮನ್ನು ಪ್ರೀತಿಸುತ್ತಾನೆ. ನಿಮ್ಮ ಮಹತ್ವ ಆತನಿಗೆ ಇನ್ನೂ ಚೆನ್ನಾಗಿ ಮನವರಿಕೆಯಾಗುತ್ತದೆ. ಅಷ್ಟಕ್ಕೇ ಮನೆ–ಮನಸ್ಸನ್ನು ಕೆಡಿಸಿಕೊಳ್ಳಬೇಡಿ. ಎಷ್ಟೇ ಮರಗಳನ್ನು ಜಿಗಿದರೂ ಮರ್ಕಟ ಮನೆಗೇ ಬರಬೇಕು ತಾನೇ?

ಶರತ್ ನಾಯಕ, ಚಿತ್ರದುರ್ಗ

● **ಭಟ್ರೇ, ನನಗೆ ಇಪ್ಪತ್ತೊಂಬತ್ತು ವರ್ಷ. ಎರಡು ವರ್ಷಗಳ ಹಿಂದೆ ನನಗೆ ಪಶು ಸಂಗೋಪನೆ ಇಲಾಖೆಯಲ್ಲಿ ಅಟೆಂಡರ್ ಕೆಲಸ ಸಿಕ್ಕಿತು. ಸರಕಾರಿ ನೌಕರಿ ಬಿಡಬೇಡ ಎಂದು ಎಲ್ಲರೂ ಹೇಳಿದ್ದರಿಂದ ಸೇರಿದೆ. ಆದರೆ ಈಗ ಆ ನೌಕರಿಯಲ್ಲಿ ಮುಂದುವರಿಯಲು ಮನಸ್ಸು ಒಪ್ಪುತ್ತಿಲ್ಲ. ನನ್ನ ಮನಸ್ಥಿತಿಗೆ ಈ ಕೆಲಸ ಸರಿ ಬರುತ್ತಿಲ್ಲ. ಇದೇ ನೌಕರಿಯಲ್ಲಿ ಮುಂದುವರಿದರೆ, ನಾನು ಹುಚ್ಚನಾಗುವುದು ಗ್ಯಾರಂಟಿ. ಆದರೆ ತಂದೆ–ತಾಯಿ, ಅಣ್ಣ ಮಾತ್ರ ಒಪ್ಪುತ್ತಿಲ್ಲ. ಏನು ಮಾಡಲಿ?**

–ಶರತ್ ಅವರೇ, ನಿಮ್ಮ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬಹುದು. ತಿಂಗಳು ತಿಂಗಳು ಸರಿಯಾಗಿ ಸಂಬಳ ಕೊಡ್ತಾರೆ, ಕೆಲಸ ಕಮ್ಮಿ, ನಿವೃತ್ತರಾಗುವ ತನಕ ನೌಕರಿ ಶಾಶ್ವತ ಮತ್ತು ನಿವೃತ್ತಿ ನಂತರ ಸಾಯೋ ತನಕ ಪೆನ್ಶನ್ ಸಿಗುತ್ತೆ ಎಂಬ ಕಾರಣಕ್ಕೆ ಎಲ್ಲರೂ ಸರಕಾರಿ ನೌಕರಿಯನ್ನು ಇಷ್ಟಪಟ್ಟು ಸೇರುತ್ತಾರೆ. ಆದರೆ ಈ ಆಮಿಷದಲ್ಲಿ ತಮ್ಮ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಾರೆ. ಸಾಯೋ ತನಕ ಪೆನ್ಶನ್ ಸಿಗುತ್ತೆ ಅಂತ ಬದುಕಿರುವಾಗ ನರಸತ್ತ ಬದುಕನ್ನು ಸಾಗಿಸುವುದು ಕಷ್ಟವೇ. ಯಾವುದೇ ಉದ್ಯೋಗವಾದರೂ ಅದು ನಮ್ಮ ವ್ಯಕ್ತಿತ್ವ ವಿಕಾಸ ಮತ್ತು ಬೆಳವಣಿಗೆಗೆ ಸಹಾಯಕವಾಗಬೇಕು. ಅದು ನಮ್ಮ ಆಸಕ್ತಿಯ ಕ್ಷೇತ್ರವೂ ಆಗಬೇಕು. ನಮ್ಮ ಆಸಕ್ತಿಯೇ ಬೇರೆ, ಕೆಲಸವೇ ಬೇರೆ ಆದಾಗ, ಬದುಕು ನೀರಸವೆನಿಸುತ್ತದೆ. ಈಗ ನಿಮಗೆ ಆಗುತ್ತಿರುವುದು ಅದೇ.

ಈಗ ನೀವು ಅಟೆಂಡರ್ ಆಗಿದ್ದೀರಿ. ನಿವೃತ್ತರಾಗುವ ಹೊತ್ತಿಗೆ ಸೀನಿಯರ್ ಅಟೆಂಡರ್ ಆಗಿರುತ್ತೀರಿ. ಇಡೀ ಜೀವನವನ್ನು ಅಟೆಂಡರ್ ಆಗಿ ಕಳೆಯುವುದನ್ನು ಯೋಚಿಸಲು ಆಗುತ್ತಿಲ್ಲ. ಆ ಉದ್ಯೋಗದಲ್ಲಿ ಭಡ್ತಿ ಸಾಧ್ಯತೆಯೂ ಕಮ್ಮಿಯೇ. ಸರಕಾರಿ ಕೆಲಸ ಸಿಕ್ಕಿದೆ ಎಂದ ಮಾತ್ರಕ್ಕೆ ಸ್ವರ್ಗವೇ ಸಿಕ್ಕಿತು ಎಂದು ಭಾವಿಸಬೇಕಿಲ್ಲ. ನಾವು ಮಾಡುವ ಕೆಲಸ ನಮಗೆ ಸಂತೋಷ, ಸಮಾಧಾನ ಮಾತ್ರ ಅಲ್ಲ, ಅದು ನಮ್ಮ ಬೌದ್ಧಿಕ ವಿಕಾಸಕ್ಕೂ ಇಂಬು ನೀಡಬೇಕು. ನಮ್ಮ ಬುದ್ಧಿವಂತಿಕೆ, ಜಾಣ್ಮೆಯ ಪ್ರದರ್ಶನಕ್ಕೂ ಅವಕಾಶ ನೀಡಬೇಕು. ಆದರೆ ನೀವು ಮಾಡುತ್ತಿರುವ ಸದರಿ ಕೆಲಸದಲ್ಲಿ ಅದಕ್ಕೆ ಅವಕಾಶ ಇದೆ ಎಂದು ನನಗನಿಸುವುದಿಲ್ಲ.

ನಿಮಗೆ ಇಷ್ಟವಿಲ್ಲದ ಕೆಲಸ ಮತ್ತು ವ್ಯಕ್ತಿ ಜತೆ ಒಂದು ಕ್ಷಣ ಇದ್ದರೂ ಅದು ನಮ್ಮ ಬದುಕಿನ ನಿರರ್ಥಕ ಕ್ಷಣಗಳು. ನಿಮ್ಮ ಮನಸ್ಸಿನ ಮಾತನ್ನು ಇನ್ನೊಮ್ಮೆ ಕಿವಿಗೊಟ್ಟು ಕೇಳಿ. ಕಾರಣ ನಿಮ್ಮ ಅಂತರಂಗ ಯಾವತ್ತೂ ನಿಮ್ಮನ್ನು ದಾರಿ ತಪ್ಪಿಸುವುದಿಲ್ಲ. ಈ ಕೆಲಸದಲ್ಲಿ ನಿಮಗೆ ಸಂತೃಪ್ತಿ ಇಲ್ಲ ಎಂಬುದು ಮನವರಿಕೆಯಾದರೆ, ಒಂದು ಕ್ಷಣವನ್ನೂ ಹಾಳು ಮಾಡಬೇಡಿ. ನಿಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಬನ್ನಿ. ಹಾಗೆ ಮಾಡುವ ಮುನ್ನ ಮುಂದಿನ ದಾರಿ ಏನು ಎಂಬ ಬಗ್ಗೆ ಸ್ಪಷ್ಟತೆ ಇರಲಿ. ಬೇರೊಂದು ಕೆಲಸವನ್ನು ಗಿಟ್ಟಿಸಿಕೊಂಡು, ಈಗಿನ ಕೆಲಸಕ್ಕೆ ರಾಜೀನಾಮೆ ನೀಡುವುದು ಒಳ್ಳೆಯದು. ಕೈಯಲ್ಲಿರುವ ಕೆಲಸ ಬಿಟ್ಟು, ಹೊಸ ಕೆಲಸ ಹುಡುಕುವ ಉಸಾಬರಿ ಬೇಡ.